ಗುರುವಾರ, ಆಗಸ್ಟ್ 3, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು– ಬಿನ್ನಾಣ

ನವದೆಹಲಿಯ ಫ್ಯಾಷನ್ ಸಪ್ತಾಹದಲ್ಲಿ ಬಾಲಿವುಡ್ ನಟ ಸಾರಾ ಅಲಿ ಖಾನ್ ಮತ್ತು ನಟ ಆದಿತ್ಯರಾಯ್ ಕಪೂರ್ ಭಾಗವಹಿಸಿದ್ದರು



ಚಿಕ್ಕಮಗಳೂರು: ಶಕ್ತಿ ಯೋಜನೆ ಜಾರಿ ನಂತರ ಖಾಸಗಿ ಬಸ್‌ಗಳಿಗೆ ಪ್ರಯಾಣಿಕರ ಕೊರತೆ

11 ಖಾಸಗಿ ಬಸ್‌ಗಳ ದಾಖಲೆ ಹಸ್ತಾಂತರ

• ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು ಖಾಸಗಿ ಬಸ್ ನಿಲ್ದಾಣದಲ್ಲಿ ನಿಲ್ಲಿಸಿರುವ ಬಸ್‌ಗಳು –ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಿಶೇಷ

ಚಿಕ್ಕಮಗಳೂರು: ಶಕ್ತಿ ಯೋಜನೆ ಜಾರಿಯಾದ ಬಳಿಕ ಖಾಸಗಿ ಬಸ್‌ಗಳಲ್ಲಿ ಪ್ರಯಾಣಿಸುವವರು ಕಡಿಮೆಯಾಗಿದ್ದು, ಬಸ್‌ಗಳ ನಿರ್ವಹಣೆ ಮಾಡಲಾಗದ ಮಾಲೀಕರು ದಾಖಲೆಗಳನ್ನು ಸಾರಿಗೆ ಇಲಾಖೆಗೆ ಒಪ್ಪಿಸುತ್ತಿದ್ದಾರೆ. ಜೂನ್ 11ರ ನಂತರ ಜಿಲ್ಲೆಯಲ್ಲಿ 11 ಬಸ್‌ಗಳ ದಾಖಲೆ ಸಾರಿಗೆ ಇಲಾಖೆಗೆ ಹಸ್ತಾಂತರವಾಗಿದೆ.

ಜಿಲ್ಲೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ಜತೆಗೆ ಖಾಸಗಿ ಬಸ್‌ಗಳೂ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಾಚರಣೆ ಮಾಡುತ್ತಿವೆ. ಜಿಲ್ಲೆಯ 1,092 ಹಳ್ಳಿಗಳ ಪೈಕಿ 432 ಹಳ್ಳಿಗಳಿಗೆ ಕೆಎಸ್‌ಆರ್‌ಟಿಸಿ ಬಸ್ ಇಲ್ಲ. ಮುಖ್ಯ ರಸ್ತೆಗಳಲ್ಲಿ ಮಾತ್ರ ಕೆಎಸ್‌ಆರ್‌ಟಿಸಿ ಬಸ್‌ಗಳು ಸಂಚಿಸುತ್ತಿದ್ದರೆ, ಗ್ರಾಮೀಣ ಪ್ರದೇಶದಲ್ಲಿ ಅದರಲ್ಲೂ ಮಲೆನಾಡಿನ ಗುಡ್ಡದಲ್ಲಿರುವ ಹಳ್ಳಿಗಳಿಗೆ ಖಾಸಗಿ ಬಸ್‌ಗಳು ಸೇವೆ ಒದಗಿಸುತ್ತಿವೆ.

280ಕ್ಕೂ ಹೆಚ್ಚು ಖಾಸಗಿ ಬಸ್‌ಗಳು ಜಿಲ್ಲೆಯ ಹಲವೆಡೆ ಕಾರ್ಯಾಚರಣೆ ಮಾಡುತ್ತಿವೆ. ಪ್ರಮುಖವಾಗಿ ಕೊಪ್ಪ ಮತ್ತು ನರಸಿಂಹರಾಜಪುರ ಸುತ್ತಮುತ್ತಲ ಗ್ರಾಮೀಣ ಪ್ರದೇಶಕ್ಕೆ ಖಾಸಗಿ ಬಸ್‌ಗಳೇ ಆಸರೆ. ಈ ಭಾಗದಲ್ಲಿ 130ಕ್ಕೂ ಹೆಚ್ಚು ಬಸ್‌ಗಳು ಪ್ರಯಾಣಿಕರನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಕರೆದೊಯ್ಯುತ್ತಿವೆ. ಚಿಕ್ಕಮಗಳೂರು ನಗರದಿಂದಲೂ 40ಕ್ಕೂ ಹೆಚ್ಚು ಬಸ್‌ಗಳು ನಿಗದಿತ ಗ್ರಾಮೀಣ ಮಾರ್ಗಗಳಲ್ಲಿ ಕಾರ್ಯಾಚರಣೆ ಮಾಡುತ್ತಿವೆ. ತರೀಕೆರೆ ಮತ್ತು ಕಡೂರು ಭಾಗದಲ್ಲೂ ಖಾಸಗಿ ಬಸ್‌ಗಳನ್ನು ಜನ ಅವಲಂಭಿಸಿದ್ದರು.

'ಶಕ್ತಿ ಯೋಜನೆ ಜಾರಿಯಾಗಿ ಮಹಿಳೆಯರಿಗೆ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಿದ ಬಳಿಕ ಖಾಸಗಿ ಬಸ್‌ಗಳು ಬಹುತೇಕ ಖಾಲಿಯಾಗಿಯೇ ಸಂಚರಿಸುತ್ತಿವೆ. ಡೀಸೆಲ್ ವೆಚ್ಚ ಭರಿಸಲೂ ಸಾಧ್ಯವಾಗುತ್ತಿಲ್ಲ, ಚಾಲಕ–ನಿರ್ವಾಹಕರ ವೇತನ ಪಾವತಿಸಿ ನಿರ್ವಹಣೆ ಮಾಡುವುದು ಹೇಗೆ' ಎಂದು ಬಸ್ ಮಾಲೀಕ ರಮೇಶ್ ಪ್ರಶ್ನಿಸುತ್ತಾರೆ.

'ಮುಖ್ಯ ರಸ್ತೆ ತನಕ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಸಾಗಿ, ಆ ಬಸ್‌ಗಳು ಬಾರದ ಊರುಗಳಿಗೆ ತೆರಳಲು ಖಾಸಗಿ ಬಸ್‌ಗಳನ್ನು ಕಾಯುತ್ತಾರೆ. ಮುಖ್ಯ ರಸ್ತೆಯಲ್ಲಿ ಖಾಲಿ–ಖಾಲಿಯಾಗಿ ಸಂಚರಿಸಿ ಹಳ್ಳಿಗಳಿಗೆ ಮಾತ್ರ ನಮ್ಮ ಬಸ್‌ಗಳಿಗೆ ಜನ ಹತ್ತುತ್ತಿದ್ದಾರೆ. ಇಡೀ ಬಸ್‌ನಲ್ಲಿ ಇಬ್ಬರು–ಮೂವರನ್ನು ಕೂರಿಸಿಕೊಂಡು ಗುಡ್ಡಗಾಡುಗಳಲ್ಲಿ ಅಲೆಯುತ್ತಿದ್ದೇವೆ' ಎಂದು ಬೇಸರ ವ್ಯಕ್ತಪಡಿಸಿದರು.

'ಮೂರು ತಿಂಗಳಿಗೊಮ್ಮೆ ತೆರಿಗೆ ಪಾವತಿಸಲೇಬೇಕು. 45 ಆಸನದ ಬಸ್‌ಗೆ ₹45 ಸಾವಿರ ತೆರಿಗೆ ಪಾವತಿಸಬೇಕು. ಬಸ್ ನಿರ್ವಹಣೆಗೆ ಸಾಲ ಮಾಡುವ ಸ್ಥಿತಿ ಇದೆ. ದಾಖಲೆ ಒಪ್ಪಿಸದಿದ್ದರೆ ಬಸ್ ಕಾರ್ಯಾಚರಣೆ ಮಾಡದಿದ್ದರೂ ತೆರಿಗೆ ಪಾವತಿ ಮಾಡಲೇಬೇಕು. ಆದ್ದರಿಂದ ಬಸ್‌ಗಳನ್ನು ನಿಲ್ಲಿಸಿ ಸಾರಿಗೆ ಇಲಾಖೆ ಅಧಿಕಾರಿಗಳಿಗೆ ದಾಖಲೆಗಳನ್ನು ಒಪ್ಪಿಸುತ್ತಿದ್ದೇವೆ' ಎಂದು ಮತ್ತೊಬ್ಬ ಬಸ್ ಮಾಲೀಕ ಬಶೀರ್ ಹೇಳಿದರು.

3ಂಗಳಲ್ಲಿ ಸಾವಿರ ಬಸ್ ನಿಲ್ಲುವ ಸಾಧ್ಯತೆ

'ಶಕ್ತಿ ಯೋಜನೆ ಜಾರಿಯಾದ ಬಳಿಕ ಖಾಸಗಿ ಬಸ್‌ಗಳ ಕಾರ್ಯಾಚರಣೆ ಕಷ್ಟವಾಗಿದೆ. ಸರ್ಕಾರ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳದಿದ್ದರೆ ಆಗಸ್ಟ್ ಪೂರ್ಣಗೊಳ್ಳುವಷ್ಟರಲ್ಲಿ ಕನಿಷ್ಠ ಒಂದು ಸಾವಿರ ಬಸ್‌ಗಳ ಕಾರ್ಯಾಚರಣೆ ಸ್ಥಗಿತವಾಗುವ ಸಾಧ್ಯತೆ ಇದೆ' ಎಂದು ಖಾಸಗಿ ಬಸ್ ಮಾಲೀಕರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣ ಭಟ್ ಹೇಳಿದರು.

'ರಾಜ್ಯದಲ್ಲಿ ಸದ್ಯ 7 ಸಾವಿರ ಖಾಸಗಿ ಬಸ್‌ಗಳು ಕಾರ್ಯಾಚರಣೆ ಮಾಡುತ್ತಿವೆ. ಸಮಸ್ಯೆ ಉಲ್ಬಣಿಸುತ್ತಿರುವ ಬಗ್ಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಮನವರಿಕೆ ಮಾಡಿದ್ದೇವೆ. ಆ.7 ಅಥವಾ ಆ.10ರಂದು ಮುಖ್ಯಮಂತ್ರಿ ಅವರ ಸಮ್ಮುಖದಲ್ಲಿ ಸಭೆ ನಡೆಸಲಾಗುವುದು ಎಂಬ ಭರವಸೆಯನ್ನು ಸಚಿವರು ನೀಡಿದ್ದಾರೆ. ಖಾಸಗಿ ಬಸ್‌ಗಳಿಗೂ ಶಕ್ತಿ ಯೋಜನೆ ಅನ್ವಯ ಆಗುವಂತೆ ಮಾಡಬೇಕು. ಇಲ್ಲದಿದ್ದರೆ ಖಾಸಗಿ ಬಸ್‌ಗಳೇ ಇಲ್ಲದಂತೆ ಆಗಲಿವೆ' ಎಂದರು.

ಸುದ್ದಿ 2 ನಿಮಿಷ

ಪಕ್ಷ ಕಟ್ಟಿದ್ದು ಒಬ್ಬರು; ಅಧಿಕಾರ ಇನ್ನೊಬ್ಬರಿಗೆ: ರಾಯರಡ್ಡಿ

ಕುಕನೂರು (ಕೊಪ್ಪಳ): 'ಸಿದ್ದರಾಮಯ್ಯ ಅವರು ಕಾಂಗ್ರೆಸ್ ಪಕ್ಷಕ್ಕೆ ಬಂದು ಎರಡು ಸಲ ಮುಖ್ಯಮಂತ್ರಿ ಆಗಿದ್ದಾರೆ. ಕಾಂಗ್ರೆಸ್ ಪಕ್ಷದ ಹಳೆಯ ಮಂದಿ, ಮೂಲ ಕಾಂಗ್ರೆಸ್ಸಿಗರು ಈ ಬೆಳವಣಿಗೆಗೆ ಏನು ಅಂದುಕೊಳ್ಳಬೇಕು? ಪಕ್ಷ ಕಟ್ಟಿದವರು ಒಬ್ಬರು. ಅಧಿಕಾರ ಅನುಭವಿಸುತ್ತಿರುವವರು ಇನ್ನೊಬ್ಬರು' ಎಂದು ಶಾಸಕ ಬಸವರಾಜ ರಾಯರಡ್ಡಿ ಹೇಳಿದರು.

ತಾಲ್ಲೂಕಿನ ತಳಕಲ್‌ನಲ್ಲಿ ಬುಧವಾರ ಗ್ಯಾರಂಟಿ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಬಸವರಾಜ ಬೊಮ್ಮಾಯಿ ಅವರ ತಂದೆ ಎಸ್.ಆರ್. ಬೊಮ್ಮಾಯಿ ಅವರೊಂದಿಗೆ ನಾನು ಶಾಸಕ, ಸಂಸದನಾಗಿದ್ದೆ. ಎಚ್.ಡಿ.ದೇವೇಗೌಡರ ಕಾಲದಲ್ಲಿ ನಾನು ಕ್ಯಾಬಿನೆಟ್ ಮಂತ್ರಿಯಾಗಿದ್ದವನು. ಆಗ ಕುಮಾರಸ್ವಾಮಿ ನನ್ನ ಬಳಿ ನಿಂತುಕೊಳ್ಳಲೂ ಹೆದರುತ್ತಿದ್ದ. ನನಗಿಂತ ಕಿರಿಯರು ಮಂತ್ರಿಗಳಾಗಿದ್ದಾರೆ. ಅವರವರ ಅದೃಷ್ಟಕ್ಕೆ ತಕ್ಕಂತೆ ಅಧಿಕಾರ ಸಿಗುತ್ತದೆ. ಹಾಗೆಂದು ಅವರು ಮೇಲೂ ಅಲ್ಲ, ನಾವು ಕೀಳೂ ಅಲ್ಲ. ಬಿಜೆಪಿ ಕಟ್ಟಿದವರು ಲಾಲ್‌ಕೃಷ್ಣ ಅಡ್ವಾಣಿ. ಪ್ರಧಾನಿಯಾಗಿದ್ದು ಮಾತ್ರ ನರೇಂದ್ರ ಮೋದಿ. ಇದಕ್ಕೆ ಏನೂ ಮಾಡಲು ಆಗುವುದಿಲ್ಲ' ಎಂದರು.

ಮೊಬೈಲ್ ಚಾರ್ಜರ್‌ನಿಂದ ವಿದ್ಯುತ್ ಸ್ಪರ್ಶ; ಕೂಸು ಸಾವು

ಕಾರವಾರ: ತಾಲ್ಲೂಕಿನ ಸಿದ್ದರ ಗ್ರಾಮದಲ್ಲಿ ಬುಧವಾರ ಮೊಬೈಲ್ ಚಾರ್ಜರ್ ಕೇಬಲ್ ಅನ್ನು ಬಾಯಿಗೆ ಹಾಕಿಕೊಂಡ ಸಾನ್ನಿಧ್ಯ ಎಂಬ 8 ತಿಂಗಳ ಕೂಸು ವಿದ್ಯುತ್ ಸ್ಪರ್ಶದಿಂದ ಮೃತಪಟ್ಟಿದೆ. ಈ ಕೂಸು ಹೆಸ್ಕಾಂ ಹೊರಗುತ್ತಿಗೆ ನೌಕರ ಸಂತೋಷ ಕಲ್ಗುಟ್ಕರ್ ಮತ್ತು ಸಂಜನಾ ಕಲ್ಗುಟ್ಕರ್ ದಂಪತಿಯ ಪುತ್ರಿ.

'ಸಂತೋಷ ಅವರು ಚಾರ್ಜ್‌ಗೆ ಹಾಕಿದ್ದ ಮೊಬೈಲ್ ಫೋನ್ ಮಾತ್ರ ತೆಗೆದುಕೊಂಡು, ಚಾರ್ಜಿಂಗ್ ಕೇಬಲ್ ಹಾಗೆಯೇ ಬಿಟ್ಟಿದ್ದರು. ನೆಲದವರೆಗೆ ಜೋತು ಬಿದ್ದಿದ್ದ ಕೇಬಲ್ ಹಿಡಿದು ಆಟವಾಡುತ್ತ ಕೂಸು ಬಾಯಿಗೆ ಹಾಕಿಕೊಂಡ ಕೂಡಲೇ ವಿದ್ಯುತ್ ಪ್ರವಹಿಸಿದೆ. ತಕ್ಷಣವೇ ಪ್ರಜ್ಞೆ ತಪ್ಪಿ ಬಿದ್ದಿದೆ. ಕೂಡಲೇ ಕ್ರಿಮ್ಸ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ಪ್ರಯೋಜನವಾಗಲಿಲ್ಲ' ಎಂದು ಕಾರವಾರ ಗ್ರಾಮೀಣ ಠಾಣೆ ಪೊಲೀಸರು ತಿಳಿಸಿದ್ದಾರೆ.

ಖರ್ಗೆ ಬಣ್ಣದ ಅವಹೇಳನ: ಖಂಡ್ರೆ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲ್ಯಾಣ ಕರ್ನಾಟಕದಲ್ಲಿ ಮರಗಳಿಲ್ಲ, ನೆರಳಿಲ್ಲ. ಈ ಭಾಗದ ಜನರು ಸುಟ್ಟು ಕರಕಲಾಗಿರುತ್ತಾರೆ. ಖರ್ಗೆ ಅವರನ್ನು ನೋಡಿದರೆ ಇದು ಗೊತ್ತಾಗುತ್ತದೆ' ಎಂದು ಹೇಳುವ ಮೂಲಕ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರಿಗಷ್ಟೇ ಅಲ್ಲದೆ, ಕಲ್ಯಾಣ ಕರ್ನಾಟಕದ ಜನರಿಗೆ ಬಿಜೆಪಿ ಶಾಸಕ ಆರಗ ಜ್ಞಾನೇಂದ್ರ ಅವಮಾನ ಮಾಡಿದ್ದಾರೆ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಕಿಡಿಕಾರಿದ್ದಾರೆ.

'ನನಗೆ ತಲೆಕೂದಲೇ ನೆರಳು ಎಂದೆಲ್ಲಾ ನನ್ನ ಬಗ್ಗೆ ತುಚ್ಛವಾಗಿ ಮಾತನಾಡಿರುವುದು ಆರಗ ಅವರ ಕೀಳು ಅಭಿರುಚಿಗೆ ಹಿಡಿದ ಕನ್ನಡಿ. ಗೃಹ ಸಚಿವರಾಗಿದ್ದ ವ್ಯಕ್ತಿ ಮನುಷ್ಯರ ಬಣ್ಣದ ಮೇಲೆ ಟೀಕೆ ಮಾಡಿ, ಈ ರೀತಿ ಅವಮಾನ ಮಾಡಿರುವುದು ದುರ್ದೈವ. ಇದು ಮಾಜಿ ಸಚಿವರ ಘನತೆಗೆ ಶೋಭೆ ತರುವುದಿಲ್ಲ' ಎಂದಿದ್ದಾರೆ.

'ನಾನು ಅರಣ್ಯ ಇಲ್ಲದ ಪ್ರದೇಶದಿಂದ ಬಂದಿರಬಹುದು. ಆದರೆ, ಹಸಿರಿನ ಮಹತ್ವ ತಿಳಿದಿದೆ. ಅರಣ್ಯ ಸಚಿವನಾಗಿ ರಾಜ್ಯದ ಹಸಿರು ವ್ಯಾಪ್ತಿಯನ್ನು ಹೆಚ್ಚಿಸಲು ಶ್ರಮಿಸುತ್ತಿದ್ದು, ಕಲ್ಯಾಣ ಕರ್ನಾಟಕವನ್ನು ಹಸಿರುಮಯಗೊಳಿಸಲು ಮುಂದಾಗಿದ್ದೇನೆ' ಎಂದು ಹೇಳಿದ್ದಾರೆ.

ಕಸ್ತೂರಿರಂಗನ್ ವರದಿ ರದ್ದುಪಡಿಸಲಿ: '10 ವರ್ಷಗಳಿಂದ ಕೇಂದ್ರದಲ್ಲಿ ಬಿಜೆಪಿ ಸರ್ಕಾರವಿದೆ. ರಾಜ್ಯದಲ್ಲೂ ಬಿಜೆಪಿ ಸರ್ಕಾರ ಇತ್ತು. ಆಗ ಅವರು ಕಸ್ತೂರಿರಂಗನ್ ವರದಿಯನ್ನು ಏಕೆ ರದ್ದು ಮಾಡಲಿಲ್ಲ? ಮಲೆನಾಡಿನ ಮತ್ತು ಕರಾವಳಿಯ ಬಿಜೆಪಿ ಶಾಸಕರು, ಸಂಸದರು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿ ಆ ವರದಿಯನ್ನು ರದ್ದುಪಡಿಸಲಿ' ಎಂದು ಖಂಡ್ರೆ ಸವಾಲು ಹಾಕಿದ್ದಾರೆ. 'ಈಗ ಕೇಂದ್ರ ಸರ್ಕಾರವೇ ನಿವೃತ್ತ ಐಎಫ್‌ಎಸ್ ಅಧಿಕಾರಿ ಸಂಜಯ್ ಕುಮಾರ್ ನೇತೃತ್ವದ ಸಮಿತಿಯನ್ನು ಪಶ್ಚಿಮ ಘಟ್ಟದ ಅಧ್ಯಯನಕ್ಕೆ ರಾಜ್ಯಗಳಿಗೆ ಕಳುಹಿಸಿದೆ. ವರದಿ ಜಾರಿಗೆ ಪಟ್ಟು ಹಿಡಿದಿರುವುದು ಕೇಂದ್ರ ಸರ್ಕಾರವೇ ಹೊರತು ರಾಜ್ಯ ಸರ್ಕಾರವಲ್ಲ' ಎಂದೂ ಸ್ಪಷ್ಟಪಡಿಸಿದ್ದಾರೆ.

ನಿಮ್ಹಾನ್ಸ್‌ಗೆ ಕಳಿಸೋಣ: ಡಿಕೆಶಿ

ನವದೆಹಲಿ: ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಬಗ್ಗೆ ಅವಹೇಳನಕಾರಿ ಹೇಳಿಕೆ ಕೊಟ್ಟಿರುವ ಬಿಜೆಪಿ ಶಾಸಕ ಆರಗ ಜ್ಞಾನೇಂದ್ರ ಅವರನ್ನು ನಿಮ್ಹಾನ್ಸ್ ಕಳಿಸೋಣ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ಬುಧವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಬೆಂಗಳೂರಿನಲ್ಲಿ ನಿಮ್ಹಾನ್ಸ್ ಆಸ್ಪತ್ರೆ ಉತ್ತಮವಾಗಿದೆ. ಅಲ್ಲಿಗೆ ಆರಗ ಜ್ಞಾನೇಂದ್ರ ಅವರನ್ನು ಕಳುಹಿಸಿ ಉತ್ತಮ ಚಿಕಿತ್ಸೆ ಕೊಡಿಸೋಣ' ಎಂದರು.

'ಕ್ಷಮೆಗೂ ಅರ್ಹರಲ್ಲ'

'ಜಾತಿ ಪದ್ಧತಿ ಇರಬೇಕು ಎಂಬ ಮನಸ್ಥಿತಿ ಬಿಜೆಪಿಯವರದ್ದು. ಹೀಗಾಗಿ, ತಮ್ಮ ಗುಪ್ತ ಕಾರ್ಯಸೂಚಿ ಬಗ್ಗೆ ಆಗಾಗ ಹೇಳುತ್ತಾರೆ. ದಮನಿತ ವರ್ಗ ಶೋಷಿತವಾಗಿ ಉಳಿಯಬೇಕು ಎಂದು ಪರೋಕ್ಷವಾಗಿ ಬಿಜೆಪಿ ಪ್ರತಿಪಾದಿಸುತ್ತದೆ. ಈ ಕಾರಣಕ್ಕೆ ಕಾಂಗ್ರೆಸ್ಸಿನ ಇಬ್ಬರು ನಾಯಕರ ವಿರುದ್ಧ ಕೆಟ್ಟದಾಗಿ ಆರಗ ಜ್ಞಾನೇಂದ್ರ ಮಾತನಾಡಿದ್ದಾರೆ' ಎಂದು ಕೆಪಿಸಿಸಿ ಸಂವಹನ ವಿಭಾಗದ ಉಪಾಧ್ಯಕ್ಷ ರಮೇಶ್ ಬಾಬು ಹೇಳಿದ್ದಾರೆ.

'ಇದು ಕೇವಲ ಆರಗ ಜ್ಞಾನೇಂದ್ರ ಅವರ ಹೇಳಿಕೆಯಲ್ಲ, ಸಂಘ ಪರಿವಾರ ಹಾಗೂ ಬಿಜೆಪಿ ಹೇಳಿಕೆ. ಪ್ರಬುದ್ಧ ರಾಜಕಾರಣಿಗಳನ್ನು ಕೊಟ್ಟ ತೀರ್ಥಹಳ್ಳಿ ಕ್ಷೇತ್ರದಿಂದ ಆರಗ ಜ್ಞಾನೇಂದ್ರರಂಥ ಅರೆ ಜ್ಞಾನಿಗಳು ಶಾಸಕರಾಗಿರುವುದು ದುರ್ದೈವ. ಅವರು ಕ್ಷಮೆಗೂ ಅರ್ಹರಲ್ಲ' ಎಂದಿದ್ದಾರೆ.

ಆರಗ ಜ್ಞಾನೇಂದ್ರ ವಿಷಾದ

ಶಿವಮೊಗ್ಗ: 'ಪಶ್ಚಿಮಘಟ್ಟ ಕುರಿತು ಕಸ್ತೂರಿ ರಂಗನ್ ಸಲ್ಲಿಸಿರುವ ವರದಿಯು ಮಲೆನಾಡಿನವರ ಪಾಲಿಗೆ ಭಾವನಾತ್ಮಕ ವಿಚಾರ. ಅದನ್ನು ಅಭಿವ್ಯಕ್ತಿಸುವ ಭರದಲ್ಲಿ ಸಚಿವ ಖಂಡ್ರೆ ಅವರ ಹೆಸರಿನ ಬದಲು ಬಾಯಿ ತಪ್ಪಿನಿಂದ ಖರ್ಗೆ ಅವರ ಹೆಸರು ಹೇಳಿದ್ದೇನೆ. ಹಾಗೆ ಮಾತಾಡಿದ್ದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ' ಎಂದು ತೀರ್ಥಹಳ್ಳಿ ಬಿಜೆಪಿ ಶಾಸಕ ಆರಗ ಜ್ಞಾನೇಂದ್ರ ಹೇಳಿದ್ದಾರೆ.

ಬುಧವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿರುವ ಅವರು, 'ತೀರ್ಥಹಳ್ಳಿಯಲ್ಲಿ ಮಂಗಳವಾರ ನಡೆದ ಪ್ರತಿಭಟನೆ ವೇಳೆ ಭಾಷಣದಲ್ಲಿ ಖಂಡ್ರೆ ಅವರ ಹೆಸರಿನ ಬದಲು ಖರ್ಗೆ ಅವರ ಹೆಸರು ಬಳಸಿದ್ದೇನೆಯೇ ವಿನಾ ಮಲ್ಲಿಕಾರ್ಜುನ ಖರ್ಗೆ ಎಂದು ಎಲ್ಲಿಯೂ ಹೇಳಿಲ್ಲ. ಹಿರಿಯರಾದ ಮಲ್ಲಿಕಾರ್ಜುನ ಖರ್ಗೆ ಅವರ ಬಗ್ಗೆ ಅಪಾರ ಗೌರವ ಮೊದಲಿನಿಂದಲೂ ಇದೆ. ಅವರ ಅನುಭವ, ಅವರ ವ್ಯಕ್ತಿತ್ವದ ಬಗ್ಗೆ ಯಾವಾಗಲೂ ಗೌರವದಿಂದ ಮಾತಾಡಿದ್ದೇನೆ. ಅವರ ಬಗ್ಗೆ ಅಸಡ್ಡೆಯಿಂದ ಮಾತಾಡುವುದು ಖಂಡಿತವಾಗಿಯೂ ಸಾಧ್ಯವಿಲ್ಲ' ಎಂದು ಹೇಳಿದ್ದಾರೆ.

'ಕಸ್ತೂರಿ ರಂಗನ್ ವರದಿಯನ್ನು ಜಾರಿ ಮಾಡಿಯೇ ಮಾಡುತ್ತೇವೆ ಎಂದು ಸಚಿವ ಈಶ್ವರ ಖಂಡ್ರೆ ಹೇಳಿರುವುದಕ್ಕೆ ಜನರು ವಿಚಲಿತರಾಗಿದ್ದಾರೆ. ಅವರ ಭಾವನೆಯನ್ನೇ ನಾನು ಅಭಿವ್ಯಕ್ತಿಸಿದ್ದೇನೆಯೇ ವಿನಾ ಖರ್ಗೆ ಅವರ ಬಗ್ಗೆಯಾಗಲಿ, ದಲಿತರ ವಿರುದ್ಧವಾಗಲಿ ದೇವರಾಣೆಗೂ ಮಾತಾನಾಡಿಲ್ಲ. ಆದರೂ ನಾನು ದಲಿತ ವಿರೋಧಿ ಎಂದು ಬಿಂಬಿಸುವ ಪ್ರಯತ್ನ ನಡೆಯುತ್ತಿದೆ. ಈ ವಿಚಾರದಲ್ಲಿ ಸಚಿವ ಈಶ್ವರ ಖಂಡ್ರೆ ಅವರಿಗೂ ಅಗೌರವ ತೋರಬೇಕು ಎಂಬ ಉದ್ದೇಶ ನನಗಿರಲಿಲ್ಲ. ಖರ್ಗೆ ಹಾಗೂ ಖಂಡ್ರೆ ಇಬ್ಬರ ವಿಚಾರದಲ್ಲೂ ನಾನು ವಿಷಾದ ವ್ಯಕ್ತಪಡಿಸುವೆ' ಎಂದು ತಿಳಿಸಿದ್ದಾರೆ.

ಆರಗ ವಿರುದ್ಧ ದೂರು ದಾಖಲು

ಕಲಬುರಗಿ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಮೈಬಣ್ಣದ ಬಗ್ಗೆ ಶಾಸಕ ಆರಗ ಜ್ಞಾನೇಂದ್ರ ಅವರು ಅವಹೇಳನಕಾರಿಯಾಗಿ ಹೇಳಿಕೆ ನೀಡಿದ ಸಂಬಂಧ ಅಶೋಕ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಜ್ಞಾನೇಂದ್ರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್ ಕಾರ್ಯಕರ್ತ ರಾಜೀವ್ ಜಾನೆ ದೂರು ದಾಖಲಿಸಿದ್ದಾರೆ.

ಶಕ್ತಿ: ವೆಚ್ಚ ₹250 ಕೋಟಿ, ಕೊಟ್ಟಿದ್ದು ₹125 ಕೋಟಿ

ಬೆಂಗಳೂರು: 'ಶಕ್ತಿ' ಯೋಜನೆ ಅಡಿ 20 ದಿನಗಳಲ್ಲಿ ₹250 ಕೋಟಿ ವೆಚ್ಚವಾಗಿದ್ದು, ಇದನ್ನು ಸಾರಿಗೆ ಸಂಸ್ಥೆಗಳಿಗೆ ನೀಡಿರುವ ಅನುದಾನದಿಂದ ₹125.47 ಕೋಟಿ ಭರಿಸುವಂತೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಜು.11 ರಿಂದ ಜು.30 ರವರೆಗೆ ರಾಜ್ಯದ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯಕ್ಕಾಗಿ ಒಟ್ಟು ₹250.96 ಕೋಟಿ ವೆಚ್ಚವಾಗಿದೆ.

ಶಕ್ತಿ ಯೋಜನೆಗಾಗಿ 2023–24 ನೇ ಸಾಲಿಗೆ ಒದಗಿಸಿರುವ ಸಹಾಯಧನ ₹1,998 ಕೋಟಿ. ಇದರಿಂದ ₹125 ಕೋಟಿಯನ್ನು ನಾಲ್ಕೂ ಸಾರಿಗೆ ನಿಗಮಗಳಿಗೂ ಭರಿಸಲು ಆದೇಶದಲ್ಲಿ ಸೂಚಿಸಲಾಗಿದೆ. ಈ ಯೋಜನೆಯಡಿ ಮಹಿಳೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಗೆ ಉಚಿತವಾಗಿ ಪ್ರಯಾಣಿಸಲು ಅವಕಾಶ ನೀಡಲಾಗಿದೆ. ಈ ರೀತಿ ಪ್ರಯಾಣಿಸುವ ಮಹಿಳೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಗೆ ಇಟಿಎಂ ಯಂತ್ರದ ಮೂಲಕ ಶೂನ್ಯ ಟಿಕೆಟ್ ವಿತರಿಸಲಾಗುತ್ತಿದೆ. ನಾಲ್ಕೂ ನಿಗಮಗಳಲ್ಲಿ 20 ದಿನಗಳ ಅವಧಿಯಲ್ಲಿ ಆಗಿರುವ ವಾಸ್ತವಿಕ ವೆಚ್ಚ ₹250.96 ಕೋಟಿ. ಇಷ್ಟೂ ಮೊತ್ತವನ್ನು ಬಿಡುಗಡೆ ಮಾಡುವಂತೆ ಸಾರಿಗೆ ನಿಗಮಗಳು ಬೇಡಿಕೆ ಸಲ್ಲಿಸಿದ್ದವು. ಈ ಯೋಜನೆಗೆ 2023–24 ನೇ ಸಾಲಿಗೆ ಪರಿಶಿಷ್ಟ ಜಾತಿ ಉಪ ಯೋಜನೆಯಿಂದ ₹56 ಕೋಟಿ ಮತ್ತು ಪರಿಶಿಷ್ಟಪಂಗಡ ಉಪಯೋಜನೆಯಿಂದ ₹252 ಕೋಟಿ ಒಟ್ಟು ₹308 ಕೋಟಿ ಹಂಚಿಕೆ ಮಾಡಲಾಗಿದೆ. ಸಾರಿಗೆ ಇಲಾಖೆಯಿಂದ ₹1988 ಕೋಟಿ ನಿಗದಿ ಮಾಡಲಾಗಿದೆ.

ಸಂಸ್ಥೆಗಳು	ಬಿಡುಗಡೆ ಮಾಡಿದ ಅನುದಾನ (₹ಕೋಟಿಗಳಲ್ಲಿ)
ಕ.ರಾ.ರ.ಸಾ.ನಿ	47.15
ಬೆಂ.ಮ.ಸಾ.ಸಂ	21.85
ವಾ.ಕ.ರ.ಸಾ.ಸಂ	32.57
ಕ.ಕ.ರ.ಸಾ.ನಿ	23.90
ಒಟ್ಟು	125.47

ಪ್ರಿಯಾಂಕ್, ರೇವಣ್ಣಗೆ ಹೈಕೋರ್ಟ್ ಸಮನ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ತಾಪೂರ ಕ್ಷೇತ್ರದ ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಆಯ್ಕೆಯನ್ನು ಅಸಿಂಧುಗೊಳಿಸಬೇಕು ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ಅವರಿಗೆ ಸಮನ್ಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ. 'ಸುಳ್ಳು ಜಾತಿ ಪ್ರಮಾಣಪತ್ರ ಹಾಗೂ ಶೈಕ್ಷಣಿಕ ದಾಖಲೆಗಳನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸದೆ, ಉಚಿತ ಗ್ಯಾರಂಟಿಗಳ ಮೂಲಕ ಮತದಾರರಿಗೆ ಆಮಿಷವೊಡ್ಡಲಾಗಿದೆ' ಎಂದು ಅರ್ಜಿಯಲ್ಲಿ ದೂರಲಾಗಿತ್ತು.

ಅಂತೆಯೇ, ಹೊಳೆನರಸೀಪುರ ಕ್ಷೇತ್ರದ ಶಾಸಕ ಎಚ್.ಡಿ.ರೇವಣ್ಣ ಅವರ ಆಯ್ಕೆಯಲ್ಲೂ ಅಕ್ರಮ ನಡೆದಿದೆ ಎಂದು ಆರೋಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರೇವಣ್ಣ ಅವರಿಗೂ ಸಮನ್ಸ್ ಜಾರಿಗೊಳಿಸಲಾಗಿದೆ.

ವಿದ್ಯಾರ್ಥಿನಿಯರಿಗೆ ಬೆದರಿಕೆ: ಯಶ್‌ಪಾಲ್ ಸುವರ್ಣ ಆರೋಪ

ಪ್ರಜಾವಾಣಿ ವಾರ್ತೆ

ಉಡುಪಿ: 'ಇಲ್ಲಿಯ ಕಾಲೇಜೊಂದರ ಶೌಚಾಲಯದಲ್ಲಿ ನಡೆದಿರುವ ವಿಡಿಯೊ ಚಿತ್ರೀಕರಣ ಪ್ರಕರಣವನ್ನು ಕಾಲೇಜಿನ ಸಿಬ್ಬಂದಿ ಅಬ್ದುಲ್ ಖಾದರ್ ಮುಚ್ಚಿ ಹಾಕಲು ಪ್ರಯತ್ನಿಸುತ್ತಿದ್ದಾರೆ. ಪ್ರಕರಣದ ವಿರುದ್ಧ ದನಿ ಎತ್ತಿದ ವಿದ್ಯಾರ್ಥಿನಿಯರ ಅಂಕಪಟ್ಟಿ ತೆಗೆದಿಟ್ಟುಕೊಂಡು ಬೆದರಿಸಲಾಗುತ್ತಿದೆ' ಎಂದು ಶಾಸಕ ಯಶ್‌ಪಾಲ್ ಸುವರ್ಣ ಆರೋಪಿಸಿದರು.

ಬುಧವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿ, 'ಘಟನೆಯ ವಿರುದ್ಧ ಪ್ರತಿಭಟಿಸಿದ ವಿದ್ಯಾರ್ಥಿನಿಯರಿಗೆ ಭಾವನಾತ್ಮಕವಾಗಿ ಬೆದರಿಕೆ ಹಾಕಲಾಗಿದ್ದು ಪ್ರಕರಣವನ್ನು ಮುಚ್ಚಿಹಾಕಲು ಯತ್ನಿಸಲಾಗುತ್ತಿದೆ. ಕಾಲೇಜಿನಲ್ಲಿ ಹಿಂದೆಯೂ ಇಂತಹ ಘಟನೆಗಳು ನಡೆದಿವೆ ಎಂದು ವಿದ್ಯಾರ್ಥಿನಿಯರೇ ನೋವು ಹಂಚಿಕೊಂಡಿದ್ದಾರೆ. ಈ ಬಗ್ಗೆಯೂ ತನಿಖೆ ನಡೆಯಬೇಕು' ಎಂದು ಆಗ್ರಹಿಸಿದರು.

'ಪ್ರಕರಣಲ್ಲಿ ಆರೋಪಿಗಳಾಗಿರುವ ವಿದ್ಯಾರ್ಥಿನಿಯರ ಪೋಷಕರು ಪಿಎಫ್‌ಐನಲ್ಲಿ ಸಕ್ರಿಯರಾಗಿರುವ ಮಾಹಿತಿ ಇದ್ದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗಮನಕ್ಕೆ ತರಲಾಗಿದೆ. ಕಾಲೇಜಿಗೆ ಬರುತ್ತಿದ್ದ ಮುಸ್ಲಿಂ ಹುಡುಗರ ಬಗ್ಗೆಯೂ ವಿದ್ಯಾರ್ಥಿನಿಯರು ದೂರಿದ್ದು ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಬೇಕು' ಎಂದು ಒತ್ತಾಯಿಸಿದರು.

ಪ್ರಕರಣದ ತನಿಖಾಧಿಕಾರಿಯಾಗಿ ಡಿವೈಎಸ್ಪಿ ಬೆಳ್ಳಿಯಪ್ಪ ಅವರನ್ನು ನೇಮಕ ಮಾಡಿದ್ದು ನೊಂದ ವಿದ್ಯಾರ್ಥಿನಿಯರಿಗೆ ನ್ಯಾಯ ದೊರಕಿಸಿಕೊಡುವ ವಿಶ್ವಾಸವಿದೆ. ಲಭ್ಯವಿರುವ ದಾಖಲೆಗಳನ್ನು ಈಗಾಗಲೇ ತನಿಖಾಧಿಕಾರಿಗೆ ನೀಡಲಾಗಿದೆ. ಸರ್ಕಾರ ಹಸ್ತಕ್ಷೇಪ ಮಾಡದೆ ನಿಷ್ಪಕ್ಷಪಾತವಾಗಿ ತನಿಖೆ ನಡೆಸಲು ಪೊಲೀಸರಿಗೆ ಅವಕಾಶ ನೀಡಬೇಕು ಎಂದರು.

ನಾಳೆ ರಾಜ್ಯಪಾಲರ ಭೇಟಿ: 'ಜಿಲ್ಲೆಯ ಬಿಜೆಪಿ ಶಾಸಕರು ಇದೇ 4ರಂದು ರಾಜ್ಯಪಾಲರನ್ನು ಭೇಟಿ ಮಾಡಿ ಉಡುಪಿಯಲ್ಲಿ ಸೃಷ್ಟಿಯಾಗಿರುವ ಪರಿಸ್ಥಿತಿಯನ್ನು ವಿವರಿಸುತ್ತೇವೆ. ವಿಡಿಯೊ ಪ್ರಕರಣದ ಗಂಭೀರತೆಯನ್ನು ತಿಳಿಸಿ ತನಿಖೆಗೆ ವಿಶೇಷ ತನಿಖಾ ತಂಡ ನೇಮಿಸಲು ಸರ್ಕಾರಕ್ಕೆ ಸೂಚನೆ ನೀಡಬೇಕು ಎಂದು ಒತ್ತಾಯಿಸುತ್ತೇವೆ' ಎಂದು ವಿಧಾನ ಪರಿಷತ್ ಸದಸ್ಯ ಕೋಟ ಶ್ರೀನಿವಾಸ ಪೂಜಾರಿ, ಯಶ್‌ಪಾಲ್ ಸುವರ್ಣ ತಿಳಿಸಿದ್ದಾರೆ.

ಕಾಂಗ್ರೆಸ್ ಟ್ವೀಟ್: 'ಉಡುಪಿಯಲ್ಲಿ ಇಲಿಯನ್ನು ಹುಲಿ ಮಾಡಲು ಹೊರಟಿರುವ ಬಿಜೆಪಿ ನಾಯಕರು ಕರಾವಳಿಯಲ್ಲಿ ಸಂಘ ಪರಿವಾರದ ಕಾರ್ಯಕರ್ತರಿಂದ ನಿರಂತರ ಅತ್ಯಾಚಾರಕ್ಕೆ ಒಳಪಟ್ಟ ದಲಿತ ಬಾಲಕಿಯ ಬಗ್ಗೆ ಮೌನ ವಹಿಸಿದ್ದು ಏಕೆ' ಎಂದು ಕಾಂಗ್ರೆಸ್ ಪ್ರಶ್ನೆ ಮಾಡಿದೆ.

ಈ ಬಗ್ಗೆ ಬುಧವಾರ ಟ್ವೀಟ್ ಮಾಡಿರುವ ಕಾಂಗ್ರೆಸ್, 'ಆ ದಲಿತ ಬಾಲಕಿ ಹಿಂದೂ ಅಲ್ಲವೇ. ಬಿಜೆಪಿಗೆ ನಂಟಿರುವವರು ನಡೆಸುವ ಅತ್ಯಾಚಾರ ಅನಾಚಾರಗಳಿಗೆ ಕರ್ನಾಟಕ ಬಿಜೆಪಿಯ ಸಮ್ಮತಿ ಇದೆಯೇ' ಎಂದು ಪ್ರಶ್ನೆ ಮಾಡಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	113.45	4,129	3,193
ಹಾರಂಗಿ	2,859	2,858.02	4,028	2,000
ಕಬಿನಿ	2,284	2,283.46	6,010	5,538
ಹೇಮಾವತಿ	2,922	2,914.30	5,546	200
ಲಿಂಗನಮಕ್ಕಿ	1,819	1,778.25	12,180	3,132.31
ಸೂಪಾ (ಮೀ)	564	554.43	12514.73	4,452
ಮಾಣಿ	595	580.80	1,461	-
ತುಂಗಭದ್ರಾ	1,633	1,626.51	28,600	2,099
ಮಲಪ್ರಭಾ	2079.50	2,064.20	3,342	194
ಘಟಪ್ರಭಾ	2175	2,156.16	10,980	1,749
ಭದ್ರಾ	186	162.80	5,756	189
ಆಲಮಟ್ಟಿ (ಮೀ)	519.60	518.84	1,06,010	82,481
ನಾರಾಯಣಪುರ (ಮೀ)	492.25	491.54	60,000	51,000

* ನೆಲಮಟ್ಟದಿಂದ

ಪ್ರಕಾಶ್ ಜಿ.ಸಿ ಮಹಿಳಾ ಇಲಾಖೆ ಕಾರ್ಯದರ್ಶಿ

ಬೆಂಗಳೂರು: ಐಎಎಸ್ ಅಧಿಕಾರಿ ಪ್ರಕಾಶ್ ಜಿ.ಸಿ ಅವರನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಹುದ್ದೆಗೆ ವರ್ಗಾಯಿಸಲಾಗಿದೆ.

ಐಟಿ,ಬಿಟಿ,ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಬಸವರಾಜು ಎ.ಬಿ ಅವರಿಗೆ ಕರ್ನಾಟಕ ಮಾಹಿತಿ ಆಯೋಗ ಕಾರ್ಯದರ್ಶಿ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಸ್ವಂತ ಕಟ್ಟಡ ಇಲ್ಲದ ಸರ್ಕಾರಿ ಶಾಲೆ ● ವಾರ್ಡ್, ಲ್ಯಾಬೊರೇಟರಿಯಲ್ಲಿ ಪಾಠ ಬಯಲಲ್ಲೇ ಪರೀಕ್ಷೆ

ಪ್ರಾಥಮಿಕ ಆರೋಗ್ಯ ಕೇಂದ್ರವೇ ಶಾಲೆ!

• ಮಲ್ಲಿಕಾರ್ಜುನ ನಾಲವಾರ

ಕಲಬುರಗಿ: ತಾಲ್ಲೂಕಿನ ಫಿರೋಜಾಬಾದ್ ಸರ್ಕಾರಿ ಕನ್ನಡ ಮತ್ತು ಉರ್ದು ಮಾಧ್ಯಮ ಪ್ರೌಢಶಾಲೆಗೆ ಸ್ವಂತ ಕಟ್ಟಡ ಇಲ್ಲ. ವಿದ್ಯಾರ್ಥಿಗಳು ನವಗ್ರಾಮದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದ ಇಕ್ಕಟ್ಟಾದ ಕೋಣೆಗಳಲ್ಲಿ ಕುಳಿತು ಪಾಠ ಕೇಳುತ್ತಿದ್ದಾರೆ.

ನವಗ್ರಾಮದಲ್ಲಿ ಇನ್ಫೊಸಿಸ್ ಪ್ರತಿಷ್ಠಾನ ನಿರ್ಮಿಸಿದ್ದ 'ಆಸರೆ' ಮನೆಗಳ ಪ್ರದೇಶದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ (ಪಿಎಚ್‌ಸಿ) 8 ವರ್ಷಗಳಿಂದ ತರಗತಿಗಳು ನಡೆಸಲಾಗುತ್ತಿವೆ. ಕನ್ನಡ ಮತ್ತು ಉರ್ದು ಮಾಧ್ಯಮದಲ್ಲಿ 9 ಮತ್ತು 10ನೇ ತರಗತಿಯ ಒಟ್ಟು 138 ವಿದ್ಯಾರ್ಥಿಗಳು ಇದ್ದಾರೆ. ಇಲ್ಲಿನ ಪಿಎಚ್‌ಸಿಯನ್ನು ಬೇರೆಡೆಗೆ ಸ್ಥಳಾಂತರಿಸಲಾಗಿದೆ.

ಮತ್ತೊಂದು ತುದಿಯಲ್ಲಿ ಬಾಡಿಗೆಗೆ ಪಡೆದ 'ಆಸರೆ' ಮನೆಯಲ್ಲಿ ಬಿಸಿಯೂಟ ತಯಾರಿಸಲಾಗುತ್ತದೆ. ವಿದ್ಯಾರ್ಥಿಗಳು ಮಳೆಗಾಲದಲ್ಲಿ ಕೆಸರಿನ ಮತ್ತು ಬೇಸಿಗೆಯಲ್ಲಿ ದೂಳಿನ ರಸ್ತೆಯಲ್ಲಿ ನಡೆದುಕೊಂಡು ಹೋಗಿ ತಟ್ಟೆಯಲ್ಲಿ ಬಿಸಿಯೂಟ ಹಾಕಿಸಿಕೊಂಡು ರಸ್ತೆ, ಚರಂಡಿ, ಮನೆಗಳ ಅಂಗಳದ ಅಲ್ಲಲ್ಲಿ ಕುಳಿತು ಊಟ ಮಾಡುತ್ತಾರೆ.

ನವಗ್ರಾಮದ ಸರ್ಕಾರಿ ಪ್ರೌಢಶಾಲೆಯ ತರಗತಿಯಲ್ಲಿ ಕುಳಿತ ವಿದ್ಯಾರ್ಥಿಗಳು

'ಬಿಸಿಯೂಟ ತಯಾರಿಕೆ, ನಿರ್ವಹಣಾ ವ್ಯವಸ್ಥೆ ಉತ್ತಮವಾಗಿದ್ದರೂ ವಿದ್ಯಾರ್ಥಿಗಳಿಗೆ ಒಂದೆಡೆ ವ್ಯವಸ್ಥಿತವಾಗಿ ಕುಳಿತುಕೊಳ್ಳುವಂತಹ ಕಟ್ಟಡ ಇಲ್ಲ. ಆಸರೆಯ ಮೂರು ಮನೆಗಳನ್ನು ಬಾಡಿಗೆಗೆ ಪಡೆದು ಶಾಲೆ ಹಾಗೂ ಬಿಸಿಯೂಟ ನಡೆಸಿಕೊಂಡು ಹೋಗಲಾಗುತ್ತಿದೆ. ಪ್ರೌಢಶಾಲೆಗೆ ಪ್ರತ್ಯೇಕ ಕಟ್ಟಡ ಒದಗಿಸುವಂತೆ ಪ್ರತಿ ವರ್ಷ ಡಿಡಿಪಿಐ, ಗ್ರಾಮ ಪಂಚಾಯಿತಿಗೆ ಪತ್ರ ಬರೆಯಲಾಗಿದೆ' ಎನ್ನುತ್ತಾರೆ ಶಾಲೆಯ ಮುಖ್ಯ ಶಿಕ್ಷಕ ಅಲ್ಲಾಹುದ್ದೀನ್ ತಹಶೀಲ್ದಾರ್.

ಇಲ್ಲಿ ಕುಡಿಯುವ ನೀರು, ಪ್ರತ್ಯೇಕ ಶೌಚಾಲಯ, ಗಾಳಿ– ಬೆಳಕು ಬರುವ ಕೋಣೆಗಳು, ವಿದ್ಯುತ್ ಸಂಪರ್ಕ, ಕಲ್ಲಿನ ನೆಲಹಾಸು, ಸಿಬ್ಬಂದಿ, ಮುಖ್ಯ ಶಿಕ್ಷಕರ ಕೋಣೆಗಳಿಲ್ಲ. ಲ್ಯಾಬೊರೇಟರಿ, ರೋಗಿಗಳ ವಾರ್ಡ್, ವೈದ್ಯರ ಕೋಣೆಗಳೇ ತರಗತಿಗಳಾಗಿವೆ. ಮುಖ್ಯ ಶಿಕ್ಷಕರು ಬಾಗಿಲು ಬಳಿಯಲ್ಲಿ ಟೇಬಲ್ ಹಾಕಿಕೊಂಡು ಕುಳಿತುಕೊಳ್ಳುತ್ತಾರೆ. ಪ್ಲಾಸ್ಟರ್ ಮಾಡಲಾದ ಗೋಡೆಗೆ ಕಪ್ಪು ಬಣ್ಣ ಬಳಿದು ಅದರ ಮೇಲೆ ಲೆಕ್ಕಗಳನ್ನು ಬರೆದು, ಚಿತ್ರ, ನಕ್ಷೆ ಬಿಡಿಸಿ ಪಾಠ ಹೇಳಲಾಗುತ್ತಿದೆ. ವಿದ್ಯಾರ್ಥಿಗಳು ಬಯಲಲ್ಲಿ ಕುಳಿತು ಪರೀಕ್ಷೆ ಬರೆಯುತ್ತಾರೆ. ಇವುಗಳ ನಡುವೆಯೂ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿಯಲ್ಲಿ ಶೇ 85ರಷ್ಟು ಫಲಿತಾಂಶ ದಾಖಲಿಸಿದ್ದಾರೆ ಎನ್ನುತ್ತಾರೆ ಹೆಸರು ಹೇಳಲು ಇಚ್ಛಿಸದ ಶಿಕ್ಷಕರು.

ಶಾಲೆಯ ಬಗ್ಗೆ ಮಾಹಿತಿ ತರಿಸಿಕೊಳ್ಳಲಾಗುವುದು. ಗ್ರಾಮದ ವ್ಯಾಪ್ತಿಯಲ್ಲಿ ಇರುವ ಸರ್ಕಾರಿ ಜಾಗವನ್ನು ಗುರುತಿಸಿ ಕ್ರಮ ತೆಗೆದುಕೊಳ್ಳಲಾಗುವುದು
ಭಂವಾರ್ ಸಿಂಗ್ ಮೀನಾ
ಜಿಲ್ಲಾ ಪಂಚಾಯಿತಿ ಸಿಇಒ

ಶಾಲಾ ಕಟ್ಟಡಕ್ಕೆ ಬೇಕಾದ ಒಂದು ಎಕರೆ ಜಮೀನು ಕೊಡಲು ಮುಂದಾಗಿದ್ದೆ. ಆದರೆ, ಗ್ರಾಮದ ಕೆಲವರು ಅಡ್ಡಿಪಡಿಸಿದರು. ಈಗಲೂ ಜಮೀನು ಕೊಡಲು ಬದ್ಧ
ಅಬ್ದುಲ್ ಲತೀಫ್ ಜಾಗೀರದಾರ್
ಫಿರೋಜಾಬಾದ್ ಗ್ರಾ.ಪಂ. ಉಪಾಧ್ಯಕ್ಷ

'ಎರಡು ಬಾರಿ ಅನುದಾನ ವಾಪಸ್'

'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿಂದ ಪ್ರತ್ಯೇಕವಾದ ಕನ್ನಡ ಮತ್ತು ಉರ್ದು ಮಾಧ್ಯಮದ ಪ್ರೌಢಶಾಲೆಗೆ ಎರಡು ಬಾರಿ ಅನುದಾನ ಬಂದಿತ್ತು. ಸ್ವಂತ ಕಟ್ಟಡ ಇಲ್ಲದ ಕಾರಣ ವಾಪಸ್ ಹೋಗಿದೆ' ಎಂದು ಗ್ರಾ.ಪಂ. ಉಪಾಧ್ಯಕ್ಷ ಅಬ್ದುಲ್ ಲತೀಫ್ ಜಾಗೀರದಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ನಾಲ್ಕು ವರ್ಷಗಳ ಹಿಂದೆ 6 ತರಗತಿ ಕೋಣೆಗಳ ನಿರ್ಮಾಣಕ್ಕೆ ₹ 20 ಲಕ್ಷ ಅನುದಾನ ಬಂದಿತ್ತು. ಎರಡು ವರ್ಷಗಳ ಹಿಂದೆಯೂ ಬಂದಿದ್ದ ₹ 1 ಕೋಟಿಯಷ್ಟು ಅನುದಾನವೂ ಹಿಂದಕ್ಕೆ ಹೋಗಿದೆ' ಎಂದರು.

ಗುರುವಾರ, ಆಗಸ್ಟ್ 3, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 214 | ಪುಟ 16
www.prajavani.net
prajavani.net | prajavani | prajavani | prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
'ಅಗ್ನಿವೀರ್ ವಾಯು' ಹುದ್ದೆಗಳ ನೇಮಕಾತಿ ವಿವರ ಇಲ್ಲಿದೆ.

ಆಳ-ಅಗಲ ಆಕ್ಷೇಪಗಳನ್ನು ಬದಿಗೊತ್ತಿ ಮಸೂದೆ ಅಂಗೀಕಾರ

ಅಂಗಾಂಗಕ್ಕಾಗಿ ಕಾದಿವೆ ಸಾವಿರಾರು ಜೀವ 5

ಇನ್ನೆರಡು ತಿಂಗಳು ಮಳೆ ಕೊರತೆ ಸಾಧ್ಯತೆ 5A

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,783	19,526	₹61,250 (ಬೆಂಗಳೂರು)	₹76,100 (ಬೆಂಗಳೂರು)	82.67

1 211 ಇನ್‌ಸ್ಪೆಕ್ಟರ್‌ಗಳ ವರ್ಗಾವಣೆಗೆ ಆದೇಶ
2 ಶಾಸಕರು, ಸಚಿವರ ಶಿಫಾರಸು ಕಡೆಗಣನೆ ಮಾಡಿದ ಆರೋಪ
3 50ಕ್ಕೂ ಹೆಚ್ಚು ಅಧಿಕಾರಿಗಳ ಅಧಿಕಾರ ಹಸ್ತಾಂತರಕ್ಕೆ ತಡೆ

ಇನ್‌ಸ್ಪೆಕ್ಟರ್ ವರ್ಗ: ಮತ್ತೆ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ಗಾವಣೆ ವಿಚಾರದಲ್ಲಿ ತಮ್ಮ ಪತ್ರಕ್ಕೆ ಸಚಿವರು ಬೆಲೆ ಕೊಡುತ್ತಿಲ್ಲ ಎಂದು ಕಾಂಗ್ರೆಸ್ ಶಾಸಕರು ಸಿಡಿದೆದ್ದು ವಾರ ಕಳೆಯುವಷ್ಟರಲ್ಲೇ, ಪೊಲೀಸ್ ಇನ್‌ಸ್ಪೆಕ್ಟರ್‌ಗಳ ವರ್ಗಾವಣೆ ಪಟ್ಟಿ ಅತೃಪ್ತಿಯ ಕಿಡಿ ಎಬ್ಬಿಸಿದೆ.

211 ಇನ್‌ಸ್ಪೆಕ್ಟರ್‌ಗಳನ್ನು ವರ್ಗಾವಣೆಗೊಳಿಸಿ ಮಂಗಳವಾರ ಆದೇಶ ಹೊರಡಿಸಿದ್ದ ಬೆನ್ನಲ್ಲೇ ಐವತ್ತಕ್ಕೂ ಹೆಚ್ಚು ಅಧಿಕಾರಿಗಳು ನಿಯೋಜಿತ ಸ್ಥಳದಲ್ಲಿ ಅಧಿಕಾರ ವಹಿಸಿಕೊಳ್ಳದಂತೆ ಬುಧವಾರ ಸರ್ಕಾರವೇ ತಡೆ ನೀಡಿದೆ. ಇದಕ್ಕೆ ಶಾಸಕರ ಅಸಮಾಧಾನ ಕಾರಣ ಎಂದು ಮೂಲಗಳು ಹೇಳಿವೆ.

ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದು, ಸಾರ್ವತ್ರಿಕ ವರ್ಗಾವಣೆ ಪ್ರಕ್ರಿಯೆ ಆರಂಭವಾದ ಬಳಿಕ ಶಾಸಕರು ಆಯಾ ಕ್ಷೇತ್ರಗಳಲ್ಲಿನ ವಿವಿಧ ಇಲಾಖೆಗಳ ಅಧಿಕಾರಿಗಳ ವರ್ಗಾವಣೆಗೆ ಪತ್ರ ನೀಡಿದ್ದರು. ಕ್ಷೇತ್ರದಲ್ಲಿ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಿಂದ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಸಬ್ ಇನ್‌ಸ್ಪೆಕ್ಟರ್, ಇನ್‌ಸ್ಪೆಕ್ಟರ್, ಡಿವೈಎಸ್‌ಪಿ/ ಎಸಿಪಿ ದರ್ಜೆ ಅಧಿಕಾರಿಗಳ ಬದಲಾವಣೆಗೆ ಭಾರಿ ಪ್ರಯತ್ನ ನಡೆಸಿದ್ದರು.

> **ಪೇಚಿಗೆ ಸಿಲುಕಿದ ಅಧಿಕಾರಿಗಳು**
> ಪೊಲೀಸ್ ಇನ್‌ಸ್ಪೆಕ್ಟರ್‌ಗಳು ವರ್ಗಾವಣೆ ಆದೇಶ ಹೊರಬೀಳುತ್ತಿದ್ದಂತೆಯೇ ನಿಯುಕ್ತಿಗೊಂಡ ಸ್ಥಳದಲ್ಲಿ ಅಧಿಕಾರ ಸ್ವೀಕರಿಸುವ ತರಾತುರಿಯಲ್ಲಿದ್ದರು. ಆದರೆ, ಅಧಿಕಾರ ಸ್ವೀಕರಿಸದಂತೆ ತಡೆಯೊಡ್ಡಿರುವುದರಿಂದ ಹಲವು ಅಧಿಕಾರಿಗಳು ಪೇಚಿಗೆ ಸಿಲುಕಿದ್ದಾರೆ.

ಪೊಲೀಸ್ ಅಧಿಕಾರಿಗಳ ವರ್ಗಾವಣೆ ವಿಚಾರದಲ್ಲಿ ತಮ್ಮ ಶಿಫಾರಸಿಗೆ ಸರ್ಕಾರ ಸ್ಪಂದಿಸಿಲ್ಲ ಎಂಬ ಅಸಮಾಧಾನ ಹಲವು ಶಾಸಕರಲ್ಲಿ ಇತ್ತು. ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲೂ ಈ ವಿಚಾರ ಪ್ರತಿಧ್ವನಿಸಿತ್ತು. ಗೃಹ ಸಚಿವ ಜಿ. ಪರಮೇಶ್ವರ ಮತ್ತು ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರೊಂದಿಗೆ ಭಾನುವಾರ(ಜುಲೈ 30) ರಹಸ್ಯ ಸಭೆ ನಡಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಪೊಲೀಸ್ ಅಧಿಕಾರಿಗಳ ವರ್ಗಾವಣೆ ಕುರಿತು ಚರ್ಚಿಸಿದ್ದರು.

ಮಂಗಳವಾರ ಬೆಳಿಗ್ಗೆ ನಡೆದ ರಾಜ್ಯ ಪೊಲೀಸ್ ಸಿಬ್ಬಂದಿ ಮಂಡಳಿ (ಪಿಇಬಿ) ಸಭೆಯಲ್ಲಿ, 211 ಇನ್‌ಸ್ಪೆಕ್ಟರ್‌ಗಳ ವರ್ಗಾವಣೆಯ ಪ್ರಸ್ತಾವಕ್ಕೆ ಅನುಮೋದನೆ ನೀಡಲಾಗಿತ್ತು. ಮಂಡಳಿಯ ನಿರ್ಣಯದಂತೆ ಇನ್‌ಸ್ಪೆಕ್ಟರ್‌ಗಳನ್ನು ವರ್ಗಾವಣೆಗೊಳಿಸಿ ರಾಜ್ಯ ಪೊಲೀಸ್ ಮಹಾನಿರ್ದೇಶಕರು ಆದೇಶ ಹೊರಡಿಸಿದ್ದರು. ಈ ಪಟ್ಟಿಯಲ್ಲಿ 211 ಇನ್‌ಸ್ಪೆಕ್ಟರ್‌ಗಳಿಗೆ ಸ್ಥಳ ತೋರಿಸಿದ್ದರೆ, ಆ ಸ್ಥಾನಗಳಲ್ಲಿದ್ದ ಹಲವರಿಗೆ ಸ್ಥಳ ತೋರಿಸದೇ ವರ್ಗಾವಣೆ ಮಾಡಲಾಗಿತ್ತು.

ಶಾಸಕರ ಅಸಮಾಧಾನ: ಪೊಲೀಸ್ ಇನ್‌ಸ್ಪೆಕ್ಟರ್‌ಗಳ ವರ್ಗಾವಣೆ ಪಟ್ಟಿ ಹೊರ ಬೀಳುತ್ತಿದ್ದಂತೆಯೇ ಕಾಂಗ್ರೆಸ್‌ನ ಹಲವು ಶಾಸಕರು ಸಿದ್ದರಾಮಯ್ಯ ಮತ್ತು ಪರಮೇಶ್ವರ ಅವರನ್ನು ಸಂಪರ್ಕಿಸಿ ಅಸಮಾಧಾನ ಹೊರಹಾಕಿದ್ದರು. ಹಲವು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಶಾಸಕರು ಮಾಡಿದ್ದ ಶಿಫಾರಸುಗಳನ್ನು ಕಡೆಗಣಿಸಿ ಪೊಲೀಸ್ ಇನ್‌ಸ್ಪೆಕ್ಟರ್‌ಗಳನ್ನು ವರ್ಗಾವಣೆ ಮಾಡಿರುವುದು ಇದಕ್ಕೆ ಕಾರಣ ಎಂದು ಮೂಲಗಳು ತಿಳಿಸಿವೆ.

5ನೇ ಪುಟ ನೋಡಿ

57 ಪಿಡಿಒಗಳಿಗೆ ಆಯುಕ್ತಾಲಯವೇ ಬಿಡಾರ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಪ್ರಸಕ್ತ ಸಾಲಿನ ಸಾರ್ವತ್ರಿಕ ವರ್ಗಾವಣೆ ಪ್ರಕ್ರಿಯೆಯಲ್ಲಿ ಸ್ಥಳ ತೋರಿಸದೇ ವರ್ಗಾವಣೆಗೊಂಡಿರುವ ರಾಜ್ಯದ ವಿವಿಧ ಜಿಲ್ಲೆಗಳ 57 ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು (ಪಿಡಿಒ) ರಾಜಧಾನಿಯಲ್ಲಿರುವ ಪಂಚಾಯತ್ ರಾಜ್ ಆಯುಕ್ತಾಲಯದ ಬಾಗಿಲು ಕಾಯುತ್ತಾ ಕಾಲ ದೂಡುತ್ತಿದ್ದಾರೆ!

ಜುಲೈ 4ರಿಂದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ವರ್ಗಾವಣೆಗೆ ಹಲವು ಬಾರಿ ಆದೇಶ ಹೊರಡಿಸಲಾಗಿದೆ. ಈ ಬಾರಿ 650ಕ್ಕೂ ಹೆಚ್ಚು ಪಿಡಿಒಗಳನ್ನು ವರ್ಗಾವಣೆ ಮಾಡಲಾಗಿದೆ. ಇದೇ ಮೊದಲ ಬಾರಿಗೆ ಅತ್ಯಧಿಕ ಸಂಖ್ಯೆಯಲ್ಲಿ ಪಿಡಿಒಗಳ ಅಂತರ ಜಿಲ್ಲಾ ವರ್ಗಾವಣೆಯೂ ನಡೆದಿದೆ. 60ಕ್ಕೂ ಹೆಚ್ಚು ಪಿಡಿಒಗಳಿಗೆ ಸ್ಥಳ ತೋರಿಸದೇ ವರ್ಗಾವಣೆ ಮಾಡಲಾಗಿದೆ.

ಸ್ಥಳ ತೋರಿಸದೇ ವರ್ಗಾವಣೆ ಮಾಡಿರುವ ಪಿಡಿಒಗಳಿಗೆ ಪಂಚಾಯತ್ ರಾಜ್ ಆಯುಕ್ತಾಲಯಕ್ಕೆ ವರದಿ ಮಾಡಿಕೊಳ್ಳುವಂತೆ ಆದೇಶ ನೀಡಲಾಗಿತ್ತು. ಅವರಲ್ಲಿ 57 ಅಧಿಕಾರಿಗಳು ಪಂಚಾಯತ್ ರಾಜ್ ಇಲಾಖೆ ಆಯುಕ್ತರ ಕಚೇರಿಯಲ್ಲಿ ವರದಿ ಮಾಡಿಕೊಂಡಿದ್ದಾರೆ.

> ಈಗ 57 ಪಿಡಿಒಗಳು ನಮ್ಮ ಕಚೇರಿಗೆ ವರದಿ ಮಾಡಿಕೊಂಡಿದ್ದಾರೆ. ಈ ಎಲ್ಲ ಅಧಿಕಾರಿಗಳಿಗೂ ತ್ವರಿತವಾಗಿ ಸ್ಥಳ ನಿಯುಕ್ತಿ ಆದೇಶ ನೀಡಲು ಕ್ರಮ ಕೈಗೊಳ್ಳಲಾಗುವುದು
> **ಪ್ರಿಯಾಂಕ ಮೇರಿ ಫ್ರಾನ್ಸಿಸ್,** ಪಂಚಾಯತ್ ರಾಜ್ ಇಲಾಖೆ ಆಯುಕ್ತೆ

ಇಲ್ಲಿ ಹುದ್ದೆಯೂ ಇಲ್ಲ, ಕೆಲಸವೂ ಇಲ್ಲ ಎಂಬಂತಹ ಸ್ಥಿತಿ ಇದೆ. ಈ ಪಿಡಿಒಗಳು ನಿತ್ಯವೂ ಬೆಳಿಗ್ಗೆ ಆಯುಕ್ತರ ಕಚೇರಿಗೆ ಬಂದು ಹಾಜರಿ ಪುಸ್ತಕದಲ್ಲಿ ಸಹಿ ಮಾಡುತ್ತಾರೆ. ಸಂಜೆಯವರೆಗೂ ಕಚೇರಿ ಮುಂಭಾಗದ ನಿರೀಕ್ಷಣಾ ಸ್ಥಳದಲ್ಲಿ ಕುಳಿತು ಕಾಲ ಕಳೆದು ಹೋಗುತ್ತಿದ್ದಾರೆ.

5ನೇ ಪುಟ ನೋಡಿ

ಪಥಸಂಚಲನ ನೂಹ್‌ನಲ್ಲಿ ಹಿಂಸಾಚಾರ ನಡೆದ ಬಳಿಕ ಗುರುಗ್ರಾಮದಲ್ಲಿ ಬುಧವಾರ ನಿಯೋಜಿಸಲಾದ ಕ್ಷಿಪ್ರ ಕಾರ್ಯಾಚರಣೆ ಪಡೆಯ ಸಿಬ್ಬಂದಿ ಪಥಸಂಚಲನ ನಡೆಸಿದರು – ಪಿಟಿಐ ಚಿತ್ರ

ರಾಜ್ಯ ಕಾಂಗ್ರೆಸ್‌ನ ಮುಖಂಡರ ಸಭೆಯಲ್ಲಿ ಸಚಿವರಿಗೆ ಎಚ್ಚರಿಕೆ

ಭ್ರಷ್ಟಾಚಾರ ಸಹಿಸಲ್ಲ: ರಾಹುಲ್

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕರ್ನಾಟಕದಲ್ಲಿ ಹಿಂದಿನ ಬಿಜೆಪಿ ಸರ್ಕಾರದ ಶೇ 40 ಲಂಚದ ಆರೋಪದ ಬಗ್ಗೆ ಕಾಂಗ್ರೆಸ್ ದೊಡ್ಡ ಮಟ್ಟದಲ್ಲಿ ಹೋರಾಟ ಮಾಡಿ ಯಶಸ್ಸು ಗಳಿಸಿದೆ. ನಮ್ಮ ಸರ್ಕಾರದ ಅವಧಿಯಲ್ಲಿ ಭ್ರಷ್ಟಾಚಾರವನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಈ ವಿಷಯದಲ್ಲಿ ನಾವು ಶೂನ್ಯ ಸಹಿಷ್ಣು ಆಗಿರುತ್ತೇವೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ರಾಜ್ಯದ ಸಚಿವರಿಗೆ ಎಚ್ಚರಿಕೆ ನೀಡಿದರು.

ಲೋಕಸಭಾ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸುವ ಸಂಬಂಧ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಎಐಸಿಸಿ ಕಚೇರಿಯಲ್ಲಿ ಬುಧವಾರ ನಡೆದ ರಾಜ್ಯ ಕಾಂಗ್ರೆಸ್‌ನ ಹಿರಿಯ ನಾಯಕರ ಸಭೆಯಲ್ಲಿ ಮಾತನಾಡಿದ ರಾಹುಲ್, 'ನಾವು ಸ್ವಚ್ಛ ಆಡಳಿತ ನೀಡಬೇಕು. ಕೆಲವು ಸಚಿವರು ತಮ್ಮ ಧೋರಣೆಯನ್ನು ಬದಲಿಸಿಕೊಳ್ಳಬೇಕು. ಸ್ವಜನ ಪಕ್ಷಪಾತಕ್ಕೆ ಅವಕಾಶ ನೀಡಬಾರದು' ಎಂದು ತಾಕೀತು ಮಾಡಿದರು. ರಾಜ್ಯ ನಾಯಕರು ಹಾಗೂ ಸಚಿವರ ಜತೆಗೆ ಹೈಕಮಾಂಡ್‌ನ ನಾಯಕರು ಸುಮಾರು ಆರು ತಾಸು ಸಭೆ ನಡೆಸಿದರು.

'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದು ಎರಡು ತಿಂಗಳಷ್ಟೇ ಕಳೆದಿದೆ. ಅಷ್ಟರಲ್ಲೇ ಕೆಲವು ಸಚಿವರ ಕಾರ್ಯವೈಖರಿ ಬಗ್ಗೆ ಪಕ್ಷದ ಶಾಸಕರೇ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಹಲವು ಸಚಿವರು ಶಾಸಕರ ಕೈಗೂ ಸಿಗುತ್ತಿಲ್ಲ' ಎಂದು ಕೆಲವು ಮುಖಂಡರು ಸಭೆಯಲ್ಲಿ ಪ್ರಸ್ತಾಪಿಸಿದರು.

5ನೇ ಪುಟ ನೋಡಿ

> **ಸಭೆಯಲ್ಲಿ ಹೈಕಮಾಂಡ್ ಹೇಳಿದ್ದು...**
> - ಪ್ರತಿ ಲೋಕಸಭಾ ಕ್ಷೇತ್ರಕ್ಕೆ ಒಬ್ಬರು ಸಚಿವರು ಹಾಗೂ ಪಕ್ಷದ ಹಿರಿಯ ಮುಖಂಡರನ್ನು ಉಸ್ತುವಾರಿಯನ್ನಾಗಿ ನೇಮಿಸಲು ತೀರ್ಮಾನ
> - ತಳ ಹಂತದಿಂದಲೇ ಪಕ್ಷದ ಬಲವರ್ಧನೆಗೆ ಇನ್ನಷ್ಟು ಉಪಕ್ರಮ. ತಳಮಟ್ಟದಲ್ಲಿ ಸಂಘಟನೆಯ ಪುನರ್ ರಚನೆ.
> - ಸಚಿವರು ಕನಿಷ್ಠ ವಾರಕ್ಕೊಮ್ಮೆ ಕಾರ್ಯಕರ್ತರನ್ನು ಭೇಟಿಯಾಗಿ ಅಹವಾಲು ಆಲಿಸಬೇಕು. ಅವರ ಬೇಡಿಕೆಗಳಿಗೆ ಸ್ಪಂದಿಸಬೇಕು.
> - ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೆ ತಂದಿದ್ದು ಯುಪಿಎ ಸರ್ಕಾರ. ಅದು ದೊಡ್ಡ ಮಟ್ಟದಲ್ಲಿ ಯಶಸ್ಸು ಪಡೆಯಿತು. ಆದರೆ, ಅದರ ಲಾಭವನ್ನು ಪಡೆಯುವಲ್ಲಿ ಪಕ್ಷ ವಿಫಲವಾಯಿತು. ಐದು ಗ್ಯಾರಂಟಿಗಳ ವಿಷಯದಲ್ಲಿ ಆ ಲೋಪ ಆಗದಂತೆ ನೋಡಿಕೊಳ್ಳಬೇಕು. ಅದು ಕಾಂಗ್ರೆಸ್‌ನ ಕಾರ್ಯಕ್ರಮ ಎಂದು ಮತದಾರರ ಮನದಲ್ಲಿ ಉಳಿಯುವಂತೆ ನೋಡಿಕೊಳ್ಳಬೇಕು.
> - ಅನೇಕ ಜಿಲ್ಲೆಗಳಲ್ಲಿ ಬಾಡಿಗೆ ಕಟ್ಟಡಗಳಲ್ಲಿ ಪಕ್ಷದ ಕಚೇರಿಗಳು ಇವೆ. ಇದು ಸರಿಯಲ್ಲ. ಎಲ್ಲ ವಿಧಾನಸಭಾ ಕ್ಷೇತ್ರಗಳು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಪಕ್ಷದ ಸ್ವಂತ ಕಟ್ಟಡಗಳನ್ನು ನಿರ್ಮಿಸಬೇಕು.

ಮತ್ತೊಂದು ಚೀತಾ ಸಾವು

ಭೋಪಾಲ್ (ಪಿಟಿಐ): ಮಧ್ಯ ಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಮತ್ತೊಂದು ಚೀತಾ ಬುಧವಾರ ಬೆಳಿಗ್ಗೆ ಸಾವಿಗೀಡಾಗಿದೆ.

'ಹೆಣ್ಣು ಚೀತಾ 'ಧಾತ್ರಿ'ಯ ಮೃತದೇಹ ಬುಧವಾರ ಬೆಳಿಗ್ಗೆ ಪತ್ತೆಯಾಗಿದೆ. ಅದರ ಸಾವಿಗೆ ಕಾರಣವೇನೆಂಬುದನ್ನು ತಿಳಿಯಲು ಮರಣೋತ್ತರ ಪರೀಕ್ಷೆ ನಡೆಸಲಾಗುತ್ತಿದೆ. ಕಳೆದ ಮಾರ್ಚ್ ತಿಂಗಳಿಂದ ಇಲ್ಲಿಯವರೆಗೆ ಒಂಬತ್ತು ಚೀತಾಗಳು ಮೃತಪಟ್ಟಿವೆ' ಎಂದು ಅರಣ್ಯ ಇಲಾಖೆ ತಿಳಿಸಿದೆ.

'ಕುನೊ ವನ್ಯಜೀವಿ ಪಶು ವೈದ್ಯಾಧಿಕಾರಿಗಳು ಮತ್ತು ನಮೀಬಿಯಾ ತಜ್ಞರನ್ನೊಳಗೊಂಡ ತಂಡವು ನಿಯಮಿತವಾಗಿ ಚೀತಾಗಳ ಆರೋಗ್ಯದ ಮೇಲೆ ನಿಗಾ ಇಟ್ಟಿದೆ' ಎಂದೂ ತಿಳಿಸಿದೆ.

ಕಳೆದ ತಿಂಗಳು, ಎರಡು ಚೀತಾಗಳು ಕುತ್ತಿಗೆಗೆ ಹಾಕಲಾಗಿದ್ದ ರೇಡಿಯೊ ಕಾಲರ್‌ಗಳಿಂದ ಆದ ಗಾಯದ ಸೋಂಕಿನಿಂದ ಸಾವನ್ನಪ್ಪಿದ್ದವು. ಆದರೆ, ಅವು ನೈಸರ್ಗಿಕ ಕಾರಣಗಳಿಂದ ಮೃತಪಟ್ಟಿವೆ ಎಂದು ಪರಿಸರ ಸಚಿವಾಲಯ ಹೇಳಿತ್ತು.

ನೌಕರರಿಗೆ ಸಕಾಲಕ್ಕೆ ಸಿಗದ ವೇತನ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ತ್ರೈಮಾಸಿಕ ವೇತನಾನುದಾನ ಬಿಡುಗಡೆ ವಿಳಂಬ, ಅನುದಾನ ಕೊರತೆಯಿಂದಾಗಿ ರಾಜ್ಯದ ಹಲವು ಇಲಾಖೆಗಳ ನೌಕರರಿಗೆ ಎರಡು ತಿಂಗಳಿನಿಂದ ವೇತನವಾಗಿಲ್ಲ. ಗ್ರಾಮೀಣ ಭಾಗದ ಬಹುತೇಕ ನೌಕರರಿಗೆ ಏಪ್ರಿಲ್ ನಂತರ ನಿಗದಿತ ಸಮಯಕ್ಕೆ ವೇತನ ಸಿಕ್ಕಿಲ್ಲ.

ಬಜೆಟ್‌ನಲ್ಲಿ ಆಯಾ ವರ್ಷದ ವೇತನಾನುದಾನ ನಿಗದಿ ಮಾಡಲಾಗುತ್ತದೆ. ನಂತರ ಹಣಕಾಸು ಇಲಾಖೆ ಪ್ರತಿ ಮೂರು ತಿಂಗಳಿಗೊಮ್ಮೆ ಬೇಡಿಕೆಯಷ್ಟು ಅನುದಾನ ಬಿಡುಗಡೆ ಮಾಡುತ್ತದೆ. 2023–24ನೇ ಹಣಕಾಸು ವರ್ಷದಲ್ಲಿ ವೇತನಕ್ಕಾಗಿಯೇ ₹ 68 ಸಾವಿರ ಕೋಟಿ ನಿಗದಿ ಮಾಡಲಾಗಿತ್ತು. ಏಪ್ರಿಲ್‌ನಿಂದ ಜೂನ್‌ವರೆಗಿನ ಮೊದಲ ತ್ರೈಮಾಸಿಕ ₹ 17 ಸಾವಿರ ಕೋಟಿ ಬಿಡುಗಡೆ ಮಾಡಲಾಗಿತ್ತು. ಆದರೆ, ರಾಜ್ಯ ಸರ್ಕಾರ ಏಪ್ರಿಲ್ 1ರಿಂದ ಅನ್ವಯವಾಗುವಂತೆ ಮೂಲ ವೇತನದ ಶೇಕಡ 17ರಷ್ಟು ಮಧ್ಯಂತರ ಪರಿಹಾರ ಘೋಷಿಸಿದ ಕಾರಣ ಮೊದಲ ತ್ರೈಮಾಸಿಕದಲ್ಲಿ ವೇತನಕ್ಕಾಗಿ ಹೆಚ್ಚುವರಿ ₹ 2,600 ಕೋಟಿಯಷ್ಟು ಅನುದಾನ ನೀಡಬೇಕಿತ್ತು.

ಇದರಿಂದ ಸಮರ್ಪಕ ವೇತನಕ್ಕೆ ಅನುದಾನದ ಕೊರತೆಯಾಗಿ ಹಲವು ಕಚೇರಿಗಳ ನೌಕರರಿಗೆ ವೇತನ ನೀಡಿಕೆಯಲ್ಲಿ ವ್ಯತ್ಯಯವಾಗಿದೆ.

ಎರಡನೇ ತ್ರೈಮಾಸಿಕವೂ ವಿಳಂಬ: ಜುಲೈ, ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳ ವೇತನಕ್ಕೆ ಅಗತ್ಯವಾದ ಅನುದಾನವನ್ನು ಪ್ರತಿ ವರ್ಷ ಜೂನ್ 15ರ ಒಳಗೆ ಬಿಡುಗಡೆ ಮಾಡಲಾಗುತ್ತದೆ.

5ನೇ ಪುಟ ನೋಡಿ

> **ಅಂಕಿ-ಅಂಶಗಳು**
> **5,11,272** ಕಾರ್ಯನಿರ್ವಹಿಸುತ್ತಿರುವ ನೌಕರರು
> **₹68** ಸಾವಿರ ಕೋಟಿ 2023–24ನೇ ಸಾಲಿಗೆ ನಿಗದಿಯಾದ ವೇತನ
> **₹10** ಸಾವಿರ ಕೋಟಿ ನೌಕರರಿಗೆ ಘೋಷಿಸಿದ ಮಧ್ಯಂತರ ಪರಿಹಾರ

> **'ಅರ್ಧ ಸಂಬಳ ಗ್ಯಾರಂಟಿ'**
> 'ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಶಕ್ತಿ ಯೋಜನೆ ಫಲಶ್ರುತಿ ಸಾರಿಗೆ ನೌಕರರಿಗೆ ಅರ್ಧ ಸಂಬಳ ಮಾತ್ರ ಗ್ಯಾರಂಟಿ. ಮುಂದಿನ ದಿನಗಳಲ್ಲಿ ಸಾರಿಗೆ ನಿಗಮಗಳು ಬಸ್‌ಗಳನ್ನು ಡಿಸೆಲ್ ಇಲ್ಲದೇ ನಿಲ್ಲಿಸಬೇಕಾಗಬಹುದು. ಸಾರಿಗೆ ಸಂಸ್ಥೆಗಳ ನೌಕರರು ಸಂಬಳ ಇಲ್ಲದೆ ದುಡಿಯಬೇಕಾಗಬಹುದು. ಕೆಟ್ಟು ಹೋದ ಬಸ್‌ಗಳು ರಸ್ತೆಗಳಲ್ಲೇ ನಿಲ್ಲುವ ದಿನಗಳೂ ದೂರವಿಲ್ಲ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ದೂರಿದ್ದಾರೆ.

'ತಪ್ಪು ಮಾಡಿಲ್ಲ ಕ್ಷಮೆ ಕೇಳಲಾರೆ'

ನವದೆಹಲಿ (ಪಿಟಿಐ): 'ಮೋದಿ ಉಪನಾಮ' ಹೇಳಿಕೆಗೆ ಸಂಬಂಧಿಸಿದ ಮಾನನಷ್ಟ ಮೊಕದ್ದಮೆಯಲ್ಲಿ ತಮಗೆ ವಿಧಿಸಿರುವ ಶಿಕ್ಷೆ ಸಮರ್ಥನೀಯವಲ್ಲ ಎಂದು ಪ್ರತಿಪಾದಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಕ್ಷಮೆ ಕೇಳುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಸುಪ್ರೀಂಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ, 'ಈ ಪ್ರಕರಣದಲ್ಲಿ ನಾನು ತಪ್ಪಿತಸ್ಥನಲ್ಲ' ಎಂದಿದ್ದಾರೆ.

'ನಾನು ಕ್ಷಮೆ ಕೇಳುವುದಕ್ಕೆ ನಿರಾಕರಿಸಿದ ಏಕೈಕ ಕಾರಣಕ್ಕಾಗಿ ದೂರುದಾರರಾದ ಬಿಜೆಪಿ ನಾಯಕ ಪೂರ್ಣೇಶ ಮೋದಿ ಅವರು ಕೋರ್ಟ್‌ಗೆ ನೀಡಿರುವ ಪ್ರತಿಕ್ರಿಯೆಯಲ್ಲಿ ನನ್ನ ವಿರುದ್ಧ ನಿಂದನೀಯ ಪದಗಳನ್ನು ಬಳಸಿದ್ದಾರೆ' ಎಂದು ರಾಹುಲ್ ತಿಳಿಸಿದ್ದಾರೆ.

9ನೇ ಪುಟ ನೋಡಿ

ತನಿಖಾ ತಂಡ ರಚನೆ; ಮಾಹಿತಿ ಪಡೆದ ಮುಖ್ಯಮಂತ್ರಿ

ಕಲುಷಿತ ನೀರು: ಅಸ್ವಸ್ಥರ ಸಂಖ್ಯೆ 98ಕ್ಕೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಇಲ್ಲಿನ ಕವಾಡಿಗರ ಹಟ್ಟಿಯಲ್ಲಿ ಕಲುಷಿತ ನೀರು ಕುಡಿದು ಅಸ್ವಸ್ಥಗೊಂಡವರ ಸಂಖ್ಯೆ 98ಕ್ಕೆ ಏರಿಕೆಯಾಗಿದೆ. ವಾಂತಿ–ಭೇದಿಯಿಂದ ಬಳಲಿ ದಾವಣಗೆರೆಯ ಆಸ್ಪತ್ರೆಗೆ ದಾಖಲಾಗಿದ್ದ ಯುವಕ ಬುಧವಾರ ಮೃತಪಟ್ಟಿದ್ದಾರೆ. ಕಲುಷಿತ ನೀರು ಕುಡಿದಿದ್ದರಿಂದಲೇ ಇವರು ಸಾವಿಗೀಡಾಗಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ.

ಹಟ್ಟಿಯಲ್ಲಿ ಬುಧವಾರ ಮತ್ತೆ 63 ಜನ ಅಸ್ವಸ್ಥರಾಗಿದ್ದು, ಆರೋಗ್ಯ ಇಲಾಖೆಯ ಸಿಬ್ಬಂದಿ ಸ್ಥಳದಲ್ಲಿ ಬೀಡುಬಿಟ್ಟಿದ್ದಾರೆ. ಅಸ್ವಸ್ಥರ ಪೈಕಿ 16 ಜನ ತೀವ್ರ ನಿಗಾ ಘಟಕದಲ್ಲಿದ್ದು, ನಾಲ್ವರ ಸ್ಥಿತಿ ಗಂಭೀರವಾಗಿದೆ.

ಮತ್ತೊಂದು ಸಾವು?: ದಾವಣಗೆರೆಯಲ್ಲಿ ಮೃತಪಟ್ಟ ಪ್ರವೀಣ್ (25) ಚಿತ್ರದುರ್ಗ ತಾಲ್ಲೂಕಿನ ವಡ್ಡರ ಸಿದ್ದವ್ವನಹಳ್ಳಿಯವರು. ಇವರು ಜುಲೈ 31ರಂದು ಕವಾಡಿಗರಹಟ್ಟಿಯ ನೆಂಟರ ಮನೆಗೆ ಬಂದು ಆಗಸ್ಟ್ 1ರಂದು ಊರಿಗೆ ಮರಳಿದ್ದರು ಎನ್ನಲಾಗಿದೆ.

'ಪ್ರವೀಣ್, ಕವಾಡಿಗರ ಹಟ್ಟಿಗೆ ಬಂದು ಹೋಗಿದ್ದರು ಎನ್ನಲಾಗುತ್ತಿದೆ. ಪೊಲೀಸರು ತನಿಖೆ ನಡೆಸುತ್ತಿದ್ದು, ಮರಣೋತ್ತರ ಪರೀಕ್ಷೆಯ ವರದಿ ಕೈಸೇರಿದ ಬಳಿಕ ಸಾವಿಗೆ ನಿಖರ ಕಾರಣ ಗೊತ್ತಾಗಲಿದೆ' ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಜಿ.ಆರ್.ಜೆ ತಿಳಿಸಿದ್ದಾರೆ.

ತನಿಖಾ ತಂಡ ರಚನೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘಟನೆ ಕುರಿತು ಜಿಲ್ಲಾಧಿಕಾರಿಯಿಂದ ಮಾಹಿತಿ ಪಡೆದಿದ್ದಾರೆ.

ಮುಖ್ಯಮಂತ್ರಿ ಸೂಚನೆಯ ಮೇರೆಗೆ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರ ನೇತೃತ್ವದಲ್ಲಿ ತನಿಖಾ ತಂಡ ರಚಿಸಲಾಗಿದೆ. ಮೂರು ದಿನಗಳ ಒಳಗಾಗಿ ವರದಿ ನೀಡುವಂತೆ ಸೂಚಿಸಲಾಗಿದೆ.

'ಮುಖ್ಯಮಂತ್ರಿ ಅವರು ಘಟನೆ ಕುರಿತು ಮಾಹಿತಿ ಕೇಳಿದ್ದರು. ಕವಾಡಿಗರಹಟ್ಟಿಯ ಪರಿಸ್ಥಿತಿಯನ್ನು ಸಂಪೂರ್ಣವಾಗಿ ವಿವರಿಸಲಾಗಿದೆ. ಲೋಪ ಎಸಗಿದ ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ' ಎಂದು ಜಿಲ್ಲಾಧಿಕಾರಿ ದಿವ್ಯಪ್ರಭು ಜಿ.ಆರ್.ಜೆ. ಹೇಳಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಅನುಮೋದನೆಗೆ 100 ಕಡತ ಬಾಕಿ, 3 ಸಾವಿರ ಅಭ್ಯರ್ಥಿಗಳು ಅತಂತ್ರ

ನೇಮಕ ಬದಿಗೆ, ಕಲಹ ಬೀದಿಗೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ 1:3 ಅನುಪಾತದಲ್ಲಿ ಅರ್ಹತಾ ಪಟ್ಟಿ ಮತ್ತು 1:1 ಅನುಪಾತದಲ್ಲಿ ಆಯ್ಕೆ ಪಟ್ಟಿ ಸಿದ್ಧಪಡಿಸುವ ವಿಚಾರದಲ್ಲಿ ಕೆಪಿಎಸ್‌ಸಿ ಅಧ್ಯಕ್ಷರು, ಸದಸ್ಯರು ಮತ್ತು ಕಾರ್ಯದರ್ಶಿ ನಡುವೆ ಒಮ್ಮತ ಮೂಡದ ಕಾರಣ, ಹುದ್ದೆ ನಿರೀಕ್ಷೆಯಲ್ಲಿರುವ ಮೂರು ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ಅತಂತ್ರರಾಗಿದ್ದಾರೆ.

ನೇಮಕಾತಿಗೆ ಸಂಬಂಧಿಸಿದ 61 ಕಡತಗಳನ್ನು ಅನುಮೋದನೆಗಾಗಿ ಕಾರ್ಯದರ್ಶಿ ಸುರಳ್ಕರ್ ವಿಕಾಸ್ ಕಿಶೋರ್ ಆಯೋಗಕ್ಕೆ ಸಲ್ಲಿಸಿದ್ದಾರೆ. ಈ ಕಡತಗಳನ್ನು ಕೆಲವು ತಿಂಗಳುಗಳಿಂದ ಆಯೋಗ ಇಟ್ಟುಕೊಂಡಿದೆ. ಈ ಕಡತ ಗಳಿಗೆ ಅನುಮೋದನೆ ಸಿಕ್ಕಿದ ತಕ್ಷಣ ಸಲ್ಲಿಸಲು ಇನ್ನೂ 39 ಕಡತಗಳನ್ನು ಸಿದ್ಧಪಡಿಸಿದ್ದಾರೆ.

'ಈ ವಿಚಾರ ಕೆಪಿಎಸ್‌ಸಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ ಮತ್ತು ಸದಸ್ಯರ ಮಧ್ಯೆಯೇ ಒಡಕು ಮೂಡಿಸಿದೆ. ಅನುಮೋದನೆಗಾಗಿ ಕಾರ್ಯದರ್ಶಿ ಸಲ್ಲಿಸಿರುವ ಕಡತಗಳಿಗೆ ಸಹಿ ಹಾಕಲು ಕೆಲವು ಸದಸ್ಯರು ಮುಂದಾಗಿದ್ದಾರೆ. ಆದರೆ, ಸಹಿ ಹಾಕುವ ಬದಲು ತಮ್ಮ ಅಭಿಪ್ರಾಯ ನಮೂದಿಸಲು ಅಧ್ಯಕ್ಷರು ಮುಂದಾಗಿದ್ದಾರೆ' ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

ಮಂಗಳವಾರ (ಆಗಸ್ಟ್ 1) ನಡೆದ ಆಯೋಗದ ಸಭೆಯಲ್ಲಿಯೂ ಕಡತಗಳಿಗೆ ಅನುಮೋದನೆ ನೀಡುವ ವಿಚಾರ ಚರ್ಚೆಯಾಗಿದೆ. ಕಡತಗಳಲ್ಲಿ ತಮ್ಮ ಅಭಿಪ್ರಾಯ ತಿಳಿಸಿ, ಸದಸ್ಯರಿಗೆ ರವಾನಿಸಲು ಅಧ್ಯಕ್ಷರು ತೀರ್ಮಾನಿಸಿದ್ದಾರೆ ಎಂದೂ ಗೊತ್ತಾಗಿದೆ.

5ನೇ ಪುಟ ನೋಡಿ

> **ಆಯೋಗ– ಕಾರ್ಯದರ್ಶಿ ಹಗ್ಗಜಗ್ಗಾಟ**
> 'ಹುದ್ದೆಗಳಿಗೆ 1:3 ಅನುಪಾತದಲ್ಲಿ ಅರ್ಹತಾ ಪಟ್ಟಿ ಪ್ರಕಟಿಸುವಾಗ ಅಭ್ಯರ್ಥಿಗಳು ಪಡೆದ ಅಂಕ ಪ್ರಕಟಿಸಬಾರದು. ತಾತ್ಕಾಲಿಕ ಆಯ್ಕೆ ಪಟ್ಟಿಯ ಜೊತೆಗೆ ಅಂಕ ಪ್ರಕಟಿಸಬೇಕು' ಎನ್ನುವುದು ಆಯೋಗದ ವಾದ. ಆದರೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಿರಿಯ ಎಂಜಿನಿಯರ್ ಹುದ್ದೆಗಳ ನೇಮಕಾತಿಯಲ್ಲಿ 1:3 ಅನುಪಾತದಲ್ಲಿ ಅರ್ಹತಾ ಪಟ್ಟಿ ಜೊತೆಗೆ ಅಂಕಗಳನ್ನೂ ಕಾರ್ಯದರ್ಶಿ ಬಿಡುಗಡೆ ಮಾಡಿದ್ದಾರೆ. 'ಪಾರದರ್ಶಕತೆ ಉದ್ದೇಶದಿಂದ ಈ ಕ್ರಮ ತೆಗೆದುಕೊಂಡಿದ್ದೇನೆ' ಎನ್ನುವುದು ಕಾರ್ಯದರ್ಶಿ ಪ್ರತಿವಾದ. ಇದು ತಪ್ಪು ಎನ್ನುವುದಾದರೆ 'ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು– 2021'ರ ಪ್ರಕಾರ 1:1 ಅನುಪಾತದಲ್ಲಿ ನೇರವಾಗಿ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗುವುದು ಎಂದೂ ಅವರು ಆಯೋಗಕ್ಕೆ ತಿಳಿಸಿದ್ದಾರೆ. ಇದನ್ನು ಒಪ್ಪಲು ಆಯೋಗ ತಯಾರಿಲ್ಲ. ಸಮಸ್ಯೆಗಳಿಗೆ ಇದೇ ಕಾರಣ ಎಂದು ಮೂಲಗಳು ತಿಳಿಸಿವೆ.

ಕೆಪಿಎಸ್‌ಸಿಗೆ ಸಲ್ಲಿಕೆಯಾಗಿರುವ ಕಡತಗಳು

ಅಂತಿಮ ಆಯ್ಕೆ ಪಟ್ಟಿ	13
ತಾತ್ಕಾಲಿಕ ಆಯ್ಕೆ ಪಟ್ಟಿ	02
ಪರಿಷ್ಕೃತ ಹೆಚ್ಚುವರಿ ಪಟ್ಟಿ	01
ಅರ್ಹತಾ ಪಟ್ಟಿ	09
ಪರಿಷ್ಕೃತ ಅರ್ಹತಾ ಪಟ್ಟಿ	02
ಹೆಚ್ಚುವರಿ ಆಯ್ಕೆ ಪಟ್ಟಿ	31
ಹೆಚ್ಚುವರಿ ಪಟ್ಟಿ	03
ಸಲ್ಲಿಸಲು ಸಿದ್ಧವಾಗಿರುವ ಹೆಚ್ಚುವರಿ ಪಟ್ಟಿ	39
ಒಟ್ಟು	100

ಅನಧಿಕೃತ ಜಾಹೀರಾತು: ಹೈಕೋರ್ಟ್ ಕೆಂಗಣ್ಣು

ಪಿ.ಬಿ.ವರಾಳೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಅನಧಿಕೃತ ಜಾಹೀರಾತು ಫಲಕಗಳ ಹಾವಳಿ ಹೆಚ್ಚಾಗಿದೆ ಎಂದು ಬಿಬಿಎಂಪಿ ಮತ್ತು ರಾಜ್ಯ ಸರ್ಕಾರದ ವಿರುದ್ಧ ಕೆಂಡ ಕಾರಿರುವ ಹೈಕೋರ್ಟ್, 'ಇನ್ನು ಮುಂದೆ ನಗರದಲ್ಲಿ ಅಳವಡಿಸಲಾಗುವ ಪ್ರತಿಯೊಂದು ಅನಧಿಕೃತ ಜಾಹೀರಾತು ಫಲಕಕ್ಕೆ ರಾಜ್ಯ ಸರ್ಕಾರ ಮತ್ತು ಬಿಬಿಎಂಪಿ ತಲಾ ₹ 50 ಸಾವಿರ ಹಣವನ್ನು ನ್ಯಾಯಾಲಯದಲ್ಲಿ ಠೇವಣಿ ಇರಿಸಬೇಕಾಗುತ್ತದೆ' ಎಂದು ಎಚ್ಚರಿಸಿದೆ.

'ನಗರದಲ್ಲಿನ ಅನಧಿಕೃತ ಫ್ಲೆಕ್ಸ್, ಬ್ಯಾನರ್ ಮತ್ತು ಹೋರ್ಡಿಂಗ್‌ಗಳ ಹಾವಳಿ ತಡೆಯಲು ರಾಜ್ಯ ಸರ್ಕಾರ ಮತ್ತು ಬಿಬಿಎಂಪಿಗೆ ನಿರ್ದೇಶಿಸಬೇಕು' ಎಂದು ಕೋರಿ ಮಾಯಿಗೇಗೌಡ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

> **ಮುಖ್ಯಾಂಶಗಳು**
> - ಪ್ರತಿ ಅನಧಿಕೃತ ಜಾಹೀರಾತಿಗೆ ₹50 ಸಾವಿರ ಠೇವಣಿಯ ಎಚ್ಚರಿಕೆ
> - ಒಟ್ಟು 59,413 ಅಕ್ರಮ ಜಾಹೀರಾತು

5B ಪುಟ ನೋಡಿ

ಒಳ ಪುಟಗಳು

'ಸಂಸತ್‌ನಲ್ಲಿ ಮೋದಿ ಮಾತಾಡಲಿ' 9
ಹರಿಯಾಣ: ಮೃತರ ಸಂಖ್ಯೆ 6ಕ್ಕೆ 9
ಅಮೆರಿಕದ ರೇಟಿಂಗ್ಸ್ ಇಳಿಕೆ: ಸೆನ್ಸೆಕ್ಸ್ ಕುಸಿತ 8
ಧರ್ಮಸ್ಥಳ: ಸುಳ್ಳು ಸುದ್ದಿಗಳ ವಿರುದ್ಧ ಜನತಾ ಚಳವಳಿ 5

ಸುಧಾ, ಮಯೂರ, ಸ್ಪರ್ಧಾವಾಣಿ ಓದಿರಿ

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಛೇರಿ, ಅರಣ್ಯ ತರಬೇತಿ ಕೇಂದ್ರ, ಕಾಡುಗೋಡಿ, ಐಟಿಪಿಎಲ್ ಎದುರು, ವೈಟ್‌ಫೀಲ್ಡ್ ಮುಖ್ಯ ರಸ್ತೆ, ಮಹದೇವಪುರ ಅಂಚೆ, ಬೆಂಗಳೂರು – 48. ದೂ.: 080–2841 0192, ಇಮೇಲ್: dcfftati@gmail.com

ಸಂಖ್ಯೆ : ಡಿ.ಸಿ.ಎಫ್./ಎಫ್.ಟಿ.ಸಿ./ಸಿಆರ್–04/2022–23 ದಿನಾಂಕ : 31–07–2023

ಇ-ಟೆಂಡರ್ ಪ್ರಕಟಣೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ತರಬೇತಿ ಕೇಂದ್ರ, ಕಾಡುಗೋಡಿ, ಬೆಂಗಳೂರು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ತರಬೇತಿ ಕೇಂದ್ರ ಇಲವಾಲ, ಮೈಸೂರು ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ತರಬೇತಿ ಕೇಂದ್ರ, ಕುಶಾಲನಗರ ಕಛೇರಿಗಳಿಗೆ ಅಗತ್ಯವಿರುವ ಗಣಕಯಂತ್ರ ನಿರ್ವಾಹಕರು / ವಾಹನ ಚಾಲಕರು ಹಾಗೂ ರಾತ್ರಿ ಕಾವಲುಗಾರರುಗಳ ಸೇವೆ ಅವಶ್ಯವಿದ್ದು, ತಾತ್ಕಾಲಿಕವಾಗಿ 2023–24 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಮಾನವ ಹೊರ ಸಂಪನ್ಮೂಲ ಏಜೆನ್ಸಿ ಮೂಲಕ ಸೇವೆಯನ್ನು ನೋಂದಾಯಿತ ಗುತ್ತಿಗೆದಾರರಿಂದ ಇ–ಟೆಂಡರ್‌ನ್ನು ದಿನಾಂಕ : 31–07–2023 ರಂದು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.kppp.karnataka.gov.in ನಲ್ಲಿ ಪಡೆದು ತಾಂತ್ರಿಕ ಮತ್ತು ಆರ್ಥಿಕ ಬಿಡ್‌ನ್ನು ಸಲ್ಲಿಸಲು ಕೊನೆಯ ದಿನಾಂಕ : 16–08–2023 ರಂದು ಅಪರಾಹ್ನ 4.00 ಗಂಟೆಗೆ ಮತ್ತು ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 17–08–2023 ರಂದು ಅಪರಾಹ್ನ 4.00 ಗಂಟೆಗೆ ಹಾಗೂ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : 18–08–2023 ರಂದು ಅಪರಾಹ್ನ 4.00 ಗಂಟೆಗೆ ನಿಗಧಿಪಡಿಸಲಾಗಿದ್ದು, ಹೆಚ್ಚಿನ ವಿವರಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ತರಬೇತಿ ಕೇಂದ್ರ ಕಾಡುಗೋಡಿ, ಬೆಂಗಳೂರು ಕಛೇರಿಯಿಂದ ಪಡೆದುಕೊಳ್ಳಬಹುದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ತರಬೇತಿ ಕೇಂದ್ರ ಕಾಡುಗೋಡಿ, ಬೆಂಗಳೂರು

ವಾಸಾಇ/ಬೆಂ.ನ./747/ಮಣಿಪಾಲ್/2023–24

ರಾಮನಗರ ಜಿಲ್ಲಾ ಪಂಚಾಯತ್

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಪಂಚಾಯತ್ ಭವನ, ಬಿ.ಎಂ. ರಸ್ತೆ, ರಾಮನಗರ – 562159.

ಸಂ.: ರಾ.ಜಿ.ಪ./ಸಿ5/ಹೊ.ಸಿ.ಸೇವೆ/ಸಿ.ಆರ್–01/2023–24 ದಿನಾಂಕ : 28–07–2023

ಇ-ಟೆಂಡರ್ ಪ್ರಕಟಣೆ

ರಾಮನಗರ ಜಿಲ್ಲಾ ಪಂಚಾಯತ್ ಕಛೇರಿಗೆ 01–09–2023 ರಿಂದ 31–08–2024 ರವರೆಗೆ ಅವಧಿಗೆ ಡಾಟಾ ಎಂಟ್ರಿ ಆಪರೇಟರ್, ವಾಹನ ಚಾಲಕ, ಗ್ರೂಪ್ ಡಿ, ಸ್ವಚ್ಛತಾಗಾರರು ಮತ್ತು ಸೆಕ್ಯೂರಿಟಿ ಗಾರ್ಡ್, ರಾಮನಗರ ಜಿಲ್ಲಾ ಪಂಚಾಯತ್‌ನ ಮಾನ್ಯ ಅಧ್ಯಕ್ಷರ ಶಾಖೆಗೆ ಆಪ್ತ ಸಿಬ್ಬಂದಿ ಮತ್ತು ಪಿ.ಎಂ. ಪೋಷಣ್ ಶಕ್ತಿ ನಿರ್ಮಾಣ (ಮಧ್ಯಾಹ್ನ ಉಪಹಾರ ಯೋಜನೆ – ರಾಮನಗರ ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ) ಡಾಟಾ ಎಂಟ್ರಿ ಆಪರೇಟರ್ ಸೇವೆಯನ್ನು ಹೊರಗುತ್ತಿಗೆ ನೌಕರರ ಸೇವೆಯನ್ನು ಹೊರ ಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ ಇ–ಸಂಗ್ರಹಣಾ ವೇದಿಕೆಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಬಿಡ್‌ದಾರರು ಇ–ಸಂಗ್ರಹಣಾ ವೇದಿಕೆ ವೆಬ್‌ಸೈಟ್‌ನಲ್ಲಿ ಟೆಂಡರ್ ವಿವರಗಳನ್ನು ಪಡೆಯಬಹುದಾಗಿದೆ. ಇ–ಸಂಗ್ರಹಣಾ ವೇದಿಕೆಯ ಮೂಲಕ ಪ್ರಸ್ತಾವನೆ ಸಲ್ಲಿಸಲು ಕೊನೆಯ ದಿನಾಂಕ : 16–08–2023 ರ ಸಂಜೆ 4.30 ಗಂಟೆ.

ಸಹಾಯವಾಣಿ : 080–2727 6716, 080–2727 6714.

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್, ರಾಮನಗರ.

ಡಿಐಪಿಆರ್/ರಾಮನಗರ/100/ಮಣಿಪಾಲ್/2023–24

462 ಸಿಲಿಂಡರ್ ವಶ

ಹೊಸಕೋಟೆ: ತಾಲ್ಲೂಕಿನ ಕುರುಬರಹಳ್ಳಿಗೆ ಸೇರಿದ ಕೋಳಿ ಫಾರಂ ಶೆಡ್‌ವೊಂದರಲ್ಲಿ ಅಕ್ರಮವಾಗಿ ಗ್ಯಾಸ್ ರೀ ಫಿಲ್ಲಿಂಗ್ ಮಾಡುತ್ತಿದ್ದ ಘಟಕದ ಮೇಲೆ ದಾಳಿ ನಡೆಸಿದ ಪೊಲೀಸರು ಬೆಂಗಳೂರಿನ ಅಜ್ಗರ್ ಪಾಷಾ ಮತ್ತು ಬಿಹಾರ ಮೂಲದ ವಿಕ್ರಮ್ ಕುಮಾರ್ ಎಂಬುವವರನ್ನು ಬಂಧಿಸಿದ್ದಾರೆ.

ಬಂಧಿತರಿಂದ ಸುಮಾರು ₹8 ಲಕ್ಷ ಮೌಲ್ಯದ ವಿವಿಧ ಕಂಪನಿಯ ಗೃಹ ಮತ್ತು ವಾಣಿಜ್ಯ ಬಳಕೆಯ 462 ಸಿಲಿಂಡರ್ ವಶಪಡಿಸಿಕೊಂಡಿದ್ದಾರೆ.

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: UBLS-E-04-2023-24
ದಿನಾಂಕ: 28.07.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಹುಬ್ಬಳ್ಳಿಯ ಕಾರ್ಯಾಗಾರದಲ್ಲಿ 200 ಕೆಡಬ್ಲ್ಯೂಪಿ ಸಾಮರ್ಥ್ಯವುಳ್ಳ ಸೋಲಾರ್ ರೂಫ್‌ಟಾಪ್ ಫೋಟೋವೋಲ್ಟಾಯಿಕ್ ಸ್ಥಾವರದ ಪೂರೈಕೆ.	ರೂ. 1,60,50,120/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 19.08.2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ ಕ್ಯಾರಿಯೇಜ್ ದುರಸ್ತಿ ಕಾರ್ಯಾಗಾರ, ಹುಬ್ಬಳ್ಳಿ

PUB/276/AAD/PRB/SWR/2023-24

S.W.Railways SWRRLY SWRRLY

ದೇವಸ್ಥಾನದ ಗೋಡೆ ದುರಸ್ತಿ

ಒತ್ತುವರಿ ತೆರವು ಕಾರ್ಯಾಚರಣೆ ವೇಳೆ ಕುಸಿದಿದ್ದ ಗೋಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾದಚಾರಿ ಒತ್ತುವರಿ ತೆರವು ಕಾರ್ಯಾಚರಣೆ ಸಂದರ್ಭದಲ್ಲಿ ಗಂಗಾಧರೇಶ್ವರ ದೇವಸ್ಥಾನದ ಗೋಡೆ ಕುಸಿದಿದ್ದು, ಅದನ್ನು ದುರಸ್ತಿ ಮಾಡಲಾಗುತ್ತದೆ ಎಂದು ಬಿಬಿಎಂಪಿ ದಕ್ಷಿಣ ವಲಯ ಆಯುಕ್ತ ಜಯರಾಂ ರಾಯಪುರ ತಿಳಿಸಿದರು.

ಧರ್ಮರಾಯ ಸ್ವಾಮಿ ದೇವಸ್ಥಾನ ರಸ್ತೆಯ ಬಳಿ ಗೋಡೆ ಕುಸಿದಿರುವ ಸ್ಥಳಕ್ಕೆ ಅವರು ಬುಧವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

'ಗಂಗಾಧರೇಶ್ವರ ದೇವಸ್ಥಾನವು ಮುಜರಾಯಿ ಇಲಾಖೆ ವ್ಯಾಪ್ತಿಗೆ ಬರಲಿದ್ದು, ದೇವಾಲಯಕ್ಕೆ ಹೊಂದಿಕೊಂಡಿರುವ ಅಂಗಡಿಯ ಮೇಲ್ಭಾಗದ ಗೋಡೆಗೆ ಅಂಗಡಿಯ ನಾಮಫಲಕ ಹಾಗೂ ಶೀಟ್ ಅಳವಡಿಸಲಾಗಿತ್ತು. ಪಾದಚಾರಿ ಮಾರ್ಗದ ಒತ್ತುವರಿ ತೆರವು ಕಾರ್ಯಾಚರಣೆಯ ವೇಳೆ ಜೆಸಿಬಿಯ ಮೂಲಕ ನಾಮಫಲಕ ಹಾಗೂ ಶೀಟ್ ತೆರವುಗೊಳಿಸುವ ಸಂದರ್ಭದಲ್ಲಿ ದೇವಾಲಯದ ಮೇಲ್ಭಾಗದ ಗೋಡೆ ಕುಸಿದುಬಿದ್ದಿದೆ. ಪಾಲಿಕೆ ವತಿಯಿಂದ ಗೋಡೆಯ ದುರಸ್ತಿ ಕಾರ್ಯ ನಡೆಯುತ್ತಿದೆ. ಈ ವಾರ್ಯಾಂತದಲ್ಲಿ ಪೂರ್ಣಗೊಳ್ಳುತ್ತದೆ' ಎಂದು ಮಾಹಿತಿ ನೀಡಿದರು.

ಪಾದಚಾರಿ ಮಾರ್ಗದ ತೆರವು ಕಾರ್ಯಾಚರಣೆ ಮಾಡುವ ವೇಳೆ ಮುಜರಾಯಿ ಇಲಾಖೆಯ ಸಹಯೋಗದೊಂದಿಗೆ ಒತ್ತುವರಿ ಮಾಡಿ ಕೊಂಡಿರುವುದನ್ನು ಗುರುತಿಸಿ ತೆರವುಗೊಳಿಸಲು ಪಾಲಿಕೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ವೇಳೆ ವಲಯ ಮುಖ್ಯ ಎಂಜಿನಿಯರ್ ರಾಜೇಶ್, ಕಾರ್ಯಪಾಲಕ ಎಂಜಿನಿಯರ್‌ಗಳಾದ ಮಹಂತೇಶ್, ಯರಪ್ಪ ರೆಡ್ಡಿ ಇದ್ದರು.

ಗಂಗಾಧರೇಶ್ವರ ಸ್ವಾಮಿ ದೇವಸ್ಥಾನದ ಗೋಡೆಯನ್ನು ಬಿಬಿಎಂಪಿ ವತಿಯಿಂದ ದುರಸ್ತಿ ಮಾಡಲಾಗುತ್ತಿದೆ

ನರೇಂದ್ರ ನಾಯಕ್ ಸೇರಿ ಆರು ಮಂದಿಗೆ 'ಕಿ.ರಂ. ನಾಗರಾಜ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನಸಂಸ್ಕೃತಿ ಪ್ರತಿಷ್ಠಾನ ನೀಡುವ 2023ನೇ ಸಾಲಿನ 'ಕಿ.ರಂ. ನಾಗರಾಜ ಪ್ರಶಸ್ತಿ'ಗೆ ವಿಚಾರವಾದಿ ನರೇಂದ್ರ ನಾಯಕ್ ಸೇರಿ ಆರು ಮಂದಿ ಆಯ್ಕೆಯಾಗಿದ್ದಾರೆ.

ಚಿತ್ರ ಕಲಾವಿದೆ ಸಿ.ಎಸ್. ನಿರ್ಮಲ ಕುಮಾರಿ, ಸಾಹಿತಿಗಳಾದ ಸುಬ್ಬು ಹೊಲೆಯಾರ್, ನಾಗತಿಹಳ್ಳಿ ರಮೇಶ್, ಪತ್ರಕರ್ತ ಆರ್.ಜಿ.ಹಳ್ಳಿ ನಾಗರಾಜ್ ಹಾಗೂ ಸಾಹಿತ್ಯ ಪರಿಚಾರಕ ನಾಗೇಶ್ ದಸೂಡಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಇದೇ 7ರಂದು ಸಂಜೆ 6 ಗಂಟೆಗೆ ಬೆಂಗಳೂರಿನ ರವಿಂದ್ರ ಕಲಾಕ್ಷೇತ್ರದಲ್ಲಿ 'ಕಾಡುವಕಿರಂ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಪ್ರದೀಪ್ ಮಾಲ್ಗುಡಿ ತಿಳಿಸಿದ್ದಾರೆ.

ನರೇಂದ್ರ ನಾಯಕ್

ಸುಬ್ಬು ಹೊಲೆಯಾರ್

ಆರ್.ಜಿ.ಹಳ್ಳಿ ನಾಗರಾಜ್



ನಾಗತಿಹಳ್ಳಿ ರಮೇಶ್

ನಿರ್ಮಲ ಕುಮಾರಿ

ನಾಗೇಶ್ ದಸೂಡಿ

ಜಾಗತಿಕ ತಾಪಮಾನ ಏರಿಕೆ: 5 ನಗರಗಳ ಕೊಡುಗೆ ಶೇ 10ರಷ್ಟು

ಬೆಂಗಳೂರು: ಜಾಗತಿಕ ತಾಪಮಾನ ಹೆಚ್ಚಳದಿಂದ ದಕ್ಷಿಣ ವಲಯದಲ್ಲಿ ಉಂಟಾಗಲಿರುವ ಹವಾಮಾನ ವೈಪರೀತ್ಯದ ಬಗ್ಗೆ ಈಗಲೇ ಎಚ್ಚೆತ್ತುಕೊಳ್ಳದಿದ್ದರೆ ಮುಂಬರುವ ದಿನಗಳಲ್ಲಿ ಸಮಸ್ಯೆ ಎದುರಿಸಬೇಕಾಗುತ್ತದೆ ಎನ್ನುವ ಅಂಶವನ್ನು 'ಅಬ್ಸರ್ವ್ ರಿಸರ್ಚ್ ಫೌಂಡೇಶನ್ ಹಾಗೂ ದಸ್ರಾ ಸಂಸ್ಥೆ' ಬಿಡುಗಡೆ ಮಾಡಿದ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಜಿ-20 ಶೃಂಗಸಭೆಯ ಅಂಗವಾಗಿ ಬಿಡುಗಡೆ ಮಾಡಿದ ವರದಿಯಲ್ಲಿ ಈ ವಿಷಯವನ್ನು ಉಲ್ಲೇಖಿಸಲಾಗಿದೆ.

ಹವಾಮಾನ ಬದಲಾವಣೆಯ ಪರಿಣಾಮದಿಂದ ಅಪಾಯದಲ್ಲಿರುವ ದೇಶಗಳ ಪೈಕಿ ಭಾರತ 5ನೇ ಸ್ಥಾನದಲ್ಲಿದೆ. ಭಾರತದ ಅಗ್ರ ಐದು ನಗರಗಳು ತಾಪಮಾನ ಏರಿಕೆಗೆ ಶೇ 10ರಷ್ಟು ಕೊಡುಗೆ ನೀಡುತ್ತಿವೆ. ಮುಂದಿನ ದಿನಗಳಲ್ಲಿ ಇಂತಹ ನಗರಗಳು ಹೆಚ್ಚಲಿವೆ. ಸರ್ಕಾರವು ಈ ಬಗ್ಗೆ ಹೆಚ್ಚು ಜಾಗೃತಿ ವಹಿಸುವ ಅವಶ್ಯಕತೆ ಇದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ದಸ್ರಾ ಇಂಡಿಯಾ ಸಂಸ್ಥೆಯ ನೀರಾ ನುಂಡಿ, 'ಜಾಗತಿಕ ತಾಪಮಾನವನ್ನು ಕೆಲವರಿಂದ ಮಾತ್ರ ಸರಿಪಡಿಸಲು ಸಾಧ್ಯವಿಲ್ಲ. ವಾಣಿಜ್ಯೀಕರಣ, ಜಾಗತೀಕರಣದಿಂದ ಭೂಭಾಗಗಳ ತಾಪಮಾನ ವಿಪರೀತ ಏರಿಕೆಯಾಗುತ್ತಿದೆ. ಇದರಿಂದ, ಹವಾಮಾನದ ಮೇಲೂ ಪ್ರತಿಕೂಲ ಪರಿಣಾಮ ಬೀರುತ್ತಿದೆ' ಎಂದರು.

ಆರೋಗ್ಯ ಮತ್ತು ಪರಿಸರದಲ್ಲಿ ಬೆಳವಣಿಗೆ ಕಾಣಲು ಜಾಗತಿಕ ಮಟ್ಟದಲ್ಲಿ ಸಮೂಹ ಸಹಕಾರ ನೀಡಬೇಕು. ಖಾಸಗಿ, ಸಾರ್ವಜನಿಕ, ಲೋಕೋಪಕಾರಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಪರಿಸರದ ಸಂರಕ್ಷಣೆ ಮಾಡಬೇಕು. ಜಾಗತಿಕ ತಾಪಮಾನ ನಿಯಂತ್ರಿಸಲು ಸರ್ಕಾರಗಳು ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೊಳಿಸಬೇಕು ಎಂಬ ಸಲಹೆ ನೀಡಲಾಗಿದೆ.

SANSERA
ideas@work

SANSERA ENGINEERING LIMITED

CIN: L34103KA1981PLC004542
Registered Address: Plant-7, No.143/A, Jigani Link Road, Bommasandra Industrial Area, Bengaluru - 560105, Phone: 080 27839081/82/83; Fax: 080 27839309;
Email: rajesh.modi@sansera.in; Website: www.sansera.in

CONSOLIDATED UNAUDITED FINANCIAL RESULTS FOR THE QUARTER ENDED 30 JUNE 2023

(Rs. in Million except EPS)

Sl. No.	Particulars	Quarter ended 30-06-2023 (Unaudited)	Quarter ended 31-03-2023 (Unaudited)	Quarter ended 30-06-2022 (Unaudited)	Year ended 31-03-2023 (Audited)
1	Total Income from Operations	6,600.66	6,185.79	5,322.12	23,460.44
2	Net Profit/(Loss) for the period (before Tax, Exceptional and/or Extraordinary items)	609.83	486.03	478.05	2,032.32
3	Net Profit/(Loss) for the period before Tax (after Exceptional and/or Extraordinary items)	609.83	486.03	478.05	2,032.32
4	Net Profit/(Loss) for the period after Tax (after Exceptional and/or Extraordinary items)	451.70	354.20	347.83	1,483.42
5	Total Comprehensive Income For the period [comprising Profit/(Loss) for the period (after tax) and other comprehensive Income (after tax)]	455.14	361.00	326.91	1,463.81
6	Equity Share Capital	106.65	105.86	105.26	105.86
7	Reserves (excluding Revaluation Reserve) as shown in the Audited balance Sheet of the previous year				11,573.48
8	Earnings per share (of Rs. 2/- each)				
	1. Basic:	8.43	6.64	6.52	27.74
	2. Diluted:	8.30	6.53	6.34	27.17

Notes:
a. The above is an extract of the detailed format of unaudited quarter ended financial results filed with the stock exchanges under Regulation 33 of the SEBI (Listing and other Disclosure Requirements) Regulations, 2015. The full format of the unaudited quarter financial results are available on the websites of the stock exchange(s) i.e., www.bseindia.com / www.nseindia.com and the Company i.e., www.sansera.in.
b. Standalone unaudited financial information of the Company pursuant to regulation 47(1)(b) of SEBI (LODR) Regulations, 2015.

(Rs. in Million)

Particulars	Quarter ended 30-06-2023 (Unaudited)	Quarter ended 31-03-2023 (Unaudited)	Quarter ended 30-06-2022 (Unaudited)	Year ended 31-03-2023 (Audited)
Turnover	5,881.54	5,498.32	4,762.25	20,991.69
Profit before Tax	591.96	500.91	477.89	2,026.31
Profit after Tax	439.59	372.87	356.03	1,502.00

For & on behalf of the Board of Directors
Sd/-
S. Sekhar Vasan
Chairman and Managing Director
DIN: 00361245

Date: 01 August 2023
Place: Bengaluru

Adfactors 188

ಭಾರತ ಸರ್ಕಾರ
ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ
ದಿವ್ಯಾಂಗಜನರ ಸಬಲೀಕರಣ ಇಲಾಖೆ
ಕೊಠಡಿ ಸಂ. 517, 5ನೇ ಮಹಡಿ, ಅಂತ್ಯೋದಯ ಭವನ, ಸಿಜಿಒ ಕಾಂಪ್ಲೆಕ್ಸ್, ನವದೆಹಲಿ–110003

ಸನ್ 2023ನೇ ಸಾಲಿನ ದಿವ್ಯಾಂಗ ಜನರ ಸಬಲೀಕರಣಕ್ಕೆ ಸಂಬಂಧಿತ ರಾಷ್ಟ್ರೀಯ ಪ್ರಶಸ್ತಿಗಳು

ಸದರಿ ಇಲಾಖೆಯಿಂದ 15ನೇ ಜೂನ್ 2023 ರಂದು ಸನ್ 2023ನೇ ಸಾಲಿನ ದಿವ್ಯಾಂಗಜನರ ಸಬಲೀಕರಣ ಕ್ಷೇತ್ರಕ್ಕೆ ಸಂಬಂಧಿತ ರಾಷ್ಟ್ರೀಯ ಪ್ರಶಸ್ತಿಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಇದಕ್ಕಾಗಿ ಅರ್ಜಿಗಳನ್ನು/ನಾಮಿನೇಶನ್‌ಗಳನ್ನು ಸಲ್ಲಿಸಲು 31ನೇ ಜುಲೈ, 2023 ಕೊನೆಯ ದಿನಾಂಕ ಎಂದು ನಿಗದಿಪಡಿಸಲಾಗಿತ್ತು.

2. ಈ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಸನ್ 2023ನೇ ಸಾಲಿನ ದಿವ್ಯಾಂಗಜನರ ಸಬಲೀಕರಣಕ್ಕೆ ಸಂಬಂಧಿತ ರಾಷ್ಟ್ರೀಯ ಪ್ರಶಸ್ತಿಗಳಿಗಾಗಿ, ಕಾಮನ್ ಅವಾರ್ಡ್ ಪೋರ್ಟಲ್‌ನಲ್ಲಿ (www.awards.gov.in) ಅರ್ಜಿಗಳನ್ನು / ನಾಮಿನೇಶನ್‌ಗಳನ್ನು ಸಲ್ಲಿಸುವ ದಿನಾಂಕವನ್ನು ಈಗ 01.08.2023 ರಿಂದ 15.08.2023 ರವರೆಗೆ ವಿಸ್ತರಿಸಲಾಗಿದೆ.

3. ಪುನಃ ಸಂಬಂಧಿತ ಎಲ್ಲರ ಗಮನಕ್ಕೂ ತರಬಯಸುವುದು ಏನೆಂದರೆ, ಸನ್ 2023ನೇ ಸಾಲಿನ ಮೇಲ್ಕಂಡ ಪ್ರಶಸ್ತಿಗಳಿಗಾಗಿ ಅರ್ಜಿಗಳನ್ನು/ನಾಮಿನೇಶನ್‌ಗಳನ್ನು 15ನೇ ಆಗಸ್ಟ್ 2023 ರೊಳಗೆ ಪಾಸ್‌ವರ್ಡ್ ಸುರಕ್ಷೆ ಹೊಂದಿರುವ ಸೆಂಟ್ರಲೈಜ್ಡ್ ಪೋರ್ಟಲ್ (www.awards.gov.in) ಮೂಲಕ ಮಾತ್ರ ಆನ್‌ಲೈನ್ ವಿಧಾನದಲ್ಲಿ ಸಲ್ಲಿಸಬಹುದಾಗಿರುತ್ತದೆ. ಭೌತಿಕ ರೂಪದ/ಇ–ಮೇಲ್ ಮುಖಾಂತರದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

3. ಅರ್ಹತಾ ಮಾನದಂಡ ಮತ್ತು ಇನ್ನಿತರ ವಿವರಗಳು ಇಲಾಖೆಯ ವೆಬ್‌ಸೈಟ್‌ನ ಸದರಿ ಲಿಂಕ್‌ನಲ್ಲಿ ಲಭ್ಯವಿರುತ್ತದೆ: https://disabilityaffairs.gov.in/

CBC-38117-11-0027-2324

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

General Public is notified my clients intend to purchase plot No. 894, 2440 sq.,ft., HAL II Stage Ext., Bangalore, bounded in East: Site No. 877, West: Road, North: Site No. 895, South: Site No. 893, from owner Mrs. A. Parvathi, d/o Late M. Appaiah, r/o 14, 6th G Street, Jougupalyam, Ulsoor, Bangalore-8. Anyone having any objections/claims is to intimate me within 7 days from today, otherwise, no claims shall be entertained.

Sd/- Ms.Pooja Upadhya, Advocate, No.299, Amarjyoti layout, Domlur, Inner Ring Road,Bangalore-71. Mob.: 9886411911. Email: pupadhya@anaarc.com.

JOB OPPORTUNITIES

General

A Software Technology Park at Bangalore requires

Lift Operator
- Should be smart & young female/male
- Preferably S.S.L.C. passed
- Salary: 20,000 - 25,000
- ESI, Provident Fund benefits.
- **Walk-In Interview** at 10.30 AM on all working days

Gate No 2, Safina Technology Park, No.3, Ali Asker Road, Bangalore- 560 052,

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

EDUCATIONAL

Correspondence Courses

STUDY AT Home SSLC DIRECT 2nd PUC Regular Class Science Commerce Arts. BA,B.Com,BBA, B.Sc,BCA,BSW, B.LISc,B.Ed, M.Ed, M.LISc,MA M.Com,M.Sc, MBA, MSW, MCA,PG-Diploma Courses, Contact: Manasa Correspondence College. Malleshwaram Circle Bangalore. 9663555154/ 9880498484.

Training

Gunasheela Surgical & Maternity Hospital (Accredited by Rajiv Gandhi University of Health Sciences, Bangalore)

Invites applications for training programme in **"FELLOWSHIP IN REPRODUCTIVE MEDICINE"**. The duration of the course is 18 months commencing **from 1st September 2023.** Candidates with MS / MD / DNB degree in Obstetrics & Gynaecology preferably with experience & DGO candidates with minimum 1 year experience in the field may apply. Last Date for Receipt of Applications: **07-08-2023.** Interview Date will be informed to Candidates by e-mail or Phone. Apply to **Gunasheela Surgical & Maternity Hospital,** # 1, Dewan N. Madhava Rao Road, Basavanagudi, Bangalore-560004. Contact : **080-46462600** Email: **gunasheelaivf@gmail.com**

PUBLIC NOTICE

Public are hereby notified that my client negotiating to purchase all that property described in the Schedule herein from **Sri. C.S. Ravi S/o. C.N. Satyanarayana Setty and Smt. R. Sandhya W/o. Sri. C.S. Ravi,** who claims to be the owners of the **Schedule Property.**

ALL persons including an individual, a Hindu Undivided Family, a company, banks, financial institution(s), non-banking financial institution(s), a firm, an association of persons or a body of individuals whether incorporated or not, lenders and/or creditors having any objection, claim, right, title and/or interest in respect of said Property or any part or portion thereof by way of sale, memorandum of understanding, exchange, mortgage, pledge, charge, gift, trust, inheritance, succession, possession, lease, tenancy, maintenance easement, license, bequeath, share, assignment, lien, attachment, development rights, right of way, lispendens, reservation, agreement, FSI consumption, development rights, or any liability or commitment or otherwise or demand of any nature whatsoever are hereby requested to inform the same in writing, supported with the original documents, to the undersigned having their office at **LEXSITUS**, No.810, 'BILWAPRIYA PLATINA', 2nd Floor, 27th Main Road, HSR Layout, Sector 1, Bangalore – 560102 or call to: 080-22583563, 080-25723339 or Email: info@lexsitus.com within a period of **15 (Fifteen) days** from the date of publication of this notice, failing which, the claim or claims, if any, of such person or persons shall be considered to have been waived and/or abandoned.

SCHEDULE PROPERTY

ALL THAT PIECE AND PARCEL OF THE land bearing Sy.No.137/2 (Portion of land in Sy.No.137) measuring 5 Acres, Converted vide Official Memorandum bearing No. ALN/SR/BSU/1/1996-97, dated:07.10.1996, issued by the Sub-Divisional Officer, Bengaluru South Sub-Division, Bengaluru, situated at Erasandra Village, Nettigere Dhakle, Uttarahalli Hobli, Bengaluru South Taluk, Bengaluru Urban District and bounded on the;

East by : Bangalore – Kanakapura Road;
West by : Halla and thereafter Land in Sy.No.136;
North by : Land bearing Sy.No.138 and Land bearing Sy.No.137/1 belonging to Sri. R. Muniraju
South by : Veerasandra Village Road and Leading to Muneshwara Temple Road(Previously Oni/Cart Track).

ROOPA SHETTY, Advocate
Lex Situs, No.810, 'BILWAPRIYA PLATINA', 2nd Floor, 27th Main Road, HSR Layout, Sector 1, Bangalore - 560102.
Phone: 080-22583563, 080-25723339, 9902026199;
Email:info@lexsitus.com

Hospital & Medical Jobs

WANTED MEDICAL DOCTOR, Master of Social Worker, Staff Nurses, Laboratory Technicians, Bachelor of Business Management. Walk-In Interview: Blood Bank, 8th Cross, Malleshwaram, Bangalore. Ph: 9448465835

BUSINESS

Business Offers

Finance

NRI'S INVESTMENT
And Finance Available
On Low Interest
Against
Properties,Land&
Building,Sites,Flats,
Converted&
Agriculture Lands
Call:7204995189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

PERSONAL

Change of Name

CHANGE OF NAME

I, **MUNIRATHNAM VENKATRAMAN SATISH** Residing at Sree Fortune Apartment, No.43, 403, Forth floor, Daddys Garden Layout, Bengaluru-560100 have changed my name to **MUNIRATHNAM SATISH** vide affidavit dated 2.8.2023 before Notary L. Gopalakrishna, Bengaluru. Henceforth I shall be known as **MUNIRATHNAM SATISH** only.

I, VANAJAKSHY .K residing at #1546, 2nd cross Teachers Colony, H.B.R. Layout, Bengaluru- 560043, have changed my name to VANEEZA VAFA VAIDA, vide affidavit dated 02.08.2023 before Notary Meer Hassan, Bangalore

DH DECCAN HERALD ಪ್ರಜಾವಾಣಿ
JOB CORNER
BOOK JOB ADS ON WEEKDAY + SUNDAY
@ 803/-* Per Sqcm Single Column
@ 825/-* Per Sqcm Multi Column
conditions apply*
For more information Contact:
9845114560 : 9731810277
9901641752 : 9886213331
080 - 45557163 / 164

ನಗರಸಭೆ ಕಾರ್ಯಾಲಯ,
ಕೋಲಾರ

ಸಂಖ್ಯೆ:ನಸಕೋ/ತಾಂತ್ರಿಕ/ಟೆಂಡರ್/ಸಿಆರ್/02/2023–24 ದಿನಾಂಕ: 31.07.2023

ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೆ ಒಳಪಟ್ಟು ಇ–ಟೆಂಡರ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999–2000ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಕೆಳಕಂಡಂತೆ ವಿವಿಧ ಯೋಜನೆಗಳಡಿ ಏಕ/ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ನಮೂದಿಸಿರುವ ಇಂಡೆಂಟ್ ಸಂಖ್ಯೆ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇಲಾಖಾ ವೆಬ್‌ಸೈಟ್: https://kppp.karnataka.gov.in ರಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ.

(1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 16.08.2023ರ ಸಂಜೆ: 17.30 ಗಂಟೆವರೆಗೆ.** (2) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಏಕಲಕೋಟೆ ಪದ್ಧತಿಯ ಪ್ಯಾಕೇಜ್ ಸಂಖ್ಯೆ:**5, 6, 7, 8, 12** ರ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ:18.08.2023 ರ ಬೆಳಗ್ಗೆ 11.00 ಗಂಟೆಗೆ.** (3) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ದ್ವಿಲಕೋಟೆ ಪದ್ಧತಿಯ ಪ್ಯಾಕೇಜ್ ಸಂಖ್ಯೆ:**1, 2, 3, 4, 9, 10, 11** ರ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ:18.08.2023 ರ ಬೆಳಗ್ಗೆ 11.00 ಗಂಟೆಗೆ.** (4) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ದ್ವಿ ಲಕೋಟೆ ಪದ್ಧತಿಯ ಪ್ಯಾಕೇಜ್ ಸಂಖ್ಯೆ:**1, 2, 3, 4, 9, 10, 11** ರ ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ:21.08.2023 ರ ಬೆಳಗ್ಗೆ 10.30 ಗಂಟೆಗೆ.**

ಪ್ಯಾ. ಸಂ.	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಕಾಲಾವಧಿ
	2022–23ನೇ ಸಾಲಿಗೆ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನ			
1	DMA/2023-24/WS/WORK_INDENT657	37,83,686.65	89,400/-	3 ತಿಂಗಳು
2	DMA/2023-24/WS/WORK_INDENT714	38,21,313.75	90,300/-	3 ತಿಂಗಳು
3	DMA/2023-24/WS/WORK_INDENT732	38,26,242.35	90,600/-	3 ತಿಂಗಳು
	2023–24ನೇ ಸಾಲಿನ ನಗರಸಭೆ ನಿಧಿ			
4	DMA/2023-24/WS/WORK_INDENT958	30,78,821.41	62,000/-	2 ತಿಂಗಳು
5	DMA/2023-24/OW/WORK_INDENT1178	4,23,349.36	11,600/-	1 ತಿಂಗಳು
6	DMA/2023-24/WS/WORK_INDENT1279	4,20,764.41	10,500/-	2 ತಿಂಗಳು
7	DMA/2023-24/WS/WORK_INDENT2033	68,230.91	1,700/-	1 ತಿಂಗಳು
8	DMA/2023-24/SE0453	20,00,000	50,000/-	2 ತಿಂಗಳು
9	DMA/2023-24/SE0362	49,66,551.88	1,00,000/-	12 ತಿಂಗಳು
	2015–16ರಿಂದ 2018–19 ಸಾಲಿನವರೆಗಿನ ಎಸ್.ಎಫ್.ಸಿ ಮತ್ತು 2015–16 ರಿಂದ 2017–18 ರವರೆಗಿನ ನಗರಸಭೆ ನಿಧಿ ಮತ್ತು 2019–20ನೇ ಸಾಲಿನ ನಗರಸಭೆ ನಿಧಿ (ಶೇ.5)			
10	DMA/2023-24//IND0189	18,10,000	45,000/-	2 ತಿಂಗಳು
	ಸ್ವಚ್ಛ ಭಾರತ ಮಿಷನ್ 2.0 ಯೋಜನೆ			
11	DMA/2023-24/OW/WORK_INDENT220/ CALL-2	3,26,33,000	4,89,500/-	9.36 ತಿಂಗಳು
	ಪರಿಶಿಷ್ಟಜಾತಿಗೆ ಮೀಸಲಾತಿ			
	2021–22ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನ			
12	DMA/2023-24/WS/WORK_INDENT734	67,134.43	850/-	1 ತಿಂಗಳು

ಸೂಚನೆ: ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು ಹಾಗೂ www.kolarcity.mrc.gov.in ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.

ಸಹಿ/– ಪೌರಾಯುಕ್ತರು, ನಗರಸಭೆ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:82/ಕೆಎಸ್‌ಎಂ.ಸಿ.ಎ/2023–24

ನಗರದಲ್ಲಿ ಇಂದು

ಭಾರತೀಯ ಅಂಗಾಂಗ ದಾನ ದಿನ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ರಾಮಲಿಂಗಾರೆಡ್ಡಿ, ಕೆ.ಜೆ. ಜಾರ್ಜ್, ಕೃಷ್ಣ ಬೈರೇಗೌಡ, ಬಿ.ಝಡ್. ಜಮೀರ್ ಅಹ್ಮದ ಖಾನ್, ಸುರೇಶ್ ಬಿ.ಎಸ್., ಕೆ. ಗೋವಿಂದರಾಜ್, ನಸೀರ್ ಅಹಮದ್, ಆಯೋಜನೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಳಿಗ್ಗೆ 9.30ರಿಂದ

'ಶಾಸಕರ ಅಮಾನತು ಒಂದು ಮುಕ್ತ ಚರ್ಚೆ': ಅಧ್ಯಕ್ಷತೆ: ಡಿ.ಎಚ್. ಶಂಕರಮೂರ್ತಿ, ವಿಶ್ವೇಶ್ವರ ಹೆಗಡೆ ಕಾಗೇರಿ, ಜೆ.ಸಿ. ಮಾಧುಸ್ವಾಮಿ, ಎ.ಟಿ. ರಾಮಸ್ವಾಮಿ, ಆಯೋಜನೆ: ಸಿಟಿಜನ್ಸ್ ಫಾರ್ ಬೆಂಗಳೂರು, ಸ್ಥಳ: ಗಾಂಧಿ ಭವನ, ಬೆಳಿಗ್ಗೆ 10.30

57ನೇ ಘಟಿಕೋತ್ಸವ: ಅಧ್ಯಕ್ಷತೆ: ಥಾವರಚಂದ್ ಗೆಹಲೋತ್, ಅತಿಥಿ: ಹಿಮಾಂಶು ಪಾಠಕ್, ಉಪಸ್ಥಿತಿ: ಎನ್. ಚಲುವರಾಯಸ್ವಾಮಿ, ಆಯೋಜನೆ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸ್ಥಳ: ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ, ಜಿಕೆವಿಕೆ, ಬೆಳಿಗ್ಗೆ 11ರಿಂದ

ಬನ್ನಂಜೆ ಗೋವಿಂದಾಚಾರ್ಯರ ಜನ್ಮಾರಾಧನೆ: 'ಬನ್ನಂಜೆ ಉವಾಚ', 'ಗೋವಿಂದಾಲೋಕಃ' ಪುಸ್ತಕಗಳ ಬಿಡುಗಡೆ: ಸುಗುಣೇಂದ್ರ ತೀರ್ಥ ಶ್ರೀಪಾದ ಸ್ವಾಮೀಜಿ, ಎಸ್. ಅಹಲ್ಯಾ, 'ಆಚಾರ್ಯರು ಸಾಂಸ್ಕೃತಿಕ ರಾಯಭಾರಿ' ಕುರಿತ ಉಪನ್ಯಾಸ: ಜಿ.ಬಿ. ಹರೀಶ್, ಬನ್ನಂಜೆವರೊಂದಿಗೆ ಮುಸ್ಸಂಜೆ: ಹಿರೇಮಗಳೂರ್ ಕಣ್ಣನ್, ಗಂಗಾವತಿ ಪ್ರಾಣೇಶ್, ವೈ.ವಿ. ಗುಂಡೂರಾವ್, ಬಸವರಾಜ ಮಹಾಮನಿ, ನಾಗಶ್ರೀ ತ್ಯಾಗರಾಜ್, ಎನ್. ರಾಮನಾಥ್, ಆಯೋಜನೆ: ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನ, ಸ್ಥಳ: ಜೆ.ಎಸ್.ಎಸ್ ಸಭಾಂಗಣ, ಜಯನಗರ, ಸಂಜೆ 4ರಿಂದ

ವೈವಿಧ್ಯ ವಿನ್ಯಾಸ–2023: ಅತಿಥಿಗಳು: ರವಿ ಮುರುಗನ್, ನಿರಂಜನ್ ವಾನಳ್ಳಿ, ಪ್ರವೀಣ ನಿಂಬಾಳ್ಕರ್, ಮಧುಮಿತ ಬಾಗ್ಚೆ, ಅಧ್ಯಕ್ಷತೆ: ರಾಜೇಶ್ ಪನಿಕ್ಕರ್, ಆಯೋಜನೆ: ಆರ್ಮಿ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಶನ್ ಆ್ಯಂಡ್ ಡಿಸೈನ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಣಗಣ, ಮಲ್ಲೇಶ್ವರ, ಸಂಜೆ 6

ಪ್ರವಚನ ವಾಹಿನಿ: 'ಅರಣ್ಯ ಪರ್ವದ ಸ್ವಾರಸ್ಯಕರ ಪ್ರಸಂಗಗಳು' ಕುರಿತ ಉಪನ್ಯಾಸ: ರಂಗನಾಥ ಕಟ್ಟಾಯ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30ರಿಂದ

ವೇಣು ವಾದನ–ಗೀತ ಗಾಯನ: ಗಣೇಶ್ ಕೆ.ಎಸ್., ಚೇತನಾ ನಾಗರಾಜ್, ಮೃದಂಗ: ಸಾಯಿ ವಂಶಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಸಂಜೆ 7

ನೃತ್ಯ ಪ್ರದರ್ಶನ: ಅರ್ಕ ಕಲಾ ಕುಟೀರದ ವಿದ್ಯಾರ್ಥಿಗಳಿಂದ, ನಿರ್ದೇಶನ: ಭಾನುಪ್ರಿಯ ರಾಕೇಶ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

ತಿಂಡಿ ಬೀದಿಗೆ ಕೆಂಗಂದು ಬಣ್ಣ

ವಿವಿ ಪುರದ ತಿಂದಿ ಬೀದಿಯ ರಸ್ತೆಗೆ ಕೆಂಗಂದು ಬಣ್ಣದ ಕಾಂಕ್ರೀಟ್ ಹಾಕಲಾಗುತ್ತಿರುವುದನ್ನು ಬಿಬಿಎಂಪಿ ದಕ್ಷಿಣ ವಲಯ ಆಯುಕ್ತ ಜಯರಾಂ ರಾಯಪುರ ಪರಿಶೀಲಿಸಿದರು

ಬೆಂಗಳೂರು: ತಿಂಡಿ ಬೀದಿಯ 200 ಮೀಟರ್ ಉದ್ದದ 5 ಮೀಟರ್ ಅಗಲದ ಕಾಂಕ್ರೀಟ್ ರಸ್ತೆಯ ಮೇಲ್ಭಾಗಕ್ಕೆ 3 ಎಂಎಂ ಕೆಂಗಂದು ಬಣ್ಣ ಹಾಕಲಾಗುತ್ತಿದೆ ಎಂದು ದಕ್ಷಿಣ ವಲಯದ ಆಯುಕ್ತ ಜಯರಾಮ್ ರಾಯಪುರ ತಿಳಿಸಿದರು.

ಈ ಕಾಮಗಾರಿ ಶೇ 70 ರಷ್ಟು ಪೂರ್ಣಗೊಂಡ ಬಳಿಕ ರಸ್ತೆಗೆ ಕೆಂಗಂದು ಬಣ್ಣದ ಪಾಲೀಶ್ ಮಾಡಲಾಗುತ್ತದೆ ಎಂದರು.

ತಿಂಡಿ ಬೀದಿಯ ಅಭಿವೃದ್ಧಿ ಕಾಮಗಾರಿಗಳನ್ನು ಬುಧವಾರ ಪರಿಶೀಲಿಸಿದ ಅವರು, 5 ಮೀಟರ್ ಕಾಂಕ್ರೀಟ್ ರಸ್ತೆ, ಎರಡೂ ಬದಿ 3 ಮೀಟರ್ ಪಾದಚಾರಿ ಮಾರ್ಗ, 25 ವಿದ್ಯುತ್ ದೀಪಗಳ ಅಳವಡಿಕೆ ಕೆಲಸ ಸೇರಿದಂತೆ ಬೇರೆ ಬೇರೆ ಅಭಿವೃದ್ಧಿ ಕಾರ್ಯಗಳನ್ನು ಶೀಘ್ರ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಒಳಚರಂಡಿ ಸಂಪರ್ಕ, ನೀರು ಸರಬರಾಜು ಸಂಪರ್ಕ, ಮಳೆ ನೀರುಗಾಲುವೆ ಸಂಪರ್ಕ, ಕೇಬಲ್‌ಗಳ ಲೈನ್ ಡಕ್ಟ್ ಹಾಗೂ ಕೇಬಲ್ ಚೇಂಬರ್‌ಗೆ ಸಂಬಂಧಿಸಿದ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ ಎಂದರು.

‘ನಾಡಗೀತೆ: ಬೇರೆ ರಾಜ್ಯಗಳ ಕ್ರಮಗಳೇನು?’

ಸುಗಮ ಸಂಗೀತ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನೆರೆಯ ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣದಂತಹ ರಾಜ್ಯಗಳಲ್ಲಿ ನಾಡಗೀತೆ ಇದೆಯೇ, ಇದ್ದರೆ ಅವುಗಳ ರಚನೆ, ರಾಗ ಸಂಯೋಜನೆ ಹಾಗೂ ಅವುಗಳನ್ನು ಹಾಡುವ ಪರಿಪಾಠಕ್ಕೆ ಸಂಬಂಧಿಸಿದಂತೆ ಅಲ್ಲಿ ಪಾಲಿಸಲಾಗುತ್ತಿರುವ ಕ್ರಮಗಳೇನು ಎಂಬುದನ್ನು ಪರಿಶೀಲಿಸಿ ತಿಳಿಸಿ’ ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

‘ದಿವಂಗತ ಮೈಸೂರು ಅನಂತಸ್ವಾಮಿ ಸಂಯೋಜಿಸಿದ ಧಾಟಿಯಲ್ಲಿಯೇ ನಾಡಗೀತೆಯನ್ನು 2 ನಿಮಿಷ 30 ಸೆಕೆಂಡ್‌ಗಳಲ್ಲಿ ಹಾಡಬೇಕು’ ಎಂಬುದನ್ನು ಕಡ್ಡಾಯಗೊಳಿಸಿ ರಾಜ್ಯ ಸರ್ಕಾರ 2022ರ ಸೆಪ್ಟೆಂಬರ್ 25ರಂದು ಹೊರಡಿಸಿದ ಆದೇಶವನ್ನು ಪ್ರಶ್ನಿಸಿ ಖ್ಯಾತ ಸುಗಮ ಸಂಗೀತ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ, ‘ಅರ್ಜಿಯಲ್ಲಿ ನಮ್ಮನ್ನೂ ಮಧ್ಯಂತರ ಪ್ರತಿವಾದಿಗಳನ್ನಾಗಿ ಸೇರ್ಪಡೆ ಮಾಡಿಕೊಳ್ಳಬೇಕು’ ಎಂದು ‘ಅಖಿಲ ಕರ್ನಾಟಕ ಸುಗಮ ಸಂಗೀತ ಸಂಸ್ಥೆಗಳ ಒಕ್ಕೂಟ’ದ ಅಧ್ಯಕ್ಷ ಮೃತ್ಯುಂಜಯ ದೊಡ್ಡವಾಡ ಪರ ವಕೀಲ ಎಚ್.ಸುನಿಲ್ ಕುಮಾರ್ ನ್ಯಾಯಪೀಠಕ್ಕೆ ಮನವಿ ಮಾಡಿದರು.

‘ಮೈಸೂರು ಅನಂತಸ್ವಾಮಿ ಅವರ ರಾಗದ ಧಾಟಿಯ ಪ್ರಾಮುಖ್ಯತೆ ಕುರಿತಂತೆ ನಮ್ಮ ಬಳಿ ಹೆಚ್ಚಿನ ಮಾಹಿತಿ ಇದೆ. ಅದನ್ನು ಈ ಪ್ರಕರಣದಲ್ಲಿ ಹಂಚಿಕೊಳ್ಳಲು ಬಯಸುತ್ತೇವೆ. ಈ ಪ್ರಕರಣದಲ್ಲಿ ಹಿರಿಯ ವಕೀಲ ಸಿ.ಎಚ್.ಹನುಮಂತರಾಯ ಅವರು ವಾದ ಮಂಡಿಸಲಿದ್ದು ಅದಕ್ಕಾಗಿ ನಮಗೂ ಅವಕಾಶ ನೀಡಬೇಕು’ ಎಂದು ವಿವರಿಸಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಮಧ್ಯಂತರ ಅರ್ಜಿ ಸಲ್ಲಿಸಲು ಅವಕಾಶ ನೀಡಿತು. ‘ಸಂಗೀತ ಎಂಬುದು ಅತಿದೊಡ್ಡ ಶಾಸ್ತ್ರ ಮತ್ತು ಅಧ್ಯಯನದ ವಿಷಯ. ಯಾವ ರಾಗಗಳನ್ನು ಯಾವ ಸಮಯದಲ್ಲಿ ಹಾಡಬೇಕೆಂಬ ಬಗ್ಗೆ ಅವುಗಳದ್ದೇ ಆದ ನಿಯಮಗಳಿವೆ. ಹೀಗಾಗಿ, ಈ ವಿಷಯದಲ್ಲಿ ಕೋರ್ಟ್‌ಗೆ ಸಹಕರಿಸಬಲ್ಲ ಸಂಗೀತ ವಿದುಷಿಗಳ ಹೆಸರನ್ನು ಹೆಸರಿಸಿ’ ಎಂದು ಸುನಿಲ್ ಕುಮಾರ್ ಅವರಿಗೆ ಸೂಚಿಸಿತು.

ಇದಕ್ಕೆ ಸುನಿಲ್ ಕುಮಾರ್ ಬಿ.ಕೆ. ಸುಮಿತ್ರಾ ಅವರ ಹೆಸರನ್ನು ಸೂಚಿಸಿದರು. ಇದನ್ನು ಪುರಸ್ಕರಿಸಿದ ನ್ಯಾಯಪೀಠ, ‘ಆಗಲಿ, ಅವಶ್ಯಕತೆ ಬಿದ್ದರೆ ಅವರ ಸಹಾಯ ಪಡೆಯೋಣ’ ಎಂದು ಹೇಳಿ ಸರ್ಕಾರದ ಪರ ವಕೀಲ ಕೃಷ್ಣ ಅವರಿಗೆ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿತು. ಅಂತೆಯೇ, ‘ಬೇರೆ ರಾಜ್ಯಗಳಲ್ಲಿ ನಾಡಗೀತೆಯ ಕುರಿತಾದ ಕ್ರಮಗಳೇನಿವೆ ಎಂಬುದನ್ನು ತಿಳಿಸಿ’ ಎಂದು ವಿಚಾರಣೆಯನ್ನು ಇದೇ 17ಕ್ಕೆ ಮುಂದೂಡಿತು.

ದಂಪತಿ ಜಗಳ ದುರಂತದಲ್ಲಿ ಅಂತ್ಯ

ಆನೇಕಲ್: ಬಿಕ್ಕನಹಳ್ಳಿ ಜನತಾ ಕಾಲೊನಿಯಲ್ಲಿ ದಂಪತಿ ಮಧ್ಯೆ ಆರಂಭವಾದ ಜಗಳ ಇಬ್ಬರ ಸಾವಿನಲ್ಲಿ ಕೊನೆಯಾಗಿದೆ. ಪತ್ನಿ ಲಕ್ಷಮ್ಮ (47) ಎಂಬುವರನ್ನು ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿದ ವೆಂಕಟಸ್ವಾಮಿ (53) ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸ್ತನ್ಯಪಾನ ಸಪ್ತಾಹ: ಮಿಲನ್ ಆಸ್ಪತ್ರೆಯಿಂದ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಸ್ತನ್ಯಪಾನ ಸಪ್ತಾಹದ ಪ್ರಯುಕ್ತ ಮಿಲನ್ ಆಸ್ಪತ್ರೆಯು ರೋಟರಿ ಕ್ಲಬ್ ಸಹಯೋಗದಲ್ಲಿ ಎದೆ ಹಾಲಿನ ಮಹತ್ವದ ಬಗ್ಗೆ ನಗರದಲ್ಲಿ ಜಾಗೃತಿ ಮೂಡಿಸಿತು.

ಆಸ್ಪತ್ರೆಯ ಸಂತಾನೋತ್ಪತ್ತಿ ಔಷಧ ಮತ್ತು ಫಲವತ್ತತೆ ಸಲಹೆಗಾರರಾದ ಡಾ. ಪಾಯಲ್, ‘ತಾಯಿಯ ಎದೆಹಾಲಿನಲ್ಲಿ ಮಗುವಿನ ಬೆಳವಣಿಗೆಗೆ ಬೇಕಾದ ಪೌಷ್ಟಿಕತೆ, ಖನಿಜಾಂಶ ಮತ್ತು ಹೇರಳವಾದ ನೀರಿನ ಅಂಶಗಳು ಅಡಕವಾಗಿವೆ. ಮಗುವಿಗೆ ಇದು ಮೊದಲ ಲಸಿಕೆಯಾಗಲಿದೆ. ಮೊದಲ ಮೂರು ದಿನದ ಹಾಲಿನಲ್ಲಿ ಹೆಚ್ಚು ರೋಗನಿರೋಧಕಗಳಿರಲಿದ್ದು, ಮಗುವಿಗೆ ರೋಗ ಪ್ರತಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಅದೇ ರೀತಿ, ಸೋಂಕುಗಳಿಂದ ರಕ್ಷಣೆ ನೀಡುತ್ತದೆ. ತಾಯಿ ಮತ್ತು ಮಗುವಿನ ಆರೋಗ್ಯ ವೃದ್ಧಿಗೆ ಸ್ತನ್ಯಪಾನ ಅತ್ಯವಶ್ಯಕ’ ಎಂದರು.

ಮಿಲನ್ ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಾಹ ಅಧಿಕಾರಿ ಲಕ್ಷ್ಮಣ್ ಟಿ.ಎಲ್., ‘ರೋಟರಿ ಕ್ಲಬ್ ಸಹಯೋಹಗದಲ್ಲಿ ಜಾಗೃತಿ ಮೂಡಿಸುತ್ತಿರುವುದು ಸಂತೋಷವನ್ನುಂಟು ಮಾಡಿದೆ. ತಾಯಿಯ ಎದೆಹಾಲಿನಷ್ಟು ಪೋಷಕಾಂಶ ಭರಿತ ಆಹಾರ ಭೂಮಿಯ ಮೇಲೆ ಇಲ್ಲ. ಇದನ್ನು ಕೃತಕವಾಗಿ ಸೃಷ್ಟಿಸಲು ಸಾಧ್ಯವಿಲ್ಲ. ಸ್ತನ್ಯ ಪಾನಕ್ಕೆ ಯಾವುದೇ ಕಾರಣಕ್ಕೂ ಹಿಂಜರಿಯಬಾರದು. ಇದರಿಂದ ರೋಗನಿರೋಧಕ ಶಕ್ತಿ ಮಗುವಿನಲ್ಲಿ ಹೆಚ್ಚಳವಾಗಲಿದೆ’ ಎಂದು ತಿಳಿಸಿದರು.

ಆರಗ ಜ್ಞಾನೇಂದ್ರ ಬಂಧನಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಸಚಿವ ಈಶ್ವರ ಖಂಡ್ರೆ ಅವರ ಬಗ್ಗೆ ತೀರ್ಥಹಳ್ಳಿ ಶಾಸಕ ಆರಗ ಜ್ಞಾನೇಂದ್ರ ಅವರು ಅವಹೇಳನಕಾರಿ ಹೇಳಿಕೆ ನೀಡಿದ್ದು, ಜಾನೇಂದ್ರ ಅವರನ್ನು ಬಂಧಿಸುವಂತೆ ಆಗ್ರಹಿಸಿ ಅಖಿಲ ಭಾರತ ವೀರಶೈವ ಮಹಾಸಭಾ ಸದಾಶಿವನಗರ ಠಾಣೆಗೆ ದೂರು ನೀಡಿದೆ.

ತೀರ್ಥಹಳ್ಳಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಆರಗ ಅವರು ಜನಾಂಗೀಯ ನಿಂದನೆ ಹಾಗೂ ಪ್ರಾಂತ್ಯವಾರು ಭೇದವನ್ನು ಉಂಟು ಮಾಡುವ ರೀತಿಯಲ್ಲಿ ಹೇಳಿಕೆ ನೀಡಿದ್ದಾರೆ. ಈ ರೀತಿ ಹೇಳಿಕೆ ನೀಡುವ ಮೂಲಕ ಸಮಾಜದಲ್ಲಿ ಶಾಂತಿ ಹಾಗೂ ಪ್ರಾಂತ್ಯವಾರು ಘರ್ಷಣೆ ಮೂಡಿಸಲು ಮುಂದಾಗಿದ್ದಾರೆ ಎಂದು ಮಹಾಸಭಾದ ಕಾರ್ಯದರ್ಶಿ ಎಚ್.ಎಂ. ರೇಣುಕ ಪ್ರಸನ್ನ ದೂರಿನಲ್ಲಿ ತಿಳಿಸಿದ್ದಾರೆ.

ಅನರ್ಹಗೊಳಿಸಿ: ಸಮಾಜದಲ್ಲಿ ಅಶಾಂತಿ ಉಂಟು ಮಾಡಲು ಕಾರಣರಾಗಿರುವ ಆರಗ ಜ್ಞಾನೇಂದ್ರ ಅವರನ್ನು ತಕ್ಷಣವೇ ಶಾಸಕ ಸ್ಥಾನದಿಂದ ಅನರ್ಹಗೊಳಿಸಬೇಕು ಎಂದು ರೇಣುಕ ಪ್ರಸನ್ನ ವಿಧಾನಸಭೆ ಸ್ಪೀಕರ್ ಅವರನ್ನು ಒತ್ತಾಯಿಸಿದ್ದಾರೆ.

ಕೋರ್ಸ್‌ಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ವೆಸ್ಟ್ ಲಯನ್ಸ್ ಸೂಪರ್ ಸ್ಪೆಷಾಲಿಟಿ ಐ ಹಾಸ್ಪಿಟಲ್ 2023–24ನೇ ಸಾಲಿಗೆ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ (ಆರ್‌ಜಿಯುಎಚ್‌ಎಸ್) ಫೆಲೋಶಿಪ್ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಿದೆ.

‘ಫಾಕೋ ಆ್ಯಂಡ್ ರಿಫ್ರೆಕ್ಟಿವ್ ಸರ್ಜರೀಸ್’, ‘ಕಾರ್ನಿಯಾ ಆ್ಯಂಡ್ ರಿಫ್ರೆಕ್ಟಿವ್ ಸರ್ಜರೀಸ್’, ‘ಗ್ಲುಕೋಮಾ’ ಹಾಗೂ ‘ವಿಟ್ರೆರೆಟಿನಾ’ ಫೆಲೋಶಿಪ್ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಎಂ.ಎಸ್ (ನೇತ್ರ ವಿಜ್ಞಾನ) ಹಾಗೂ ನೇತ್ರ ಔಷಧ ಮತ್ತು ಶಸ್ತ್ರಚಿಕಿತ್ಸೆಯಲ್ಲಿ (ಡಿಒಎಂಎಸ್) ಡಿಪ್ಲೊಮಾ ಹಾಗೂ ಒಂದು ವರ್ಷದ ಅನುಭವ ಹೊಂದಿರುವವರು ಅರ್ಹರಾಗಿರುತ್ತಾರೆ.

ಆಸಕ್ತ ಅಭ್ಯರ್ಥಿಗಳು hr@bwlionseyehospital.org ಅಥವಾ 9113607492ಕ್ಕೆ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ

ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ (ಹೆಚ್‌ಎಸ್‌ಎಫ್‌ಸಿ)

ನಿರ್ಮಾಣ ಮತ್ತು ನಿರ್ವಹಣೆ ಸಮೂಹ (ಸಿಎಂಜಿ), ಅಂತರಿಕ್ಷ ಭವನ, ಬೆಂಗಳೂರು – 560 094.

ದೂ: (080)22172614/2613

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ, ಈ ಕೆಳಕಂಡ ಕಾಮಗಾರಿಗೆ ಆನ್‌ಲೈನ್ ಐಟಂ ದರ ಟೆಂಡರ್‌ಗಳನ್ನು ಇ–ಟೆಂಡರಿಂಗ್ ಮೂಲಕ ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿ ಹೆಸರು ಮತ್ತು ಎನ್‌ಐಟಿ ಸಂಖ್ಯೆ	ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ.	ಪೂರ್ಣಗೊಳಿಸುವ ಅವಧಿ	ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ	ಇಎಂಡಿ ರೂ.ಗಳಲ್ಲಿ
01	ಬೆಂಗಳೂರು, ದೇವನಹಳ್ಳಿಯಲ್ಲಿ ಗಗನಯಾನ ಸೌಲಭ್ಯಕ್ಕಾಗಿ 11ಕೆವಿ/433ವಿ ಉಪಕೇಂದ್ರದ ನಿರ್ಮಾಣ (ಸಿವಿಲ್ ಮತ್ತು ಪಿಹೆಚ್ ಕಾಮಗಾರಿಗಳು) **HSFC/CMG/2(5)/C/75/ 2023-24 &** **ದಿನಾಂಕ: 02.08.2023**	122.60 ಲಕ್ಷಗಳು	04 ತಿಂಗಳು	03.08.2023 ರ (11.00 ಗಂಟೆ) ಇಂದ 18.08.2023 (23.30 ಗಂಟೆ)ವರೆಗೆ	22.08.2023 11.00 ಗಂಟೆವರೆಗೆ	22.08.2023 11.30 ಗಂಟೆಗೆ	2,45,200/–
02	ಬೆಂಗಳೂರು, ದೇವನಹಳ್ಳಿಯಲ್ಲಿ ಗಗನಯಾನ ಸೌಲಭ್ಯಕ್ಕಾಗಿ 11ಕೆವಿ/433ವಿ ಉಪಕೇಂದ್ರದ ನಿರ್ಮಾಣಕ್ಕೆ ವಿದ್ಯುತ್ ಕಾಮಗಾರಿಗಳು **HSFC/CMG/2(5)/E/76/ 2023-24 &** **ದಿನಾಂಕ: 02.08.2023**	369.80 ಲಕ್ಷಗಳು	06 ತಿಂಗಳು	03.08.2023 ರ (11.00 ಗಂಟೆ) ಇಂದ 24.08.2023 (23.30 ಗಂಟೆ)ವರೆಗೆ	28.08.2023 14.30 ಗಂಟೆವರೆಗೆ	28.08.2023 15.00 ಗಂಟೆಗೆ	7,39,600/–
03	ಬೆಂಗಳೂರು, ದೇವನಹಳ್ಳಿಯಲ್ಲಿ ಗಗನಯಾನ ಸೌಲಭ್ಯಕ್ಕಾಗಿ ಭದ್ರತಾ ಕಂ ರಿಸಪ್ಷನ್ ಬ್ಲಾಕ್ ನಿರ್ಮಾಣ (ಸಿವಿಲ್ ಮತ್ತು ಪಿಹೆಚ್ ಕಾಮಗಾರಿಗಳು) **HSFC/CMG/2(6)/C/77/ 2023-24 &** **ದಿನಾಂಕ: 02.08.2023**	74.64 ಲಕ್ಷಗಳು	04 ತಿಂಗಳು	03.08.2023 ರ (11.00 ಗಂಟೆ) ಇಂದ 18.08.2023 (23.30 ಗಂಟೆ)ವರೆಗೆ	22.08.2023 11.00 ಗಂಟೆವರೆಗೆ	22.08.2023 11.30 ಗಂಟೆಗೆ	1,49,280/–

ಟೆಂಡರ್ ವಿಜಾರ್ಡ್‌ನಲ್ಲಿ ನೋಂದಾಯಿಸಿಕೊಳ್ಳುವ ಮೂಲಕ ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕ ಪಾವತಿಸಿ ಟೆಂಡರ್ ವೆಬ್‌ಸೈಟ್: **www.tenderwizard.com/ISRO**ಮೂಲಕ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಆಸಕ್ತಿಯುಳ್ಳ ಟೆಂಡರ್‌ದಾರರು ವೆಬ್‌ಸೈಟ್: **www.isro.gov.in**ನಲ್ಲಿ ಟೆಂಡರ್ ಆಹ್ವಾನ ಪ್ರಕಟಣೆಯ ಸಂಪೂರ್ಣ ವಿವರಗಳನ್ನು ಪರಿವೀಕ್ಷಿಸಬಹುದು ಮತ್ತು ಟೆಂಡರ್ ಹೆಚ್ಚಿನ ವಿವರಗಳಿಗೆ ಹಾಗೂ ಟೆಂಡರ್ ದಸ್ತಾವೇಜು ಖರೀದಿಗೆ **www.tenderwizard.com/ISRO**ಗೆ ಭೇಟಿ ನೀಡಿ.

ಸಹಿ/– ಮುಖ್ಯಸ್ಥರು ಸಿಎಂಡಿ, ಸಿಎಂಜಿ, ಹೆಚ್‌ಎಸ್‌ಎಫ್‌ಸಿ

ಸ್ಪರ್ಧಾ ವಾಣಿ

ದೆಹಲಿ ಪೊಲೀಸ್, ಸಿಎಪಿಎಫ್ 1876 ಎಸ್.ಐ ಹುದ್ದೆಗಳು

ಸಿಬ್ಬಂದಿ ನೇಮಕಾತಿ ಆಯೋಗ(ಎಸ್‌ಎಸ್‌ಸಿ), ದೆಹಲಿ ಪೊಲೀಸ್(ಎಸ್‌ಐ) ಮತ್ತು ಕೇಂದ್ರ ಸರ್ಕಾರದ ಸಶಸ್ತ್ರ ಪೊಲೀಸ್ ಪಡೆಗಳ (ಸಿಎಪಿಎಫ್) 1876 (ಪುರುಷ – 1710 ಮತ್ತು ಮಹಿಳೆ–166) ಸಬ್ ಇನ್‌ಸ್ಪೆಕ್ಟರ್ (ಎಸ್.ಐ) ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಿದೆ.

ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಇದು ಕಂಪ್ಯೂಟರ್ ಆಧಾರಿತ ಪರೀಕ್ಷೆಯಾಗಿರುತ್ತದೆ. ಇದೇ ವರ್ಷದ (2023) ಅಕ್ಟೋಬರ್ ತಿಂಗಳಲ್ಲಿ ಪರೀಕ್ಷೆ ನಡೆಯುವ ಸಾಧ್ಯತೆ ಇದೆ ಎಂದು ಸಿಬ್ಬಂದಿ ನೇಮಕಾತಿ ಆಯೋಗ ಜುಲೈ 22ರಂದು ಹೊರಡಿಸಿರುವ ಅಧಿಸೂಚನೆಯಲ್ಲಿ ತಿಳಿಸಿದೆ.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ

ಎಸ್‌ಎಸ್‌ಸಿ ಪ್ರಧಾನ ಕಚೇರಿಯ ಅಧಿಕೃತ ವೆಬ್‌ಸೈಟ್ https://ssc.nic.in ಮೂಲಕ ಆನ್‌ಲೈನಲ್ಲಿ ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ವಿವರವಾದ ಸೂಚನೆಗಳಿಗಾಗಿ, ಅಧಿಸೂಚನೆಯ ಅನುಬಂಧ-i ಮತ್ತು ಅನುಬಂಧ-ii ಅನ್ನು ನೋಡಿ.

ಅರ್ಜಿ ಸಲ್ಲಿಕೆಗೆ ಕೊನೆ ದಿನ. ಆಗಸ್ಟ್ 15, 2023. ಅರ್ಜಿ ಶುಲ್ಕ: ₹100. ಮಹಿಳೆ/SC/ST/EXS ವರ್ಗದ ಅಭ್ಯರ್ಥಿಗಳಿಗೆ ಯಾವುದೇ ಶುಲ್ಕವಿಲ್ಲ.

ವೇತನ ಶ್ರೇಣಿ: ₹ 35,400 ರಿಂದ ₹1,12,400

ಶೈಕ್ಷಣಿಕ ಅರ್ಹತೆ: ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರುವವರು ಅರ್ಜಿ ಸಲ್ಲಿಸಬಹುದು.

ಪರೀಕ್ಷೆ ವಿವರ: ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಎರಡು ಪತ್ರಿಕೆಗಳಿರುತ್ತವೆ. ಜೊತೆಗೆ, ದೇಹದಾರ್ಢ್ಯ ಪರೀಕ್ಷೆ (ಪಿಎಸ್‌ಟಿ/ಪಿಇಟಿ)ಗಳು ಮತ್ತು ವೈದ್ಯಕೀಯ ಪರೀಕ್ಷೆ ಇರುತ್ತದೆ.

ಭಾಗ	ವಿಷಯಗಳು	ಪ್ರಶ್ನೆಗಳು	ಅಂಕಗಳು	ಅವಧಿ
ಪತ್ರಿಕೆ 1				
1	ಜನರಲ್ ಇಂಟೆಲಿಜೆನ್ಸ್ ಮತ್ತು ರೀಸನಿಂಗ್	50	50	2 ಗಂಟೆಗಳು
2	ಸಾಮಾನ್ಯ ಜ್ಞಾನ ಮತ್ತು ಸಾಮಾನ್ಯ ಅರಿವು(ಜಿಕೆ ಆ್ಯಂಡ್ ಜಿಎ)	50	50	
3	ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್	50	50	
4	ಇಂಗ್ಲಿಷ್ ಕಾಂಪ್ರಹೆನ್ಷನ್	50	50	
ಪತ್ರಿಕೆ 2				
1	ಇಂಗ್ಲಿಷ್ ಭಾಷೆ ಮತ್ತು ಕಾಂಪ್ರಹೆನ್ಷನ್	200	200	2 ಗಂಟೆಗಳು

ವಯೋಮಿತಿ: ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಕನಿಷ್ಠ 20 ವರ್ಷಗಳು, ಗರಿಷ್ಠ 25 ವರ್ಷಗಳು. ಎಸ್.ಸಿ/ಎಸ್.ಟಿ/ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ವಯೋಮಿತಿಯಲ್ಲಿ ಸಡಿಲಿಕೆ ಇದೆ. ವಿವರಗಳಿಗಾಗಿ ಅಧಿಸೂಚನೆಯ ಪ್ಯಾರಾ 5.2 ಅನ್ನು ನೋಡಬಹುದು.

ಎರಡು ಪತ್ರಿಕೆಗಳಲ್ಲಿನ ಪ್ರಶ್ನೆಗಳು ವಸ್ತುನಿಷ್ಠ ಮಾದರಿಯಲ್ಲಿರುತ್ತವೆ. ತಪ್ಪು ಉತ್ತರಕ್ಕೆ ಅಂಕ ಕಳೆಯಲಾಗುತ್ತದೆ. (ಪರೀಕ್ಷೆ ಕುರಿತ ಇನ್ನಷ್ಟು ವಿವರಗಳಿಗೆ ಅಧಿಸೂಚನಯೆ ಪ್ಯಾರಾ-12 &16 ನೋಡಿ).

ಗಮನಿಸಿ: ಎನ್‌ಸಿಸಿ ಪ್ರಮಾಣಪತ್ರ ಹೊಂದಿರುವವರಿಗೆ ಹೆಚ್ಚುವರಿ ಅಂಕಗಳನ್ನು ನೀಡಲಾಗುವುದು. ಎನ್‌ಸಿಸಿ ‘ಎ’ ಸರ್ಟಿಫಿಕೆಟ್‌ಗೆ ಹೊಂದಿರುವವರಿಗೆ 4 ಅಂಕಗಳು(ಗರಿಷ್ಠ ಅಂಕದಲ್ಲಿ ಶೇ 2), ‘ಬಿ’ ಸರ್ಟಿಫಿಕೆಟ್‌ಗೆ 6 ಅಂಕಗಳು (ಗರಿಷ್ಠ ಅಂಕದಲ್ಲಿ ಶೇ 3) ಮತ್ತು ‘ಸಿ’ ಸರ್ಟಿಫಿಕೆಟ್‌ಗೆ 10 ಅಂಕಗಳನ್ನು(ಗರಿಷ್ಠ ಅಂಕದಲ್ಲಿ ಶೇ 5)ನೀಡಲಾಗುತ್ತದೆ.

ಪರೀಕ್ಷಾ ಕೇಂದ್ರಗಳು: ಕರ್ನಾಟಕದಲ್ಲಿ ಬೆಂಗಳೂರು, ಬೆಳಗಾವಿ, ಹುಬ್ಬಳ್ಳಿ, ಕಲಬುರ್ಗಿ, ಮಂಗಳೂರು, ಮೈಸೂರು, ಶಿವಮೊಗ್ಗ, ಉಡುಪಿ ಮತ್ತು ಕೇರಳದಲ್ಲಿ ತಿರುವನಂತಪುರಂ, ಕೊಲ್ಲಂ, ಕೋಟ್ಟಾಯಂ, ಕೊಯಿಕ್ಕೋಡ್, ತ್ರಿಶೂರ್, ಕವರಟ್ಟಿ.

ಪರೀಕ್ಷೆಯ ನಿಖರ ದಿನಾಂಕ ಮತ್ತಿತರ ವಿವರಗಳಿಗಾಗಿ www.ssckkr.kar.nic.in ಮತ್ತು https://ssc.nic.in ಜಾಲತಾಣಗಳನ್ನು ನೋಡಬಹುದು.

ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ನಿಯಮಿತವಾಗಿ ಈ ವೆಬ್‌ಸೈಟ್‌ಗಳಿಗೆ ಭೇಟಿ ನೀಡಲು ಸೂಚಿಸಲಾಗಿದೆ: ssc ಮುಖ್ಯ ಕಚೇರಿ ನವದೆಹಲಿಯ ವೆಬ್‌ಸೈಟ್ https://ssc.nic.in ಮತ್ತು ಎಸ್‌ಎಸ್‌ಸಿ ಕರ್ನಾಟಕ-ಕೇರಳ ಪ್ರದೇಶದ ವೆಬ್‌ಸೈಟ್ www.ssckkr.kar.nic.in

ಅಧಿಸೂಚನೆ ಲಿಂಕ್: (https://ssc.nic.in/SSCFileServer/PortalManagement/UploadedFiles/notice_CPO-SI-2023_22072023.pdf).

(ಪೂರಕ ಮಾಹಿತಿ: ಸಿಬ್ಬಂದಿ ನೇಮಕಾತಿ ಆಯೋಗ (ಕರ್ನಾಟಕ ಕೇರಳ ಪ್ರದೇಶ, ಭಾರತ ಸರ್ಕಾರ), ಬೆಂಗಳೂರು)

‘ಅಗ್ನಿವೀರ’ರಿಗೆ ಅರ್ಜಿ ಆಹ್ವಾನ

ತರಬೇತಿ ಪಡೆಯುತ್ತಿರುವ ಅಗ್ನಿವೀರ ಮಹಿಳಾ ಯೋಧರ ತಂಡ -ಸಂಗ್ರಹ ಚಿತ್ರ /ಕೃಷ್ಣಕುಮಾರ್ ಪಿ.ಎಸ್.

ಆರ್.ಕೆ. ಬಾಲಚಂದ್ರ

‘ಅಗ್ನಿವೀರ್ ವಾಯು’ ಹುದ್ದೆಗಳ ನೇಮಕಾತಿಗಾಗಿ ಭಾರತೀಯ ವಾಯುಪಡೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ. ಜುಲೈ 27ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ಆ.17 ಅರ್ಜಿ ಸಲ್ಲಿಕೆಗೆ ಕೊನೆಯ ದಿನ. ಅಕ್ಟೋಬರ್ 13ರಿಂದ ಆನ್‌ಲೈನ್ ಪರೀಕ್ಷೆ ಶುರು. ಅರ್ಜಿ ಸಲ್ಲಿಕೆ ಮತ್ತಿತರ ವಿವರಗಳು ಇಲ್ಲಿವೆ.

ಪ್ರಸಕ್ತ ಸಾಲಿನಲ್ಲಿ 4,165 ‘ಅಗ್ನಿವೀರ್ ವಾಯು’ ಹುದ್ದೆಗಳಿಗೆ ನೇಮಕಾತಿ ಆರಂಭವಾಗಿದೆ. ಮಹಿಳೆಯರಿಗೆ 833 ಹುದ್ದೆಗಳು ರಾಜ್ಯವಾರು ಮೀಸಲಿಡಲಾಗಿದೆ.(SSR 02/23 ನವೆಂಬರ್ ಹಾಗೂ 01/24 ಎಪ್ರಿಲ್ 24ರ ಬ್ಯಾಚ್‌ಗಳಿಗೆ)

ಗಮನಿಸಿ: ಈ ಆಯ್ಕೆ ಪರೀಕ್ಷೆಯು ಐಎಎಫ್‌ನ ‘ಅಗ್ನಿವೀರ್ ವಾಯು’ ಹುದ್ದೆಗೆ ಮಾತ್ರ. ಇದು ಅರ್ಹ ಭಾರತೀಯ ಅವಿವಾಹಿತ ಪುರುಷ/ ಮಹಿಳಾ ಅಭ್ಯರ್ಥಿಗಳಿಗೆ ಮಾತ್ರ.

‘ಅಗ್ನಿವೀರ್ ವಾಯು’ ನೇಮಕಾತಿಗಾಗಿ ಮೂರು ಹಂತಗಳಲ್ಲಿ ಪರೀಕ್ಷೆ ನಡೆಯಲಿದೆ. ಇವುಗಳನ್ನು ‘ಸ್ಟಾರ್’ ಪರೀಕ್ಷೆಗಳೆಂದು ಗುರುತಿಸಲಾಗಿದೆ.

ವಯೋಮಿತಿ: ಕನಿಷ್ಠ 17 1/2 ವರ್ಷ, ಗರಿಷ್ಠ 21 ವರ್ಷಗಳು. ಅಭ್ಯರ್ಥಿಯು ಆಯ್ಕೆ ಪ್ರಕ್ರಿಯೆಯ ಎಲ್ಲಾ ಹಂತಗಳನ್ನು ಪೂರ್ಣಗೊಳಿಸಿ, ದಾಖಲಾತಿಯ ದಿನದಂದು ಗರಿಷ್ಠ ವಯಸ್ಸಿನ ಮಿತಿ 21 ವರ್ಷಗಳಾಗಿರಬೇಕು.

ದೈಹಿಕ ಅರ್ಹತೆ: ಪುರುಷ ಅಭ್ಯರ್ಥಿಗಳು ಕನಿಷ್ಠ 152.5 ಸೆಂ.ಮೀ. ಎತ್ತರವಿರಬೇಕು. ಮಹಿಳಾ ಅಭ್ಯರ್ಥಿಗಳು 152 ಸೆಂ.ಮೀ ಎತ್ತರವಿರಬೇಕು. ಎತ್ತರಕ್ಕೆ ತಕ್ಕ ತೂಕ ಹೊಂದಿರಬೇಕು. ಅತ್ಯುತ್ತಮ ದೈಹಿಕ ಆರೋಗ್ಯ ಹೊಂದಿರಬೇಕು.

ಶೈಕ್ಷಣಿಕ ಅರ್ಹತೆ

ಪಿಯುಸಿ ಅಥವಾ 10 + 2 ನಲ್ಲಿ ಗಣಿತ, ಭೌತಶಾಸ್ತ್ರ ಮತ್ತು ಇಂಗ್ಲಿಷ್‌ನಲ್ಲಿ ಸರಾಸರಿ ಶೇ 50 ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು. ಇಂಗ್ಲಿಷ್ ವಿಷಯದಲ್ಲಿ ಶೇ 50ರಷ್ಟು ಅಂಕಗಳನ್ನು ಪಡೆದಿರಬೇಕು.

ವಿಜ್ಞಾನ ವಿಷಯಗಳನ್ನು ಹೊರತುಪಡಿಸಿ ಸಿ.ಬಿ.ಎಸ್.ಸಿ ಅಥವಾ ಸ್ಟೇಟ್ ಬೋರ್ಡ್‌ನಿಂದ ಮಾನ್ಯತೆ ಪಡೆದ ಸಂಸ್ಥೆಗಳಿಂದ ಆರ್ಟ್ಸ್ ಮತ್ತು ಕಾಮರ್ಸ್ ವಿಭಾಗದಲ್ಲಿ ಶೇ 50ರಷ್ಟು ಅಂಕಗಳೊಂದಿಗೆ ಪಿಯುಸಿ/10 + 2 ತೇರ್ಗಡೆ ಹೊಂದಿರಬೇಕು. ಮತ್ತು ಇಂಗ್ಲಿಷ್ ವಿಷಯದಲ್ಲಿ ಶೇ 50ರಷ್ಟು ಅಂಕಗಳನ್ನು ಪಡೆದಿರಬೇಕು.

ಅಥವಾ

ಸರ್ಕಾರದಿಂದ ಮಾನ್ಯತೆ ಪಡೆದ ಮೂರು ವರ್ಷಗಳ ಡಿಪ್ಲೊಮಾ/ಪಾಲಿಟೆಕ್ನಿಕ್ ಎಂಜಿನಿಯರಿಂಗ್ (ಮೆಕ್ಯಾನಿಕಲ್ / ಎಲೆಕ್ಟ್ರಿಕಲ್ / ಎಲೆಕ್ಟ್ರಾನಿಕ್ಸ್ / ಆಟೋಮೊಬೈಲ್ / ಕಂಪ್ಯೂಟರ್ ಸೈನ್ಸ್ / ಇನ್‌ಸ್ಟ್ರುಮೆಂಟೇಶನ್ ಟೆಕ್ನಾಲಜಿ / ಮಾಹಿತಿ ತಂತ್ರಜ್ಞಾನ) ನಲ್ಲಿ ಸರಾಸರಿ ಶೇ 50 ಅಂಕಗಳು ಮತ್ತು ಇಂಗ್ಲಿಷ್‌ನಲ್ಲಿ ಕನಿಷ್ಠ ಶೇ 50 ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. (ಡಿಪ್ಲೊಮಾ ಕೋರ್ಸ್‌ನಲ್ಲಿ ಇಂಗ್ಲಿಷ್ ವಿಷಯವಿಲ್ಲದಿದ್ದರೆ, ಅಭ್ಯರ್ಥಿಗಳು ಪಿಯುಸಿ/10 + 2/ ತತ್ಸಮಾನ ಪರೀಕ್ಷೆಯಲ್ಲಿ ಇಂಗ್ಲಿಷ್‌ನಲ್ಲಿ ಕನಿಷ್ಠ ಶೇ 50 ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು).

ಗಮನಿಸಿ: ವಿಜ್ಞಾನ ವಿಷಯಗಳ ಪರೀಕ್ಷೆಗೆ ಅರ್ಹರಾಗಿರುವ ಅಭ್ಯರ್ಥಿಗಳಿಗೆ, ವಿಜ್ಞಾನದ ವಿಷಯಗಳನ್ನು ಹೊರತುಪಡಿಸಿರುವ ಪರೀಕ್ಷೆಗೆ ಹಾಜರಾಗುವ ಆಯ್ಕೆಯನ್ನೂ ನೀಡಲಾಗುತ್ತದೆ. ಇದನ್ನು ಅರ್ಜಿ ಸಲ್ಲಿಸುವಾಗ, ‘ಒಂದೇ ಸಿಟ್ಟಿಂಗ್‌ನಲ್ಲಿ ಎರಡೂ ಪರೀಕ್ಷೆ ಬರೆಯುವ ಅವಕಾಶ’ವನ್ನು ಆಯ್ಕೆ ಮಾಡಿ ಕೊಳ್ಳಬೇಕು. ಹುದ್ದೆಗಳ ಶೈಕ್ಷಣಿಕ ಅರ್ಹತೆಯ ಹೆಚ್ಚಿನ ವಿವರಗಳಿಗಾಗಿ ಅಧಿಸೂಚನೆ ಪರಿಶೀಲಿಸಲು ಸೂಚಿಸಲಾಗಿದೆ.

ಆನ್‌ಲೈನ್ ಪರೀಕ್ಷೆ: ಆನ್‌ಲೈನ್ ಪರೀಕ್ಷೆಯು ವಸ್ತುನಿಷ್ಠ ಮಾದರಿಯದ್ದಾಗಿರುತ್ತದೆ. ಇಂಗ್ಲಿಷ್ ಪತ್ರಿಕೆ ಹೊರತುಪಡಿಸಿ ಉಳಿದೆಲ್ಲವೂ ದ್ವಿಭಾಷೆಯಲ್ಲಿರುತ್ತದೆ(ಇಂಗ್ಲಿಷ್ ಮತ್ತು ಹಿಂದಿ). ಹಂತ-I ರಲ್ಲಿ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಪ್ರಶ್ನೆಗಳಿರುತ್ತವೆ. ಅಭ್ಯರ್ಥಿಗಳು ಪರೀಕ್ಷೆಗೆ ತಯಾರಾಗಲು ದ್ವಿತೀಯ ಪಿಯುಸಿ, ಸಿಬಿಎಸ್‌ಸಿ ಪಠ್ಯಕ್ರಮವನ್ನು ಅನುಸರಿಸ ಬೇಕು. ಪ್ರತಿ ಪ್ರಶ್ನೆಗೆ ಒಂದು ಅಂಕ. ತಪ್ಪು ಉತ್ತರಗಳಿಗೆ 0.25 ನೆಗೆಟಿವ್ ಅಂಕಗಳು ಕೂಡ ಇರುತ್ತವೆ.

ಪರೀಕ್ಷಾ ವಿಷಯಗಳೇನು?

ಸೈನ್ಸ್ ಪಾಸಾದ ಅಭ್ಯರ್ಥಿಗಳಿಗೆ, 10 + 2 ಸಿಬಿಎಸ್‌ಇ ಪಠ್ಯಕ್ರಮದ ಪ್ರಕಾರ ಭೌತಶಾಸ್ತ್ರ, ಗಣಿತ ಮತ್ತು ಇಂಗ್ಲಿಷ್ ಅನ್ನು ಒಳಗೊಂಡಿರುತ್ತದೆ. ಪರೀಕ್ಷೆಯ ಒಟ್ಟು ಅವಧಿಯು 60 ನಿಮಿಷಗಳು.

ಆರ್ಟ್ಸ್ ಮತ್ತು ಕಾಮರ್ಸ್ ಅಭ್ಯರ್ಥಿಗಳಿಗೆ 10 + 2 ಸಿಬಿಎಸ್‌ಇ ಪಠ್ಯಕ್ರಮ ಮತ್ತು ರೀಸನಿಂಗ್ ಮತ್ತು ಜನರಲ್ ಅವೇರ್ನಸ್(RAGA) ಪ್ರಕಾರ ಇಂಗ್ಲಿಷ್ ಒಳಗೊಂಡಿರುತ್ತದೆ. ಪರೀಕ್ಷೆಯ ಒಟ್ಟು ಅವಧಿ 45 ನಿಮಿಷಗಳು.

ಡಿಪ್ಲೊಮಾ ಪೂರೈಸಿರುವವರಿಗೆ, 10 + 2 ಸಿಬಿಎಸ್‌ಇ ಪಠ್ಯಕ್ರಮದ ಪ್ರಕಾರ ಭೌತಶಾಸ್ತ್ರ, ಗಣಿತ ಮತ್ತು ಇಂಗ್ಲಿಷ್ ಮತ್ತು ರೀಸನಿಂಗ್ ಮತ್ತು ಜನರಲ್ ಅವೇರ್ನೆಸ್ (Reasoning and Genral Awareness- RAGA) ವಿಷಯಗಳನ್ನು ಒಳಗೊಂಡಿರುತ್ತದೆ. ಪರೀಕ್ಷೆಯ ಅವಧಿ 85 ನಿಮಿಷಗಳು.

ಪರೀಕ್ಷೆ–ಫಲಿತಾಂಶದ ಮಾಹಿತಿಗಳನ್ನು https://agnipathvayu.cdac.in ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ.

ಇನ್ನಷ್ಟು ಶೈಕ್ಷಣಿಕ ಮಾಹಿತಿಗಳ ಜೊತೆಗೆ, ಅಧಿಸೂಚನೆ ವಿವರಗಳಿಗಾಗಿ: https://www.careerindianairforce.cdac.in https://agnipathvayu.cdac.in/ https://indianairforce.nic.in ಜಾಲತಾಣಗಳಿಗೆ ಭೇಟಿ ನೀಡಬಹುದು.

(ಮುಂದಿನವಾರ: ‘ಸ್ಟಾರ್ ಹಂತ’ಗಳ ಪರೀಕ್ಷೆ ವಿವರ)

ಅರ್ಜಿ ಸಲ್ಲಿಸುವುದು ಹೇಗೆ?

- ಹಂತ 1: https://www.careerindianairforce.cdac.in. https://agnipathvayu.cdac.in/ https://indianairforce.nic.in – ಅಧಿಕೃತ ವೆಬ್‌ಸೈಟ್‌ಗಳಿಗೆ ಭೇಟಿ ನೀಡಿ
- ಹಂತ 2: ಈ ಜಾಲತಾಣದ ಮುಖಪುಟದಲ್ಲಿ ನೇಮಕಾತಿ ಅಥವಾ ಉದ್ಯೋಗಾವಕಾಶಗಳಿಗೆ ಸಂಬಂಧಿಸಿದ ನೇಮಕಾತಿ ವಿಭಾಗ ಅಥವಾ ಟ್ಯಾಬ್‌ನಲ್ಲಿರುವ ಲಿಂಕ್ ಅನ್ನು ಕ್ಲಿಕ್ ಮಾಡಿ.
- ಹಂತ 3: ಈಗ ಅಪೇಕ್ಷಿತ ನೇಮಕಾತಿಗಾಗಿ ಅರ್ಜಿ ನಮೂನೆಗೆ ಕಾರಣವಾಗುವ ಲಿಂಕ್ ಅಥವಾ ಬಟನ್ ಅನ್ನು ಕ್ಲಿಕ್ ಮಾಡಿ.
- ಹಂತ 4: ಅರ್ಜಿ ನಮೂನೆಯ ಪುಟದಲ್ಲಿ ತಿಳಿಸಲಾದ ಸೂಚನೆಗಳು, ಮಾರ್ಗಸೂಚಿಗಳು ಮತ್ತು ಅರ್ಹತಾ ಮಾನದಂಡಗಳನ್ನು ಅನುಸರಿಸಿ.
- ಹಂತ 5: ವೈಯಕ್ತಿಕ ಮಾಹಿತಿ, ಶೈಕ್ಷಣಿಕ ಅರ್ಹತೆಗಳು, ಕೆಲಸದ ಅನುಭವ ಮತ್ತು ಇತರ ಸಂಬಂಧಿತ ವಿವರಗಳನ್ನು ಒಳಗೊಂಡಂತೆ ಅಗತ್ಯ ವಿವರಗಳನ್ನು ನಿಗದಿತ ಕ್ಷೇತ್ರಗಳಲ್ಲಿ ಒದಗಿಸಿ.
- ಹಂತ 6: ಅರ್ಜಿಯನ್ನು ಸಲ್ಲಿಸಿ.
- ಹಂತ 7: ಭವಿಷ್ಯದ ಉಲ್ಲೇಖಕ್ಕಾಗಿ ಅದೇ ಪ್ರಿಂಟ್ ಔಟ್ ತೆಗೆದಿಟ್ಟುಕೊಳ್ಳಿ.

ಪ್ರಚಲಿತ ವಿದ್ಯಮಾನಗಳು

ಯುಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ – ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ಮಾಹಿತಿ ಇಲ್ಲಿದೆ.

1. ಚೀನಾ– ಸೊಲೊಮನ್ ದ್ವೀಪಗಳ ನಡುವೆ ಒಪ್ಪಂದ

ಇತ್ತೀಚಿಗೆ ಚೀನಾ ಮತ್ತು ಸೊಲೊಮನ್ ದ್ವೀಪಗಳು ಒಪ್ಪಂದಕ್ಕೆ ಸಹಿ ಹಾಕಿವೆ. ಈ ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ಎರಡು ರಾಷ್ಟ್ರಗಳು ನಿರ್ಧರಿಸಿವೆ.

ದಕ್ಷಿಣ ಪೆಸಿಫಿಕ್ ಸಮುದ್ರದ ಭಾಗದಲ್ಲಿ ಚೀನಾದ ಪ್ರಭಾವ ಗಣನೀಯವಾಗಿ ಹೆಚ್ಚುತ್ತಿರುವ ಕಾರಣದಿಂದ ಜಾಗತಿಕ ಮಟ್ಟದ ಸಮಸ್ಯೆಗಳು ಉದ್ಭವವಾಗಬಹುದು ಎಂದು ಅಮೆರಿಕ ಮತ್ತು ಆಸ್ಟ್ರೇಲಿಯಾ ಸರ್ಕಾರಗಳು ಆತಂಕ ವ್ಯಕ್ತಪಡಿಸಿದ್ದವು. ಈಗ ಈ ಎರಡು ರಾಷ್ಟ್ರಗಳ ನಡುವಿನ ಒಪ್ಪಂದ ಜಾಗತಿಕ ಮಟ್ಟದ ವಿದ್ಯಮಾನಗಳಲ್ಲಿ ಅದರಲ್ಲೂ ದಕ್ಷಿಣ ಪೆಸಿಫಿಕ್ ಸಮುದ್ರದ ಭಾಗಗಳಲ್ಲಿ ಆತಂಕವನ್ನುಂಟು ಮಾಡಿದೆ.

ಚೀನಾ ಮತ್ತು ಸೊಲೊಮನ್ ದ್ವೀಪಗಳ ನಡುವೆ ಪೊಲೀಸ್, ಆರ್ಥಿಕತೆ ಮತ್ತು ತಾಂತ್ರಿಕ ಸಹಕಾರದ ವಲಯಗಳಲ್ಲಿ ದ್ವಿಪಕ್ಷೀಯ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಮುಂದಿನ ದಿನಗಳಲ್ಲಿ ಎರಡು ರಾಷ್ಟ್ರಗಳು ಈ ವಲಯಗಳಲ್ಲಿ ಜಂಟಿಯಾಗಿ ಕಾರ್ಯನಿರ್ವಹಿಸಲು ಮುಂದಾಗಿದ್ದು, ಈ ಪ್ರದೇಶದಲ್ಲಿ ಚೀನಾದ ಹಸ್ತಕ್ಷೇಪ ಮತ್ತು ಪ್ರಭಾವ ಹೆಚ್ಚಾಗಲಿದೆ.

ಸೊಲೊಮನ್ ದ್ವೀಪಗಳು ಆಸ್ಟ್ರೇಲಿಯಾದ ಈಶಾನ್ಯ ಭಾಗದಲ್ಲಿರುವ ದ್ವೀಪಗಳಾಗಿದ್ದು, ಈ ಒಪ್ಪಂದದ ನಂತರ ಚೀನಾ ಇದೇ ಪ್ರದೇಶದಲ್ಲಿ ಸಕ್ರಿಯವಾಗಲಿದೆ. ಮುಂದಿನ ದಿನಗಳಲ್ಲಿ ಅಮೆರಿಕದ ಸಹಭಾಗಿತ್ವದ ರಾಷ್ಟ್ರಗಳಲ್ಲಿ ಒಂದಾಗಿರುವ ಆಸ್ಟ್ರೇಲಿಯಾದ ಮೇಲೆ ಇದರಿಂದ ನಕಾರಾತ್ಮಕ ಪರಿಣಾಮ ಉಂಟಾಗಲಿದೆ ಎಂದು ವಿಶ್ಲೇಷಕರು ಅಂದಾಜಿಸಿದ್ದಾರೆ.

2019ರವರೆಗೂ ಸೊಲೊಮನ್ ದ್ವೀಪಗಳು ತೈವಾನ್ ಚಿಂತನೆಗಳಿಗೆ ಮತ್ತು ಉದ್ದೇಶಗಳಿಗೆ ಸಹಕಾರ ನೀಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಆದರೆ 2019 ರ ನಂತರ ತೈವಾನ್‌ನ ಉದ್ದೇಶಗಳಿಗೆ ವಿರುದ್ಧವಾಗಿ ಬೀಜಿಂಗ್ ಪರವಾಗಿ ನಿಲುವು ತೆಗೆದುಕೊಂಡ ಸೊಲೊಮನ್ ದ್ವೀಪಗಳು ತೈವಾನ್ ವಿಚಾರದಲ್ಲಿ ಚೀನಾದ ನಿಲುವನ್ನು ಒಪ್ಪಿಕೊಳ್ಳಲು ಪ್ರಾರಂಭಿಸಿತು.

ಪ್ರಸ್ತುತ ಈ ಒಪ್ಪಂದಕ್ಕೂ ಮುಂಚಿತವಾಗಿಯೇ ಎರಡು ರಾಷ್ಟ್ರಗಳು ಗೌಪ್ಯವಾಗಿ ಭದ್ರತಾ ಒಪ್ಪಂದಕ್ಕೆ ಸಹಿ ಹಾಕಿರುವುದಾಗಿ ಮಾಹಿತಿಗಳು ಸೋರಿಕೆಯಾದವು. ನಂತರ ಸೊಲೊಮನ್ ದ್ವೀಪಗಳ ಪ್ರಧಾನಮಂತ್ರಿ ‘ಚೀನಾ ಸರ್ಕಾರಕ್ಕೆ ಯಾವುದೇ ರೀತಿಯ ಮಿಲಿಟರಿ ಸಹಕಾರವನ್ನು ಕಲ್ಪಿಸುತ್ತಿಲ್ಲ ಹಾಗೂ ಚೀನಾದ ಮಿಲಿಟರಿ ಪಡೆಗಳು ತನ್ನ ಪ್ರದೇಶದಲ್ಲಿ ವಾಸ್ತವ್ಯ ಹೂಡಲು ಯಾವುದೇ ರೀತಿಯ ಅವಕಾಶಗಳನ್ನು ಕಲ್ಪಿಸುವುದಿಲ್ಲ’ ಎನ್ನುವ ಔಪಚಾರಿಕ ಹೇಳಿಕೆ ಬಿಡುಗಡೆ ಮಾಡಿದರು. ಈ ಸ್ವರೂಪದ ಗೌಪ್ಯ ಭದ್ರತಾ ಒಪ್ಪಂದ ಜಾರಿಯಾದರೆ ಚೀನಾದ ಮಿಲಿಟರಿ ಪಡೆಗಳು ಸೊಲೊಮನ್ ದ್ವೀಪಗಳಲ್ಲಿ ನೆಲೆಯೂರುವ ಸಾಧ್ಯತೆಗಳು ಹೆಚ್ಚಾಗಿದೆ. ಇದರಿಂದ ಮುಂದಿನ ದಿನಗಳಲ್ಲಿ ಆಸ್ಟ್ರೇಲಿಯಾಕ್ಕೆ ಸಮಸ್ಯೆಗಳು ಉಂಟಾಗಬಹುದು.

ತನ್ನ ವ್ಯಾಪಾರ ಸಂಬಂಧಗಳನ್ನು ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪೆಸಿಫಿಕ್ ಸಮುದ್ರದ ಅಕ್ಕಪಕ್ಕದ ಪ್ರದೇಶಗಳಲ್ಲಿ, ಏಷ್ಯಾ ಮತ್ತು ಆಫ್ರಿಕಾ ಪ್ರದೇಶಗಳಲ್ಲಿ ವಿಸ್ತರಿಸಲು ಮುಂದಾಗುತ್ತಿದೆ ಎನ್ನುವ ಹೇಳಿಕೆಯನ್ನು ಇತ್ತೀಚೆಗೆ ಚೀನಾದ ಅಧ್ಯಕ್ಷರು ಬಿಡುಗಡೆ ಮಾಡಿದ್ದರು.

2. ಅಮೆರಿಕದ ಅಧಿಕಾರಿಗಳೊಂದಿಗೆ ದಲೈಲಾಮಾ ಭೇಟಿ

ಇತ್ತೀಚಿಗೆ ಟಿಬೆಟ್‌ನ ಧರ್ಮ ಗುರು ದಲೈಲಾಮ ಅವರು ನವದೆಹಲಿಯಲ್ಲಿ ಅಮೆರಿಕದ ಅಧಿಕಾರಿಗಳನ್ನು ಭೇಟಿಯಾದರು. ದಲೈಲಾಮಾ ಅವರ ಭೇಟಿಯ ಹಿನ್ನಲೆಯಲ್ಲಿಯೇ ಚೀನಾ ಇದಕ್ಕೆ ವಿರೋಧ ವ್ಯಕ್ತಪಡಿಸಿ, ‘ಇದು ತನ್ನ ಆಂತರಿಕ ವ್ಯವಹಾರಗಳಲ್ಲಿ ಅಮೆರಿಕ ಮಾಡುತ್ತಿರುವ ಹಸ್ತಕ್ಷೇಪ’ ಎಂದು ಆರೋಪ ಮಾಡಿತ್ತು.

ಅಮೆರಿಕದ ಅಧೀನ ಕಾರ್ಯದರ್ಶಿಗಳಾದ ಉಝ್ರಾ ಝೇಯಾ(Uzra Zeya) ಅವರು ಟಿಬೆಟ್ ವಿದ್ಯಮಾನಗಳ ವಿಶೇಷ ಸಮನ್ವಯ ಅಧಿಕಾರಿಯಾಗಿಯೂ ಕಾರ್ಯನಿರ್ವಹಿಸುತ್ತಾರೆ. ಈ ಕಾರಣದಿಂದ ಧರ್ಮಶಾಲಾದಲ್ಲಿರುವ ಕೇಂದ್ರ ಟಿಬೆಟ್ ಆಡಳಿತ ವ್ಯವಸ್ಥೆಯ ಅಧಿಕಾರಿಗಳೊಂದಿಗೆ ಹಾಗೂ ದಲೈಲಾಮ ಅವರೊಂದಿಗೆ ಮಾತನಾಡಿರುವುದಾಗಿ ಅಮೆರಿಕ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

ವಿಶೇಷ ಸೂಚನೆ: ಚೀನಾ ಸರ್ಕಾರ ಟಿಬೆಟ್ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ಮುಕ್ತ ಚರ್ಚೆಯನ್ನು ನಡೆಸಲು ಇತ್ತೀಚೆಗೆ ದಲೈಲಾಮಾ ಅವರಿಗೆ ಆಹ್ವಾನವನ್ನು ನೀಡಿತ್ತು.

www.exammastermind.com

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಮತ್ತಷ್ಟು ಮಾಹಿತಿಗಾಗಿ
ವಿವಿಧ ಪ್ರಚಲಿತ ವಿದ್ಯಮಾನಗಳ ಕುರಿತ ಮತ್ತಷ್ಟು ಮಾಹಿತಿ ಹಾಗೂ ನಾಗರಿಕ ಸೇವಾ ಪರೀಕ್ಷೆಗಳಿಗೆ ಸಂಬಂಧಿಸಿದ ಲೇಖನಗಳು ಹಾಗೂ ವಿಡಿಯೊಗಳಿಗಾಗಿ ‘ಪ್ರಜಾವಾಣಿ–ಡೆಕ್ಕನ್‌ಹೆರಾಲ್ಡ್ ಮಾಸ್ಟರ್ ಮೈಂಡ್’ ಇ–ಪೇಪರ್‌ಗೆ ಚಂದಾದಾರರಾಗಿ. ಚಂದಕ್ಕಾಗಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.

ಐಬಿಪಿಎಸ್: ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನ

ಬ್ಯಾಂಕ್ ಸಿಬ್ಬಂದಿ ನೇಮಕಾತಿ ಸಂಸ್ಥೆಯು (ಐಬಿಪಿಎಸ್) ದೇಶದ 11 ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿನ 4,451 ಪ್ರೊಬೇಷನರಿ ಆಫೀಸರ್(3049) ಸ್ಪೆಷಲ್‌ಆಫೀಸರ್ (1402)ಗಳ ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಿದೆ.

ಆನ್‌ಲೈನ್ ಮೂಲಕ (https://www.ibps.in)ಅರ್ಜಿ ಸಲ್ಲಿಸಬೇಕು. ಆಗಸ್ಟ್ 1 ರಿಂದ ಅರ್ಜಿ ಸಲ್ಲಿಕೆ ಆರಂಭವಾಗಿದ್ದು, ಆಗಸ್ಟ್ 21 ಅರ್ಜಿ ಸಲ್ಲಿಸಲು ಕೊನೆ ದಿನ.

ಈ ಹುದ್ದೆಗಳಿಗೆ ಪೂರ್ವಭಾವಿ, ಮುಖ್ಯ ಪರೀಕ್ಷೆ ಹಾಗೂ ಸಂದರ್ಶನಗಳ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತಿದೆ.

ವಯೋಮಿತಿ: ಕನಿಷ್ಠ 20 ವರ್ಷಗಳು ಗರಿಷ್ಠ 30 ವರ್ಷಗಳು. ಸರ್ಕಾರದ ನಿಯಮದಂತೆ ಎಸ್‌ಸಿ/ ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಇತರ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ 3 ವರ್ಷ ಮತ್ತು ಅಂಗವಿಕಲರಿಗೆ 10 ವರ್ಷ ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.

ಅರ್ಜಿ ಶುಲ್ಕ: ಸಾಮಾನ್ಯ ಮತ್ತು ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ₹850 ಹಾಗೂ ಎಸ್‌ಸಿ/ಎಸ್‌ಟಿ/ ಅಂಗವಿಕಲರು/ ಮಾಜಿ ಸೈನಿಕ ಅಭ್ಯರ್ಥಿಗಳಿಗೆ ₹175 ಶುಲ್ಕ ನಿಗದಿಪಡಿಸಲಾಗಿದೆ.

ಶೈಕ್ಷಣಿಕ ಅರ್ಹತೆ: ಪ್ರೊಬೇಷನರಿ ಆಫೀಸರ್ ಹುದ್ದೆಗಳಿಗೆ ಯಾವುದೇ ವಿಷಯದಲ್ಲಿ ಪದವಿ ಪಡೆದಿರಬೇಕು. ಸ್ಪೆಷಲ್ ಆಫೀಸರ್ ಗಳ ಹುದ್ದೆಗಳಿಗೆ ಕೃಷಿ, ತೋಟಗಾರಿಕೆ, ಪಶು ವೈದ್ಯಕೀಯ ವಿಜ್ಞಾನ, ಡೇರಿ ಸೈನ್ಸ್, ಫಿಶರಿ ಸೈನ್ಸ್, ಅಗ್ರಿ ಮಾರ್ಕೆಟಿಂಗ್ ಆ್ಯಂಡ್ ಕೋಆಪರೇಷನ್, ಕಂಪ್ಯೂಟರ್ ಸೈನ್ಸ್‌ನಲ್ಲಿ ಸ್ನಾತಕೋತ್ತರ ಪದವಿ, ಇನ್ಫರ್ಮೇಶನ್ ಟೆಕ್ನಾಲಜಿ, ಎಚ್ ಆರ್/ಎಚ್‌ಆರ್‌ಡಿ, ಕಾನೂನು ಪದವಿ, ಎಂಬಿಎ, ಹಿಂದಿ ಹಾಗೂ ಸಂಸ್ಕೃತದಲ್ಲಿ ಸ್ನಾತಕೋತ್ತರ ಸಹಿತ ಯಾವುದಾದರೂ ಒಂದು ಪದವಿ ಪಡೆದಿರಬೇಕು.

ಪದವಿ ಪೂರ್ಣಗೊಳಿಸಿದವರು ಮಾತ್ರ ಅರ್ಜಿ ಸಲ್ಲಿಸಬಹುದು. ಪದವಿಯಲ್ಲಿ ಪಡೆದ ಶೇಕಡಾವಾರು ಅಂಕಗಳನ್ನು ಅರ್ಜಿಯಲ್ಲಿ ಭರ್ತಿ ಮಾಡಬೇಕಾಗಿರುತ್ತದೆ.

(ಅರ್ಜಿ ಸಲ್ಲಿಸುವ ಕುರಿತು ಹಾಗೂ ಪರೀಕ್ಷಾ ವಿಧಾನದ ವಿವರವಾದ ಮಾಹಿತಿಯನ್ನು ಮುಂದಿನ ಸಂಚಿಕೆಯಲ್ಲಿ ನೀಡಲಾಗುವುದು)

ಬಹು ಆಯ್ಕೆ ಪ್ರಶ್ನೆಗಳು

ಐಎಎಸ್, ಕೆಎಎಸ್, ಕೆಪಿಎಸ್‌ಸಿ ಸೇರಿದಂತೆ ವಿವಿಧ ಹುದ್ದೆಗಳಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ ‘ಸಾಮಾನ್ಯ ಜ್ಞಾನ’ ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

1. ಭಾರತದಲ್ಲಿ ಭತ್ತ ಬೆಳೆಯುವ ಪ್ರದೇಶವು ಹೇಗೆ ಹಂಚಿಕೆಯಾಗಿದೆ?

ಎ. ದೇಶದ ಒಟ್ಟು ನೀರಾವರಿ ಪ್ರದೇಶದ ಶೇ 50ರಷ್ಟು ಪ್ರದೇಶದಲ್ಲಿ ಭತ್ತ ಬೆಳೆಯಲಾಗುತ್ತಿದೆ.
ಬಿ. ದೇಶದ 9 ರಾಜ್ಯಗಳು ಈ ಬೆಳೆಯ ಶೇ 68ರಷ್ಟು ಕ್ಷೇತ್ರ ಒಳಗೊಂಡಿದ್ದು, ಶೇ.79ರಷ್ಟು ಭತ್ತ ಉತ್ಪಾದಿಸುತ್ತಿವೆ.

ಸಂಕೇತಗಳೊಂದಿಗೆ ಉತ್ತರಿಸಿ

ಎ. ಹೇಳಿಕೆ ಎ ಮಾತ್ರ ಸರಿಯಾಗಿದೆ.
ಬಿ. ಹೇಳಿಕೆ ಬಿ ಮಾತ್ರ ಸರಿಯಾಗಿದೆ.
ಸಿ. ಮೇಲಿನ ಎರಡೂ ಹೇಳಿಕೆಗಳು ಸರಿಯಾಗಿವೆ.
ಡಿ. ಮೇಲಿನ ಎರಡೂ ಹೇಳಿಕೆಗಳು ತಪ್ಪಾಗಿವೆ.

ಉತ್ತರ : ಸಿ

2. ಕರ್ನಾಟಕದಲ್ಲಿ ಸಕ್ಕರೆ ಕಾರ್ಖಾನೆಗಳ ಕುರಿತ ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿರಿ.

ಎ. ಬೆಳಗಾವಿ ಜಿಲ್ಲೆಯಲ್ಲಿ ಪ್ರತಿ 25 ಕಿ.ಮೀ ಅಂತರದಲ್ಲಿ ನಾಲ್ಕು ಸಕ್ಕರೆ ಕಾರ್ಖಾನೆಗಳಿವೆ.
ಬಿ. ದೂರದಿಂದ ಖರೀದಿ ಮಾಡುವ ಕಬ್ಬಿನ ಕಟಾವು ಮತ್ತು ಸಾಕಾಣಿಕ ಖರ್ಚನ್ನು ರೈತರಿಂದಲೇ ವಸೂಲಿ ಮಾಡಲಾಗುತ್ತಿದೆ.

ಎ. ಹೇಳಿಕೆ ಎ ಮಾತ್ರ ಸರಿಯಾಗಿದೆ.
ಬಿ. ಹೇಳಿಕೆ ಬಿ ಮಾತ್ರ ಸರಿಯಾಗಿದೆ.
ಸಿ. ಮೇಲಿನ ಎರಡೂ ಹೇಳಿಕೆಗಳು ಸರಿಯಾಗಿವೆ.
ಡಿ. ಮೇಲಿನ ಎರಡೂ ಹೇಳಿಕೆಗಳು ತಪ್ಪಾಗಿವೆ.

ಉತ್ತರ : ಸಿ

3. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿರಿ.

ಎ. ಸಾಗರ ಅಥವಾ ಸಮುದ್ರದ ಅಂಚಿನ ಹೆಚ್ಚು ಆಳವಿಲ್ಲದ ಭಾಗವನ್ನೇ ಖಂಡಾವರಣ ಪ್ರದೇಶವೆನ್ನುವರು.
ಬಿ. ಖಂಡಾವರಣ ಪ್ರದೇಶವು ಮೀನುಗಾರಿಕೆ, ಜಲಚರ ಕೃಷಿ, ನೌಕಾಯಾನ ಹಾಗೂ ಕಚ್ಚಾತೈಲಗಳ ಉತ್ಪಾದನೆಗೆ ಪ್ರಾಮುಖ್ಯತೆ ಪಡೆದಿದೆ.

ಎ. ಹೇಳಿಕೆ ಎ ಮಾತ್ರ ಸರಿಯಾಗಿದೆ.
ಬಿ. ಹೇಳಿಕೆ ಬಿ ಮಾತ್ರ ಸರಿಯಾಗಿದೆ.
ಸಿ. ಮೇಲಿನ ಎರಡು ಹೇಳಿಕೆಗಳೂ ಸರಿಯಾಗಿವೆ.
ಡಿ. ಮೇಲಿನ ಎರಡು ಹೇಳಿಕೆಗಳೂ ತಪ್ಪಾಗಿವೆ.

ಉತ್ತರ : ಸಿ

4. ಉತ್ತರ ಅಮೆರಿಕ ಮತ್ತು ಯುರೋಪಿನ ನಡುವೆ ಇರುವ ಸಾಗರ ಯಾವುದು ?

ಎ. ಅಟ್ಲಾಂಟಿಕ ಸಾಗರ ಬಿ. ಪೆಸಿಫಿಕ್ ಸಾಗರ
ಸಿ. ಹಿಂದೂ ಮಹಾಸಾಗರ ಡಿ. ಉತ್ತರಧ್ರುವ ಸಾಗರ

ಉತ್ತರ: ಎ

5. ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ಕೆಳಗಿನ ಯಾವ ಸ್ಥಾನಮಾನವನ್ನು ಕಲ್ಪಿಸಲಾಗಿದೆ?

ಎ. ಶಾಸನೀಯ ಸ್ಥಾನಮಾನ.
ಬಿ. ಸಂವಿಧಾನಾತ್ಮಕ ಸ್ಥಾನಮಾನ.
ಸಿ. ಶಾಸನೀಯೇತರ ಸ್ಥಾನಮಾನ.
ಡಿ. ನಿಗಮದ ಸ್ಥಾನಮಾನ.

ಉತ್ತರ : ಎ

ಇನ್ನಷ್ಟು ಪ್ರಶ್ನೋತ್ತರಗಳಿಗೆ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.

₹1 ಲಕ್ಷ ಲಂಚ: ಇಬ್ಬರ ಬಂಧನ

ತಲೆಮರೆಸಿಕೊಂಡು ಪರಾರಿಯಾಗಿರುವ ಕಂದಾಯ ಅಧಿಕಾರಿಗಾಗಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಿರಾಸ್ತಿಯೊಂದರ ಖಾತೆ ವರ್ಗಾವಣೆ ಪ್ರಕ್ರಿಯೆ ಪೂರ್ಣಗೊಳಿಸಲು ₹ 1 ಲಕ್ಷ ಲಂಚ ಪಡೆದ ಬಿಬಿಎಂಪಿಯ ಕರಿಸಂದ್ರ ವಾರ್ಡ್ (166) ಕಚೇರಿಯ ಇಬ್ಬರು ಸಿಬ್ಬಂದಿಯನ್ನು ಲೋಕಾಯುಕ್ತ ಪೊಲೀಸರು ಬುಧವಾರ ಬಂಧಿಸಿದ್ದು, ಮುಖ್ಯ ಆರೋಪಿಯಾಗಿರುವ ಕಂದಾಯ ನಿರೀಕ್ಷಕ ರಾಜಗೋಪಾಲ್ ತಲೆಮರೆಸಿಕೊಂಡಿದ್ದಾರೆ.

ದೂರುದಾರರಿಂದ ಲಂಚದ ಹಣ ಪಡೆದ ಕರಿಸಂದ್ರ ವಾರ್ಡ್ ಕಚೇರಿಯ ಪ್ರಥಮ ದರ್ಜೆ ಸಹಾಯಕ ರಾಘವೇಂದ್ರ ಮತ್ತು ಡೇಟಾ ಎಂಟ್ರಿ ಆಪರೇಟರ್ ಸುರೇಶ್ ಅವರನ್ನು ಲೋಕಾಯುಕ್ತದ ಬೆಂಗಳೂರು ನಗರ ಘಟಕದ ಪೊಲೀಸರು ಬಂಧಿಸಿದ್ದಾರೆ. ಮೊದಲನೇ ಆರೋಪಿ ರಾಜಗೋಪಾಲ್ ಪತ್ತೆಗೆ ಶೋಧ ಮುಂದುವರಿಸಿದ್ದಾರೆ.

ರೋಹಿಣಿ ಎಂಬುವವರು ಕರಿಸಂದ್ರ ವಾರ್ಡ್ ವ್ಯಾಪ್ತಿಯಲ್ಲಿ ಸ್ಥಿರಾಸ್ತಿ ಖರೀದಿಸಿದ್ದರು. ಖಾತೆ ವರ್ಗಾವಣೆ ಪ್ರಕ್ರಿಯೆ ನಡೆಸಲು ಅರುಣ್ ಕುಮಾರ್ ಎಂಬ ವಕೀಲರಿಗೆ ಅಧಿಕಾರ ನೀಡಿದ್ದರು. ವಕೀಲರು ಅವರ

ರಾಜಗೋಪಾಲ್

ರಾಘವೇಂದ್ರ

ಸುರೇಶ್

ಪರವಾಗಿ ಬಿಬಿಎಂಪಿ ಕಚೇರಿಗೆ ಅರ್ಜಿ ಸಲ್ಲಿಸಿದ್ದರು.

ಪ್ರಕ್ರಿಯೆ ಪೂರ್ಣಗೊಳಿಸಲು ₹ 1.25 ಲಕ್ಷ ಲಂಚ ನೀಡುವಂತೆ ಆರೋಪಿಗಳು ಬೇಡಿಕೆ ಇಟ್ಟಿದ್ದರು. ನಂತರ ಭೇಟಿಮಾಡಿ ಮಾತುಕತೆ ನಡೆಸಿದಾಗ ₹ 1 ಲಕ್ಷ ಕೊಡುವಂತೆ ಸೂಚಿಸಿದ್ದರು. ಮಂಗಳವಾರವೂ ವಕೀಲರು ಭೇಟಿಮಾಡಿದ್ದರು. ರಾಘವೇಂದ್ರ ಮತ್ತು ಸುರೇಶ್ ಬಳಿ ಹಣ ತಲುಪಿಸುವಂತೆ ರಾಜಗೋಪಾಲ್ ಸೂಚಿಸಿದ್ದರು. ಈ ಬಗ್ಗೆ ವಕೀಲರು ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ಘಟಕಕ್ಕೆ ದೂರು ನೀಡಿದ್ದರು.

‘ಬುಧವಾರ ಅರುಣ್ ಕುಮಾರ್ ಅವರು ಆರೋಪಿಗಳನ್ನು ಸಂಪರ್ಕಿಸಿದರು. ಆಗ ಜಯನಗರದ 25ನೇ ಅಡ್ಡರಸ್ತೆಯಲ್ಲಿರುವ ಗಣಪತಿ ದೇವಸ್ಥಾನದ ಹಿಂಬದಿಗೆ ಬಂದು ರಾಘವೇಂದ್ರ ಮತ್ತು ಸುರೇಶ್ ಲಂಚದ ಹಣ ಪಡೆದುಕೊಂಡರು. ತಕ್ಷಣ ಕಾರ್ಯಾಚರಣೆ ನಡೆಸಿ ಇಬ್ಬರನ್ನೂ ಬಂಧಿಸಲಾಗಿದೆ’ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಇಬ್ಬರನ್ನು ಬಂಧಿಸುತ್ತಿದ್ದಂತೆಯೇ ರಾಜಗೋಪಾಲ್ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆಯಾಗಿದ್ದಾರೆ. ಅವರ ಮನೆಯಲ್ಲೂ ಶೋಧ ನಡೆಸಿದ್ದು ಪತ್ತೆಯಾಗಿಲ್ಲ ಎಂದು ತನಿಖಾ ತಂಡ ತಿಳಿಸಿದೆ.

ಎರಡನೇ ಪ್ರಕರಣ

ರಾಜಗೋಪಾಲ್ 2014ರಲ್ಲಿ ಲಂಚ ಪಡೆಯುವಾಗ ಲೋಕಾಯುಕ್ತ ಪೊಲೀಸರು ಅವರನ್ನು ಬಂಧಿಸಿದ್ದರು. ಇದು ಅವರ ವಿರುದ್ಧದ ಎರಡನೇ ಪ್ರಕರಣ ಎಂದು ಮೂಲಗಳು ತಿಳಿಸಿವೆ.

ಲೋಕಾಯಕ್ತದ ಡಿವೈಎಸ್‌ಪಿ ಉಮಾದೇವಿ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇನ್‌ಸ್ಪೆಕ್ಟರ್‌ಗಳಾದ ಮಂಜುನಾಥ್, ಮಹದೇವಯ್ಯ, ಆನಂದ ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು.

ಠಾಣೆ ಹಿಂಭಾಗದ ಜಾಗಕ್ಕೆ ಜಟಾಪಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಂಬಳಗೂಡು ವಿಶ್ವ ಕಲ್ಯಾಣ ಮಿಷನ್ ಬಸವ ಗಂಗೋತ್ರಿ ಆಶ್ರಮ ಹಾಗೂ ಪೊಲೀಸರ ನಡುವೆ ಜಾಗದ ವಿಚಾರಕ್ಕೆ ಜಟಾಪಟಿ ನಡೆದಿದೆ. ಪೊಲೀಸರ ಕ್ರಮ ಖಂಡಿಸಿ ಬಸವಯೋಗಿ ಸ್ವಾಮೀಜಿ ಏಕಾಂಗಿ ಪ್ರತಿಭಟನೆ ನಡೆಸಿದರು.

ಕುಂಬಳಗೂಡು ಪೊಲೀಸ್ ಠಾಣೆ ಹಿಂಭಾಗದಲ್ಲಿಯೇ ಬಸವ ಗಂಗೋತ್ರಿ ಆಶ್ರಮವಿದೆ. ಇದಕ್ಕೆ ಸೇರಿದ 6 -7 ಎಕರೆ ಜಮೀನಿನ ಜೊತೆಗೆ ಪೊಲೀಸ್ ಠಾಣೆ ಪಕ್ಕದಲ್ಲಿ 3 ಗುಂಟೆ ಜಾಗವಿದೆ. ಈ ಜಾಗದ ವಿಚಾರವಾಗಿ ಆಶ್ರಮ ಮತ್ತು ಪೊಲೀಸರ ನಡುವೆ ಸಂಘರ್ಷ ನಡೆಯುತ್ತಲೇ ಬಂದಿದೆ. ವಿವಾದಿತ ಜಾಗದಲ್ಲಿ ಪೊಲೀಸರು ಅಪಘಾತಕ್ಕೆ ಒಳಗಾದ ವಾಹನಗಳನ್ನು ನಿಲ್ಲಿಸುತ್ತಿದ್ದರು. ಹಲವು ಬಾರಿ ವಾಹನಗಳನ್ನ ತೆರವು ಮಾಡಿ ಎಂದು ಸ್ವಾಮೀಜಿ ಪೊಲೀಸರಿಗೆ ಮನವಿ ಮಾಡಿದ್ದರು.

ಯಾವುದೇ ಪ್ರಯೋಜನವಾಗಿರಲಿಲ್ಲ. ಹಾಗಾಗಿ, ಮಠದ ವತಿಯಿಂದ ಕಳೆದ 4 ದಿನಗಳ ಹಿಂದೆ ಅಪಘಾತ ವಾಹನಗಳನ್ನು ತೆರವು ಮಾಡಿ ಪೊಲೀಸ್ ಠಾಣೆ ಎದುರು ತಂದು ನಿಲುಗಡೆ ಮಾಡಲಾಗಿತ್ತು. ಕ್ರೇನ್ ಬಳಸಿ ಮತ್ತೆ ಎಲ್ಲ ವಾಹನಗಳನ್ನು ಅದೇ ಜಾಗಕ್ಕೆ ಸ್ಥಳಾಂತರ ಮಾಡುತ್ತಿದ್ದರು. ಮಾಹಿತಿ ತಿಳಿದು ಸ್ಥಳಕ್ಕೆ ಬಂದ ಸ್ವಾಮೀಜಿ ವಾಹನ ತೆರವು ಮಾಡುವಂತೆ ಮನವಿ ಮಾಡಿದರು. ಅದಕ್ಕೆ

ಅಪಘಾತಕ್ಕೀಡಾದ ವಾಹನಗಳನ್ನು ಕ್ರೇನ್ ಬಳಸಿ ಸ್ಥಳಾಂತರ ಮಾಡಲಾಯಿತು.

ಪೊಲೀಸರು ಒಪ್ಪಲಿಲ್ಲ. ಸ್ಥಳದಲ್ಲೇ ಸ್ವಾಮೀಜಿ ಪ್ರತಿಭಟನೆ ನಡೆಸಿದರು.

‘ಆಶ್ರಮದ ಶಾಂತಿಯುತ ವಾತಾವರಣಕ್ಕೆ ಧಕ್ಕೆ ತರುವ ಪ್ರಯತ್ನವನ್ನು ಪೊಲೀಸರು ನಡೆಸುತ್ತಿದ್ದಾರೆ. 50 ವರ್ಷದಿಂದ ಆಶ್ರಮವಿದ್ದರೂ ಈಗ ಗೋಮಾಳು ಎಂದು ಪೊಲೀಸರು ಹೇಳುತ್ತಿದ್ದಾರೆ. ಸರ್ವೆ ಮಾಡಿದ್ದರೂ ತಹಶೀಲ್ದಾರ್ ದಾಖಲೆ ಕೊಡುತ್ತಿಲ್ಲ. ಆಶ್ರಮದ ಜಾಗ ಕಬಳಿಸಲು ಷಡ್ಯಂತ್ರ ನಡೆಯುತ್ತಿದೆ’ ಎಂದು ಬಸವಯೋಗಿ ಸ್ವಾಮೀಜಿ ದೂರಿದರು.

ರಸ್ತೆ ವಿಭಜಕಕ್ಕೆ ಡಿಕ್ಕಿ: ಭದ್ರತಾ ಅಧಿಕಾರಿ ಸಾವು

ಆದಿತ್ಯ

ಬೆಂಗಳೂರು: ಹೆಲ್ಮೆಟ್ ಧರಿಸದೆ ವೇಗವಾಗಿ ಬೈಕ್ ಚಲಾಯಿಸಿ ರಸ್ತೆಯ ವಿಭಜಕಕ್ಕೆ ಡಿಕ್ಕಿ ಹೊಡೆದ ಪರಿಣಾಮ 4–ಬಿ ಕಂಪನಿಯ ಭದ್ರತಾ ಅಧಿಕಾರಿ ಮೃತಪಟ್ಟಿದ್ದಾರೆ.

ಜಾರ್ಖಂಡ್ ರಾಜ್ಯದ ಜೆಮ್‌ಶೆಡ್‌ಪುರದ ಆದಿತ್ಯ ಲೂಕ್ ಕುಜುರ್ (27) ಮೃತಪಟ್ಟವರು.

ಸೋಮವಾರ ರಾತ್ರಿ ಜೆ.ಬಿ. ನಗರದ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಇಂದಿರಾನಗರದ 100 ಅಡಿ ರಸ್ತೆಯ ಮಂಗೋಲಿಯಾ ಬೇಕರಿ ಬಳಿ ಅಪಘಾತ ಸಂಭವಿಸಿದೆ. ‘ಕಂಪನಿಯಲ್ಲಿ ಕೆಲಸ ಮುಗಿಸಿಕೊಂಡು ರಾತ್ರಿ 12.30ರ ವೇಳೆಯಲ್ಲಿ ತಮ್ಮ ಬಿಎಂಡಬ್ಲ್ಯು ಬೈಕ್‌ನಲ್ಲಿ ಹೆಲ್ಮೆಟ್ ಧರಿಸದೆ ವೇಗವಾಗಿ ತೆರಳುತ್ತಿದ್ದರು. ಬೇಕರಿ ಸಮೀಪ ರಸ್ತೆಯ ಮಧ್ಯದ ಸಿಮೆಂಟ್ ವಿಭಜಕಕ್ಕೆ ಡಿಕ್ಕಿ ಹೊಡೆದಿದ್ದರು. ತಲೆಗೆ ತೀವ್ರ ಪೆಟ್ಟು ಬಿದ್ದಿತ್ತು. ಸಿಎಂಎಚ್ ಆಸ್ಪತ್ರೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಅವರು ಮೃತಪಟ್ಟಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

ಮೆಡಿಕಲ್ ಸೀಟು ಕೊಡಿಸುವ ನೆಪದಲ್ಲಿ ₹ 55.25 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿಗಳು

ಬೆಂಗಳೂರು: ದೇಶದ ಬೇರೆ ಬೇರೆ ರಾಜ್ಯಗಳ ಕಾಲೇಜುಗಳಲ್ಲಿ ಮೆಡಿಕಲ್ ಸೀಟು ಕೊಡಿಸುವಾಗಿ ನಂಬಿಸಿ ₹ 55.25 ಲಕ್ಷ ಪಡೆದು ವಂಚಿಸಿದ್ದ ಆರೋಪಿ ಸೈಯದ್ ಯೂನಸ್‌ನನ್ನು ವಿದ್ಯಾರಣ್ಯಪುರ ಪೊಲೀಸರು ಬಂಧಿಸಿದ್ದಾರೆ.

ಎಂ.ಎಸ್.ಪಾಳ್ಯದ ಅಪಾರ್ಟ್‌ಮೆಂಟ್‌ನಲ್ಲಿ ಸೈಯದ್ ನೆಲೆಸಿದ್ದ. ಎನ್. ಲೋಕನಾಯಕಿ ಅವರು ವಂಚನೆ ದೂರು ನೀಡಿದ್ದರು. ದೂರು ಆಧರಿಸಿ ಕಾರ್ಯಾಚರಣೆ ನಡೆಸಿದ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

‘ಯಲಹಂಕದಲ್ಲಿ ಯುನಿವರ್ಸಲ್ ಎಜುಕೇಶನ್ ಸರ್ವಿಸ್ ಎಂಬ ಶಿಕ್ಷಣ ಸಂಸ್ಥೆಯನ್ನು ಲೋಕನಾಯಕಿ ಅವರು ನಡೆಸುತ್ತಿದ್ದಾರೆ. ಅವರ ಪತಿಗೂ ಪರಿಚಯವಿದ್ದ ಸೈಯದ್ ಯೂನಸ್ ಮೆಡಿಕಲ್ ಕಾಲೇಜಿನಲ್ಲಿ ಸೀಟು ಕೊಡಿಸುತ್ತೇನೆ ಎಂದು ಹೇಳಿದ್ದ. ಇಬ್ಬರು ವಿದ್ಯಾರ್ಥಿಗಳಿಂದ ಹಣ ಪಡೆದುಕೊಂಡಿದ್ದ’ ಎಂದು ಪೊಲೀಸರು ಹೇಳಿದರು.

‘ಕರ್ನಾಟಕ, ದೆಹಲಿ, ಹರಿಯಾಣ, ರಾಜಸ್ಥಾನದಲ್ಲಿ ಹಲವು ರಾಜಕಾರಣಿಗಳು ಪರಿಚಯವಿದ್ದಾರೆ. ಅಲ್ಲಿನ ಕಾಲೇಜುಗಳಲ್ಲಿ ₹ 18 ಲಕ್ಷದಿಂದ ₹ 76 ಲಕ್ಷದ ಒಳಗೆ ಮೆಡಿಕಲ್ ಸೀಟ್ ಕೊಡಿಸುತ್ತೇನೆ ಎಂದು ಹೇಳಿ ನಂಬಿಸಿದ್ದ’ ಎಂದು ಪೊಲೀಸರು ಹೇಳಿದರು.

‘ವಿದ್ಯಾರ್ಥಿಗಳಿಂದ ಹಂತ ಹಂತವಾಗಿ ಹಣ ಪಡೆದಿದ್ದ. ಆನ್‌ಲೈನ್‌ನಲ್ಲಿ ₹ 20.5 ಲಕ್ಷ ಹಾಗೂ ನಗದು ರೂಪದಲ್ಲಿ ₹ 34.75 ಲಕ್ಷ ಪಡೆದುಕೊಂಡಿದ್ದ. ಮತ್ತೆ ಹಣ ಕೇಳಿದಾಗ ಆತನ ಮೇಲೆ ಅನುಮಾನಗೊಂಡು ವಿಚಾರಣೆ ನಡೆಸಿದೆ. ಆಗ ವಂಚನೆ ನಡೆಸಿರುವುದು ತಿಳಿಯಿತು. ಹಣ ವಾಪಸ್ ನೀಡುವಂತೆ ಕೇಳಿದಾಗ ₹ 15.8 ಲಕ್ಷವನ್ನು ವಾಪಸ್ ನೀಡಿದ್ದ. ಇನ್ನೂ ₹ 40.17 ಲಕ್ಷ ಬಾಕಿಯಿದೆ’ ಎಂದು ಲೋಕನಾಯಕಿ ದೂರಿನಲ್ಲಿ ತಿಳಿಸಿದ್ದಾರೆ.

ಗಾಂಜಾ ಆಮಿಷವೊಡ್ಡಿ ದರೋಡೆ: ಬಂಧನ

ಹೊಸಕೋಟೆ: ತಾಲ್ಲೂಕಿನಲ್ಲಿ ನಡೆದ ಮೂರು ಪ್ರತ್ಯೇಕ ಅಪರಾಧ ಪ್ರಕರಣ ಭೇದಿಸಿರುವ ಹೊಸಕೋಟೆ ಪೊಲೀಸರು ಕದ್ದ ಮಾಲಿನ ಸಮೇತ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

ಬಂಧಿತ ಆರೋಪಿಗಳಿಂದ ವಶಪಡಿಸಿಕೊಂಡಿರುವ ಅಂದಾಜು ₹31 ಲಕ್ಷ ಮೌಲ್ಯದ ವಸ್ತುಗಳನ್ನು ಪೊಲೀಸರು ಮಂಗಳವಾರ ಮಾಧ್ಯಮಗಳಿಗೆ ಪ್ರದರ್ಶಿಸಿದರು. ಗಾಂಜಾ ಮತ್ತು ಇತರ ಮಾದಕವಸ್ತು ನೀಡುವುದಾಗಿ ವ್ಯವಸನಿಗಳನ್ನು ಕರೆಯಿಸಿಕೊಂಡು ದರೋಡೆ ನಡೆಸುತ್ತಿದ್ದ ಹೊಸಕೋಟೆಯ ಜಾಧವ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಮೂರು ಬೈಕ್, ಸ್ಕೂಟಿ, ಎರಡು ಕೆ.ಜಿ ಗಾಂಜಾ ಸೇರಿ ಒಟ್ಟು ₹15 ಲಕ್ಷ ಬೆಲೆ ಬಾಳುವ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಸುಲಿಗೆ: ಕ್ಯಾಬ್ ಚಾಲಕನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಯಾಬ್‌ನಲ್ಲಿ ಪ್ರಯಾಣಿಸುವಾಗ ಮಹಿಳಾ ಪ್ರಯಾಣಿಕರೊಬ್ಬರನ್ನು ಪರಿಚಯಿಸಿಕೊಂಡು ಬ್ಲ್ಯಾಕ್‌ಮೇಲ್ ಮಾಡಿ, ₹ 22 ಲಕ್ಷ ನಗದು ಹಾಗೂ ₹ 60 ಲಕ್ಷ ಮೌಲ್ಯದ 960 ಗ್ರಾಂ ಚಿನ್ನಾಭರಣ ಸುಲಿಗೆ ಮಾಡಿದ್ದ ಚಾಲಕನನ್ನು ರಾಮಮೂರ್ತಿ ನಗರ ಪೊಲೀಸರು ಬಂಧಿಸಿದ್ದಾರೆ.

ಹೆಸರಘಟ್ಟದ ಉಬರ್ ಕ್ಯಾಬ್ ಚಾಲಕ ಕಿರಣ್ ಕುಮಾರ್ ಬಂಧಿತ ಆರೋಪಿ.

ಸುಲಿಗೆ ಮಾಡಿದ್ದ 960 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಕಿರಣ್

‘ಖಾಸಗಿ ಕಂಪನಿ ಉದ್ಯೋಗಿಯಾಗಿರುವ ಮಹಿಳೆ ಕೌಟುಂಬಿಕ ವಿಚಾರದಲ್ಲಿ ಬೇಸತ್ತಿದ್ದರು. ಪತಿಯಿಂದ ವಿಚ್ಛೇದನ ಪಡೆಯಲು ಮುಂದಾಗಿದ್ದರು. ಈ ಮಧ್ಯೆ 2022ರ ನವೆಂಬರ್‌ನಲ್ಲಿ ಮಹಿಳೆ ಇಂದಿರಾನಗರದಿಂದ ಬಾಣಸವಾಡಿಗೆ ಹೋಗಲು ಆರೋಪಿ ಕ್ಯಾಬ್ ಹತ್ತಿದ್ದರು. ತನ್ನ ಬಾಲ್ಯ ಸ್ನೇಹಿತ ಸುಮನ್ ಎಂಬಾತನ ಜತೆ ಕೌಟುಂಬಿಕ ವಿಚಾರಗಳನ್ನು ಹೇಳಿಕೊಂಡು ಸಹಾಯ ಕೋರಿದ್ದರು. ಇದೇ ರೀತಿ 3-4 ಬಾರಿ ಆರೋಪಿ ಕ್ಯಾಬ್‌ನಲ್ಲಿ ಹೋಗುವಾಗಲೂ ಅದೇ ವಿಚಾರಗಳನ್ನು ಪದೇ ಪದೇ ಮಾತನಾಡಿದ್ದರು. ಅದನ್ನು ಗಮನಿಸಿದ ಆರೋಪಿ, ಕೆಲವು ದಿನಗಳ ಬಳಿಕ ಆಕೆಗೆ ಸ್ನೇಹಿತನ ಸೋಗಿನಲ್ಲಿ ಸಂದೇಶ ಕಳುಹಿಸಿದ್ದ’ ಎಂದು ಪೊಲೀಸರು ಹೇಳಿದರು.

‘ಬಾಲ್ಯ ಸ್ನೇಹಿತ ಎಂದು ಮೆಸೇಜ್ ಹಾಕಿ ತಾನು ಆರ್ಥಿಕವಾಗಿ ತೊಂದರೆಯಲ್ಲಿದ್ದೇನೆ. ಹಣಕಾಸು ನೆರವು ನೀಡುವಂತೆ ಮೆಸೇಜ್‌ನಲ್ಲಿ ಕೋರಿದ್ದ. ಅದನ್ನು ನಂಬಿದ ಮಹಿಳೆ ಹಂತ ಹಂತವಾಗಿ ₹ 22 ಲಕ್ಷ ನೀಡಿದ್ದರು. ಈ ಹಣವನ್ನು ಮೋಜು ಮಸ್ತಿಗೆ ಬಳಸುತ್ತಿದ್ದ. ಚಿನ್ನಾಭರಣವನ್ನೂ ಸುಲಿಗೆ ಮಾಡಿದ್ದ. ಹಣ ಪಡೆದುಕೊಂಡಿದ್ದು ಗೆಳೆಯ ಅಲ್ಲ, ಕ್ಯಾಬ್ ಚಾಲಕ ಎಂದು ತಿಳಿದ ಮೇಲೆ ಹಣ ವಾಪಸ್ ನೀಡುವಂತೆ ಮಹಿಳೆ ಕೇಳಿದ್ದರು. ಅದಕ್ಕೆ ಆತ ಒಪ್ಪದೇ ನಿಮ್ಮ ಹಾಗೂ ಸ್ನೇಹಿತನ ವಿಚಾರವನ್ನು ಪತಿಗೆ ತಿಳಿಸಿ ಸಂಸಾರ ಹಾಳು ಮಾಡುತ್ತೇನೆ ಎಂದು ಬೆದರಿಕೆ ಹಾಕಿದ್ದ’ ಎಂದು ಹೇಳಿದರು.

ಆರೋಪಿ ಕೆಲವು ದಿನಗಳ ಹಿಂದೆ ಠಾಣಾ ವ್ಯಾಪ್ತಿಯಲ್ಲಿ ಓಡಾಟ ನಡೆಸುತ್ತಿದ್ದ. ಗಸ್ತಿನಲ್ಲಿದ್ದ ಪಿಎಸ್‌ಐ ಮೌನೇಶ್ ಆರೋಪಿಯನ್ನು ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ, ಚಿನ್ನಾಭರಣ ಅಡಮಾನ ಇಟ್ಟಿರುವ ಚೀಟಿಗಳು ಪತ್ತೆಯಾಗಿದ್ದವು. ಅನುಮಾನಗೊಂಡು ತೀವ್ರ ರೀತಿಯಲ್ಲಿ ವಿಚಾರಣೆ ನಡೆಸಿದಾಗ ವಂಚನೆಯ ರಹಸ್ಯ ಬಾಯಿಬಿಟ್ಟಿದ್ದ. ಮಹಿಳೆಯಿಂದ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಒಡಿಶಾ, ಅಸ್ಸಾಂ ಮೂಲದ ಆರೋಪಿಗಳು

ಡೆಲಿವರಿ ಬಾಯ್‌ಗಳ ಮೊಬೈಲ್ ಸುಲಿಗೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫುಡ್ ಡೆಲಿವರಿ ಮಾಡುತ್ತಿದ್ದ ಹುಡುಗರನ್ನು ಗುರಿಯಾಗಿಸಿ ಮೊಬೈಲ್ ಸುಲಿಗೆ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಸುದ್ದಗುಂಟೆಪಾಳ್ಯ ಪೊಲೀಸರು ಬಂಧಿಸಿದ್ದಾರೆ.

ಒಡಿಶಾದ ದೀಪಕ್ ಮಲ್ಲಿಕ್, ಅಸ್ಸಾಂನ ರಾಕೇಶ್ ಪಾಸ್‌ವಾನ್ ಹಾಗೂ ತನುಕುಮಾರ್ ಬಂಧಿತರು.

ಬಂಧಿತರಿಂದ 25 ಮೊಬೈಲ್‌ಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

ಸುದ್ದಗುಂಟೆಪಾಳ್ಯ ಭಾಗದಲ್ಲಿ ಮನೆ ಹಾಗೂ ಅಪಾರ್ಟ್‌ಮೆಂಟ್‌ಗಳಿಗೆ ಫುಡ್ ಡೆಲಿವರಿ ಮಾಡುತ್ತಿದ್ದ ಯುವಕರನ್ನೇ ಗುರಿಯಾಗಿಸಿ ಸುಲಿಗೆ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದರು.

‘ಬಂಧಿತ ಆರೋಪಿಗಳು ವಿವಿಧೆಡೆ ಸೆಕ್ಯುರಿಟಿ ಗಾರ್ಡ್‌ಗಳಾಗಿ ಕೆಲಸ ಮಾಡುತ್ತಿದ್ದರು. ಕೆಲಸ ಮುಗಿದ ನಂತರ ಡೆಲಿವರಿ ಬಾಯ್‌ಗಳು ತೆರಳುವ ಮಾರ್ಗವನ್ನು ಗಮನಿಸುತ್ತಿದ್ದರು. ಅವರನ್ನು ಬೈಕ್‌ನಲ್ಲಿ ಹಿಂಬಾಲಿಸಿ ಮೊಬೈಲ್ ಕಸಿದುಕೊಂಡು ಪರಾರಿ ಆಗುತ್ತಿದ್ದರು. ವಿಳಾಸ ಪತ್ತೆಗೆ ಡೆಲಿವರಿ ಬಾಯ್‌ಗಳು ಸ್ಕೂಟರ್‌ಗಳಿಗೆ ಕ್ಲಿಪ್ ಹಾಕಿಕೊಂಡು ಮೊಬೈಲ್ ಸಿಕ್ಕಿಸುತ್ತಾರೆ. ಅಂತಹ ಮೊಬೈಲ್‌ಗಳನ್ನೇ ಕಸಿದು ಪರಾರಿಯಾಗುತ್ತಿದ್ದರು’ ಎಂದು ಪೊಲೀಸರು ಹೇಳಿದರು.

ರಾಕೇಶ್

ದೀಪಕ್

ಜುಲೈನಲ್ಲಿ ಡೆಲಿವರಿ ಬಾಯ್ ಒಬ್ಬ ಆರೋಪಿಗಳಿಂದ ತನ್ನ ಮೊಬೈಲ್ ರಕ್ಷಿಸಿಕೊಳ್ಳಲು ಮುಂದಾಗಿದ್ದ ವೇಳೆ ಸ್ಕೂಟರ್‌ನಿಂದ ಬಿದ್ದು ಗಾಯಗೊಂಡಿದ್ದ. ಆತ ನೀಡಿದ ದೂರು ಆಧರಿಸಿ ಪೊಲೀಸರು ವಿಶೇಷ ತಂಡ ರಚಿಸಿದ್ದರು. ಕಾರ್ಯಾಚರಣೆಗೆ ಇಳಿದ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಮೊಬೈಲ್‌ಗಳು

ಆರೋಪಿಗಳ ವಿಚಾರಣೆ ವೇಳೆ 32 ಮೊಬೈಲ್ ಸುಲಿಗೆ ಪ್ರಕರಣಗಳು ಪತ್ತೆಯಾಗಿವೆ. ಸದ್ಯ 25 ಮೊಬೈಲ್ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಕರ್ನಾಟಕ ಮುಕ್ತ ವಿಶ್ವವಿದ್ಯಾಲಯಕ್ಕೆ ನ್ಯಾಕ್‌ನಿಂದ ಎ+ ಶ್ರೇಣಿ

‘10 ಆನ್‌ಲೈನ್ ಕೋರ್ಸ್ ಆರಂಭ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯಕ್ಕೆ ಯುಜಿಸಿಯಿಂದ ನ್ಯಾಕ್ ಎ+ ಶ್ರೇಣಿ ದೊರೆತಿದೆ’ ಎಂದು ಕುಲಪತಿ ಶರಣಪ್ಪ ವಿ. ಹಲಸೆ ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನ್ಯಾಕ್ ನಿಗದಿಪಡಿಸಿದ ಮಾನದಂಡಗಳಾದ ಪಠ್ಯಕ್ರಮ, ಬೋಧನೆ ಹಾಗೂ ಕಲಿಕೆ, ಮೌಲ್ಯಮಾಪನ, ಸಂಶೋಧನೆ, ಮೂಲಸೌಕರ್ಯ, ಕಲಿಕಾ ಸಂಪನ್ಮೂಲ, ವಿದ್ಯಾರ್ಥಿಗಳ ಪ್ರಗತಿ, ಆಡಳಿತ ಮತ್ತು ನಿರ್ವಹಣೆ, ಸಾಂಸ್ಥಿಕ ಮೌಲ್ಯಗಳಲ್ಲಿ ವಿಶ್ವ-ವಿದ್ಯಾಲಯವು ಗರಿಷ್ಠ 4 ಅಂಕಗಳಲ್ಲಿ 3.31 ಅಂಕಗಳನ್ನು ಪಡೆದುಕೊಂಡಿದೆ’ ಎಂದು ಮಾಹಿತಿ ನೀಡಿದರು.

2023–24ನೇ ಶೈಕ್ಷಣಿಕ ಸಾಲಿಗೆ ಮೂರು ಹೊಸ ಪದವಿ ಕೋರ್ಸ್‌ಗಳಾದ ಮತ್ತು 10 ಆನ್‌ಲೈನ್ ಕೋರ್ಸ್‌ಗಳನ್ನು ಆರಂಭಿಸಿದೆ. ಬಿಎಸ್‌ಡಬ್ಲ್ಯು, ಎಂಎಸ್‌ಡಬ್ಲ್ಯು, ಎಂಸಿಎ, ಎಂ.ಎಸ್ಸಿ ಪದವಿಗಳಿಗೆ ವಿದ್ಯಾರ್ಥಿಗಳಿಂದ ಹೆಚ್ಚಿನ ಬೇಡಿಕೆ ಇದೆ. ವಿವಿಯಲ್ಲಿ ಸದ್ಯ ಒಟ್ಟು 64 ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮಾ ಕೋರ್ಸ್‌ಗಳನ್ನು ನೀಡುತ್ತಿದೆ’ ಎಂದು ತಿಳಿಸಿದರು.

‘ರಾಜ್ಯದಲ್ಲಿ ಮುಕ್ತ ವಿವಿಯು 34 ಪ್ರಾದೇಶಿಕ ಕೇಂದ್ರಗಳನ್ನು ಹೊಂದಿದೆ. ಪ್ರತಿ ಜಿಲ್ಲೆಯಲ್ಲಿ ಪರೀಕ್ಷಾ ಕೇಂದ್ರ ಹಾಗೂ ತಾಲ್ಲೂಕಿನಲ್ಲಿ ಅಧ್ಯಯನ ಕೇಂದ್ರ ಸ್ಥಾಪನೆ, ಎಲ್ಲ ಶೈಕ್ಷಣಿಕ ಕ್ರಮಗಳ ಕಲಿಕಾ ಅಧ್ಯಯನ ಸಾಮಗ್ರಿ ಡಿಜಟಲೀಕರಣ ಜತೆಗೆ ಕೆಎಸ್‌ಒಯು ಸ್ಟೂಡೆಂಟ್ ಆ್ಯಪ್ ಮೂಲಕ ಶಿಕ್ಷಣ ನೀಡಲಾಗುತ್ತಿದೆ. ಡಿಜಿಟಲ್ ಮೌಲ್ಯಮಾಪನ ಮತ್ತು ಶೀಘ್ರ ಫಲಿತಾಂಶ, ಎಲ್ಲ ಸರ್ಕಾರಿ ವಿವಿಗಳು ಮತ್ತು ಪ್ರಥಮ ದರ್ಜೆ ಕಾಲೇಜುಗಳಲ್ಲಿ ಮುಕ್ತ ವಿವಿಯ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಲು ಪ್ರಯತ್ನಿಸಲಾ-ಗುತ್ತಿದೆ’ ಎಂದರು.

‘ಬಿಎ, ಬಿ.ಕಾಂ, ಎಂ.ಕಾಂ, ಎಂಬಿಎ, ಎಂಎ-ಕನ್ನಡ, ಎಂಎ-ಇಂಗ್ಲಿಷ್, ಎಂಎ-ಹಿಂದಿ, ಎಂಎ- ಸಂಸ್ಕೃತ, ಎಂಎ-ಅರ್ಥಶಾಸ್ತ್ರ, ಎಂಎಸ್‌ಸಿ-ಗಣಿತ ಆನ್‌ಲೈನ್ ಕೋರ್ಸ್‌ಗಳನ್ನು ಆರಂಭಿಸಲಾಗಿದೆ. ಇದರಲ್ಲಿ ಪಾಠ, ಪರೀಕ್ಷೆ ಎಲ್ಲವೂ ಆನ್‌ಲೈನ್‌ನಲ್ಲೇ ನಡೆಯುತ್ತದೆ. ಹಾಗಾಗಿ, ಪ್ರತಿಯೊಬ್ಬರು ಈ ಕೋರ್ಸ್‌ಗೆ ಸೇರಬಹುದು’ ಎಂದು ಹೇಳಿದರು. ಪ್ರಸ್ತುತ ಶೈಕ್ಷಣಿಕ ಸಾಲಿನ ಜುಲೈ ಆವೃತ್ತಿಯ ಪ್ರವೇಶಾತಿ ಪ್ರಕಟಣೆ 2023 ಜೂನ್ 30ರಿಂದ ಪ್ರಾರಂಭವಾಗಿದ್ದು, ಪ್ರವೇಶ ಪ್ರಕ್ರಿಯೆಗಳನ್ನು ಪಡೆದುಕೊಳ್ಳಲು ಆಗಸ್ಟ್ 31 ಕೊನೆಯ ದಿನವಾಗಿದೆ’ ಎಂದರು. ಲಭ್ಯವಿರುವ ಕೋರ್ಸ್‌ಗಳು, ಸೌಲಭ್ಯಗಳ ಬಗ್ಗೆ ಜನರಿಗೆ ತಿಳಿಸಲು ವಿವಿಯ ಪ್ರಚಾರ ರಥಕ್ಕೆ ಚಾಲನೆ ನೀಡಲಾಗಿದ್ದು, ರಾಜ್ಯದಾದ್ಯಂತ ಸಂಚರಿಸಲಿದೆ ಎಂದರು.

‘ದ್ವಿ-ಪದವಿಗೆ ಅವಕಾಶ’

‘ಯುಜಿಸಿ ನಿಯಮಾವಳಿಗಳ ಪ್ರಕಾರ ಪೂರ್ಣಾವಧಿಯಲ್ಲಿ (ಭೌತಿಕ ಶಿಕ್ಷಣ) ಒಂದು ಕೋರ್ಸ್ ಮತ್ತು ದೂರ ಶಿಕ್ಷಣದಲ್ಲಿ (ಮುಕ್ತ ವಿಶ್ವವಿದ್ಯಾಲಯದಲ್ಲಿ) ಏಕಕಾಲದಲ್ಲಿಯೇ ದ್ವಿ-ಪದವಿ ಪಡೆಯಲು ಅವಕಾಶ ನೀಡಲಾಗುತ್ತಿದೆ’ ಎಂದು ಶರಣಪ್ಪ ವಿ. ಹಲಸೆ ತಿಳಿಸಿದರು.

‘ಪದವಿ ಕಾಲೇಜು, ವಿವಿಗಳಿಗೆ ಸೇರಿ ಒಂದು ವರ್ಷ ತರಗತಿಗಳಿಗೆ ಹಾಜರಾಗಿ, ಮುಂದಿನ ವರ್ಷ ಹೋಗಲು ಸಾಧ್ಯವಾಗದಿದ್ದವರಿಗೆ, ಎರಡನೇ ವರ್ಷ ಮುಕ್ತ ವಿವಿಗೆ ಅದೇ ಕೋರ್ಸ್‌ಗೆ ಸೇರುವುದಕ್ಕೆ ಅವಕಾಶ ಇದೆ’ ಎಂದು ತಿಳಿಸಿದರು.

ಸಾಹಿತ್ಯ ಕೇಂದ್ರಿತ ಆತ್ಮಕಥನ ‘ನೆನಪಿನ ಒರತೆ’ ಪುಸ್ತಕ ಬಿಡುಗಡೆ

ಎಚ್‌ಎಸ್‌ವಿಗೆ ಗೀತ ಗೌರವ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕವಿ ಎಚ್.ಎಸ್. ವೆಂಕಟೇಶಮೂರ್ತಿ ಅವರು ಕನ್ನಡ ಸಾಹಿತ್ಯ, ಸುಗಮ ಸಂಗೀತ, ರಂಗಭೂಮಿ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿದ ಕೊಡುಗೆಗಳನ್ನ ಅವರ ಒಡನಾಡಿಗಳು ಸ್ಮರಿಸಿಕೊಂಡರೆ, ಸುಗಮ ಸಂಗೀತ ಕ್ಷೇತ್ರದ ಪ್ರಮುಖರು ಅವರ ಗೀತೆಗಳನ್ನು ಹಾಡುವ ಮೂಲಕ ಗೀತ ಗೌರವ ಸಲ್ಲಿಸಿದರು.

ವೆಂಕಟೇಶಮೂರ್ತಿ ಅವರ 80ನೇ ವರ್ಷದ ಜನ್ಮದಿನದ ಪ್ರಯುಕ್ತ ಕರ್ನಾಟಕ ಸುಗಮ ಸಂಗೀತ ಪರಿಷತ್ತು ನಗರದಲ್ಲಿ ಬುಧವಾರ ಹಮ್ಮಿಕೊಂಡ ‘ಭಾವ ರಂಗ ಚಿತ್ರ ಧಾರಾ’ ಕಾರ್ಯಕ್ರಮದಲ್ಲಿ ಅಂಕಿತ ಪುಸ್ತಕ ಹೊರತಂದ ‘ನೆನಪಿನ ಒರತೆ’ ಪುಸ್ತಕ ಬಿಡುಗಡೆ ಮಾಡಲಾಯಿತು. ಇದು ವೆಂಕಟೇಶಮೂರ್ತಿ ಅವರ ಸಾಹಿತ್ಯ ಕೇಂದ್ರಿತ ಆತ್ಮಕಥನವಾಗಿದ್ದು, ಅಂಜನಾ ಹೆಗಡೆ ನಿರೂಪಣೆ ಮಾಡಿದ್ದಾರೆ.

ಕಾರ್ಯಕ್ರಮದಲ್ಲಿ ದೊಡ್ಡರಂಗೇಗೌಡ ಅವರು ‘ನೆನಪಿನ ಒರತೆ’ ಪುಸ್ತಕವನ್ನು ಬಿಡುಗಡೆ ಮಾಡಿ ಎಚ್.ಎಸ್. ವೆಂಕಟೇಶಮೂರ್ತಿ ಅವರಿಗೆ ಶುಭಹಾರೈಸಿದರು. (ಎಡದಿಂದ) ಬಿ.ಆರ್. ಲಕ್ಷ್ಮಣರಾವ್, ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಕಾರ್ಯಾಧ್ಯಕ್ಷ ಕಿಕ್ಕೇರಿ ಕೃಷ್ಣಮೂರ್ತಿ ಹಾಗೂ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ ಇದ್ದಾರೆ ಪ್ರಜಾವಾಣಿ ಚಿತ್ರ

ಗಾಯಕರಾದ ವೈ.ಕೆ. ಮುದ್ದುಕೃಷ್ಣ, ಮುದ್ದು ಮೋಹನ್, ಕಿಕ್ಕೇರಿ ಕೃಷ್ಣಮೂರ್ತಿ, ನಗರ ಶ್ರೀನಿವಾಸ ಉಡುಪ, ಸಂಗೀತ ಕಟ್ಟಿ, ಪ್ರೇಮಲತಾ ದಿವಾಕರ್ ಸೇರಿ ಹಲವು ಗಾಯಕರು ಗೀತೆಗಳನ್ನು ಪ್ರಸ್ತುತಪಡಿಸಿ ರಂಜಿಸಿದರು. ಸಾಹಿತಿ ನರಹಳ್ಳಿ ಬಾಲಸುಬ್ರಹ್ಮಣ್ಯ ಹಾಗೂ ಕಿರುತೆರೆ ನಿರ್ದೇಶಕ ಟಿ.ಎನ್. ಸೀತಾರಾಮ್ ಅವರು ಎಚ್.ಎಸ್. ವೆಂಕಟೇಶಮೂರ್ತಿ ಅವರ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರು.

ಸರ್ವಶ್ರೇಷ್ಠ ಕವಿ:ಕವಿ ಬಿ.ಆರ್. ಲಕ್ಷ್ಮಣರಾವ್, ‘ವೆಂಕಟೇಶಮೂರ್ತಿ ನಮ್ಮ ತಲೆಮಾರಿನ ಸರ್ವಶ್ರೇಷ್ಠ ಕವಿ. ಪ್ರಖರ ಪ್ರತಿಭೆಯ ಜೊತೆಗೆ ನಿರಂತರ ಅಧ್ಯಯನ, ಪರಿಶ್ರಮ ಮತ್ತು ಸಂಕಲ್ಪ ಬಲ ಅವರನ್ನು ಈ ಎತ್ತರಕ್ಕೆ ಕೊಂಡೊಯ್ದಿವೆ. ಕನ್ನಡ ಕಾವ್ಯ ಪರಂಪರೆಯಲ್ಲಿ ಆಳವಾಗಿ ಬೇರೂರಿ, ಅದರ ಸತ್ವವನ್ನು ಹೀರಿ, ಸಮಕಾಲೀನ ಜಗತ್ತಿನಲ್ಲಿ ತನ್ನ ರೆಂಬೆಕೊಂಬೆಗಳನ್ನು ಎತ್ತರೆತ್ತರಕ್ಕೆ ಚಾಚಿ ಬೆಳೆದ ವಿಸ್ತಾರ ವಟವೃಕ್ಷ ಅವರ ಕಾವ್ಯ. ತಾವು ಎದುರಿಸಿದ ಪ್ರತಿರೋಧಗಳನ್ನು, ಸಾಹಿತ್ಯಕ ವಾಗ್ವಾದಗಳನ್ನು ಸಮಚಿತ್ತದಿಂದ ನಿಭಾಯಿಸಿದ ಅವರ ರೀತಿ ಇಂದಿನ ಮತ್ತು ಮುಂದಿನ ಎಲ್ಲ ಸಾಹಿತಿಗಳಿಗೂ ಮಾದರಿಯಾಗಬಲ್ಲವು’ ಎಂದು ಹೇಳಿದರು.

ಸಾಹಿತಿ ದೊಡ್ಡರಂಗೇಗೌಡ, ‘ವೆಂಕಟೇಶಮೂರ್ತಿ ಅವರು ಯಾವತ್ತೂ ತಮ್ಮ ಕವಿತೆಗಳನ್ನು ಬಚ್ಚಿಟ್ಟುಕೊಂಡಿಲ್ಲ. ಸಮಾಜದ ಸ್ವಾಸ್ಥ್ಯ ನಿರ್ಮಾಣ ಮಾಡಲು ಸದಾ ಎಚ್ಚರಿಂದ ಬರೆಯುತ್ತಾರೆ. ಸಾಂಸ್ಕೃತಿಕ ಪ್ರತಿನಿಧಿ ಆಗಿರುವ ಅವರು, ಸೃಜನಶೀಲ ಸಮುದಾಯದ ನಡುವೆ ಸಕ್ರಿಯವಾದ ಸಂತ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬೆಂಗಳೂರು, ತುಮಕೂರು: ಅಪಘಾತ ಹೆಚ್ಚಳ

ಪ್ರಜಾವಾಣಿ ವಾರ್ತೆ

ತುಮಕೂರು: ಬೆಂಗಳೂರು ಮತ್ತು ತುಮಕೂರಿನಲ್ಲಿ ಅಪಘಾತ ಸಂಖ್ಯೆ ಹೆಚ್ಚಾಗುತ್ತಿವೆ ಎಂದು ಸಂಚಾರ ಮತ್ತು ರಸ್ತೆ ಸುರಕ್ಷತೆ ವಿಭಾಗದ ಎಡಿಜಿಪಿ ಅಲೋಕ್‌ಕುಮಾರ್ ಹೇಳಿದ್ದಾರೆ.

ಬೆಂಗಳೂರು– ಪುಣೆ ರಾಷ್ಟ್ರೀಯ ಹೆದ್ದಾರಿ–48ಕ್ಕೆ ಬುಧವಾರ ಭೇಟಿ ನೀಡಿ, ಪರಿಶೀಲಿಸಿದ ಬಳಿಕ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಈ ಎರಡೂ ಜಿಲ್ಲೆಗಳಲ್ಲಿ ಹೆದ್ದಾರಿಗಳು ಹಾದು ಹೋಗುವ ಕಾರಣ ಸಹಜವಾಗಿ ಅಪಘಾತ ಸಂಖ್ಯೆ ಹೆಚ್ಚುತ್ತಿವೆ ಎಂದರು.

ಕಳೆದ ಒಂದು ವರ್ಷದಲ್ಲಿ ರಾಜ್ಯದಲ್ಲಿ ಒಟ್ಟು 11 ಸಾವಿರಕ್ಕೂ ಹೆಚ್ಚು ಜನರು ರಸ್ತೆ ಅಪಘಾತದಲ್ಲಿ ಜೀವ ಕಳೆದುಕೊಂ-ಡಿದ್ದಾರೆ. ಬೆಂಗಳೂರು, ತುಮಕೂರಿನಲ್ಲಿ ಕಳೆದ ವರ್ಷ ತಲಾ 762 ಜನ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ ಎಂದು ತಿಳಿಸಿದರು.

ಲೋಕೋಪಯೋಗಿ ಇಲಾಖೆ, ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು, ಪೊಲೀಸರು ಅಪಘಾತ ತಡೆಗೆ ಅಗತ್ಯ ಕ್ರಮಕೈಗೊಳ್ಳಬೇಕು. ರಾಷ್ಟ್ರೀಯ ಹೆದ್ದಾರಿ–48ರಲ್ಲಿ ಒಟ್ಟು 72 ಕ್ಯಾಮೆರಾ ಅಳವಡಿಸಲಾಗಿದೆ. 15 ದಿನಗಳಲ್ಲಿ ದಂಡ ಹಾಕಲು ಚಾಲನೆ ನೀಡಲಾಗುವುದು ಎಂದರು.

ಅಪಘಾತ ಹೆಚ್ಚಾಗಿ ನಡೆಯುವ ಸ್ಥಳಗಳಲ್ಲಿ ಮುಂದಿನ ಮೂರು ತಿಂಗಳ ಒಳಗೆ ಕೆಳ ಸೇತುವೆ ನಿರ್ಮಾಣ ಸೇರಿದಂತೆ ಅಗತ್ಯ ಸೌಲಭ್ಯ ಕಲ್ಪಿಸುವಂತೆ ಸೂಚಿಸಲಾಗಿದೆ. ನಿರ್ವಹಣೆಯಲ್ಲಿ ಲೋಪವಾದರೆ ಸಂಬಂಧಪಟ್ಟವರ ವಿರುದ್ಧ ಕ್ರಮಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ಕೇಂದ್ರ ವಲಯ ಐಜಿಪಿ ರವಿಕಾಂತೇಗೌಡ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಕೆ. ಶಹಪೂರ್‌ವಾಡ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮರಿಯಪ್ಪ ಇತರರು ಜತೆಯಲ್ಲಿದ್ದರು.

28 ಕ್ಷೇತ್ರಗಳಲ್ಲಿ ಕೆಆರ್‌ಎಸ್ ಸ್ಪರ್ಧೆ

ತುಮಕೂರು: ಮುಂದಿನ ಲೋಕಸಭಾ ಚುನಾವಣೆಗೆ ರಾಜ್ಯದ 28 ಕ್ಷೇತ್ರಗ-ಳಲ್ಲಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ (ಕೆಆರ್‌ಎಸ್) ಸ್ಪರ್ಧಿಸಲಿದೆ ಎಂದು ಕೆಆರ್‌ಎಸ್ ರಾಜ್ಯ ಕಾರ್ಯದರ್ಶಿ ಸೋಮಸುಂದರ್ ಇಲ್ಲಿ ಬುಧವಾರ ಹೇಳಿದರು.

ಪಕ್ಷ ರಚನೆಯಾಗಿ ನಾಲ್ಕು ವರ್ಷ ಕಳೆದಿದ್ದು, ಆಗಸ್ಟ್ 10ರಂದು ಬೆಂಗಳೂರಿನಲ್ಲಿ ಪಕ್ಷದ ವತಿಯಿಂದ ಬೃಹತ್ ಕಾರ್ಯಕ್ರಮ ಆಯೋಜಿಸಲಾ-ಗುವುದು ಎಂದು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ರಾಮಯ್ಯ ಸಂಸ್ಥೆ: 15 ಸಾವಿರ ಬೀಜದುಂಡೆ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳಲ್ಲಿ ಪರಿಸರ ಪ್ರೀತಿ ಮೂಡಿಸಲು, ಗಿಡಮರ ಬೆಳೆಸುವ ಹವ್ಯಾಸ ರೂಢಿಸಲು ಎಂ.ಎಸ್. ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳು 15 ಸಾವಿರ ಬೀಜದುಂಡೆ ಸಿದ್ಧಪಡಿಸಿದ್ದಾರೆ.

200 ವಿದ್ಯಾರ್ಥಿಗಳು, ಉಪನ್ಯಾಸಕರು ನೆಲಮಂಗಲ ತಾಲ್ಲೂಕು ಮಲ್ಲಾಪುರದ ಹಾಲುತೆನೆ ತೋಟದಲ್ಲಿ ಸೀತಾಫಲ, ಬೇಲ, ಬಿದಿರು, ನೇರಳೆ, ಹೊಂಗೆ ಬೀಜಗಳನ್ನು ಒಳಗೊಂಡ ಬೀಜದುಂಡೆಗಳನ್ನು ಸಿದ್ಧಪಡಿಸಿದ್ದು, ಸುತ್ತಮುತ್ತಲ ಕಾಡು ಹಾಗೂ ಬರಡು ಭೂಮಿಗಳಲ್ಲಿ ಎರಚಲಿದ್ದಾರೆ.

ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಪರಿಸರ ತಜ್ಞ ನಾಗೇಶ್ ಹೆಗಡೆ, ಪರಿಸರದ ಮೇಲೆ ಮನುಷ್ಯರ ದಬ್ಬಾಳಿಕೆಯಿಂದ ಆಗುತ್ತಿರುವ ದುಷ್ಪರಿಣಾಮ, ಪರಿಸರ ಸಂರಕ್ಷಣೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸಿದರು. ರಾಮಯ್ಯ ಸಂಸ್ಥೆಯ ನಿರ್ದೇಶಕಿ ಮಾನಸ ನಾಗಭೂಷಣ್, ಶೈಕ್ಷಣಿಕ ಮುಖ್ಯಸ್ಥೆ ಭಾನುಮತಿ, ಕಾರ್ಯಕ್ರಮ ಆಯೋಜಕಿ ಹಾಗೂ ಅರ್ಥಶಾಸ್ತ್ರ ಅಧ್ಯಾಪಕಿ ಸಂಜ್ಯೋತಿ ವಿ.ಕೆ., ‘ಹಾಲುತೆನೆ’ಯ ನರೇಂದ್ರ ಬಾಬು ಉಪಸ್ಥಿತರಿದ್ದರು.

ಬೆಂಗಳೂರಿನ ಎಂ.ಎಸ್.ರಾಮಯ್ಯ ಸಂಸ್ಥೆಯ ವಿದ್ಯಾರ್ಥಿಗಳು, ಉಪನ್ಯಾಸಕರು ನೆಲಮಂಗಲ ತಾಲ್ಲೂಕು ಮಲ್ಲಾಪುರದ ಹಾಲುತೆನೆ ತೋಟದಲ್ಲಿ ಬುಧವಾರ ಬೀಜದುಂಡೆ ಸಿದ್ಧಪಡಿಸುವ ಕಾರ್ಯದಲ್ಲಿ ತೊಡಗಿದ್ದರು.

ಸಮಾಜ ಕಲ್ಯಾಣ ಇಲಾಖೆ ಆಯುಕ್ತ ರಾಕೇಶ್ ಕುಮಾರ್ ಸಲಹೆ

ವಸತಿ ಶಾಲೆಗೆ ಸಫಾಯಿ ಕರ್ಮಚಾರಿ ಮಕ್ಕಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಫಾಯಿ ಕರ್ಮಚಾರಿ ಕುಟುಂಬದ ಮಕ್ಕಳಿಗೆ ಉತ್ತಮ ಕಲಿಕೆಯ ವಾತಾವರಣ ಕಲ್ಪಿಸಲು ಸರ್ಕಾರದ ವಸತಿ ಶಾಲೆಗಳಿಗೆ ಕಡ್ಡಾಯವಾಗಿ ಸೇರಿಸಬೇಕು ಎಂದು ಸಮಾಜಕಲ್ಯಾಣ ಇಲಾಖೆ ಆಯುಕ್ತ ರಾಕೇಶ್ ಕುಮಾರ್ ಹೇಳಿದರು.

ಸಮಾಜ ಕಲ್ಯಾಣ ಇಲಾಖೆ, ತಳ ಸಮುದಾಯಗಳ ಅಧ್ಯಯನ ಕೇಂದ್ರ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ‘ಗುರುತಿಸಿದ ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆಗಳ ಬಲವರ್ಧನೆ’ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಫಾಯಿ ಕರ್ಮಚಾರಿ ಕುಟುಂಬದ ಮಕ್ಕಳ ಶಿಕ್ಷಣಕ್ಕೆ ಸಾಕಷ್ಟು ಆದ್ಯತೆ ನೀಡಿವೆ. ಸಮಾಜ ಕಲ್ಯಾಣ ಇಲಾಖೆಯ ವಸತಿ ಶಾಲೆಗಳಲ್ಲಿ ಶೇ 5ರಷ್ಟು ಸೀಟುಗಳನ್ನು ಅವರಿಗಾಗಿಯೇ ಮೀಸಲಿಡಲಾಗಿದೆ. ಪರೀಕ್ಷೆ ಸಹ ನಡೆಸದೆ 6ನೇ ತರಗತಿಗೆ ಪ್ರವೇಶ ನೀಡಲಾಗುತ್ತಿದೆ. 5ನೇ ತರಗತಿಯಲ್ಲಿ ಶೇ 60ರಷ್ಟು ಅಂಕಪಡೆದ ವಿದ್ಯಾರ್ಥಿ-ಗಳಿಗೆ ಪ್ರತಿಷ್ಠಿತ ಶಾಲೆಗಳಲ್ಲೂ ಪ್ರವೇಶಕ್ಕೆ ಅವಕಾಶವಿದೆ. ಅಲ್ಲದೇ, ಖಾಸಗಿ ಶಾಲೆಗಳ ಸಂಪೂರ್ಣ ಶುಲ್ಕವನ್ನು ಸರ್ಕಾರವೇ ಭರಿಸುತ್ತದೆ ಎಂದರು.

ಬೆಂಗಳೂರಿನಲ್ಲಿ ಬುಧವಾರ ಆಯೋಜಿಸಿದ ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆಗಳ ಬಲವರ್ಧನ ಕಾರ್ಯಾಗಾರದಲ್ಲಿ ಸಮಾಜ ಶಾಸ್ತ್ರದಲ್ಲಿ ಚಿನ್ನದ ಪಾದಕಗಳಿಸಿದ ರಾಶಿ ಅವರನ್ನು ಸನ್ಮಾನಿಸಲಾಯಿತು. ಇ. ವೆಂಕಟಯ್ಯ, ಸುಜಾತಾ, ಕೆ.ರಮಾ, ಚಂದ್ರಕಲಾ, ಕೆ.ರಾಕೇಶ್ ಕುಮಾರ್ ಇದ್ದರು —ಪ್ರಜಾವಾಣಿ ಚಿತ್ರ

ವೃತ್ತಿ ತೊರೆಯುವ ಸಫಾಯಿ ಕರ್ಮ-ಚಾರಿಗಳಿಗೆ ಬದುಕು ಕಟ್ಟಿಕೊಳ್ಳಲು ಸಾಕಷ್ಟು ಯೋಜನೆಗಳನ್ನು ರೂಪಿಸಲಾಗಿದೆ. ಕೃಷಿ, ಹೈನುಗಾರಿಕೆ ಸೇರಿದಂತೆ ಬದುಕಿಗೆ ಅಗತ್ಯವಾದ ಉದ್ಯೋಗ ಆಯ್ದುಕೊಳ್ಳಬಹು-ದು. ಬೇರೆ ವೃತ್ತಿ ನಡೆಸಲು ಧನ ಸಹಾಯ ದೊರೆಯಲಿದೆ. ಪುನರ್‌ವಸತಿ ಕಲ್ಪಿಸಿದ ಸ್ಥಳದಲ್ಲಿ ಹೊಸಬದುಕು ರೂಪಿಸಿಕೊಳ್ಳಬೇಕು. ವೃತ್ತಿಯಲ್ಲೇ ಉಳಿಯಲು ಇಚ್ಛಿಸುವವರು ಆಧುನಿಕ ತಂತ್ರಜ್ಞಾನ, ಯಂತ್ರಗಳ ಉಪಯೋಗ ಪಡೆಯಬೇಕು ಎಂದು ಸಲಹೆ ನೀಡಿದರು.

ರಾಷ್ಟ್ರೀಯ ಕಾನೂನು ಶಾಲೆ ನೀತಿ ಅಧ್ಯಯನ ಕೇಂದ್ರದ ಸೋನಿ ಪಿಲ್ಲಿಸರಿ, ಸಫಾಯಿ ಕರ್ಮಚಾರಿಗಳು ಕಾಯ್ದೆ, ಪುನರ್‌ವಸತಿ ಮತ್ತು ಹೊಸ ತಂತ್ರಜ್ಞಾನದ ಬಗ್ಗೆ ತಿಳಿದುಕೊಳ್ಳಬೇಕು. ಸ್ವಚ್ಛತೆಗಾಗಿ ಮ್ಯಾನ್‌ಹೋಲ್‌ಗ-ಳಲ್ಲಿ ಇಳಿಯುವುದನ್ನು ಸಂಪೂರ್ಣ ನಿಷೇಧಿಸಲಾಗಿದೆ. ಅದಕ್ಕೆ ಅವಕಾಶ ನೀಡುವವರ ವಿರುದ್ಧ ಕಠಿಣ ಕ್ರಮ ಜರುಗಿಸಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಿದೆ ಎಂದರು. ರಾಷ್ಟ್ರೀಯ ಕಾನೂನು ಶಾಲೆಯ ಕಾರ್ಮಿಕ ಅಧ್ಯಯನ ಕೇಂದ್ರದ ನಿರ್ದೇಶಕ ಬಾಬು ಮ್ಯಾಥ್ಯೂ, ನಿವೃತ್ತ ಐಎಎಸ್ ಅಧಿಕಾರಿ ಇ. ವೆಂಕಟಯ್ಯ, ಸಫಾಯಿ ಕರ್ಮಚಾರಿ ಆಯೋಗದ ಕಾರ್ಯದರ್ಶಿ ಚಂದ್ರಕಲಾ, ಅಧಿಕಾರಿ ಗಳಾದ ಸುಜಾತಾ, ರಮಾ, ಉಪಸ್ಥಿತರಿದ್ದರು.

ಬೇಡಿಕೆ ಈಡೇರಿಕೆಗೆ ಆಗ್ರಹ

ಸಫಾಯಿ ಕರ್ಮಚಾರಿ ಕುಟುಂಬದ ಮಕ್ಕಳಿಗೆ ಸರ್ಕಾರಿ ಉದ್ಯೋಗ ನೀಡಬೇಕು. ಪ್ರತಿ ಮನೆ ನಿರ್ಮಾಣಕ್ಕೆ ₹ 10 ಲಕ್ಷ ನೆರವು ಒದಗಿಸಬೇಕು ಎಂದು ಆಗ್ರಹಿಸಿ ಸಫಾಯಿ ಕರ್ಮಚಾರಿ ಆಂದೋಲನದ ಸದಸ್ಯರು ಕಾರ್ಯಾಗಾರ ನಡೆಯುತ್ತಿದ್ದ ವಸಂತ ನಗರದ ಮೌಲಾನ ಅಬ್ದುಲ್ ಕಲಾಂ ಆಜಾದ್ ಭವನದ ಮುಂದೆ ಪ್ರತಿಭಟನೆ ನಡೆಸಿದರು.

ವೃತ್ತಿಯಲ್ಲಿ ತೊಡಗಿಸಿಕೊಂಡ-ವರಿಗೆ ಗುರುತಿನ ಚೀಟಿ, ಯಂತ್ರಗಳ ಖರೀದಿಗೆ ಶೇ 100ರಷ್ಟು ಆರ್ಥಿಕ ನೆರವು ನೀಡಬೇಕು. ಖಾಸಗಿ ಆಸ್ಪತ್ರೆಗಳಲ್ಲೂ ಉಚಿತ ಆರೋಗ್ಯ ಚಿಕಿತ್ಸೆಗೆ ವ್ಯವಸ್ಥೆ ಮಾಡಬೇಕು ಎಂದು ಆಂದೋಲನದ ಮುಖಂಡರಾದ ಡಿ.ಬಾಬುಲಾಲ್, ಜಿ.ಎನ್. ನಾಗೇಂದ್ರ ಒತ್ತಾಯಿಸಿದರು.

ಮಿದುಳು ನಿಷ್ಕ್ರಿಯಗೊಂಡವರಲ್ಲಿ ಅಂಗಾಂಗ ದಾನ ಮಾಡುವವರ ಸಂಖ್ಯೆ ಏರಿಕೆ

ಅಂಗಾಂಗಕ್ಕಾಗಿ ಕಾದಿವೆ ಜೀವಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಅಂಗಾಂಗಕ್ಕಾಗಿ ಕಾಯುತ್ತಿರುವ ಸಂಖ್ಯೆ ಹೆಚ್ಚಳವಾಗುತ್ತಿದ್ದು, ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ರಾಜ್ಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ (ಸೊಟ್ಟೊ) ಅಡಿ 7 ಸಾವಿರಕ್ಕೂ ಅಧಿಕ ಮಂದಿ ಅಂಗಾಂಗಕ್ಕಾಗಿ ಹೆಸರು ನೋಂದಾಯಿಸಿದ್ದಾರೆ.

ಆರೋಗ್ಯ ಇಲಾಖೆಯು ರಾಷ್ಟ್ರೀಯ ಅಂಗಾಂಗ ದಿನದ ಪ್ರಯುಕ್ತ ಇದೇ ಗುರುವಾರ ಇಲ್ಲಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ರಾಜ್ಯ ಮಟ್ಟದ ಕಾರ್ಯಕ್ರಮ ಹಮ್ಮಿಕೊಂಡಿದೆ. 151 ಅಂಗಾಂಗ ದಾನಿಗಳ ಕುಟುಂಬವನ್ನು ಈ ಸಂದರ್ಭದಲ್ಲಿ ಗೌರವಿಸಲಾಗುತ್ತದೆ.

ಅಂಗಾಂಗ ಹಾಗೂ ಅಂಗಾಂಶವನ್ನು ಸಂಗ್ರಹಿಸಿ, ಅಂಗಾಂಗ ವೈಫಲ್ಯ ಸಮಸ್ಯೆ ಎದುರಿಸುತ್ತಿರುವವರಿಗೆ ಕಸಿ ಮಾಡಿಸಲು ರಾಜ್ಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ ನೆರವಾಗುತ್ತಿದೆ.

ಅಂಗಾಂಗಳಿಗೆ ಕಾಯುತ್ತಿರುವವರು

ಅಂಗಾಂಗಳು	ನೋಂದಾಯಿತರು
ಮೂತ್ರಪಿಂಡಗಳು	5,288
ಯಕೃತ್ತು	1,686
ಹೃದಯ	161
ಶ್ವಾಸಕೋಶಗಳು	68
ಹೃದಯ ಮತ್ತು ಶ್ವಾಸಕೋಶಗಳು	28
ಯಕೃತ್ ಮತ್ತು ಮೂತ್ರಪಿಂಡ	45
ಮೂತ್ರಪಿಂಡ ಮತ್ತು ಮೇದೋಜೀರಕ ಗ್ರಂಥಿ	23
ಹೃದಯ ಮತ್ತು ಮೂತ್ರಪಿಂಡ	2
ಸಣ್ಣ ಕರುಳು	1

ವರ್ಷವಾರು ಅಂಗಾಂಗ ದಾನ



ಈ ಸಂಸ್ಥೆಯಡಿ ಕಳೆದ ವರ್ಷ ಗರಿಷ್ಠ ಸಂಖ್ಯೆಯಲ್ಲಿ ಅಂಗಾಂಗ ದಾನ ನಡೆದಿತ್ತು. ಮಿದುಳು ನಿಷ್ಕ್ರಿಯಗೊಂಡವರಲ್ಲಿ ಈ ವರ್ಷ ಈಗಾಗಲೇ 90ಕ್ಕೂ ಅಧಿಕ ಮಂದಿ ಅಂಗಾಂಗಗಳನ್ನು ದಾನ ಮಾಡಿದ್ದಾರೆ. ಈ ಮೊದಲು ಜೀವಸಾರ್ಥಕತೆ ಹೆಸರಿನಿಂದ ನೋಂದಾಯಿಸಲಾಗಿದ್ದ ಸೊಟ್ಟೊ, ಅಂಗಾಂಗ ದಾನಕ್ಕೆ ಉತ್ತೇಜನ ನೀಡುವುದು ಹಾಗೂ ಮೃತ ದಾನಿಗಳಿಂದ ಅಂಗಾಂಗ ಒದಗಿಸುವ ಕಾರ್ಯವನ್ನು ಮಾಡುತ್ತಿದೆ.

'ಮಾನವ ಅಂಗಾಂಗ ದಾನ ಕಸಿ ಕಾಯ್ದೆ 1994 ಅಂಗಾಂಗ ದಾನಕ್ಕೆ ಉತ್ತೇಜನ ನೀಡುತ್ತಿದೆ. ಮಿದುಳು ನಿಷ್ಕ್ರಿಯಗೊಂಡ ಯಾವುದೇ ವ್ಯಕ್ತಿ ಅಂಗಾಂಗಗಳನ್ನು ದಾನ ಮಾಡಬಹುದಾಗಿದೆ. ಇದು ಕಾನೂನು ಬದ್ಧವಾಗಿದೆ. ಮಿದುಳು ನಿಷ್ಕ್ರಿಯಗೊಂಡ ಬಳಿಕ ಕುಟುಂಬ ಸದಸ್ಯರ ಒಪ್ಪಿಗೆ ಮೇರೆಗೆ ಅಂಗಾಂಗವನ್ನು ದಾನವಾಗಿ ಪಡೆಯಲಾಗುತ್ತದೆ' ಎಂದು ಸಂಸ್ಥೆಯ ಸದಸ್ಯ ಕಾರ್ಯದರ್ಶಿ ಅವರು ತಿಳಿಸಿದ್ದಾರೆ.

70 ಆಸ್ಪತ್ರೆಗಳಲ್ಲಿ ಕಸಿ: 'ಒಬ್ಬ ದಾನಿಯು ಹೃದಯ, ಮೂತ್ರಪಿಂಡ, ಶ್ವಾಸಕೋಶ, ಯಕೃತ್ತು, ಸಣ್ಣ ಕರುಳು ಹಾಗೂ ಮೇದೋಜಿರಕ ಗ್ರಂಥಿ ದಾನದ ಮೂಲಕ 8 ಜೀವಗಳಿಗೆ, ಹೃದಯದ ಕವಾಟ, ಚರ್ಮ, ಕಣ್ಣು ಗುಡ್ಡೆ ಸೇರಿ ವಿವಿಧ ಅಂಗಾಂಶಗಳ ನೆರವಿನಿಂದ 50 ಮಂದಿಗೆ ನೆರವಾಗಬಹುದು. ಅಂಗಾಂಗ ದಾನಕ್ಕೆ ಯಾವುದೇ ವಯಸ್ಸಿನ ಮಿತಿಯಿಲ್ಲ' ಎಂದು ಹೇಳಿದ್ದಾರೆ.

'ಆರೋಗ್ಯ ಇಲಾಖೆಯಿಂದ ಮಾನ್ಯತೆ ಪಡೆದ ರಾಜ್ಯದ 70 ಆಸ್ಪತ್ರೆಗಳಲ್ಲಿ ಅಂಗಾಂಗ ಕಸಿ ಚಿಕಿತ್ಸೆ ಲಭ್ಯವಿದೆ. ಬೆಂಗಳೂರು ನಗರದಲ್ಲಿ 47, ದಕ್ಷಿಣ ಕನ್ನಡದಲ್ಲಿ 9, ಮೈಸೂರಿನಲ್ಲಿ 6, ಧಾರವಾಡದಲ್ಲಿ 4, ಕಲಬುರಗಿಯಲ್ಲಿ 2, ಬೆಳಗಾವಿ ಮತ್ತು ಉಡುಪಿಯಲ್ಲಿ ತಲಾ ಒಂದು ಆಸ್ಪತ್ರೆ ಅಂಗಾಂಗ ಕಸಿಗೆ ನೋಂದಣಿಯಾಗಿವೆ. ಅಂಗಾಂಗ ವಿಫಲರಾದವರು ಹಾಗೂ ಅಂಗಾಂಗ ದಾನ ಮಾಡಲು ಬಯಸುವವರು ದೂರವಾಣಿ ಸಂಖ್ಯೆ 080-23295636 ಅಥವಾ 9845006768ಕ್ಕೆ ಸಂಪರ್ಕಿಸಬಹುದು' ಎಂದು' ಅವರು ಮಾಹಿತಿ ನೀಡಿದ್ದಾರೆ

ಉಜಿರೆಯಲ್ಲಿ 4ರಂದು ಸಾರ್ವಜನಿಕ ಸಮಾವೇಶ

ಧರ್ಮಸ್ಥಳ: ಸುಳ್ಳು ಸುದ್ದಿ ವಿರುದ್ಧ ಚಳವಳಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಮಂಜುನಾಥ ಸ್ವಾಮಿಯ ಅಭಿಮಾನಿಗಳು ಸೇರಿ 'ಅಖಿಲ ಕರ್ನಾಟಕ ಶ್ರೀ ಮಂಜುನಾಥ ಸ್ವಾಮಿ ಭಕ್ತವೃಂದ' ಎಂಬ ಸಂಘಟನೆಯನ್ನು ರಚಿಸಿಕೊಂಡಿದ್ದಾರೆ.

ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಆರೋಪ ಮಾಡಿ, ಅವಹೇಳನಕಾರಿ ಹೇಳಿಕೆ ನೀಡುತ್ತಿರುವ ಕಾರಣ ಈ ಸಂಘಟನೆ ರಚನೆಯಾಗಿದೆ.

'ಧರ್ಮಸ್ಥಳ ಕ್ಷೇತ್ರವನ್ನು ಗುರಿಯಾಗಿಸಿ ನಡೆಸುತ್ತಿರುವ ಅಪಪ್ರಚಾರ ಜನರಲ್ಲಿ ಆಘಾತ ಮೂಡಿಸಿದ್ದು, ಸಂಘಟನೆಯ ನೇತೃತ್ವದಲ್ಲಿ ಆಗಸ್ಟ್ 4ರಂದು ಬೆಳಿಗ್ಗೆ 10 ಗಂಟೆಗೆ ಉಜಿರೆ ಜನಾರ್ದನ ಸ್ವಾಮಿ ರಥಬೀದಿಯಲ್ಲಿ ಸಾರ್ವಜನಿಕ ಸಭೆ ಹಮ್ಮಿಕೊಳ್ಳಲಾಗಿದೆ. ಜತೆಗೆ, ಸುಳ್ಳು ಸುದ್ದಿಗಳ ವಿರುದ್ಧ ಜನತಾ ಚಳವಳಿ ನಡೆಸಲು ನಿರ್ಧರಿಸಲಾಗಿದೆ' ಎಂದು ಸಂಘಟನೆಯ ಪರವಾಗಿ ಡಾ. ಎಲ್.ಎಚ್.ಮಂಜುನಾಥ್ ಅವರು ತಿಳಿಸಿದ್ದಾರೆ.

ಅಪಪ್ರಚಾರ ಬೇಡ

ಹುಬ್ಬಳ್ಳಿ: 'ಸೌಜನ್ಯ ಹತ್ಯೆ ಪ್ರಕರಣ ಮರು ತನಿಖೆಯಾಗಿ, ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು. ಅವರ ಕುಟುಂಬಕ್ಕೆ ನ್ಯಾಯ ಸಿಗಬೇಕು. ಆದರೆ, ಇದನ್ನೇ ನೆಪವಾಗಿಸಿಕೊಂಡು ಇಲ್ಲಸಲ್ಲದ ಅಪಪ್ರಚಾರ ನಡೆಸಬಾರದು' ಎಂದು ವರೂರಿನ ನವಗ್ರಹ ತೀರ್ಥಕ್ಷೇತ್ರದ ಗುಣಧರನಂದಿ ಜೈನಮುನಿ ತಿಳಿಸಿದರು.

'ಈ ಸಂಘಟನೆಯ ಪ್ರಥಮ ಸಭೆ ಉಜಿರೆಯಲ್ಲಿ ನಡೆಯಿತು. 11 ವರ್ಷಗಳ ಹಿಂದೆ ಧರ್ಮಸ್ಥಳದಲ್ಲಿ ನಡೆದ ಯುವತಿಯೊಬ್ಬರ ಹತ್ಯೆ ಪ್ರಕರಣದ ಕುರಿತು ಸಿಬಿಐ ಕೋರ್ಟ್‌ನಿಂದ ನೀಡಿರುವ ತೀರ್ಪು, ನಂತರದ ಬೆಳವಣಿಗೆಗಳ ಬಗ್ಗೆ ಚರ್ಚೆ ನಡೆಯಿತು. ಹತ್ಯೆಯಾದ ಬಾಲಕಿ ಮತ್ತು ಅವರ ಕುಟುಂಬಕ್ಕೆ ನ್ಯಾಯ ದೊರಕಿಸಬೇಕೆಂದು ಸಭೆಯಲ್ಲಿ ಒತ್ತಾಯಿಸಲಾಯಿತು. ಈ ಹತ್ಯೆ ಪ್ರಕರಣ ಮುಂದಿಟ್ಟುಕೊಂಡು, ನಂತರ ಧರ್ಮಸ್ಥಳ ಮತ್ತು ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ಆಧಾರ ರಹಿತವಾಗಿ ಅಪಪ್ರಚಾರ ಮಾಡುತ್ತಿರುವವರ ಮೇಲೆ ಕ್ರಮಕೈಗೊಳ್ಳಲು ಸರ್ಕಾರವನ್ನು ಒತ್ತಾಯಿಸಲು ನಿರ್ಧರಿಸಲಾಯಿತು' ಎಂದು ಅವರು ಹೇಳಿದ್ದಾರೆ.

ವಿಎಚ್‌ಪಿ ಎಚ್ಚರಿಕೆ (ಬೆಳ್ತಂಗಡಿ ವರದಿ) : 'ಸೌಜನ್ಯಾ ಕೊಲೆ ಪ್ರಕರಣ ಆದಷ್ಟು ಬೇಗ ಇತ್ಯರ್ಥವಾಗಿ ನೈಜ ಆರೋಪಿಗಳಿಗೆ ಶಿಕ್ಷೆಯಾಗುವಂತೆ ಜಿಲ್ಲೆಯ ಎಲ್ಲ ದೇವಸ್ಥಾನ, ಮಠ-ಮಂದಿರಗಳಲ್ಲಿ ಸಾಮೂಹಿಕ ಪ್ರಾರ್ಥನೆ ಮಾಡಬೇಕು' ಎಂದು ವಿಶ್ವ ಹಿಂದೂ ಪರಿಷತ್ ದಕ್ಷಿಣ ಕನ್ನಡ ಪ್ರಾಂತ್ಯ ಕಾರ್ಯಾಧ್ಯಕ್ಷ ಎಂ.ಬಿ.ಪುರಾಣಿಕ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಸೌಜನ್ಯಾ ಕೊಲೆ ಪ್ರಕರಣ ಹೋರಾಟದ ಹೆಸರಿನಲ್ಲಿ ಧರ್ಮಸ್ಥಳ ಕ್ಷೇತ್ರದ ಪಾವಿತ್ರ್ಯಕ್ಕೆ ಧಕ್ಕೆ ತರುವ ಹೇಳಿಕೆಗಳನ್ನು ವಿಶ್ವ ಹಿಂದೂ ಪರಿಷತ್ ವಿರೋಧಿಸುತ್ತದೆ. ಈ ಪ್ರಕರಣ ಮುಂದಿಟ್ಟುಕೊಂಡು ಕೆಲ ಬುದ್ಧಿಜೀವಿ ಸಂಘಟನೆಗಳು ಕ್ಷೇತ್ರದ ಬಗ್ಗೆ ಅಪಪ್ರಚಾರ ಮಾಡುತ್ತಿರುವುದು ಸರಿಯಲ್ಲ. ನಾವೂ ಪ್ರತಿ ಹೋರಾಟ ಮಾಡಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದರು.

ನೌಕರರಿಗೆ ಸಕಾಲಕ್ಕೆ ಸಿಗದ ವೇತನ

ಒಂದನೇ ಪುಟದಿಂದ....

ರಾಜ್ಯದಲ್ಲಿ ಹೊಸ ಸರ್ಕಾರ ಅಧಿಕಾರಕ್ಕೆ ಬಂದು ಹೊಸ ಬಜೆಟ್ ಮಂಡಿಸಿದ್ದು, ಎರಡನೇ ವೇತನಾನುದಾನವನ್ನು ಒಂದೂವರೆ ತಿಂಗಳು ವಿಳಂಬವಾಗಿ ಅಂದರೆ, ಜುಲೈ 31ರಂದು ಬಿಡುಗಡೆ ಮಾಡಿದೆ. ಇದರಿಂದ ಜೂನ್ ಹಾಗೂ ಜುಲೈ ತಿಂಗಳ ವೇತನ ಇನ್ನಷ್ಟು ವಿಳಂಬವಾಗಲಿದೆ.

ಬಗೆಹರಿಯದ ಗ್ರಾಮೀಣ ನೌಕರರ ಬವಣೆ: ಗ್ರಾಮೀಣ ಭಾಗದ ಬಹುತೇಕ ನೌಕರರಿಗೆ ಸಾಮಾನ್ಯ ಸನ್ನಿವೇಶಗಳಲ್ಲೂ ವಿಳಂಬವಾಗಿ ವೇತನವಾಗುತ್ತಿತ್ತು. ಈ ಬಾರಿ ಎಲ್ಲ ಇಲಾಖೆಗಳಲ್ಲೂ ವಿಳಂಬವಾಗಿದ್ದು, ಬಹುತೇಕ ಇಲಾಖೆಗಳ ಗ್ರಾಮೀಣ ನೌಕರರಂತೂ ಎರಡು, ಮೂರು ತಿಂಗಳು ನಿತಂತರ ವೇತನವಿಲ್ಲದೆ ಸಂಕಷ್ಟ ಅನುಭವಿಸುವಂತಾಗಿದೆ ಎಂದು ನೌಕರರು ದೂರಿದ್ದಾರೆ.

ಹಣಕಾಸು ಇಲಾಖೆ ವೇತನ ಬಿಡುಗಡೆ ಮಾಡಿದ ನಂತರ ಆಯಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಅನುಮೋದನೆ ನೀಡುತ್ತಾರೆ. ನಂತರ ನಗರ ಪ್ರದೇಶಗಳ ನೌಕರರಿಗೆ ಖಜಾನೆ-2 ವ್ಯವಸ್ಥೆ ಮೂಲಕ ವೇತನ ಪಾವತಿಯಾಗುತ್ತದೆ. ಆದರೆ, ಗ್ರಾಮೀಣ ನೌಕರರಿಗೆ ವೇತನ ಪಾವತಿ ಹಲವು ಹಂತಗಳನ್ನು ದಾಟುತ್ತದೆ. ಇಲಾಖೆಯ ಮುಖ್ಯಸ್ಥರ ಅನುಮೋದನೆಯ ನಂತರ ಜಿಲ್ಲಾ ಪಂಚಾಯತಿ, ಅಲ್ಲಿಂದ ತಾಲ್ಲೂಕು ಪಂಚಾಯಿತಿ ತಲುಪುತ್ತದೆ. ಅಲ್ಲಿ ಮತ್ತೆ ಇಲಾಖಾವಾರು ಅನುಮೋದನೆ ಪಡೆದು ವೇತನ ನೀಡಲಾಗುತ್ತದೆ.

> **ಜಿಲ್ಲಾವಾರು ವೇತನ ಬಿಡುಗಡೆ ಕುರಿತು ಚಿಂತನೆ ನಡೆದಿದೆ. ಅದಕ್ಕಾಗಿ ಖಜಾನೆ-3 ರೂಪಿಸಲಾಗುತ್ತಿದೆ. ಖಜಾನೆ-2ರಲ್ಲಿರುವ ನ್ಯೂನತೆಗಳನ್ನೂ ನಿವಾರಿಸಿಲಾಗುವುದು**
> **ಹೆಸರು ಹೇಳಲು ಇಚ್ಚಿಸದ ಅಧಿಕಾರಿ,** ಆರ್ಥಿಕ ಇಲಾಖೆ

> **ಸಮರ್ಪಕ ಅನುದಾನ ಮೀಸಲಿಡದೆ ಸರ್ಕಾರಿ ನೌಕರರಿಗೆ ಮಧ್ಯಂತರ ಪರಿಹಾರ ನೀಡಿದ ಕಾರಣ 5 ಸಾವಿರಕ್ಕೂ ಹೆಚ್ಚು ಉಪನ್ಯಾಸಕರಿಗೆ 2 ತಿಂಗಳ ವೇತನ ಸಿಕ್ಕಿಲ್ಲ**
> **ರಾಜಪ್ಪ,** ಪಿಯು ಉಪನ್ಯಾಸಕ

ಈಡೇರದ ಜಿಲ್ಲಾವಾರು ವೇತನ ಬೇಡಿಕೆ

ಖಜಾನೆ-2 ಜಾರಿಗೆ ಬಂದ ನಂತರ ನೌಕರರಿಗೆ ಹೊಸ ಸಮಸ್ಯೆ ಸೃಷ್ಟಿಯಾಗಿದೆ. ಅನುದಾನವನ್ನು ಇಲಾಖಾವಾರು ಪರಿಗಣಿಸಲಾಗುತ್ತದೆ. ಇಲಾಖೆಗೆ ನಿಗದಿಯಾದ ಅನುದಾನವನ್ನಷ್ಟೆ ಆ ಇಲಾಖೆಯ ನೌಕರರು ಪಡೆಯಬೇಕಿದೆ. ಇಲಾಖೆಯ ಯಾವ ಕಚೇರಿಯ ಸಿಬ್ಬಂದಿ ಮೊದಲು ವೇತನದ ಪಟ್ಟಿ ಸಿದ್ಧಪಡಿಸಿ, ಖಜಾನೆಗೆ ಸಲ್ಲಿಸುತ್ತಾರೋ ಅವರಿಗೆ ವೇತನವಾಗುತ್ತದೆ. ವಿಳಂಬ ಮಾಡಿದರೆ ಆ ತಿಂಗಳ ವೇತನ ಸಿಗುವುದಿಲ್ಲ. ಉದಾಹರಣೆಗೆ ಒಂದು ಕಚೇರಿಯ ಸಿಬ್ಬಂದಿ ₹ 10 ಲಕ್ಷವಿದ್ದರೆ, ಅಲ್ಲಿನ ಕೆಲ ನೌಕರರು ₹ 1 ಲಕ್ಷ ಹಿಂಬಾಕಿ ವೇತನವನ್ನು ಹೆಚ್ಚುವರಿ ಪಡೆದರೂ, ಅನುದಾನದಲ್ಲಿ ವ್ಯತ್ಯಯವಾಗುತ್ತದೆ. ಹಾಗಾಗಿ, ಅದೇ ಇಲಾಖೆಯ ಇತರೆ ಜಿಲ್ಲೆಗಳ ಉಳಿದ ಸಿಬ್ಬಂದಿಗೆ ಆ ತಿಂಗಳ ವೇತನ ದೊರೆಯುವುದಿಲ್ಲ. ಅವರು ಮುಂದಿನ ಅನುದಾನ ಬಿಡುಗಡೆವರೆಗೂ ಕಾಯಬೇಕಾಗುತ್ತದೆ.

ಮುಖ್ಯಸ್ಥರು ಬದಲಾದರೂ ವೇತನವಿಲ್ಲ

ಖಜಾನೆ-2 ಬಂದ ನಂತರ ತಂತ್ರಾಂಶ ಆಧಾರಿತ ವೇತನ ವ್ಯವಸ್ಥೆ ಜಾರಿಗೆ ಬಂದಿದೆ. ಪ್ರತಿ ಹಂತದಲ್ಲೂ ವೇತನಕ್ಕೆ ಅನುಮೋದನೆ ನೀಡುವ ವಿಭಾಗಗಳ ಮುಖ್ಯಸ್ಥರ ಫೋಟೊ, ಡಿಜಿಟಲ್ ಸಹಿ ಒಳಗೊಂಡ ವೇತನ ಕೀ ಇರುತ್ತದೆ (ಡಿಎಸ್ ಕೀ). ಅವರು ವರ್ಗಾವಣೆಗೊಂಡರೆ ಅವರ ಸ್ಥಾನಕ್ಕೆ ಬರುವವರ ಡಿಜಿಟಲ್ ಸಹಿ, ಫೋಟೊ ಕೇಂದ್ರ ಕಚೇರಿಗೆ ಕಳುಹಿಸಬೇಕು. ಅಲ್ಲಿ ದೃಢೀಕರಣಗೊಂಡ ನಂತರ ವೇತನ ಪಾವತಿಗೆ ಅನುದೋದನೆ ನೀಡಬಹುದು. ಈ ಪ್ರಕ್ರಿಯೆಗೆ ಕನಿಷ್ಠ 20ರಿಂದ 25 ದಿನಗಳು ಬೇಕಾಗುತ್ತದೆ. ಪ್ರತಿ ಬಾರಿಯೂ ವರ್ಗಾವಣೆಗಳಾದಾಗ ವೇತನ ವಿಳಂಬವಾಗುತ್ತದೆ ಎನ್ನುವುದು ನೌಕರರ ದೂರು.

ಇನ್‌ಸ್ಪೆಕ್ಟರ್ ವರ್ಗ: ಮತ್ತೆ ಕಿಡಿ

ಒಂದನೇ ಪುಟದಿಂದ...

'ಮುಖ್ಯಮಂತ್ರಿಯವರಿಗೆ ಅತ್ಯಾಪ್ತರಾಗಿರುವ ಬೆಂಗಳೂರಿನ ಸಚಿವರೊಬ್ಬರ ಕ್ಷೇತ್ರದಲ್ಲೂ ಇಂತಹ ಬೆಳವಣಿಗೆ ನಡೆದಿದೆ. ಸಚಿವರು ಹಾಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಇನ್‌ಸ್ಪೆಕ್ಟರ್ ಒಬ್ಬರನ್ನು ಅದೇ ಠಾಣೆಯಲ್ಲಿ ಮುಂದುವರಿಸುವಂತೆ ಶಿಫಾರಸು ಪತ್ರ ನೀಡಿದ್ದರು. ಆದರೆ, ಅವರನ್ನು ವರ್ಗಾವಣೆ ಮಾಡಿರುವುದು ಸಚಿವರ ಅಸಮಾಧಾನಕ್ಕೆ ಕಾರಣವಾಗಿದೆ. ಅವರು ಖುದ್ದಾಗಿ ಮುಖ್ಯಮಂತ್ರಿಯವರ ಬಳಿಯಲ್ಲೇ ಅತೃಪ್ತಿ ಹೊರಹಾಕಿದ್ದಾರೆ' ಎಂದು ಮೂಲಗಳು ಹೇಳಿವೆ.

ಅಧಿಕಾರ ಹಸ್ತಾಂತರಕ್ಕೆ ತಡೆ: ಶಾಸಕರು ಮತ್ತು ಸಚಿವರ ಅಸಮಾಧಾನ ಜೋರಾಗುತ್ತಿದ್ದಂತೆಯೇ ಮಧ್ಯ ಪ್ರವೇಶ ಮಾಡಿರುವ ಮುಖ್ಯಮಂತ್ರಿ ಹಾಗೂ ಗೃಹ ಸಚಿವರು, ಹಲವು ಪೊಲೀಸ್ ಠಾಣೆಗಳಲ್ಲಿ ಇನ್‌ಸ್ಪೆಕ್ಟರ್‌ಗಳ ಅಧಿಕಾರ ಹಸ್ತಾಂತರ ತಡೆಯುವಂತೆ ಸೂಚಿಸಿದ್ದಾರೆ. ಮುಖ್ಯಮಂತ್ರಿ ಮತ್ತು ಸಚಿವರು ದೆಹಲಿ ಪ್ರವಾಸದಲ್ಲಿದ್ದು, ಅವರು ಹಿಂದಿರುಗುವವರೆಗೂ ವರ್ಗಾವಣೆ ಪಟ್ಟಿಯಲ್ಲಿ ನಿಯುಕ್ತಿಗೊಳಿಸಿರುವ ಸ್ಥಳದಲ್ಲಿ ಅಧಿಕಾರ ವಹಿಸಿಕೊಳ್ಳದಂತೆ ಸೂಚನೆ ರವಾನಿಸಲಾಗಿದೆ. '19 ಇನ್‌ಸ್ಪೆಕ್ಟರ್‌ಗಳ ವರ್ಗಾವಣೆ ತಡೆ ಹಿಡಿದು ಆದೇಶ ನೀಡಲಾಗಿದೆ. ಉಳಿದ 50ಕ್ಕೂ ಹೆಚ್ಚು ಇನ್‌ಸ್ಪೆಕ್ಟರ್‌ಗಳಿಗೆ ವರ್ಗಾವಣೆಗೊಂಡಿರುವ ಸ್ಥಳದಲ್ಲಿ ಅಧಿಕಾರ ವಹಿಸಿಕೊಳ್ಳದಂತೆ ಡಿಸಿಪಿ ಹಾಗೂ ಎಸ್‌ಪಿಗಳ ಮೂಲಕ ಮೌಖಿಕ ಸೂಚನೆ ನೀಡಲಾಗಿದೆ' ಎಂದು ಪೊಲೀಸ್ ಇಲಾಖೆಯ ಮೂಲಗಳು ತಿಳಿಸಿವೆ.

57 ಪಿಡಿಒಗಳಿಗೆ ಆಯುಕ್ತಾಲಯವೇ ಬಿಡಾರ

ಒಂದನೇ ಪುಟದಿಂದ...

ದೂರದ ಜಿಲ್ಲೆಗಳವರೇ ಹೆಚ್ಚು: ಸ್ಥಳ ತೋರಿಸದೇ ವರ್ಗಾವಣೆಗೊಂಡಿರುವ ಪಿಡಿಒಗಳಲ್ಲಿ ಬೆಂಗಳೂರಿನಿಂದ ದೂರದ ಜಿಲ್ಲೆಗಳವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರ ತವರು ಜಿಲ್ಲೆ ಕಲಬುರಗಿ, ನೆರೆಯ ಬೀದರ್, ರಾಯಚೂರು, ಯಾದಗಿರಿ, ಬೆಳಗಾವಿ ಮತ್ತಿತರ ಜಿಲ್ಲೆಗಳ ಪಿಡಿಒಗಳು ಈ ಪಟ್ಟಿಯಲ್ಲಿದ್ದಾರೆ. 'ಪಿಡಿಒಗಳಿಗೆ ಸರಿ ಹೊಂದುವ ಯಾವ ಹುದ್ದೆಯೂ ಪಂಚಾಯತ್ ರಾಜ್ ಆಯುಕ್ತಾಲಯದಲ್ಲಿ ಇಲ್ಲ. ದೂರದ ಜಿಲ್ಲೆಗಳಿಂದ ಬಂದು ಬೆಂಗಳೂರಿನಲ್ಲಿ ಬಾಡಿಗೆ ಕೊಠಡಿಯಲ್ಲಿ ಉಳಿದುಕೊಂಡು ಹೀಗೆ ದಿನ ಕಳೆಯುವುದು ಕಷ್ಟವಾಗುತ್ತಿದೆ. ಮಹಿಳೆಯರಿಗಂತೂ ಕುಟುಂಬ, ಮಕ್ಕಳನ್ನು ಬಿಟ್ಟು ಬಂದು ಇಲ್ಲಿ ವರ್ಗಾವಣೆ ಆದೇಶಕ್ಕಾಗಿ ಕಾಯುವುದು ಅತ್ಯಂತ ಕಷ್ಟವಾಗಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಪಿಡಿಒಗಳು 'ಪ್ರಜಾವಾಣಿ' ಜತೆ ಅಳಲು ತೋಡಿಕೊಂಡರು.

700 ಹುದ್ದೆಗಳು ಖಾಲಿ: ರಾಜ್ಯದಲ್ಲಿ 6,002 ಗ್ರಾಮ ಪಂಚಾಯಿತಿಗಳಿವೆ. ಸುಮಾರು 5,300ರಷ್ಟು ಪಿಡಿಒಗಳಿದ್ದಾರೆ. 700ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. ರಾಜ್ಯದಲ್ಲಿ ಪಿಡಿಒಗಳ ಕೊರತೆ ಇರುವ ಸಂದರ್ಭದಲ್ಲಿ 60ಕ್ಕೂ ಹೆಚ್ಚು ಅಧಿಕಾರಿಗಳನ್ನು ಸ್ಥಳ ತೋರಿಸದೇ ಆಯುಕ್ತಾಲಯದಲ್ಲಿ ಇರಿಸಿಕೊಂಡಿರುವ ನಡೆಗೆ ರಾಜ್ಯ ಪಿಡಿಒಗಳ ಸಂಘ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಹೆಚ್ಚಿದ ಮಧ್ಯವರ್ತಿಗಳ ಹಾವಳಿ: ವರ್ಗಾವಣೆ ಆದೇಶದಲ್ಲಿ ಸ್ಥಳ ತೋರಿಸದೇ ಇರುವುದರಿಂದ ಪಂಚಾಯತ್ ರಾಜ್ ಆಯುಕ್ತಾಲಯದಲ್ಲಿ ಕಾಯುತ್ತಿರುವ ಪಿಡಿಒಗಳನ್ನು ಸಂಪರ್ಕಿಸಿ ವರ್ಗಾವಣೆ ಆದೇಶ ಕೊಡಿಸುವುದಾಗಿ ಕೆಲವು ಮಧ್ಯವರ್ತಿಗಳು ಆಮಿಷ ಒಡ್ಡುತ್ತಿದ್ದಾರೆ ಎಂಬ ದೂರು ಇಲಾಖೆಯಲ್ಲಿ ಸದ್ದು ಮಾಡುತ್ತಿದೆ. 'ಕೆಲವು ಇಲಾಖೆಗಳಲ್ಲಿ ವರ್ಗಾವಣೆ ಮತ್ತಿತರ ವಿಷಯಗಳನ್ನು ನಿರ್ವಹಿಸುವ 'ಸಿಂಡಿಕೇಟ್'ಗಳಿವೆ. ಅದೇ ಮಾದರಿಯಲ್ಲಿ ಪಂಚಾಯತ್ ರಾಜ್ ಇಲಾಖೆಯಲ್ಲೂ ಪ್ರಯತ್ನ ನಡೆಯುತ್ತಿದೆ. ಕೆಲವು ಮಧ್ಯವರ್ತಿಗಳು ವರ್ಗಾವಣೆ ಆದೇಶಕ್ಕೆ ಕಾಯುತ್ತಿರುವ ಪಿಡಿಒಗಳನ್ನು ಸಂಪರ್ಕಿಸಿ ಇಲಾಖೆಯ ಆಯಕಟ್ಟಿನ ಸ್ಥಾನಗಳಲ್ಲಿರುವ ನಿರ್ದಿಷ್ಟ ಅಧಿಕಾರಿಗಳನ್ನು ಭೇಟಿಮಾಡಿ ಮಾತುಕತೆ ನಡೆಸುವಂತೆ ಒತ್ತಡ ಹೇರುತ್ತಿದ್ದಾರೆ' ಎಂದು ಪಿಡಿಒಗಳು ದೂರುತ್ತಾರೆ.

ಭ್ರಷ್ಟಾಚಾರ ಸಹಿಸಲ್ಲ: ರಾಹುಲ್ ಗಾಂಧಿ

ಒಂದನೇ ಪುಟದಿಂದ...

ಈ ವೇಳೆ ಮಧ್ಯಪ್ರವೇಶಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಇವೆಲ್ಲ ಆಧಾರರಹಿತ ಆರೋಪಗಳು. ಶಾಸಕಾಂಗ ಪಕ್ಷದ ಸಭೆ ಕರೆದು ಶಾಸಕರ ಅಹವಾಲು ಆಲಿಸಲಾಗಿದೆ' ಎಂದು ಸ್ಪಷ್ಟಪಡಿಸಿದರು. 'ನಮ್ಮ ಸರ್ಕಾರದ ಬಗ್ಗೆ ಸಣ್ಣ ಕಳಂಕವೂ ಇರಬಾರದು. ಯಾರೂ ಇಂತಹ ಚಟುವಟಿಕೆಗಳಲ್ಲಿ ಭಾಗಿಯಾಗಬಾರದು' ಎಂದು ರಾಹುಲ್ ಸೂಚಿಸಿದರು ಎಂದು ಮೂಲಗಳು ಹೇಳಿವೆ.

ಹಿರಿಯ ನಾಯಕರ ಸಭೆಯಲ್ಲಿ ಮಾತನಾಡಿದ ರಾಹುಲ್ ಗಾಂಧಿ, 'ನಮ್ಮ ಸರ್ಕಾರದ ಬಗ್ಗೆ ಜನರು ಸಾಕಷ್ಟು ನಿರೀಕ್ಷೆಗಳನ್ನು ಇರಿಸಿಕೊಂಡಿದ್ದಾರೆ. ನಾವು ಮೊದಲಿನಿಂದಲೂ ಬಡ ಜನರಿಗಾಗಿ ಕಾರ್ಯಕ್ರಮಗಳನ್ನು ನೀಡಿದವರು. ಈ ಸಲದ ಚುನಾವಣೆಯಲ್ಲಿ ದಲಿತರು, ಹಿಂದುಳಿದವರು ಹಾಗೂ ಮುಸ್ಲಿಮರ ಜತೆಗೆ ಮಹಿಳೆಯರೂ ನಮ್ಮ ಕೈ ಹಿಡಿದಿದ್ದಾರೆ. ಅವರ ವಿಶ್ವಾಸಕ್ಕೆ ಭಂಗ ಬಾರದಂತೆ ನೋಡಿಕೊಳ್ಳಬೇಕು' ಎಂದು ಕಿವಿಮಾತು ಹೇಳಿದರು.

'ಸರ್ಕಾರ ರಚನೆಯಾಗಿ ಎರಡು ತಿಂಗಳಲ್ಲೇ ಗ್ಯಾರಂಟಿ ಯೋಜನೆಗಳು ಜಾರಿ ಆಗಿದೆ. ಈ ಯೋಜನೆಗಳ ಲಾಭ ಕರ್ನಾಟಕದ ಮಧ್ಯಮ ವರ್ಗ ಮತ್ತು ಬಡವರಿಗೆ ತಲುಪುತ್ತಿದೆ. ಈ ಗ್ಯಾರಂಟಿಗಳು ಪ್ರತಿಯೊಬ್ಬ ಫಲಾನುಭವಿಗೂ ಕಡ್ಡಾಯವಾಗಿ ತಲುಪುವಂತೆ ಸರ್ಕಾರಿ ಯಂತ್ರಾಂಗಗಳನ್ನು ಪರಿಣಾಮಕಾರಿಯಾಗಿ ಬಳಸಬೇಕು' ಎಂದು ಸೂಚಿಸಿದರು.

'ಕೋಮುವಾದ, ರಾಷ್ಟ್ರೀಯತೆ ಹಾಗೂ ಪ್ರಧಾನಿ ನರೇಂದ್ರ ಮೋದಿ ವರ್ಚಸ್ಸನ್ನು ಬಳಸಿಕೊಂಡು ಚುನಾವಣೆಗಳಲ್ಲಿ ಗೆಲ್ಲಬಹುದು ಎಂದು ಬಿಜೆಪಿ ಭಾವಿಸಿದೆ. ರಾಜ್ಯದಲ್ಲಿ ಬಡಜನರ ಪರವಾಗಿ ಹೋರಾಟ ಮಾಡಿ ಹಾಗೂ ಯೋಜನೆಗಳನ್ನು ಅದಕ್ಕೆ ತಕ್ಕ ತಿರುಗೇಟನ್ನು ನೀಡಿದ್ದೇವೆ. ಈ ಗ್ಯಾರಂಟಿ ಯೋಜನೆಗಳ ಯಶಸ್ಸು ಲೋಕಸಭಾ ಚುನಾವಣೆಗೆ ಭದ್ರ ಬುನಾದಿ ಆಗಬೇಕು ಎಂದೂ ರಾಹುಲ್ ಹೇಳಿದರು. ರಾಜ್ಯದಲ್ಲಿ 20ರಿಂದ 22 ಕ್ಷೇತ್ರಗಳಲ್ಲಿ ಗೆಲ್ಲಲು ಅವಕಾಶಗಳಿವೆ. ವಿಧಾನಸಭಾ ಚುನಾವಣಾ ಮಾದರಿಯಲ್ಲೇ ಒಗ್ಗಟ್ಟಿನಿಂದ ಮುಂದುವರಿದರೆ ಈ ಗುರಿ ಅಸಾಧ್ಯವಲ್ಲ' ಎಂದೂ ಅವರು ಹೇಳಿದರು. 'ಲೋಕಸಭಾ ಚುನಾವಣೆಯಲ್ಲಿ ಕನಿಷ್ಠ 15ರಿಂದ 20 ಸ್ಥಾನಗಳನ್ನು ಗೆದ್ದು ತೋರಿಸುತ್ತೇವೆ' ಎಂದು ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಭರವಸೆ ನೀಡಿದರು ಎಂದು ಮೂಲಗಳು ಹೇಳಿವೆ.

'ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಶೇ 36ರಷ್ಟು ಮತಗಳನ್ನು ಪಡೆದಿತ್ತು. ಈ ಸಲವೂ ಅಷ್ಟೇ ಮತಗಳನ್ನು ಪಡೆದಿದೆ. ಬಿಜೆಪಿಯ ಮತ ಬ್ಯಾಂಕ್ ಯಥಾಸ್ಥಿತಿಯಲ್ಲಿದೆ. ಆ ಮತಗಳನ್ನು ಸೆಳೆಯುವ ಕಡೆಗೆ ಹೆಚ್ಚಿನ ಗಮನ ಹರಿಸಬೇಕು. ಸಂಘಟನೆಗೆ ಇನ್ನಷ್ಟು ಚುರುಕು ಮುಟ್ಟಿಸಬೇಕು' ಎಂದೂ ಹೇಳಿದರು.

ಮಲ್ಲಿಕಾರ್ಜುನ ಖರ್ಗೆ, 'ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಎರಡು ದಶಕಗಳಿಂದ ಕಾಂಗ್ರೆಸ್ ಎರಡಂಕಿ ದಾಟಿಲ್ಲ. ಈ ಸಲ ಗರಿಷ್ಠ ಸ್ಥಾನಗಳನ್ನು ಗೆಲ್ಲಲು ಸುವರ್ಣಾವಕಾಶ ಇದೆ. ನಮ್ಮದೇ ಸರ್ಕಾರ ಇದೆ ಎಂದು ಮೈಮರೆಯದೆ ಕಾರ್ಯತಂತ್ರ ರೂಪಿಸಬೇಕು' ಎಂದು ತಾಕೀತು ಮಾಡಿದರು.

ಭೂಸುಧಾರಣಾ ಕಾಯ್ದೆಗೆ ಬಿಜೆಪಿ ಸರ್ಕಾರ ತಿದ್ದುಪಡಿ ತಂದಿತ್ತು. ಇದರಿಂದಾಗಿ, ಪ್ರಭಾವಿಗಳಿಗೆ ಅನುಕೂಲವಾಗಿತ್ತು. ಈ ಕಾಯ್ದೆಯನ್ನು ರದ್ದುಗೊಳಿಸುವುದಾಗಿ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ತಿಳಿಸಿತ್ತು. ಕಾಯ್ದೆ ತಿದ್ದುಪಡಿಗೆ ನಮ್ಮ ಸರ್ಕಾರ ಮೀನಮೇಷ ಎಣಿಸುತ್ತಿರುವುದು ಸರಿಯಲ್ಲ ಎಂದು ಕೆಲವು ಮುಖಂಡರು ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು ಎಂದು ಗೊತ್ತಾಗಿದೆ.

ಸಭೆಯಲ್ಲಿ ಮಾತನಾಡಿದ ಜಗದೀಶ ಶೆಟ್ಟರ್ ಹಾಗೂ ಲಕ್ಷ್ಮಣ ಸವದಿ, 'ರಾಜ್ಯದಲ್ಲಿ ಬಿಜೆಪಿ ನಾಯಕತ್ವ ಇಲ್ಲದ ಪಕ್ಷ ಆಗಿದೆ. ವಿರೋಧ ಪಕ್ಷದ ನಾಯಕರನ್ನು ನೇಮಿಸಲು ಆ ಪಕ್ಷಕ್ಕೆ ಸಾಧ್ಯವಾಗಿಲ್ಲ. ಈ ಅವಕಾಶವನ್ನು ಕಾಂಗ್ರೆಸ್ ಸದುಪಯೋಗಪಡಿಸಿಕೊಳ್ಳಬೇಕು. ಬಿಜೆಪಿ ವಿರುದ್ಧ ಮತ್ತಷ್ಟು ಆಕ್ರಮಣಕಾರಿಯಾಗಿ ಮುಂದುವರಿಯಬೇಕು. ಈ ಸಲ 20ಕ್ಕಿಂತ ಹೆಚ್ಚು ಸ್ಥಾನಗಳನ್ನು ಗೆಲ್ಲಲು ಪೂರಕ ವಾತಾವರಣ ಇದೆ' ಎಂದು ಹೇಳಿದರು ಎಂದು ಮೂಲಗಳು ತಿಳಿಸಿವೆ.

ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ ಅವರು , ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಮಾಡಿಕೊಳ್ಳುವ ಬಗ್ಗೆ ಚರ್ಚೆಗಳು ನಡೆದಿವೆ. ಮೈತ್ರಿ ಮಾಡಿಕೊಂಡರೆ ನಮ್ಮ ಕಾರ್ಯತಂತ್ರ ವಿಭಿನ್ನವಾಗಿರಬೇಕು ಎಂದೂ ಹೇಳಿದರು ಎಂದು ಗೊತ್ತಾಗಿದೆ.

ಹಿರಿಯ ನಾಯಕರ ಸಭೆಯಲ್ಲಿ 37 ಮುಖಂಡರು ಭಾಗಿಯಾಗಿದ್ದರು. ಬಳಿಕ ಖರ್ಗೆ ಹಾಗೂ ರಾಹುಲ್ ಅವರು ಸಚಿವರ ಜತೆಗೆ ಪ್ರತ್ಯೇಕ ಸಭೆ ನಡೆಸಿದರು. ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಎರಡು ತಿಂಗಳ ಇಲಾಖಾ ಪ್ರಗತಿ ವರದಿಯನ್ನು ಹೈಕಮಾಂಡ್‌ಗೆ ಸಲ್ಲಿಸಿದರು.

'ಸರ್ಕಾರದ ಬಗ್ಗೆ ಜನರಿಗೆ ಭಾರಿ ನಿರೀಕ್ಷೆಗಳು ಇವೆ. ಪ್ರತಿ ಸಚಿವರು ಒಂದು ಲೋಕಸಭಾ ಕ್ಷೇತ್ರದ ಹೊಣೆಯನ್ನು ವಹಿಸಿಕೊಳ್ಳಬೇಕು. 20 ಕ್ಷೇತ್ರಗಳಲ್ಲಿ ಗೆಲ್ಲಲೇಬೇಕು. ಲೋಕಸಭಾ ಚುನಾವಣೆಯ ಬಳಿಕ ಸಚಿವರ ಸಾಧನೆಯ ಪರಾಮರ್ಶೆ ನಡೆಸಲಾಗುವುದು' ಎಂದು ವರಿಷ್ಠರು ಹೇಳಿದರು ಎಂದು ಮೂಲಗಳು ಹೇಳಿವೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ದೆಹಲಿಯಲ್ಲಿ ನಡೆದ ಕರ್ನಾಟಕ ಕಾಂಗ್ರೆಸ್‌ನ ಹಿರಿಯ ನಾಯಕರ ಸಭೆಯಲ್ಲಿ ರಾಹುಲ್ ಗಾಂಧಿ, ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಹಲವು ನಾಯಕರು ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

20 ಕ್ಷೇತ್ರಗಳಲ್ಲಿ ಗೆಲುವು: ಸಿದ್ದರಾಮಯ್ಯ

'ಐದು ಗ್ಯಾರಂಟಿಗಳ ಜಾರಿ ಮೂಲಕ ಕರ್ನಾಟಕ ಮಾದರಿ ಅಭಿವೃದ್ಧಿ ಲೋಕಸಭಾ ಚುನಾವಣೆಯಲ್ಲಿ ಪ್ರತಿಫಲಿಸಲಿದ್ದು ನಾವು 20-24 ಸೀಟುಗಳಲ್ಲಿ ಜಯಗಳಿಸುವ ಭರವಸೆ ವ್ಯಕ್ತವಾಗಿದೆ' ಎಂದು ಸಿದ್ದರಾಮಯ್ಯ ಅವರು ತಿಳಿಸಿದರು.

ಸಭೆಯ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಈ ಸಲ ಕಾಂಗ್ರೆಸ್ ಪರ ವಾತಾವರಣ ಇದೆ. ಅದನ್ನು ಹೈಕಮಾಂಡ್‌ಗೆ ಮನವರಿಕೆ ಮಾಡಿಕೊಟ್ಟಿದ್ದೇವೆ' ಎಂದರು.

ಜಿಲ್ಲಾ ಉಸ್ತುವಾರಿ ಸಚಿವರುಗಳಿಗೆ ಗ್ಯಾರಂಟಿಗಳ ಸಮರ್ಪಕ ಜಾರಿ ಮತ್ತು ಲೋಕಸಭಾ ಚುನಾವಣೆಯ ಹೊಣೆ ವಹಿಸಲಾಗಿದೆ. ಇದಲ್ಲದೆ ಹೆಚ್ಚುವರಿಯಾಗಿ ಕೆಲವು ಜಿಲ್ಲೆಗಳ ಜವಾಬ್ದಾರಿಯನ್ನೂ ಸಚಿವರುಗಳಿಗೆ ನೀಡುವ ಕುರಿತು ಚರ್ಚೆ ನಡೆದಿದೆ ಎಂದು ಹೇಳಿದ್ದಾರೆ.

ಮೂವರು ಸಚಿವರಿಗೆ ವೇಣುಗೋಪಾಲ್ ಎಚ್ಚರಿಕೆ

ಸಭೆಗೂ ಮುನ್ನ ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಅವರು ಮೂವರು ಸಚಿವರನ್ನು ಪ್ರತ್ಯೇಕವಾಗಿ ಕರೆಸಿಕೊಂಡು ಎಚ್ಚರಿಕೆ ನೀಡಿದರು.

'ವಿಧಾನಮಂಡಲದ ಮೊದಲ ಅಧಿವೇಶನದಲ್ಲೇ ವಿರೋಧ ಪಕ್ಷದ ನಾಯಕರು ವರ್ಗಾವಣೆಯ ಭ್ರಷ್ಟಾಚಾರದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಆ ಬಳಿಕವೂ ನಿಮ್ಮ ವರ್ತನೆಯಲ್ಲಿ ಬದಲಾವಣೆ ಆಗಿಲ್ಲ. ಈ ಸಂಬಂಧ ನಮಗೂ ದೂರುಗಳು ಬಂದಿವೆ. ನೀವು ಈ ಹಿಂದೆಯೂ ಸಚಿವರಾಗಿದ್ದವರು. ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಕೆಲಸ ಮಾಡಬೇಡಿ' ಎಂದು ಕಟುವಾಗಿ ಎಚ್ಚರಿಸಿದರು. ಒಬ್ಬರು ಸಚಿವರು ಹಳೆ ಮೈಸೂರು ಭಾಗದವರು ಹಾಗೂ ಇಬ್ಬರು ಸಚಿವರು ಉತ್ತರ ಕರ್ನಾಟಕ ಭಾಗದವರು ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ಹಿರಿಯರಿಗಿಲ್ಲ ಆಹ್ವಾನ; ಅಸಮಾಧಾನ

ಕರ್ನಾಟಕ ಸರ್ಕಾರದ ದೆಹಲಿಯ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ ಸೇರಿದಂತೆ ಹಲವು ಹಿರಿಯ ಮುಖಂಡರಿಗೆ ಸಭೆಗೆ ಆಹ್ವಾನ ನೀಡದ ಬಗ್ಗೆಯೂ ಕಾಂಗ್ರೆಸ್ ವಲಯದಲ್ಲಿ ಅಸಮಾಧಾನ ವ್ಯಕ್ತವಾಗಿದೆ.

'ಜಯಚಂದ್ರ ಅವರು 1978ರಲ್ಲೇ ಶಾಸಕರಾಗಿ ಆಯ್ಕೆಯಾಗಿದ್ದರು. ಅವರು ಅನುಭವಿ. ಜತೆಗೆ, ವಿಶೇಷ ಪ್ರತಿನಿಧಿ ಸಹ ಹೌದು. ಬಿ.ಆರ್.ಪಾಟೀಲ ಹಾಗೂ ಎಂ.ವೈ.ಪಾಟೀಲರು ಸಹ ಹಿರಿಯ ನಾಯಕರು. ಬಸವರಾಜ ರಾಯರಡ್ಡಿ ಆರು ಬಾರಿಯ ಶಾಸಕರು. ಅವರಿಗೆ ಯಾರಿಗೂ ಸಭೆಗೆ ಆಹ್ವಾನ ನೀಡಿಲ್ಲ. ಅದರ ಬದಲು ವಿನಯ ಕುಲಕರ್ಣಿ, ರಾಘವೇಂದ್ರ ಹಿಟ್ನಾಳ್ ಅವರಿಗೆ ಆಹ್ವಾನ ನೀಡಲಾಗಿತ್ತು. ಇದರ ಹಿಂದಿರುವ ಮಾನದಂಡ ಏನು' ಎಂದು ಹಿರಿಯ ಮುಖಂಡರು ಪ್ರಶ್ನಿಸಿದರು.

'ಸಚಿವರಿಗೆ ಸೂಟ್‌ಕೇಸ್ ತುಂಬಿಸುವ ಗುರಿ'

ಬೆಂಗಳೂರು: ರಾಜ್ಯದ ಪ್ರತಿಯೊಬ್ಬ ಸಚಿವರಿಗೂ 'ಸೂಟ್‌ಕೇಸ್'ಗಳನ್ನು ತಂದುಕೊಡುವಂತೆ ಗುರಿ ನಿಗದಿ ಮಾಡಲು ದೆಹಲಿಯಲ್ಲಿ ಕಾಂಗ್ರೆಸ್ ನಾಯಕರು ಸಭೆ ನಡೆಸಿದ್ದಾರೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಆರೋಪಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರ, ಮಲ್ಲಿಕಾರ್ಜುನ ಖರ್ಗೆ ಮತ್ತು ಸುರ್ಜೇವಾಲಾ ಅವರು ಕರ್ನಾಟಕದ ಎಲ್ಲ ಸಚಿವರನ್ನು ಕರೆದು ಪ್ರತಿಯೊಬ್ಬ ಸಚಿವರಿಗೂ ಸೂಟ್‌ಕೇಸ್‌ಗಳನ್ನು ತಂದುಕೊಡುವಂತೆ ಹೇಳಿರಬಹುದು ಎಂದು ವ್ಯಂಗ್ಯವಾಡಿದರು. ಕಾಂಗ್ರೆಸ್ ಅಧಿಕಾರಕ್ಕೆ ಬಂದು ಎರಡು ತಿಂಗಳು ಆಗಿದ್ದರೂ ಒಂದೇ ಒಂದು ಗಂಭೀರ ಕೆಲಸ ಮಾಡುತ್ತಿಲ್ಲ. ಅನೇಕ ಜಿಲ್ಲೆಗಳಲ್ಲಿ ಮಳೆ ಮತ್ತು ಪ್ರವಾಹದಿಂದ ಜನ ಸಂಕಷ್ಟದಲ್ಲಿದ್ದರೂ ದೆಹಲಿಯಲ್ಲಿ ಸಭೆ ಕರೆಯಲಾಗಿದೆ ಎಂದರು.

ನೇಮಕ ಬದಿಗೆ, ಕಲಹ ಬೀದಿಗೆ

ಒಂದನೇ ಪುಟದಿಂದ...

ಈ ಮಧ್ಯೆ, ಇತರ ಸದಸ್ಯರ ಪರವಾಗಿ ಅಧ್ಯಕ್ಷರಿಗೆ ಪತ್ರ ಬರೆದಿರುವ ಸದಸ್ಯರೊಬ್ಬರು, 'ಒಂದೋ ಕಡತಗಳಿಗೆ ಅನುಮೋದನೆ ನೀಡಬೇಕು ಅಥವಾ ಸಂಬಂಧಿಸಿದ ಉನ್ನತ ಅಧಿಕಾರಿಗಳನ್ನು ಸಂಪರ್ಕಿಸಿ ಈ ಸಮಸ್ಯೆಯನ್ನು ಆದಷ್ಟು ಬೇಗ ಬಗೆಹರಿಸಬೇಕು. ಈ ವಿಚಾರದಲ್ಲಿ ತೆಗೆದುಕೊಳ್ಳುವ ನಿರ್ಧಾರವು ಅಭ್ಯರ್ಥಿಗಳಲ್ಲಿ ಧೈರ್ಯ ತುಂಬುವ ಜೊತೆಗೆ, ಕೆಪಿಎಸ್‌ಸಿ ಮೇಲೆ ಸಾರ್ವಜನಿಕರಲ್ಲಿರುವ ನಂಬಿಕೆ, ವಿಶ್ವಾಸಾರ್ಹತೆಯನ್ನು ಮರುಸ್ಥಾಪಿಸಲಿದೆ' ಎಂದೂ ಹೇಳಿದ್ದಾರೆ.

'ಗ್ರಾಮೀಣ ಕುಡಿಯುವ ನೀರು ಪೂರೈಕೆ ಮತ್ತು ನೈರ್ಮಲ್ಯ ಇಲಾಖೆಯ ಕಿರಿಯ ಎಂಜಿನಿಯರ್ 136 ಹುದ್ದೆಗಳ ನೇಮಕಾತಿಯ ಕಡತಕ್ಕೆ ಅನುಮೋದನೆ ನೀಡಲು ವಿಳಂಬವಾಗುತ್ತಿದೆ. ಇದೂ ಸೇರಿದಂತೆ, ಎಲ್ಲ ಸಮಸ್ಯೆಗಳು ಒಂದೇ ಬಾರಿಗೆ ಪರಿಹಾರವಾಗಲಿ ಎಂಬ ಉದ್ದೇಶದಿಂದ ಈ ಪತ್ರ ಬರೆಯಬೇಕಾಗಿ ಬಂತು' ಎಂದೂ ಪತ್ರದಲ್ಲಿದೆ.

ಕಿರಿಯ ಎಂಜಿನಿಯರ್‌ಗಳ ನೇಮಕಾತಿಯ ಕಡತ ಏಪ್ರಿಲ್ 13ರಂದು ಸಲ್ಲಿಕೆಯಾಗಿದೆ. 8ರಿಂದ 10 ಬಾರಿ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಕಚೇರಿ ಮಧ್ಯೆ ಈ ಕಡತ ಓಡಾಡಿದೆ. ಜುಲೈ 25ರಂದು ಸ್ಪಷ್ಟೀಕರಣ ಕೇಳಿ ಕಾರ್ಯದರ್ಶಿಗೆ ಕಡತ ಹಿಂದಿರುಗಿಸಲಾಗಿದೆ. ಕಡತಗಳಿಗೆ ಅನುಮೋದನೆ ನೀಡುವ ವಿಷಯದಲ್ಲಿ ಕಾರ್ಯದರ್ಶಿ ತಪ್ಪು ನಿರ್ಧಾರ ತೆಗೆದುಕೊಂಡಿದ್ದಾರೆ ಎಂಬುದು ಆಯೋಗದ ತಕರಾರು. ಅದನ್ನು ಒಪ್ಪಲು ತಯಾರಿಲ್ಲದ ಕಾರ್ಯದರ್ಶಿ, ಆಯೋಗಕ್ಕೆ ಕಳುಹಿಸಿದ ಟಿಪ್ಪಣಿಯಲ್ಲಿ ಈ ವಿಷಯವನ್ನು ಆಯೋಗದ ವಿವೇಚನೆ ಬಿಟ್ಟಿದ್ದಾಗಿ ಹೇಳಿದ್ದಾರೆ.

'ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಮಾಹಿತಿ ಪ್ರಕಾರ ವಿವಿಧ ಹುದ್ದೆಗಳ 61 ಪಟ್ಟಿ ಅನುಮೋದನೆಗೆ ಬಾಕಿಯಿದೆ. ಅನುಮೋದನೆಗೆ ವಿಳಂಬ ಯಾಕೆ ಎನ್ನುವುದಕ್ಕೆ ಯಾವುದೇ ಕಾರಣ ನೀಡಿಲ್ಲ. ಸದ್ಯದ ಸಮಸ್ಯೆಗಳಿಗೆ ಕಾರಣಗಳು ಏನೇ ಇದ್ದರೂ, ಅಂತಿಮವಾಗಿ ಅಭ್ಯರ್ಥಿಗಳು ನರಳುತ್ತಿದ್ದಾರೆ. ಈ ಸಮಸ್ಯೆ ಬಗೆಹರಿಯಬಹುದೆಂದು ಕಾಯುತ್ತಾ ಇದ್ದೆವು. ದುರದೃಷ್ಟವೆಂದರೆ, ಇತ್ತೀಚಿನ ಬೆಳವಣಿಗೆಗಳು ಕೆಪಿಎಸ್‌ಸಿ ವರ್ಚಸ್ಸಿಗೆ ಧಕ್ಕೆ ತಂದಿದೆ. ಅಪಖ್ಯಾತಿಗೂ ಕಾರಣವಾಗುತ್ತಿದೆ' ಎಂದೂ ಸದಸ್ಯರು ಆಕ್ಷೇಪಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಲು ಕಾರ್ಯದರ್ಶಿ ನಿರಾಕರಿಸಿದರು. ಅಧ್ಯಕ್ಷರಿಗೆ ಕರೆ ಮಾಡಿದರೂ ಸ್ಪಂದಿಸಲಿಲ್ಲ.

'ಕಡತ ವಿಲೇವಾರಿ: ಕಂದಾಯ ಇಲಾಖೆಗೆ 2ನೇ ಸ್ಥಾನ'

ಬೆಂಗಳೂರು: 'ಕಂದಾಯ ಇಲಾಖೆಯಲ್ಲಿ ಬಾಕಿ ಇದ್ದ 3,900 ಕಡತಗಳನ್ನು ವಿಲೇವಾರಿ ಮಾಡಲಾಗಿದೆ. ಆ ಮೂಲಕ, ಹೆಚ್ಚಿನ ಕಾರ್ಯಕ್ಷಮತೆಯಿಂದ ಇಲಾಖೆ ಕೆಲಸ ನಿರ್ವಹಿಸುತ್ತಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ತಮ್ಮ ಇಲಾಖೆಯ ಕಾರ್ಯವೈಖರಿ ಬಗ್ಗೆ ಟ್ವೀಟ್ ಮಾಡಿರುವ ಅವರು, 'ಇಲಾಖೆಯಲ್ಲಿ ಈವರೆಗೆ ಬಾಕಿ ಉಳಿದಿದ್ದ ಕಡತಗಳನ್ನು ವಿಲೇವಾರಿ ಮಾಡಲು ಆದ್ಯತೆ ನೀಡಲಾಗಿದೆ. ಹೊಸದಾಗಿ 2,123 ಕಡತಗಳು ಬಂದಿವೆ. ಈ ಕಡತಗಳನ್ನೂ ಶೀಘ್ರದಲ್ಲಿ ವಿಲೇವಾರಿ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದಿದ್ದಾರೆ.

'ಕಡತಗಳ ವಿಲೇವಾರಿ ವಿಚಾರದಲ್ಲಿ ಕಂದಾಯ ಇಲಾಖೆ ಈವರೆಗೆ 'ಎ' ವರ್ಗದ ಕಾರ್ಯಕ್ಷಮತೆ ಪ್ರದರ್ಶಿಸಿಲ್ಲ. ಆದರೆ, ಈಗ ಕಡತ ವಿಲೇವಾರಿ ವಿಚಾರದಲ್ಲಿ 'ಎ' ವರ್ಗದ ಜೊತೆಗೆ, ಎಲ್ಲ ಇಲಾಖೆಗಳ ಪೈಕಿ ಎರಡನೇ ಸ್ಥಾನದಲ್ಲಿದೆ. ದೊಡ್ಡ ಇಲಾಖೆಗಳ ಪೈಕಿ ಮೊದಲ ಸ್ಥಾನದಲ್ಲಿದೆ' ಎಂದಿದ್ದಾರೆ.

KSIIDC

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
(ಕೆಎಸ್‌ಐಐಡಿಸಿ) (ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಖನಿಜ ಭವನ, 4ನೇ ಮಹಡಿ, ಪೂರ್ವ ಭಾಗ, ನಂ.49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-01.

ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ತಾಂತ್ರಿಕ ಸಿಬ್ಬಂದಿಯ ನೇಮಕಾತಿಗೆ (ಗುತ್ತಿಗೆ ಆಧಾರದ ಮೇಲೆ)

ಕರ್ನಾಟಕ ಸರ್ಕಾರದ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತವು(ಕೆಎಸ್‌ಐಐಡಿಸಿ), ಶಿವಮೊಗ್ಗ ವಿಮಾನ ನಿಲ್ದಾಣದ ಕಾರ್ಯಾಚರಣೆ ನಡೆಸುತ್ತಿದೆ. ನಿಗಮವು 01 ವರ್ಷದ ಅವಧಿಗೆ ಕ್ರೋಢೀಕೃತ ವೇತನದೊಂದಿಗೆ ಗುತ್ತಿಗೆ ಆಧಾರದ ಮೇಲೆ ಕೆಳಕಂಡ ಹುದ್ದೆಗಳಿಗೆ ನೇಮಕಮಾಡಲು ಪ್ರಸ್ತಾಪಿಸಲಾಗಿದೆ. ಅಭ್ಯರ್ಥಿಗಳ ಕಾರ್ಯಕ್ಷಮತೆಯ ಆಧಾರದ ಮೇಲೆ ಸಿಬ್ಬಂದಿಯನ್ನು ಒಪ್ಪಂದದ ಅವಧಿಯನ್ನು ಅವಶ್ಯಕತೆಗೆ ಅನುಗುಣವಾಗಿ ಇನ್ನೊಂದು ವರ್ಷದ ಅವಧಿಗೆ ಅಥವಾ ಅದಕ್ಕಿಂತಲೂ ಹೆಚ್ಚಿನ ಅವಧಿಗೆ ವಿಸ್ತರಿಸಬಹುದಾಗಿದೆ.

ಕ್ರ. ಸಂ.	ಹುದ್ದೆಯ ಹೆಸರು	ವಿದ್ಯಾರ್ಹತೆ ಮತ್ತು ಅನುಭವದ ವಿವರಗಳು	ಕ್ರೋಢೀಕೃತ ವೇತನ	ವಯಸ್ಸಿನ ಮಿತಿ
1	ಎಲೆಕ್ಟ್ರಿಕಲ್ ಇಂಜಿನಿಯರ್ ಹೆಡ್ (ಒಂದು ಹುದ್ದೆ)	ಅಭ್ಯರ್ಥಿಗಳು ಬಿ.ಇ(ಎಲೆಕ್ಟ್ರಿಕಲ್)/ಎಂ.ಇ./ ಎಂ.ಟೆಕ್ ಪದವಿ ಹೊಂದಿರಬೇಕು. ಬೃಹತ್ ವಿದ್ಯುತ್ ಕಾಮಗಾರಿಗಳು, ಉಪಕೇಂದ್ರ ಮತ್ತು ಪ್ರಸರಣ ನಿರ್ವಹಣೆ ಕಾಮಗಾರಿ ಕ್ಷೇತ್ರದಲ್ಲಿ 15 ವರ್ಷಗಳ ಅನುಭವ. ಕೆಪಿಟಿಸಿಎಲ್/ಬೆಸ್ಕಾಂ ಮತ್ತು ಏರ್‌ಪೋರ್ಟ್ ಕಾಮಗಾರಿಗಳಲ್ಲಿ ಅನುಭವ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.	ರೂ. 80,000/-	ಕನಿಷ್ಠ ವಯಸ್ಸಿನ ಮಿತಿ: 36 ವರ್ಷ
2	ಎಲೆಕ್ಟ್ರಿಕಲ್ ಇಂಜಿನಿಯರ್ (ಒಂದು ಹುದ್ದೆ)	ಅಭ್ಯರ್ಥಿಗಳು ಬಿ.ಇ.(ಎಲೆಕ್ಟ್ರಿಕಲ್)/ ಡಿಪ್ಲೊಮಾ (ಎಲೆಕ್ಟ್ರಿಕಲ್) ಪದವಿ ಹೊಂದಿರಬೇಕು ಉಪಕೇಂದ್ರಗಳ ನಿರ್ವಹಣೆ ಮತ್ತು ನಿರ್ಮಾಣ, ವಿದ್ಯುತ್, ಇಎಲ್‌ವಿ ಸಿಸ್ಟಮ್/ಹೆಚ್‌ವಿಎಸಿ ಸ್ಥಾಪನೆಯ ಕ್ಷೇತ್ರಗಳಲ್ಲಿ 5 ವರ್ಷಗಳ ಅನುಭವ ಹೊಂದಿರಬೇಕು.	ರೂ. 50,000/-	1. ಕನಿಷ್ಠ ವಯಸ್ಸಿನ ಮಿತಿ: 26 ವರ್ಷ 2. ಗರಿಷ್ಠ ವಯಸ್ಸಿನ ಮಿತಿ: 35 ವರ್ಷ
3	ಏರ್‌ಸೈಡ್ ಆಪರೇಷನಲ್ ಮ್ಯಾನೇಜರ್ (ಒಂದು ಹುದ್ದೆ)	ಅಭ್ಯರ್ಥಿಯು ಯಾವುದೇ ಪದವಿ ಹೊಂದಿರಬೇಕು ಏರ್‌ಪೋರ್ಟ್‌ಗಳಲ್ಲಿ ಏರ್‌ಸೈಡ್ ಆಪರೇಷನ್ ಕ್ಷೇತ್ರದಲ್ಲಿ 10 ವರ್ಷಗಳ ಅನುಭವ ಹೊಂದಿರಬೇಕು.	ರೂ. 75,000/-	ಕನಿಷ್ಠ ವಯಸ್ಸಿನ ಮಿತಿ: 31 ವರ್ಷಗಳು

(1) ಆಸಕ್ತ ಅಭ್ಯರ್ಥಿಗಳು ಹಾಗೂ ನಿವೃತ್ತ ಅಧಿಕಾರಿಗಳನ್ನು ಒಳಗೊಂಡಂತೆ ತಮ್ಮ ವಿದ್ಯಾರ್ಹತೆ ಮತ್ತು ಅನುಭವದ ವಿವರಗಳೊಂದಿಗೆ ಕೆಎಸ್‌ಐಐಡಿಸಿ, ಬೆಂಗಳೂರು ಇಲ್ಲಿ **8ನೇ ಆಗಸ್ಟ್ 2023ರಂದು ಬೆಳಿಗ್ಗೆ 9.30 ಗಂಟೆಗೆ** ನಡೆಸಲಾಗುವ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು. (2) ಇತರೆ ಭತ್ಯೆಗಳು, ಪ್ರಯಾಣ ಭತ್ಯೆ, ತುಟ್ಟಿ ಭತ್ಯೆಗಳನ್ನು ಕೆಎಸ್‌ಐಐಡಿಸಿಯ ನಿಯಮಾವಳಿಗಳ ಅನ್ವಯ ನೀಡಲಾಗುವುದು. (3) ಆಯ್ಕೆಯಾದ ಅಭ್ಯರ್ಥಿಗಳನ್ನು ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ ನೇಮಕ ಮಾಡಲಾಗುವುದು. (4) ಯಾವುದೇ ಇತರೆ ಸ್ಪಷ್ಟನೆಗಾಗಿ ದಯವಿಟ್ಟು ಸಂಪರ್ಕಿಸಿ ಮೊ.ನಂ. 98458 33566.

ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು

ಹಲಸೂರು ಕೆರೆಯಲ್ಲಿ 'ಜಲ್‌ದೋಸ್ತ್–2' ಏರ್‌ಬೋಟ್‌ನಲ್ಲಿ ಎನ್‌ಎಎಲ್ ಅಧಿಕಾರಿಗಳು ಪ್ರಾಯೋಗಿಕವಾಗಿ ಸಂಚಾರ ನಡೆಸಿದರು

ಕೆರೆ ತ್ಯಾಜ್ಯ ತೆರವಿಗೆ 'ಜಲ್‌ದೋಸ್ತ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆರೆಗಳಲ್ಲಿ ತೇಲುವ ಜಲಕಳೆ ಹಾಗೂ ತ್ಯಾಜ್ಯವನ್ನು ತೆರವು ಮಾಡಲು ಬಿಬಿಎಂಪಿ ನೀಡಿರುವ ನಿರ್ದಿಷ್ಟ ಅಂಶಗಳ ಆಧಾರದಲ್ಲಿ ಸಿಎಸ್‌ಐಆರ್–ಎನ್‌ಎಎಲ್, 'ಜಲ್‌ದೋಸ್ತ್–ಏರ್‌ಬೋಟ್ ಎಂಕೆ–2' ಉನ್ನತೀಕರಿಸಿದ ಬೋಟ್ ಅನ್ನು ತಯಾರಿಸಿದೆ.

ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನಾ ಮಂಡಳಿ (ಸಿಎಸ್‌ಐಆರ್)– ರಾಷ್ಟ್ರೀಯ ವೈಮಾಂತರೀಕ್ಷ ಪ್ರಯೋಗಾಲಯ (ಎನ್‌ಎಎಲ್) ಈ ಏರ್‌ಬೋಟ್ ಉತ್ಪಾದನೆ ಆರಂಭಿಸಿದೆ. ಬಿಬಿಎಂಪಿಯೊಂದಿಗೆ ಒಪ್ಪಂದ ಮಾಡಿಕೊಂಡು ಇವುಗಳನ್ನು ಸರಬರಾಜು ಮಾಡಲಾಗುತ್ತದೆ ಎಂದು ಎನ್‌ಎಎಲ್ ನಿರ್ದೇಶಕ ಅಭಯ್ ಪಶಿಲ್ಕರ್ ಸುದ್ದಿಗಾರರಿಗೆ ತಿಳಿಸಿದರು.

ಹಲಸೂರು ಕೆರೆಯಲ್ಲಿ ಪ್ರಾಯೋಗಿಕ ಸಂಚಾರ ನಡೆಸಲಾಗಿದ್ದು, ಬೇಡಿಕೆಗೆ ಅನುಗುಣವಾಗಿ ಉತ್ಪಾದನೆ ಮಾಡಲಾಗುತ್ತದೆ. ಶ್ರೀವಾರಿ ಎಂಜಿನಿಯರಿಂಗ್ ಸಿಸ್ಟಮ್ಸ್ ವತಿಯಿಂದ ಬಿಬಿಎಂಪಿಯ ಅಗತ್ಯಕ್ಕೆ ಅನುಗುಣವಾಗಿ ವಿತರಣೆ ಮಾಡಲಾಗುತ್ತದೆ ಎಂದರು.

'ಜಲ್‌ದೋಸ್ತ್' ಏರ್‌ಬೋಟ್ ಸ್ಟೀಲ್–ಮೆಸ್ ಹೊಂದಿದ್ದು, ಬೆಲ್ಟ್ ವ್ಯವಸ್ಥೆಯಲ್ಲಿ ತ್ಯಾಜ್ಯವನ್ನು ಸಂಗ್ರಹಿಸುತ್ತದೆ. ದಡಕ್ಕೆ ಬಂದು ಅನ್ನು ಸುರಿಯಲಾಗುತ್ತದೆ. ಮೂರು ಟನ್ ತ್ಯಾಜ್ಯವನ್ನು ಬೋಟ್‌ನಲ್ಲಿ ಸಂಗ್ರಹಿಸಬಹುದು. ಒಂದು ಎಕರೆ ಪ್ರದೇಶವನ್ನು 8 ಗಂಟೆಗಳಲ್ಲಿ ಸ್ವಚ್ಛಗೊಳಿಸುತ್ತದೆ. ಒಂದು ಗಂಟೆಗೆ ಐದು ಲೀಟರ್ ಡೀಸೆಲ್ ಅಗತ್ಯವಿದೆ' ಎಂದು ಮಾಹಿತಿ ನೀಡಿದರು.

ಮಲ್ಲೇಪುರಂ, ರವೀಂದ್ರ ಭಟ್ಟ ಸೇರಿ 16 ಮಂದಿಗೆ 'ಪರಿಮಳ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಮಳ ಗೆಳೆಯರ ಬಳಗ ನೀಡುವ 'ಪರಿಮಳ ಪ್ರಶಸ್ತಿ'ಗೆ ಬಹು ಭಾಷಾ ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಸೇರಿ 16 ಮಂದಿ ಆಯ್ಕೆಯಾಗಿದ್ದಾರೆ.

ನ್ಯಾಯಾಂಗ ಕ್ಷೇತ್ರದಿಂದ ಪಿ.ಎಸ್. ದಿನೇಶ್ ಕುಮಾರ್, ಶಿಕ್ಷಣ ಕ್ಷೇತ್ರದಿಂದ ವೂಡೇ ಪಿ. ಕೃಷ್ಣ, ಸಾಹಿತ್ಯ ಕ್ಷೇತ್ರದಿಂದ ಮಲ್ಲೇಪುರಂ ಜಿ.ವೆಂಕಟೇಶ್, ಪತ್ರಿಕೋದ್ಯಮ ಕ್ಷೇತ್ರದಿಂದ ರವೀಂದ್ರ ಭಟ್ಟ, ವೇದಾಂತ ಕ್ಷೇತ್ರದಿಂದ ಶ್ರೀಹರಿ ವಾಳ್ವೇಕರ್ ಆಚಾರ್ಯ, ದಾಸ ಸಾಹಿತ್ಯ ಸಂಶೋಧನೆಗೆ ಸುಳಾದಿ ಹನುಮೇಶಾಚಾರ್ಯ, ತಿಳಿಹಾಸ್ಯ ಹಾಗೂ ಕನ್ನಡ ಪರಿಚಾರಿಕೆಗೆ ಹಿರೇಮಗಳೂರು ಕಣ್ಣನ್ ಆಯ್ಕೆಯಾಗಿದ್ದಾರೆ.

ವಿಜ್ಞಾನ ಕ್ಷೇತ್ರದಿಂದ ವೈ.ಎಲ್. ಮಧುಸೂದನ್, ಸುಗಮ ಸಂಗೀತ ಕ್ಷೇತ್ರದಿಂದ ಪುತ್ತೂರು ನರಸಿಂಹ ನಾಯಕ್, ವೇಣುವಾದನಕ್ಕೆ ಪ್ರವೀಣ್ ಗೋಡ್ಖಿಂಡಿ, ಮೃದಂಗ ವಾದನಕ್ಕೆ ವಿ.ಕೃಷ್ಣ, ವೈದ್ಯಕೀಯ ಕ್ಷೇತ್ರಕ್ಕೆ ಡಾ.ಎಚ್.ಎನ್. ಸುಬ್ರಹ್ಮಣ್ಯ, ಡಾ.ಬಿ. ರವಿಶಂಕರ್ ಭಟ್, ಡಾ. ಗಿರಿಧರ ಕಜೆ, ಯೋಗ ಕ್ಷೇತ್ರಕ್ಕೆ ಎಚ್.ಎನ್. ಅರುಣ್ ಹಾಗೂ ಸಮಾಜ ಸೇವೆಗೆ ಶ್ರೀಪಾದರಾವ್ ದೇವನಹಳ್ಳಿ ಆಯ್ಕೆಯಾಗಿದ್ದಾರೆ.

48ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ಸಾಹಿತ್ಯ, ಶಿಕ್ಷಣ, ನ್ಯಾಯಾಂಗ, ಪತ್ರಿಕೋದ್ಯಮ ಮೊದಲಾದ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆಗೈದ ಸಾಧಕರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಇದೇ 20ರಂದು ಸಂಜೆ 5.45ಕ್ಕೆ ಇಲ್ಲಿನ ಕೆ.ಆರ್. ರಸ್ತೆಯಲ್ಲಿರುವ ಗಾಯನ ಸಮಾಜದ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಬಳಗ ತಿಳಿಸಿದೆ.

ಈ ವೇಳೆ ದಾಸ ಸಾಹಿತ್ಯ ಸಂಶೋಧಕ, ಲೇಖಕ ಎಸ್. ಜಯಸಿಂಹ ಅವರು ರಚಿಸಿರುವ 'ಶ್ರೀಸುಮತೀಂದ್ರ ದರ್ಶನ' ಎಂಬ ಸಂಶೋಧನಾತ್ಮಕ ಕೃತಿಯನ್ನು ಸುವಿದ್ಯೇಂದ್ರತೀರ್ಥ ಸ್ವಾಮೀಜಿ ಬಿಡುಗಡೆ ಮಾಡುತ್ತಾರೆ. ಶ್ರೀಪಾದರಾಜ ಮಠಾಧೀಶ ಸುಜಯನಿಧಿತೀರ್ಥ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸುತ್ತಾರೆ. ಪುತ್ತೂರು ನರಸಿಂಹ ನಾಯಕ್ ಮತ್ತು ವೃಂದದವರಿಂದ 'ಹರಿದಾಸ ವಾಣಿ' ಕಾರ್ಯಕ್ರಮವೂ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ಹೇಳಿದೆ.

ಆರ್‌ವಿ ವಿವಿ ಘಟಿಕೋತ್ಸವ

ಬೆಂಗಳೂರು ಆರ್‌ವಿ. ವಿಶ್ವವಿದ್ಯಾನಿಲಯದಲ್ಲಿ ಘಟಿಕೋತ್ಸವದಲ್ಲಿ ಎಂಟು ವಿದ್ಯಾರ್ಥಿಗಳಿಗೆ ಮಾಸ್ಟರ್ ಆಫ್ ಡಿಸೈನ್ ಪದವಿ ಪ್ರದಾನ ಮಾಡಲಾಯಿತು.

ಬೆಂಗಳೂರು: ಆರ್.ವಿ. ವಿಶ್ವವಿದ್ಯಾನಿಲಯದಲ್ಲಿ ಘಟಿಕೋತ್ಸವದಲ್ಲಿ ಎಂಟು ವಿದ್ಯಾರ್ಥಿಗಳಿಗೆ ಅವರ ಅತ್ಯುತ್ತಮ ಶೈಕ್ಷಣಿಕ ಸಾಧನೆಗಳನ್ನು ಗುರುತಿಸಿ ಮಾಸ್ಟರ್ ಆಫ್ ಡಿಸೈನ್ ಪದವಿ ಪ್ರದಾನ ಮಾಡಲಾಯಿತು.

ದೇಶದ ಪ್ರಥಮ ದೃಶ್ಯ ಶಾಸ್ತ್ರಜ್ಞ ರಾಜೀವ್ ಸೇಥಿ ಮಾತನಾಡಿ, 'ಪಾರ್ಶ್ವ ಕಲಿಕೆ ಮತ್ತು ದೃಷ್ಟಿ ಸಂವೇದನೆಗಳನ್ನು ಹೆಚ್ಚಿಸುವ ಮಂಥನದ ಅಗತ್ಯವಿದೆ. ಸಾಂಸ್ಕೃತಿಕವಾಗಿ ಚುರುಕಾದ ಮತ್ತು ಜವಾಬ್ದಾರಿಯುತ ಉದ್ಯಮಶೀಲವನ್ನು ಹುಟ್ಟುಹಾಕಬೇಕು. ಆವಿಷ್ಕಾರದ ಮನಸ್ಥಿತಿಯ ವರ್ತಮಾನದಿಂದ ಮಾತ್ರ ಭಾರತದ ಭವಿಷ್ಯವನ್ನು ಬದಲಿಸಬಹುದು' ಎಂದು ತಿಳಿಸಿದರು.

ಆರ್.ವಿ. ವಿಶ್ವವಿದ್ಯಾಲಯದ ಕುಲಾಧಿಪತಿ ಎ.ವಿ.ಎಸ್. ಮೂರ್ತಿ, ಸಂಸ್ಥಾಪಕ ಕುಲಪತಿ ವೈ.ಎಸ್.ಆರ್. ಮೂರ್ತಿ ಮಾತನಾಡಿದರು. ಜಾಹ್ನವಿ ಎನ್.ಪಿ. ಅವರಿಗೆ ಅತ್ಯುತ್ತಮ ಶೈಕ್ಷಣಿಕ ಸಾಧನೆಗಾಗಿ ಪದಕ ಮತ್ತು ಮೆರಿಟ್ ಪ್ರಮಾಣಪತ್ರವನ್ನು ನೀಡಲಾಯಿತು.

ಇನ್ನೆರಡು ತಿಂಗಳು ಮಳೆ ಕೊರತೆ ಸಾಧ್ಯತೆ

ಬೆಂಗಳೂರು: ಜುಲೈನಲ್ಲಿ ಸುರಿದ ಭಾರಿ ಮಳೆಯಿಂದ ನಾಡಿನ ಜನ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದರು. ಆದರೆ, ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ರಾಜ್ಯದಲ್ಲಿ ನೈರುತ್ಯ ಮುಂಗಾರು ಸಾಮಾನ್ಯಕ್ಕಿಂತ ಕಡಿಮೆ ಆಗಲಿದ್ದು, ತಾಪಮಾನ ತೀವ್ರವಾಗಿ ಏರಿಕೆಯಾಗಲಿದೆ.

ಮಳೆ ಕಡಿಮೆಯಾಗಿ ಒಣ ಹವೆ ಬೀಸಿದರೆ ರಾಜ್ಯದ ವಿವಿಧ ಬೆಳೆಗಳ ಇಳುವರಿ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ. ಮಳೆ ಕಡಿಮೆ ಇದ್ದರೂ ಮಳೆ ಹಂಚಿಕೆ ವ್ಯಾಪಕವಾಗಿದ್ದರೆ ಇಳುವರಿ ಮೇಲೆ ಹೆಚ್ಚಿನ ಪರಿಣಾಮ ಬೀರುವುದಿಲ್ಲ.

ಭಾರತೀಯ ಹವಾಮಾನ ಇಲಾಖೆ ಬಿಡುಗಡೆ ಮಾಡಿರುವ ಮುನ್ಸೂಚನೆಯಲ್ಲಿ ಎಲ್‌ನಿನೊ ಪರಿಣಾಮ ಮುಂಬರುವ ದಿನಗಳಲ್ಲಿ ಇನ್ನಷ್ಟು ತೀವ್ರಗೊಳ್ಳಲಿದೆ. ಇದರಿಂದಾಗಿ ಮಳೆ ಪ್ರಮಾಣ ಕಡಿಮೆಯಾಗುವುದರ ಜತೆಗೆ ಉಷ್ಣಾಂಶವೂ ಏರಿಕೆಯಾಗಲಿದೆ.

ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ಉತ್ತಮ ಮಳೆಯಾದರೆ ಮಾತ್ರ ರಾಜ್ಯದಲ್ಲಿ ಇಡೀ ವರ್ಷ ಕೃಷಿಗೆ ಮತ್ತು ಕುಡಿಯುವ ಉದ್ದೇಶಕ್ಕೆ ತೊಂದರೆ ಆಗುವುದಿಲ್ಲ. ಇಲ್ಲವಾದರೆ ಸಂಕಷ್ಟಕ್ಕೆ ಸಿಲುಕಬಹುದು. ನೆರೆಯ ತಮಿಳುನಾಡು ಕೂಡ ಕಾವೇರಿಯಿಂದ ನೀರು ಬಿಡುವಂತೆ ಒತ್ತಡವನ್ನು ಇನ್ನಷ್ಟು ಹೆಚ್ಚಿಸಲಿದೆ ಎನ್ನುತ್ತಾರೆ ತಜ್ಞರು.

ಈ ವರ್ಷ ಎಲ್‌ನಿನೊ ವಾತಾವರಣ ಸೃಷ್ಟಿಯಾದರೂ ಸಮಭಾಜಕ ಫೆಸಿಫಿಕ್ ಪ್ರದೇಶದಲ್ಲಿ ಅದು ದುರ್ಬಲವಾಗಿಯೇ ಇದೆ.

ಎಂಎಂಸಿಎಫ್‌ಎಸ್ ಸೇರಿ ವಿವಿಧ ಹವಾಮಾನ ಮುನ್ಸೂಚಕ ಸಂಸ್ಥೆಗಳ ಪ್ರಕಾರ ಎಲ್‌ನಿನೊ ವಾತಾವರಣ ಇನ್ನಷ್ಟು ತೀವ್ರಗೊಳ್ಳಲಿದೆ. ಇದು ಮುಂದಿನ ವರ್ಷದ ಆರಂಭದವರೆಗೆ ಮುಂದುವರೆಯಲಿದೆ.

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ವಿಶೇಷ ಭೂಸ್ವಾಧೀನಾಧಿಕಾರಿರವರ ಕಚೇರಿ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ,
ಸಂಪರ್ಕ ಸೌಧ, ಸರ್ವೆ ನಂ.8 (ಬಿ.ಇ.ಪಿ ಆವರಣ), ಡಾ. ರಾಜ್‌ಕುಮಾರ್ ರಸ್ತೆ, ಒರಾಯನ್ ಮಾಲ್ ಮುಂಭಾಗ,
ರಾಜಾಜಿನಗರ 1ನೇ ಹಂತ, ಬೆಂಗಳೂರು–560010 ದೂರವಾಣಿ ನಂ: 080–22024000
ಇ–ಮೇಲ್: cekrdcl@gmail.com, laqkrdcl@gmail.com

ಸಾರ್ವಜನಿಕ ತಿಳುವಳಿಕೆ

ಕೆಳಕಂಡ ಷೆಡ್ಯೂಲ್‌ನಲ್ಲಿ ಭೂಸ್ವಾಧೀನಪಡಿಸಿಕೊಂಡಿರುವ ಜಮೀನುಗಳಿಗೆ ಪರಿಹಾರ ಪಡೆಯಲು ಭೂಮಾಲೀಕರು/ಖಾತೆದಾರರು ನೀಡಬೇಕಾದ ದೃಢೀಕೃತ ಹಕ್ಕು ದಾಖಲೆಗಳು.

(1) 3 ವರ್ಷಗಳ ದೃಢೀಕೃತ ಪಹಣಿ ಮತ್ತು ಮ್ಯುಟೇಶನ್, (2) ನಿವೇಶನ/ಕಟ್ಟಡದ ಬಗ್ಗೆ ನಮೂನೆ 9, 11ಎ ಮತ್ತು 11ಬಿ ಖಾತಾ ನಕಲು, (3) ಋಣಭಾರ ರಾಹಿತ್ಯ ದೃಢೀಕರಣ ಪತ್ರ (4) ಇಸಿ 13 ವರ್ಷದ್ದು (ನಮೂನೆ–15 ರಲ್ಲಿ), (5) ಒಪ್ಪಿಗೆ ಪತ್ರ (ಜಂಟಿ ಖಾತೆದಾರರಿದ್ದಲ್ಲಿ ಭಾವ ಚಿತ್ರದೊಂದಿಗೆ) (6) ಸರ್ವೇ ನಂಬರುವಾರು ಪ್ರತ್ಯೇಕವಾಗಿ ಪ್ರತಿಯೊಬ್ಬ ಖಾತೆದಾರರು/ಜಂಟಿಖಾತೆದಾರರು ಈ ಕೆಳಕಂಡ 3 ದಾಖಲೆಗಳನ್ನು ತಲಾ ರೂ.100/–)ರ ಮೂರು ಛಾಪಾಕಾಗದಗಳನ್ನು ಸಲ್ಲಿಸಬೇಕು. (ಒಪ್ಪಿಗೆ ನೀಡುವ ಪ್ರಕ್ರಿಯೆಯಲ್ಲಿ ಕರಅನಿನಿಯಿಂದ ಪಾವತಿಸಲಾಗುವ ಭೂಪರಿಹಾರದ ಮೊತ್ತದಲ್ಲಿ 3 ಛಾಪಾ ಕಾಗದಗಳ ಮೊತ್ತವನ್ನು ಕಡಿತಗೊಳಿಸಲಾಗುವುದು) (A) ಒಪ್ಪಿಗೆ ಪ್ರಮಾಣ (Agreement) (B) ನಷ್ಟ ಭರ್ತಿ (Indemnity Bond) ಪ್ರಮಾಣ ಪತ್ರ (ರೂ.100/–), (ಅ) ಯಾವುದೇ ನ್ಯಾಯಾಲಯದಲ್ಲಿ ತಡೆಯಾಜ್ಞೆ ಮತ್ತು ಪ್ರಕರಣಗಳು ದಾಖಲಾಗಿಲ್ಲವೆಂಬ ಪ್ರಮಾಣ (Affidavait) ಪತ್ರ (ರೂ.20/) * ಮೊದಲನೇ ವ್ಯಕ್ತಿ: K R D C L, Bengaluru., (7) ಇತ್ತೀಚಿನ ಕಂದಾಯ ಪಾವತಿಸಿರುವ ರಸೀದಿ, (8) ಭೂ ಪರಿವರ್ತನೆ ಪ್ರತಿ/ಬಡಾವಣೆ ಲೇಔಟ್ ನಕ್ಷೆ ಇವುಗಳ ದೃಢೀಕೃತ ಪ್ರತಿ, (9) ಕರಾರು ಪತ್ರ/ವಿಭಾಗ ಪತ್ರ/ ದಾನ ಪತ್ರದ ದೃಢೀಕೃತ ಪ್ರತಿ, (10) ಸಾಗುವಳಿ ಚೀಟಿ, (11) ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ.7 ಮತ್ತು 7ಎ ರ ಗೇಣಿ ಅರ್ಜಿ ಇಲ್ಲವೆಂಬ ಬಗ್ಗೆ ಹಿಂಬರಹ, (12) ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ.136(3)ರ ಅಡಿಯಲ್ಲಿ ಪ್ರಕರಣ ದಾಖಲಾಗಿಲ್ಲವೆಂಬ ಬಗ್ಗೆ ಹಿಂಬರಹ ಅಥವಾ ಆದೇಶದ ದೃಢೀಕೃತ ಪ್ರತಿ, (13) ವಂಶವೃಕ್ಷ (ಪಿತ್ರಾರ್ಜಿತ ಆಸ್ತಿ ಆಗಿದ್ದಲ್ಲಿ), (14) ಪ್ಯಾನ್ ಸಂಖ್ಯೆ ಪ್ರತಿಯನ್ನು ಲಗತ್ತಿಸಿ, (15) ಬ್ಯಾಂಕ್ ಅಕೌಂಟ್ ಖಾತೆ ಸಂಖ್ಯೆ/ಜಂಟಿ ಬ್ಯಾಂಕ್ ಅಕೌಂಟ್ ಖಾತೆ ಸಂಖ್ಯೆ ಮತ್ತು ಐಎಫ್‌ಎಸ್‌ಸಿ ಕೊಡ್ ಸಂಖ್ಯೆಯುಳ್ಳ ಬ್ಯಾಂಕ್ ಮ್ಯಾನೇಜರ್‌ರವರು ದೃಢೀಕರಿಸಿದ ಪ್ರತಿ (Passbook Xerox), (16) ಭಾವಚಿತ್ರಗಳು–3 (Passport size), (17) ಗುರುತಿನಚೀಟಿ (ಚುನಾವಣೆ/ ಆಧಾರ್‌ಕಾರ್ಡ್/ಪಡಿತರ ಚೀಟಿ ಇತ್ಯಾದಿ). ರಸ್ತೆ ಅಗಲೀಕರಣ ಹಾಗೂ ಇತರೆ ಸಾರ್ವಜನಿಕ ಯೋಜನೆಗೆ ಭೂಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ ಖಾಸಗಿ ಜಮೀನುಗಳ ಮಾಲೀಕರಿಗೆ ಟಿಡಿಆರ್ ಹಕ್ಕನ್ನು ಬಿಬಿಎಂಪಿ ನೀಡಿದ್ದಲ್ಲಿ ಹಕ್ಕು ಬಿಡುಗಡೆ ಪತ್ರ (Relinquishment Deed) ಮತ್ತು ಒಡಂಬಡಿಕೆ ಪತ್ರ (Agreement) ಹಾಗೂ ನಕ್ಷೆಯನ್ನು ಸಲ್ಲಿಸತಕ್ಕದ್ದು.

ಮೇಲ್ಕಂಡ ದಾಖಲಾತಿಗಳನ್ನು ಅವಾರ್ಡ್ ನೋಟೀಸ್ ತಲುಪಿದ 15 ದಿನಗಳೊಳಗೆ ಸಲ್ಲಿಸಬೇಕು.

ಈ ಕಛೇರಿಯಲ್ಲಿ ಸಂಪರ್ಕಿಸಿ, ಮೇಲ್ಕಂಡ ದಾಖಲಾತಿಗಳನ್ನು ತಲುಪಿಸಲು ಎಲ್ಲಾ ಖಾತೆದಾರರು/ಭೂಮಾಲೀಕರಿಗೆ ತಿಳಿಸಿದೆ.

ಕಛೇರಿ ದೂರವಾಣಿ ನಂ. : 080–22024000

ಸಂಖ್ಯೆ: ಲೋಇ 75 ಇಎಪಿ 2023 **ದಿನಾಂಕ: 25.05.2023**

ಬೆಂಗಳೂರು ಜಿಲ್ಲೆಯ ಆನೇಕಲ್ ಮತ್ತು ಬೆಂಗಳೂರು ಪೂರ್ವ ತಾಲ್ಲೂಕುಗಳ ಮೂಲಕ ಹಾದು ಹೋಗುತ್ತಿರುವ "ರಾಜ್ಯ ಹೆದ್ದಾರಿ ಸಂಖ್ಯೆ 35" ಎಂಬ ವರ್ಗೀಕರಣದಲ್ಲಿರುವ ರಸ್ತೆಯನ್ನು ಸರಪಳಿ (ಚೈನೇಜ್) ಕಿ.ಮೀ.0.00 ರಿಂದ ಕಿ.ಮೀ. 42.06 ರ ವರೆಗಿನ ಅನೇಕಲ್ ತಾಲ್ಲೂಕಿನ ಬೆಸ್ತಮನಹಳ್ಳಿಯಿಂದ ಅತ್ತಿಬೆಲೆ, ಸರ್ಜಾಪುರ, ವರ್ತೂರು ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿ–04, ಹೊಸಕೋಟೆಗೆ ಸೇರುವ ರಸ್ತೆಯನ್ನು ಸಂಪರ್ಕಿಸುವ 4/6 ಪಥಗಳಿಗೆ ಅಗಲೀಕರಣ ಮಾಡಿ ಅಭಿವೃದ್ಧಿಗೊಳಿಸಲು ಭೂಸ್ವಾಧೀನ ಪಡಿಸಿಕೊಂಡ ಈ ಕೆಳಕಂಡ ಜಮೀನುಗಳಿಗೆ ಕರ್ನಾಟಕ ಹೆದ್ದಾರಿ ಕಾಯ್ದೆ 1964ರಡಿ ಭೂಸ್ವಾಧೀನ ಪಡಿಸಿಕೊಂಡು RFCTLARR Act-2013 ರಡಿ ಭೂಪರಿಹಾರ ನೀಡಲಾಗುವುದು.

ಷೆಡ್ಯೂಲ್

ಕ್ರ. ಸಂ.	ಅಧಿಸೂಚನೆಯಂತೆ ಖಾತೆದಾರರ ಹೆಸರು	ಸರ್ವೆ ನಂ.	ಹಿಸ್ಸಾ ನಂ.	ಭೂಸ್ವಾಧೀನಕ್ಕೆ ಒಳಪಡುವ ವಿಸ್ತೀರ್ಣ ಒಟ್ಟು ಎ–ಗು–ಆ	ಖರಾಬು ಎ–ಗು–ಆ	ಐನು ಎ–ಗು–ಆ
1	2	3	4	5	6	7
	ಜಿಲ್ಲೆ: ಬೆಂಗಳೂರು			**ತಾಲ್ಲೂಕು: ಬೆಂಗಳೂರು ಪೂರ್ವ**		
	ಹೋಬಳಿ: ಬಿದರಹಳ್ಳಿ			**ಗ್ರಾಮ : ಶೀಗೇಹಳ್ಳಿ**		
1	ಮಲ್ಲಿಕಾರ್ಜುನ ಕಲ್ಲಪ್ಪ ರಾಜಮನೆ	24	1	0.01.04	–	0.01.04
2	ಆರ್. ಮುನ್ನಿಸಿಂಗ್ – ಭೂ. ಪ	24	2	0.00.12	–	0.00.12
3	ಎಂ. ಕೃಷ್ಣಪ್ಪ ಪಾರ್ವತಮ್ಮ	24	4	0.00.12	–	0.00.12
4	ಸುರೇಶ್ ಕುಮಾರ್ ಸಾಂಗಿ ನರೇಶ್ ಕುಮಾರ್ ಸಾಂಗಿ ಹರೀಶ್ ಕುಮಾರ್ ಸಾಂಗಿ	24	5	0.01.00	–	0.01.00
5	ಕೆ. ಎಂ. ಅಶ್ವಾಕ್ ಅಹಮದ್ ಎಂ. ನಾಗರಾಜ ಬಿನ್ ಲೇ. ಮುನಿಯಪ್ಪ – ಭೂ. ಪ	24	6	0.01.00	–	0.01.00
6	ಶ್ರೀಚನ್ನಯ್ಯಸ್ವಾಮಿಜೀ ಶ್ರೀಚನ್ನಯ್ಯ ಸ್ವಾಮಿಜೀ – ಭೂ. ಪ	121	4	0.00.04	–	0.00.04
7	ಎಸ್. ಎನ್. ಸುಬ್ಬಾರೆಡ್ಡಿ ಬಿನ್ ಎಸ್. ನಂಜುಂಡಪ್ಪ ಎಸ್. ಎನ್. ಸುಬ್ಬಾರೆಡ್ಡಿ ಬಿನ್ ಎಸ್. ನಂಜುಂಡಪ್ಪ ಧರಣೀಗೌಡ ಬಿನ್ ಲೇ. ಹೆಚ್. ಸಿ. ನಂಜುಂಡಗೌಡ ಕೆ.ಎಂ. ರಾಮಕೃಷ್ಣ ಬಿನ್ ಮುನಿಶಾಮಪ್ಪ	121	1	0.00.08	–	0.00.08
8	ಸುಬ್ಬಲಕ್ಷ್ಮಮ್ಮ ಕೋಂ ವೆಂಕಟಸ್ವಾಮಿ – ಭೂ. ಪ ರಾಮಕೃಷ್ಣಪ್ಪ ಬಿನ್ ಹನುಮಂತಪ್ಪ – ಭೂ. ಪ ಚಂದ್ರಮ್ಮ ಕೋಂ ದೇವರಾಜು – ಭೂ. ಪ ಲಕ್ಷ್ಮೀನಾರಾಯಣ ಬಿನ್ ಹನುಮಂತಪ್ಪ – ಭೂ. ಪ	121	2	0.00.04	–	0.00.04
	ಒಟ್ಟು			**0–05–12**	–	**0–05–12**
	ಗ್ರಾಮದ ಹೆಸರು : ಕನ್ನಮಂಗಲ			**ಹೋಬಳಿ : ಬಿದರಹಳ್ಳಿ**		
1	ಕೆ. ಐ. ಎ.ಡಿ. ಬಿ	167	3	0.00.04	–	0.00.04
2	ಕೆ. ಐ. ಎ.ಡಿ. ಬಿ ಗೆ ಅಕ್ವೈರ್	167	4	0.00.04	–	0.00.04
3	ಸಿ.ಜೆ.ಸಿಂಗ್ ಬಿನ್ ಆತ್ಮಸಿಂಗ್ ಸಿ.ಜೆ.ಸಿಂಗ್ ಬಿನ್ ಆತ್ಮಸಿಂಗ್ Alienated ಎಮ್. ವೆಂಕಟಸ್ವಾಮಿ–ಭೂ. ಪ	162	1A	0.03.08	–	0.03.08
4	ರಾಮಯ್ಯನಾಯ್ಕ ಬಿನ್ ಸುಬ್ರಾಯಪ್ಪ	162	1B	0.02.08	0.02.08	–
5	ಶಾಂತಕುಮಾರಿ ಉ..ಎಮ್ .ಶಾಂತಮ್ಮ	198	–	0.03.08	–	0.03.08
	ಒಟ್ಟು			**0–10–00**	**0–02–08**	**0–07–08**
	ಗ್ರಾಮದ ಹೆಸರು : ಖಾಜಿಸೊಣ್ಣೇನಹಳ್ಳಿ			**ಹೋಬಳಿ : ಬಿದರಹಳ್ಳಿ**		
1	ಸರ್ಕಾರಿ ಗೋಮಾಳ	100	–	0.01.00	–	0.01.00
2	ಅಲೀಸ್ ಅಂಟೋನಿ ವಡಾಕೆಕ್ಕರ ಕೋಂ ಲೇ. ವಿ. ಜಿ. ಅಂಟೋನಿ – ಭೂ. ಪ	145	–	0.01.00	–	0.01.00
3	ರೇಣುಕ ನಂಬಿಯಾರ್ ಕೋಂ ಆರ್. ಪಿ. ನಂಬಿಯಾರ್	141	–	0.00.04	–	0.00.04
4	ಎನ್. ಗುಂಡಪ್ಪ ಬಿನ್ ಲೇ. ಎ. ನಾರಾಯಣರೆಡ್ಡಿ	140	–	0.00.04	–	0.00.04
5	ಸುಬ್ಬಯ್ಯ ಮುನಿಯಮ್ಮ ನಾರಾಯಣಪ್ಪ ಕೆಂಚಪ್ಪ ಎಂ. ವೆಂಕಟೇಶಮೂರ್ತಿ ಬಿನ್ ಎಂ. ಶ್ರೀನಿವಾಸಯ್ಯ	131	–	0.00.04	–	0.00.04
6	ಎಚ್. ಶ್ರೀನಿವಾಸಪ್ಪ – ಬಿನ್ ಚನ್ನರಾಯಪ್ಪ ಎಂ. ವೆಂಕಟೇಶಮೂರ್ತಿ ಬಿನ್ ಎಂ. ಶ್ರೀನಿವಾಸಯ್ಯ ಎಂ. ಮುನಿಕದಿರಪ್ಪ ಬಿನ್ ಲೇ. ಮುನಿಶಾಮಪ್ಪ ಎಂ. ನಾಗರಾಜು ಬಿನ್ ಲೇ. ಮುನಿಶಾಮಪ್ಪ	132	–	0.00.04	–	0.00.04
7	ಎಂ. ವೆಂಕಟೇಶ ಮೂರ್ತಿ ಬಿನ್ ಎಂ. ಶ್ರೀನಿವಾಸಯ್ಯ ಎಂ. ಮುನಿಕದಿರಪ್ಪ ಬಿನ್ ಲೇ. ಮುನಿಶಾಮಪ್ಪ ಎಂ. ನಾಗರಾಜು ಬಿನ್ ಲೇ. ಮುನಿಶಾಮಪ್ಪ	133	–	0.00.04	–	0.00.04
8	ಸರ್ಕಾರ	134	–	0.00.04	–	0.00.04
9	ಸರ್ಕಾರ	135	–	0.00.12	–	0.00.12
10	ಪಿ. ಎ. ಷರಾಫ್	136		0.01.08	–	0.01.08
	ಒಟ್ಟು			**0–05–12**	–	**0–05–12**
	ಗ್ರಾಮದ ಹೆಸರು : ಗೊರವಿಗೆರೆ			**ಹೋಬಳಿ : ಬಿದರಹಳ್ಳಿ**		
1	ಡಿ. ಕೆ. ಸಂಜಯಕುಮಾರ್ – ಭೂ. ಪ	63	1	0.05.00	–	0.05.00
2	ಸರ್ಕಾರ ಕಾರ್ತಿಕ್ ಜೆ. ಮನೇಕ್ ಬಿನ್ ಜಗದೀಶ್ ಸಿ. ಮನೇಕ್	63	2	0.02.00	–	0.02.00
3	ಸರ್ಕಾರ ಕಾರ್ತಿಕ್ ಜೆ. ಮನೇಕ್ ಬಿನ್ ಜಗದೀಶ್ ಸಿ. ಮನೇಕ್	63	3A	0.01.00	–	0.01.00
4	ವಿ. ರಾಮಚಂದ್ರನ್ ವಿ. ಬಾಲಸುಬ್ರಮಣ್ಯ	63	3B	0.01.00	–	0.01.00
5	ನಾರಾಯಣಮ್ಮ ಕೋಂ ಲೇ. ಕೆ. ವಿ. ಮುನಿಶಾಮಪ್ಪ	96	–	0.00.04	–	0.00.04
6	ನಾರಾಯಣಮ್ಮ ಕೋಂ ಲೇ. ಕೆ. ವಿ. ಮುನಿಶಾಮಪ್ಪ	97	–	0.00.08	–	0.00.08
	ಒಟ್ಟು			**0–09–12**	–	**0–09–12**
	ಗ್ರಾಮದ ಹೆಸರು : ಕೊನದಾಸನಪುರ			**ಹೋಬಳಿ : ಬಿದರಹಳ್ಳಿ**		
1	ಚೌಡಮ್ಮ ಕೋಂ ಲೇ. ಕೆ. ವಿ. ಗಂಗಾಧರಯ್ಯ ಹನುಮಂತಮ್ಮ ಕೋಂ. ಲೇ. ಕೆ. ವಿ. ಗಂಗಾಧರಯ್ಯ ಕೆ. ವಿ. ವೆಂಕಟರಮಣ ಬಿನ್ ವೆಂಕಟರಾಮಯ್ಯ ಕೆ. ವಿ. ನಾರಾಯಣಪ್ಪ ಉ.. ಕೆ. ವಿ. ನಾರಾಯಣಸ್ವಾಮಿ ಬಿನ್ ವೆಂಕಟರಾಮಯ್ಯ ಕೆ. ವಿ. ಶ್ರೀನಿವಾಸ ಬಿನ್ ವೆಂಕಟರಾಮಯ್ಯ ಕೆ. ವಿ. ಮುರಳಿ ಬಿನ್ ವೆಂಕಟರಾಮಯ್ಯ ಮುನಿಯಮ್ಮ ಕೋಂ ಲೇ. ಹೆಚ್. ಮುನಿಶಾಮಪ್ಪ ಎಂ ಲಕ್ಷ್ಮಯ್ಯ ಕೋಂ ಎಲ್ ಮೂರ್ತಿ ವಸಂತ ಕುಮಾರ್ ಬಿನ್ ಲೇ ಸಿದ್ದಪ್ಪ ನಾರಾಯಣಪ್ಪ ಬಿನ್ ಲೇ ಸಿದ್ದಪ್ಪ ಅರುಣಮ್ಮ ಬಿನ್ ಲೇ ಸಿದ್ದಪ್ಪ ಚಂದ್ರಪ್ಪ ಬಿನ್ ಲೇ ಸಿದ್ದಪ್ಪ ರತ್ನಮ್ಮ ಕೋಂ ಲೇ ಸಿದ್ದಪ್ಪ ಮುನಿಹನುಮಪ್ಪ ಬಿನ್ ಲೇ ಮುನಿವೆಂಕಟಪ್ಪ	11	14	0.13.00	0.00.04	0.12.12
	ಒಟ್ಟು			**0–13–00**	**0–00–04**	**0–12–12**

1	2	3	4	5	6	7
	ಗ್ರಾಮದ ಹೆಸರು : ಕಾಟಂನಲ್ಲೂರು			**ಹೋಬಳಿ : ಬಿದರಹಳ್ಳಿ**		
1	M/s Sicgil India Ltd, Chennai * (ಭೂಪರಿವರ್ತನೆ) (E- Katha No.150200401300200158)	65	1	0.01.08 (151.8 Sq.Mtr)	–	0.01.08 (151.8 Sq.Mtr)
2	ಸರ್ಕಾರಿ ತೋಪು	62	–	0.01.00	0.01.00	–
3	ಬೆಂಗಳೂರು ಅಭಿವೃದ್ಧಿಪ್ರಾದಿಕಾರ	61	1	0.02.00	–	0.02.00
4	ಬೆಂ. ಅಭಿವೃದ್ಧಿ ಪ್ರಾದಿಕಾರ	61	2	0.02.12	–	0.02.12
	ಒಟ್ಟು			**0–07–04**	**0–01–00**	**0–06–04**
	ಗ್ರಾಮದ ಹೆಸರು : ಕಾಚಮಾರನಹಳ್ಳಿ			**ಹೋಬಳಿ : ವರ್ತೂರು**		
1	ಎಲ್. ಶ್ರೀನಿವಾಸರೆಡ್ಡಿ ಬಿನ್ ಎನ್. ಲಕ್ಷ್ಮಣರೆಡ್ಡಿ	76	1	0.01.04	–	0.01.04
2	ಹರೀಶ್ ಕುಮಾರ್ ದಯಾನಿ ಬಿನ್ ಧಾನ್ ಜಿ ಮಯಾಂಕ್ ಪಟೇಲ್ ಬಿನ್ ದಿನೇಶ್ ಪಟೇಲ್	76	2	0.00.08	–	0.00.08
3	ಜಿ. ಕೆ. ಗಣೇಶ್ ಬಿನ್ ಕೃಷ್ಣಪ್ಪರೆಡ್ಡಿ	77	1	0.00.04	–	0.00.04
4	ಆರ್. ಶ್ರೀನಿವಾಸ್ ಬಿನ್ ಲೇಟ್ ರಾಮಕೃಷ್ಣಪ್ಪ ಆರ್. ಚಿಕ್ಕಮುನಿವೆಂಕಟಪ್ಪ ಬಿನ್ ಲೇಟ್ ರಾಮಕೃಷ್ಣಪ್ಪ ಆರ್. ನಾಗರಾಜ್ ಬಿನ್ ಲೇಟ್ ರಾಮಕೃಷ್ಣಪ್ಪ ಆರ್. ವೆಂಕಟೇಶ್ ಬಿನ್ ಲೇಟ್ ರಾಮಕೃಷ್ಣಪ್ಪ ಶಿವಕುಮಾರ್ ಬಿನ್ ಲೇಟ್ ರಾಮಕೃಷ್ಣಪ್ಪ	83	2	0.01.00	–	0.01.00
5	ಆರ್. ಶ್ರೀನಿವಾಸ್ ಬಿನ್ ಲೇಟ್ ರಾಮಕೃಷ್ಣಪ್ಪ ಆರ್. ಚಿಕ್ಕಮುನಿವೆಂಕಟಪ್ಪ ಬಿನ್ ಲೇಟ್ ರಾಮಕೃಷ್ಣಪ್ಪ ಆರ್. ನಾಗರಾಜ್ ಬಿನ್ ಲೇಟ್ ರಾಮಕೃಷ್ಣಪ್ಪ ಆರ್. ವೆಂಕಟೇಶ್ ಬಿನ್ ಲೇಟ್ ರಾಮಕೃಷ್ಣಪ್ಪ ಶಿವಕುಮಾರ್ ಬಿನ್ ಲೇಟ್ ರಾಮಕೃಷ್ಣಪ್ಪ	83	3	0.01.08	–	0.01.08
6	ಚಿಕ್ಕವೆಂಕಟಪ್ಪ ಚಿಕ್ಕಅಕ್ಕಯ್ಯಮ್ಮ ಕೋಂ ಚಿಕ್ಕವೆಂಕಟಪ್ಪ	83	4	0.02.08	0.00.04	0.02.04
7	ಚಿಕ್ಕವೆಂಕಟಪ್ಪ ಬಿನ್ ಲಕ್ಷ್ಮಯ್ಯ	69	2	0.11.00	–	0.11.00
8	ಜೆ. ಎಸ್ ಕೃಷ್ಣಮೂರ್ತಿ ಬಿನ್ ಲೇಟ್. ಜಿ. ಸಿ. ಶಿವರುದ್ರಪ್ಪ	69	3	0.02.12	–	0.02.12
	ಒಟ್ಟು			**0–20–12**	**0–00–04**	**0–20–08**
	ಜಿಲ್ಲೆ: ಬೆಂಗಳೂರು			**ತಾಲ್ಲೂಕು: ಆನೇಕಲ್**		
	ಗ್ರಾಮದ ಹೆಸರು : ಅರೇಹಳ್ಳಿ			**ಹೋಬಳಿ : ಅತ್ತಿಬೆಲೆ**		
1	ಎನ್ ಕುಮಾರ್ ಬಿನ್ ಎ ನಾರಾಯಣಪ್ಪ	79	1	0.02.00	–	0.02.00
2	* ಗೌರಮ್ಮ ಕೋಂ ಲೇ. ನಾರಾಯಣಪ್ಪ * ಎನ್ .ಮಲ್ಲೇಶ್ ಬಿನ್ ಲೇ. ನಾರಾಯಣಪ್ಪ * ಎನ್. ಪಿಳ್ಳೇಶ್ ಬಿನ್ ಲೇ ನಾರಾಯಣಪ್ಪ * ಟಿ.ದ್ಯಾಪಯ್ಯ ಬಿನ್ ಲೇ ತಮ್ಮಣ್ಣ	54	4	0.00.12	–	0.00.12
3	* ಚಂದ್ರಪ್ಪ ಬಿನ್ ಯಲ್ಲಪ್ಪ * ಕೆಂಪಮ್ಮ ಕೋಂ ಲೇ ರಾಮಯ್ಯ * ನಾಗರತ್ನಮ್ಮ ಬಿನ್ ಲೇ ರಾಮಯ್ಯ * ಪೂಜಾ ಬಿನ್ ಲೇ ರಾಮಯ್ಯ	54	3	0.02.00	–	0.02.00
4	ಪಿಳ್ಳಮ್ಮ ಬಿನ್ ಲ ಚಿಕ್ಕಣ್ಣ	54	2B	0.00.08	–	0.00.08
5	ಎ.ಎಸ್.ಕೃಷ್ಣಪ್ಪ	54	2A	0.00.08	–	0.00.08
6	* ಕಾಂತಮ್ಮ ಬಿನ್ ಲೇ . ಚಿನ್ನಸ್ವಾಮಿ * ರಾದಮ್ಮ ಬಿನ್ ಲೇ. ಚಿನ್ನಸ್ವಾಮಿ	54	1	0.00.08	–	0.00.08
7	* ನಂಜುಂಡಪ್ಪ * ಕಾಂಚನ ಕೋಂ ಲೇ ಎನ್ ಲಕ್ಷ್ಮಣ	54	7	0.00.08	–	0.00.08
8	ನಾರಾಯಣಪ್ಪ	54	8	0.00.04	–	0.00.04
9	ಸರೋಜಮ್ಮ	54	9	0.00.04	–	0.00.04
10	ವೆಂಕಟಪ್ಪ	54	13	0.00.04	–	0.00.04
11	ಭಾಗ್ಯಲಕ್ಷ್ಮೀ ಕೋಂ ಮುನಿರಾಜು	54	14	0.00.04	–	0.00.04
12	* ಎ. ಎಂ. ಮಾರಪ್ಪ ಬಿನ್ ಲೇ. ಎ. ಮುನಿಯಪ್ಪ * ತಿಮ್ಮರಾಯಪ್ಪ ಬಿನ್ ಕಾವೇರಪ್ಪ	78	1	0.02.00	–	0.02.00
13	ಪ್ರಕಾಶ್ ಟಿ ಬಿನ್ ಲೇ ಕೆ ತಮ್ಮಣ್ಣ	78	2	0.02.12	–	0.02.12
14	ವೆಂಕಟೇಶ್.ಎಂ	78	3A	0.01.00	–	0.01.00
15	* ಗೌರಮ್ಮ ಕೋಂ ಲೇ. ನಾರಾಯಣಪ್ಪ * ಎನ್ . ಮಲ್ಲೇಶ್ ಬಿನ್ ಲೇ. ನಾರಾಯಣಪ್ಪ * ಎನ್ . ಪಿಳ್ಳೇಶ್ ಬಿನ್ ಲೇ . ನಾರಾಯಣಪ್ಪ * ಟಿ . ದ್ಯಾಪಯ್ಯ ಬಿನ್ ಲೇ ತಮ್ಮಣ್ಣ	53	–	0.05.00	–	0.05.00
16	* ಸುರೇಶ್ ಬಿನ್ ಜೆ ರಾಮಬಾಬು–ಭೂ.ಪ * ಎಂ.ಮದನ ಗಿರಿಯಪ್ಪ ಬಿನ್ ಮುನಿಯಲ್ಲಪ್ಪ	77	–	0.01.12	–	0.01.12
17	* ಸಿ. ಚಂದ್ರಪ್ಪ ಬಿನ್ ಲೇಟ್ ಚಿಕ್ಕಣ್ಣ. * ಸಿ. ಮಂಜುನಾಥ ಬಿನ್ ಸಿ . ಚಂದ್ರಪ್ಪ	74	3	0.01.04	–	0.01.04
18	ಎ.ನ್.ಕೆಂಪಣ್ಣ	5	2	0.04.04	–	0.04.04
19	ವಿ.ಶ್ರೀಧರ್ ಲೇಟ್. ವೆಂಕಟಸ್ವಾಮಪ್ಪ	5	3	0.02.08	–	0.02.08
20	ರಾಜಮ್ಮ ಕೋಂ. ಲೇ ವೆಂಕಟಸ್ವಾಮಪ್ಪ	5	5	0.01.08	–	0.01.08
21	ಎನ್.ಪ್ರಭಾಕರ್ ಎನ್.ಚಂದ್ರಶೇಖರ್ ಬಿನ್ ಸಿ ನಂಜಪ್ಪ	50	1	0.02.12	–	0.02.12
22	ಎನ್.ಪ್ರಭಾಕರ್ ಬಿನ್ ಸಿ.ನಂಜಪ್ಪ ಎನ್.ಚಂದ್ರಶೇಖರ್ ಬಿನ್ ಸಿ.ನಂಜಪ್ಪ	50	4A	0.03.04	0.01.00	0.02.04
23	ಎನ್.ಪ್ರಭಾಕರ್ ಎನ್. ಚಂದ್ರಶೇಖರ್ ಬಿನ್ ಸಿ ನಂಜಪ್ಪ	50	4B	0.00.08	0.00.04	0.00.04
24	ಮಂಜುನಾಥ.ಎಸ್.ಬಿನ್ ಸುಬ್ಬರಾಯಪ್ಪ	50	5	0.01.00	–	0.01.00
25		50	7	0.00.12	–	0.00.12
26	ರಮೇಶ್ ಎ.ವಿ. ಬಿನ್ ಎ.ಆರ್. ವಾಸುದೇವ ಆರ್. ಗಗನ್ ಬಿನ್ ರಮೇಶ್	51		0.08.08	0.02.00	0.06.08
27	ಲಕ್ಷ್ಮಮ್ಮ ಕೋಂ. ಪಿ. ರಾಮಯ್ಯ	52		0–04–12	–	0–04–12
28	ವೆಂಕಟರೆಡ್ಡಿ ಬಿನ್ ಗುಳ್ಳಾರೆಡ್ಡಿ	47	1	0.00.08		0.00.08
29	ಸಿ. ಮಂಜುನಾಥ ಬಿನ್ ಸಿ.ಚಂದ್ರಪ್ಪ	48		0.04.00		0.04.00
30	ಸಿ. ಮಂಜುನಾಥ ಬಿನ್ ಸಿ.ಚಂದ್ರಪ್ಪ	49		0.03.00		0.03.00
31	ಹೆಚ್. ರಾಮಯ್ಯ ಎ.ಸಿ. ವಿಶ್ವನಾಥ್ ಬಿನ್ ಲೇ. ಚಿನ್ನಸ್ವಾಮಿ ಅಮ್ಮಯ್ಯಮ್ಮ, ಮಂಜುನಾಥ, ವಿಶ್ವನಾಥ್ ಲಕ್ಷ್ಮಿ, ಶಿವರಾಜು	4		0–03–04		0–03–04
	ಒಟ್ಟು			**1–22–00**	**0–03–04**	**1–18–12**
	ಗ್ರಾಮದ ಹೆಸರು : ಅತ್ತಿಬೆಲೆ			**ಹೋಬಳಿ : ಅತ್ತಿಬೆಲೆ**		
1	ವಿ.ಸೋಮಶೇಖರ ರೆಡ್ಡಿ ಬಿನ್ ಲೇ. ವೆಂಕಟಪ್ಪ	189	2	0.04.04	0.02.00	0.02.04
2	ಡಿ.ಶ್ರೀನಿವಾಸಯ್ಯ ಬಿನ್ ಎಂ.ದಾಸಪ್ಪ ಭೂ.ಪ					
3	ಡಿ.ಅಶ್ವಥ್ ನಾರಾಯಣ ಬಿನ್ ಎಂ. ದಾಸಪ್ಪ ವಿ.ವಾಸುದೇವ್ ಬಿನ್ ಎಂ. ವರದಪದ್ಪ ವಿ.ಮುರಳಿ ಬಿನ್ ಎಂ. ವರದಪ್ಪ	188		0.04.08		0.04.08
4	ಸರ್ಕಾರಿ ಸ್ಮಶಾನ	124		0.00.12	0.00.12	–
5	ಸಿ.ಚನ್ನಾರೆಡ್ಡಿ ಬಿನ್ ಲೇ. ಸಿ.ವೆಂಕಟರೆಡ್ಡಿ	125		0.01.00	–	0.01.00
6	ಸಿ.ಚೆನ್ನಾರೆಡ್ಡಿ ಬಿನ್ ಲೇ.ಸಿ. ವೆಂಕಟರೆಡ್ಡಿ	126	1	0.01.08	–	0.01.08
7	ಎಂ.ಶಿವರಾಮ ರೆಡ್ಡಿ ಬಿನ್ ಲೇ.ಮುನಿರೆಡ್ಡಿ	126	2			
8	ಜಿ ಪುಷ್ಪಲತ ಕೋಂ ಶ್ರೀವಾಸ ರೆಡ್ಡಿ	127		0.01.04	–	0.01.04
9	ಸೂರ್ಯ ಕಲಾ ಕೋಂ ಮದುಸುದನ್ Alienated	186		0.01.00	–	0.01.00
10	ಎಂ .ಶಿವರಾಮ ರೆಡ್ಡಿ ಬಿನ್ ಲೇ. ಮುನಿ ರೆಡ್ಡಿ					
11	ಆರ್.ಸಯ್ಯದ್ ಅಯೂಬ್ ಬಿನ್ ಸಯ್ಯದ್ ರಷೀದ	181	1	0.00.12	–	0.00.12
12	ಎಸ್. ರಂಜನಿ ಅಮ್ಮಾಳ್ ಕೋಂ ಎಂ.ರಾಜಶೇಖರ್	181	2	0.01.00	–	0.01.00
13	ಎಸ್. ರಂಜನಿ ಅಮ್ಮಾಳ್ ಕೋಂ ಎಂ.ರಾಜಶೇಖರ್	180		0.00.04	–	0.00.04
14	ಆರ್. ಕುಮಾರ್ ಬಿನ್ ಟಿ.ಎಂ. ರಾಮಯ್ಯ ಆರ್. ನಂದ ಕೋಂ ರಾಜೇಂದ್ರರೆಡ್ಡಿ ಕೆ. ಜಗನಾಥನ್ ಬಿನ್ ವಿ. ಕೃಷ್ಣಸ್ವಾಮಿ ಎಂ. ನಂಜಾರೆಡ್ಡಿ ಬಿನ್ ಲೇ. ಮುನಿರೆಡ್ಡಿ ಜಯಪ್ಪ ಲೋಕಪ್ಪ ಅರೇಮಲ್ಲಾಪುರ ಬಿನ್ ಲೋಕಪ್ಪ	187	1	0.02.08	–	0.02.08
15	ಎ. ಶ್ರೀನಿವಾಸಯ್ಯ ಬಿನ್ ಪಿಲ್ಲಾರೆಡ್ಡಿ	187	2	0.01.00	–	0.01.00
16	ಎ.ವಿ.ನಾಗರಾಜು A.V. ಸದಾಶಿವ ಬಿನ್ ವೆಂಕಟಶ್ಯಾಮಪ್ಪ A.V. ಮುನಿಯಪ್ಪ, ಖ. ಸದಾಶಿವ R. ಸೋಮಶೇಕರ್ ವೆಂಕಟೇಶ್ ಬಿನ್ ಮಲ್ಲಪ್ಪ ರಾಮಯ್ಯ ಬಿನ್ ವೆಂಕಟರಾಮಯ್ಯ ಕೆಂಚಪ್ಪ ಬಿನ್ ಕರಿಯಪ್ಪ ನಂಜಮ್ಮ ಕೋಂ. ಕೆ. ಶ್ರೀನಿವಾಸ ಜಯೇಂದ್ರ ರೆಡ್ಡಿ ಬಿನ್ ಚೌಡರೆಡ್ಡಿ ಗೌರಮ್ಮ ಕೋಂ ಲೇ. ವಿ. ನಾರಾಯಣಪ್ಪ ಕೆ. ಪ್ರಶಾಚಿತ್ ರೆಡ್ಡಿ ಬಿನ್ ಲೇ. ಕೃಷ್ಣರೆಡ್ಡಿ ವೆಂಕಟ್ಟ ರೆಡ್ಡಿ ಬಿನ್ ಲೇ. ನಂಜುಂಡಪ್ಪ ಪ್ರಭಾವತಿ ಕೋಂ ಲೇ. ಸೋಮಶೇಖರ ರೆಡ್ಡಿ ಕಾರ್ತಿಕ್ ಎಸ್, ಗೌತಮ್ ಎಸ್ ಬಿನ್ ಜಿ. ಶ್ರೀನಿವಾಸ ರೆಡ್ಡಿ	272	1	0.01.08	–	0.01.08
	ಒಟ್ಟು			**0–21–04**	**00–02–12**	**00–18–08**
	ಗ್ರಾಮದ ಹೆಸರು : ತಿಗಳಚೌಡದೇನಹಳ್ಳಿ			**ಹೋಬಳಿ : ಸರ್ಜಾಪುರ**		
1	* S. ಮಧುಶ್ರೀ ಕೋಂ ಡಿ.ವಿ. ಸುರೇಶ * ಆರ್.ಬಿ. ಬೇಬಿ ಗಿರಿಜಾ ಕೋಂ ವಿಕ್ರಮ್ * ಚಂದ್ರಾರೆಡ್ಡಿ ಬಿನ್ ಮುನಿಯಪ್ಪ * ಆರ್.ಬಿ. ಬೇಬಿ ಗಿರಿಜಾ ಕೋಂ ಜಿ.ವಿಕ್ರಮ್ * G. ವಿಕ್ರಮ್ ಬಿನ್ R.G. ಪಿಳ್ಳೈ * ಜಿ. ವಿಕ್ರಮ್ ಬಿನ್ ಆರ್.ಜಿ. ಪಿಲ್ಳೈ ಬಿ.ಸುಶೀಲ ಕೋಂ ಡಿ ವಿ ಸುರೇಶ್	79	1	0.04.08	–	0.04.08

ಮುಂದುವರೆದಿದೆ.....

‘ಕಾರ್ಯಾಧ್ಯಕ್ಷ ಹುದ್ದೆ ಬಿಡುವ ಇಂಗಿತ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ಲೋಕೋಪಯೋಗಿ ಖಾತೆ ಸಚಿವ ಸತೀಶ ಜಾರಕಿಹೊಳಿ ಅವರು ಕಾರ್ಯ‘ಭಾರ’ದ ಕಾರಣ ಕೆಪಿಸಿಸಿ ಕಾರ್ಯಾಧ್ಯಕ್ಷ ಸ್ಥಾನದಿಂದ ಮುಕ್ತರಾಗಲು ಬಯಸಿದ್ದಾರೆ ಎಂದು ಆಪ್ತರು ಖಚಿತಪಡಿಸಿದ್ದಾರೆ.

ಸತೀಶ ಜಾರಕಿಹೊಳಿ

ದೆಹಲಿಯಲ್ಲಿ ಈಚೆಗೆ ನಡೆದ ಹಿರಿಯ ಮುಖಂಡರ ಸಭೆಯಲ್ಲಿ ಸತೀಶ ಜಾರಕಿಹೊಳಿ ಇಂಗಿತ ವ್ಯಕ್ತಪಡಿಸಿದ್ದು, ಹೈಕಮಾಂಡ್‌ನಿಂದ ಇನ್ನೂ ಪ್ರತಿಕ್ರಿಯೆ ಸಿಕ್ಕಿಲ್ಲ.

‘ಲೋಕೋಪಯೋಗಿ ಖಾತೆಯು ಜವಾಬ್ದಾರಿಯಿಂದ ಕೂಡಿದ್ದು, ವಿಶಾಲ ಕಾರ್ಯವ್ಯಾಪ್ತಿ ಹೊಂದಿದೆ. ರಾಜ್ಯದ ಮೂಲೆಮೂಲೆ ಸುತ್ತಾಡಿ, ನಿಗದಿತ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು. ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು. ಖಾತೆಯನ್ನು ಸಮರ್ಥವಾಗಿ ನಿರ್ವಹಿಸಿ, ಜನರ ವಿಶ್ವಾಸ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಸತೀಶ ಜಾರಕಿಹೊಳಿ ಹೀಗೆ ಆಲೋಚಿಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ಲೋಕಸಭೆ ಚುನಾವಣೆಗೆ ಕೆಪಿಸಿಸಿ ಸಜ್ಜಾಗಬೇಕಿದೆ. ಈ ಬಗ್ಗೆ ಹೈಕಮಾಂಡ್ ಸಾಕಷ್ಟು ನಿರ್ದೇಶನ ನೀಡಿದೆ. ಚುನಾವಣೆಗೆ ಪರಿಣಾಮಕಾರಿ ಸಿದ್ಧತೆ ಮಾಡಿಕೊಳ್ಳಲು ಸಮಯ ಸಾಲದಿರುವ ಬಗ್ಗೆ ಅವರು ಹೇಳಿಕೊಂಡಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಮಡಿವಾಳ ಮಾರುಕಟ್ಟೆ: ಶೆಡ್‌ಗಳ ನಿರೀಕ್ಷೆಯಲ್ಲಿ ಸಣ್ಣ ವ್ಯಾಪಾರಿಗಳು ● ಮಳೆಯಲ್ಲೇ ವ್ಯಾಪಾರ ಮಾಡಬೇಕಾದ ಅನಿವಾರ್ಯತೆ

ವ್ಯಾಪಾರಕ್ಕೆ ಮಳಿಗೆಗಳೇ ಇಲ್ಲ; ಮಳೆ ಬಂದರೆ ಕೆಸರು

● ಬಾಲಕೃಷ್ಣ ಪಿ.ಎಚ್.

ಗಿಜಿಗಡುತ್ತಿರುವ ಬೆಂಗಳೂರಿನ ಮಡಿವಾಳ ಮಾರುಕಟ್ಟೆ (ಮೊದಲ ಚಿತ್ರ). ಮಾರುಕಟ್ಟೆಯ ಇನ್ನೊಂದು ಭಾಗದಲ್ಲಿ ಕೆಸರು ತುಂಬಿರುವುದರಿಂದ ಗ್ರಾಹಕರಿಲ್ಲದ ನೋಟ (ಮಧ್ಯದ ಚಿತ್ರ). ಮಾರುಕಟ್ಟೆಯ ಹೊರಗೆ ಪಾರ್ಕಿಂಗ್ ಜಾಗ ಇದ್ದರೂ ಇಕ್ಕಟ್ಟಾದ ಮಾರುಕಟ್ಟೆಯ ಒಳಗೆ ದ್ವಿಚಕ್ರವಾಹನಗಳಲ್ಲಿ ಬಂದು ವ್ಯಾಪಾರ ಮಾಡುವವರೇ ಹೆಚ್ಚಿದ್ದಾರೆ ಪ್ರಜಾವಾಣಿ ಚಿತ್ರಗಳು/ ರಂಜು ಪಿ.

ಬೆಂಗಳೂರು: ರೈತರು ತಾವು ಬೆಳೆದ ಫಸಲುಗಳೊಂದಿಗೆ ನೇರವಾಗಿ ಮಾರಾಟ ಮಾಡಬಹುದಾದ ವ್ಯವಸ್ಥೆ ಇರುವ ಮಡಿವಾಳ ಮಾರುಕಟ್ಟೆಯು ಮಳೆ ಬಂದರೆ ಕೆಸರು ಗದ್ದೆಯಾಗುತ್ತದೆ. ಅದರಲ್ಲಿಯೇ ವ್ಯಾಪಾರ ಮಾಡಬೇಕಾದ ಅನಿವಾರ್ಯತೆ ಇದೆ.

ಒಂದೂ ಕಿ.ಮೀ.ಗೂ ಹೆಚ್ಚು ಉದ್ದವಿರುವ ಈ ಮಾರುಕಟ್ಟೆಯಲ್ಲಿ ಅರ್ಧದಷ್ಟು ಪ್ರದೇಶದಲ್ಲಿ ಕೆಸರಲ್ಲೇ ಓಡಾಡಬೇಕು. ನಿತ್ಯವೂ ಅಸಂಖ್ಯಾತ ಗ್ರಾಹಕರು ಇಲ್ಲಿ ಸೊಪ್ಪು, ತರಕಾರಿ ಸಹಿತ ಅಗತ್ಯ ವಸ್ತು ಖರೀದಿಸುತ್ತಾರೆ. ಮಳೆ ಬಂದರೆ ಕೊಚ್ಚೆಯಂತಾಗುವ ಇಲ್ಲಿ ನಡೆದಾಡುವುದೂ ಕಷ್ಟ. ಬೈಕ್‌ಗಳು ಇಲ್ಲಿ ಜಾರಿ ಬೀಳುತ್ತವೆ. ಮಾರುಕಟ್ಟೆಯ ಒಂದು ಬದಿ ಕೆಸರಿಲ್ಲದ ಕಡೆ ವಿಪರೀತ ವ್ಯಾಪಾರ ನಡೆಯುತ್ತಿದ್ದರೆ, ಇನ್ನೊಂದು ಕಡೆ ಗ್ರಾಹಕರಿಗೆ ಕಾದು ಸುಸ್ತಾಗಿರುವ ವ್ಯಾಪಾರಿಗಳು ಇಲ್ಲಿ ಕಾಣ ಸಿಗುತ್ತಾರೆ.

‘ಕೆಸರಿನಿಂದಾಗಿ ನಮ್ಮ ಅಂಗಡಿಗೆ ಯಾರೂ ಬರುವುದಿಲ್ಲ. ಕೆಸರಿಲ್ಲದ ಜಾಗದಲ್ಲಿರುವ ಅಂಗಡಿಗಳಿಗೆ ಹೋಗುತ್ತಾರೆ. ಬಡವರ ಕಷ್ಟವನ್ನು ಯಾರು ಕೇಳುತ್ತಾರೆ’ ಎಂದು ಮಸಾಲ ಪುಡಿ ಮಾರಾಟಗಾರ ನಟರಾಜ್ ಬೇಸರ ವ್ಯಕ್ತಪಡಿಸಿದರು.

‘ಕೆಸರಿನಿಂದ ವಹಿವಾಟಿಗೆ ತೊಂದರೆಯಾಗಿದೆ. ಈ ಬಗ್ಗೆ ಬಿಬಿಎಂಪಿಗೆ ದೂರು ನೀಡಿದ್ದೇವೆ. 200 ಮೀಟರ್ ನಷ್ಟಾದರೂ ಕಾಂಕ್ರೀಟ್ ಮಾಡಿದರೆ ಕೆಸರು ಇಲ್ಲದಂತೆ ಮಾಡಬಹುದು. ನಮ್ಮ ಬೇಡಿಕೆ ಸಲ್ಲಿಸಿದ್ದೇವೆ. ಸರಿ ಮಾಡಿಕೊಡುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದಾರೆ’ ಎಂದು ಮಡಿವಾಳ ಸಂತೆ ಸಣ್ಣ ವ್ಯಾಪಾರಿಗಳ ಸಂಘದ ಅಧ್ಯಕ್ಷ ಪ್ಯಾರೇಜಾನ್ ಮಾಹಿತಿ ನೀಡಿದರು.

ನಿರ್ಮಾಣಗೊಳ್ಳದ ಅಂಗಡಿಗಳು: ಈ ಮಾರುಕಟ್ಟೆಯಲ್ಲಿ 466 ವ್ಯಾಪಾರಸ್ಥರಿದ್ದಾರೆ. ಇವರಲ್ಲಿ 88 ವ್ಯಾಪಾರಸ್ಥರಿಗಷ್ಟೇ ಮಳಿಗೆಗಳಿವೆ.

ಮಾರುಕಟ್ಟೆ ಕಷ್ಟ ಸಿಕ್ಕಾಪಟ್ಟೆ

ಇನ್ನೂ 378 ಮಳಿಗೆಗಳು ನಿರ್ಮಾಣಗೊಂಡಿಲ್ಲ. ಮಳೆ ಬಂದರೆ ತರಕಾರಿ ಮತ್ತು ಇತರ ವಸ್ತುಗಳನ್ನಿರಿಸಲು ಜಾಗವಿಲ್ಲ. ಮಳೆಯಲ್ಲೇ ವ್ಯಾಪಾರ ಮಾಡಬೇಕಿದೆ ಎಂದು ವ್ಯಾಪಾರಿಗಳು ಅಳಲು ತೋಡಿಕೊಂಡಿದ್ದಾರೆ.

‘ಕೆಲವು ಅಂಗಡಿಗಳನ್ನು ನಿರ್ಮಿಸಿ ಕೊಟ್ಟಿದ್ದಾರೆ. ಉಳಿದ ಅಂಗಡಿ ಮಳಿಗೆಗಳನ್ನು ನಿರ್ಮಿಸುವುದಾಗಿ ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ’ ಎಂದು ಪ್ಯಾರೇಜಾನ್ ತಿಳಿಸಿದರು.

ನೇರ ಮಾರಾಟ: ಇಲ್ಲಿ ಬ್ರೋಕರ್ ವ್ಯವಸ್ಥೆ ಇಲ್ಲದ ಮಾರುಕಟ್ಟೆಯನ್ನು ಮಾಡಲು ಸಾಧ್ಯವಾಗಿದೆ. ಯಾವುದೇ ಹಳ್ಳಿಯಿಂದ ರೈತರು ನೇರವಾಗಿ ಬಂದು ಇಲ್ಲಿ ವ್ಯಾಪಾರ ಮಾಡಬಹುದು. ರೈತರು ಬಂದು ಇಲ್ಲಿನ ವ್ಯಾಪಾರಿಗಳಿಗೆ ಮಾರಾಟ ಮಾಡಿ ಹೋಗುತ್ತಿದ್ದಾರೆ. ಹಿಂದೆಲ್ಲ ರೈತರಿಂದ ಮಧ್ಯವರ್ತಿಗಳು ಖರೀದಿ ಮಾಡುತ್ತಿದ್ದರು. ಬಳಿಕ ಮಧ್ಯವರ್ತಿಗಳು ಇಲ್ಲಿನ ವ್ಯಾಪಾರಿಗಳಿಗೆ ಮಾರಾಟ ಮಾಡುತ್ತಿದ್ದರು. ಈಗ ಅವೆಲ್ಲವನ್ನು ಸ್ಥಗಿತಗೊಳಿಸಲಾಗಿದೆ ಎಂದು ಇಲ್ಲಿನ ವ್ಯಾಪಾರಿಗಳು ಹೇಳುತ್ತಾರೆ.

ಎಲ್ಲ ದಿನಗಳಲ್ಲಿ ವಹಿವಾಟು ನಡೆಯುತ್ತದೆಯಾದರೂ ಭಾನುವಾರ ಮತ್ತು ಸೋಮವಾರ ಹೆಚ್ಚು ವ್ಯಾಪಾರ ಇರುತ್ತದೆ. ಈ ಕಾರಣದಿಂದ ಬೇರೆ ದಿನಗಳಲ್ಲಿ ಬೇರೆ ಬೇರೆ ಕೆಲಸಕ್ಕೆ ಹೋಗುವವರೂ ಭಾನುವಾರ ಮತ್ತು ಸೋಮವಾರ ಇಲ್ಲಿ ಸೊಪ್ಪು, ತರಕಾರಿ ಮಾರಾಟ ಮಾಡಲು ಬರುತ್ತಾರೆ. ಎಲ್ಲ ಮೂಲ ಸೌಲಭ್ಯಗಳನ್ನು ಕಲ್ಪಿಸಿದರೆ ಮಾದರಿ ಮಾರುಕಟ್ಟೆಯನ್ನಾಗಿ ಮಾಡುವ ಅವಕಾಶ ಇಲ್ಲಿದೆ ಎಂದು ಹೇಳುತ್ತಾರೆ.

ಇಲ್ಲಿ ಸಿಕ್ಕಾಪಟ್ಟೆ ಸೊಳ್ಳೆಕಾಟ. ನೊಣ, ಜಿರಳೆ, ಇಲಿಗಳಿಂದಲೂ ನಮ್ಮ ತರಕಾರಿ ಹಾಳಾಗುತ್ತಿದೆ. ಸ್ವಚ್ಛತೆಗೆ ಆದ್ಯತೆ ನೀಡಿದರೆ ಮಾತ್ರ ಸಮಸ್ಯೆ ಪರಿಹಾರವಾಗಬಹುದು
ದೀಪಾ, ತರಕಾರಿ ವ್ಯಾಪಾರಿ

ನಮಗೆ ಅಂಗಡಿ ಮಳಿಗೆ ಕೊಡ್ತೀವಿ ಅಂದ್ರು. ಕೊನೆಗೆ ಕೈಕೊಟ್ಟು ಬಿಟ್ರು. ಬಿಸಿಲು, ಮಳೆಯಲ್ಲೇ ನಿಂತು ವ್ಯಾಪಾರ ಮಾಡ್ತಾ ಇದ್ದೀವಿ
ಕಾಳಿಯಮ್ಮ, 6 ದಶಕಗಳಿಂದ ಇಲ್ಲಿ ವ್ಯಾಪಾರ ಮಾಡುತ್ತಿರುವ ಮಹಿಳೆ

ಕೆಲವರಿಗೆ ಮಳಿಗೆ ಸಿಕ್ಕಿದೆ. ಇನ್ನು ಕೆಲವರು ಟಾರ್ಪಲ್ ಹಾಕಿಕೊಂಡು ಭದ್ರತೆ ಮಾಡಿಕೊಂಡಿದ್ದಾರೆ. ಮಳೆ ಬಂದರೆ ಪಕ್ಕದ ಮಳಿಗೆಗೆ ಓಡಬೇಕು
ಅಲವೇಲು, ತರಕಾರಿ ವ್ಯಾಪಾರ ಮಾಡುವ ಮಹಿಳೆ

ಟೊಮೆಟೊಗೆ ವಿಪರೀತ ದರ ಇರುವುದರಿಂದ ಒಂದು ಕೆ.ಜಿ. ಒಯ್ಯುವವರು ಅರ್ಧ ಕೆ.ಜಿ ಒಯ್ಯುತ್ತಿದ್ದಾರೆ. ಟೊಮೆಟೊ ಹಿಂದಿನಷ್ಟು ಖಾಲಿಯಾಗುತ್ತಿಲ್ಲ
ಗೋವಿಂದ, ಟೊಮೆಟೊ ವ್ಯಾಪಾರಸ್ಥರು

ಕಾಂಕ್ರೀಟ್ ರಸ್ತೆಯನ್ನು ನಿರ್ಮಿಸುವ ಮೂಲಕ ಕೆಸರು ಇಲ್ಲದಂತೆ ಮಾಡಿ ಮಾರುಕಟ್ಟೆಯ ಎಲ್ಲ ಕಡೆ ವ್ಯಾಪಾರ ನಡೆಯುವಂತೆ ಮಾಡಬೇಕು
ನಟರಾಜ್, ಮಸಾಲೆ ಪುಡಿ ಮಾರಾಟಗಾರ

‘ಮಾಂಸ ಮಾರುಕಟ್ಟೆ ಇಲ್ಲ’

ಇಲ್ಲಿ ಪ್ರತ್ಯೇಕವಾಗಿ ಮಾಂಸ ಮಾರುಕಟ್ಟೆಯಿಲ್ಲ. ಮೀನು ಮಾರಾಟ, ಚಿಕನ್ ಅಂಗಡಿ ಈ ತರಕಾರಿ ಮಾರುಕಟ್ಟೆಯ ನಡುವೆಯೇ ಇದೆ. ಪ್ರತ್ಯೇಕ ಮಾಂಸ ಮಾರುಕಟ್ಟೆ ಮಾಡಬೇಕು ಎಂಬುದು ಇಲ್ಲಿನ ವ್ಯಾಪಾರಿಗಳ ಬೇಡಿಕೆಯಾಗಿದೆ.

‘ಪರಿಸರ ಪೂರಕ ಮಾರುಕಟ್ಟೆಯಾಗಬೇಕು’



ನಿತ್ಯ ಬಿಬಿಎಂಪಿಯವರು ತ್ಯಾಜ್ಯ ವಿಲೇವಾರಿ ಮಾಡುತ್ತಾರೆ. ಬೇರೆ ಮಾರುಕಟ್ಟೆಗಳಿಗೆ ಹೋಲಿಸಿದರೆ ಮಡಿವಾಳ ಮಾರುಕಟ್ಟೆ ಹೆಚ್ಚು ಸ್ವಚ್ಛವಾಗಿದೆ. ಇನ್ನಷ್ಟು ಸ್ವಚ್ಛಗೊಳ್ಳಬೇಕಾದ ಅವಶ್ಯಕತೆ ಇದೆ. ಮಾರುಕಟ್ಟೆ ಒಂದು ಕಿ.ಮೀ ಗಿಂತಲೂ ಹೆಚ್ಚು ಉದ್ದವಿದೆ. ಎರಡೂ ತುದಿಗಳಲ್ಲಿ ಒಂದೊಂದು ಶೌಚಾಲಯವಿದೆ. ಮಧ್ಯದಲ್ಲಿ ಒಂದು ಶೌಚಾಲಯ ನಿರ್ಮಾಣಗೊಳ್ಳಬೇಕು. ಮಾರುಕಟ್ಟೆಯ ಎರಡು ಕಡೆಗಳಲ್ಲಿ ರೈತರ ಶೆಡ್ ನಿರ್ಮಿಸಲಾಗಿದೆ. ಒಂದರಲ್ಲಿ ತರಕಾರಿ, ಇನ್ನೊಂದರಲ್ಲಿ ಸೊಪ್ಪು ಮಾರಾಟವಾಗುತ್ತಿದೆ. ಇದರ ಮಧ್ಯೆ ಇರುವ ವ್ಯಾಪಾರಸ್ಥರಿಗೂ ಮಳಿಗೆಗಳಾಗಬೇಕು. ಅಂಗಡಿಗಳ ಮಧ್ಯೆ ಕಾಂಕ್ರೀಟ್ ರಸ್ತೆ ನಿರ್ಮಿಸಬೇಕು. ಸುಸಜ್ಜಿತ ಮಾರುಕಟ್ಟೆ ನಿರ್ಮಿಸಿ ಮಧ್ಯೆ ಗಿಡಗಳನ್ನು ಹಾಕಿ ಪರಿಸರ ಪೂರಕ ಮಾರುಕಟ್ಟೆ ನಿರ್ಮಿಸಬೇಕು. ಇವೆಲ್ಲವನ್ನು ಶಾಸಕರ ಮುಂದೆ, ಅಧಿಕಾರಿಗಳ ಮುಂದೆ ಬೇಡಿಕೆ ಇಟ್ಟಿದ್ದೇವೆ.
ಪ್ಯಾರೇಜಾನ್, ಮಡಿವಾಳ ಸಂತೆ ಸಣ್ಣ ವ್ಯಾಪಾರಿಗಳ ಸಂಘದ ಅಧ್ಯಕ್ಷ

PUBLIC NOTICE

Publics are hereby informed that my client **M/s. DS-Max Properties Pvt. Ltd.**, having its office at No. 1854, 17th Main, 30th 'B' Cross, HBR Layout, 1st Stage, 5th Block, Bangalore- 43 and intend to enter into Joint Development Agreement with the Owner **Sri. K. Mohammed Niyamathulla** s/o. Sri. Mohammed Khasim and family, residing at No. 195, Thimmaiah Road, Shivajinagar, Bangalore-560 001 is the absolute owner of converted land property bearing **Sy. No. 257**, which measuring to an extent of **5 acres 17 guntas**, situated at **Somanahalli Village**, Uttarahalli Hobli, Bangalore South Taluk, in vide; Conversion Order dated **21/01/1999**, in Order No. **BDS:ALN:SR(S):119/98-99**, for residential use, issued by Deputy Commissioner, Bangalore District and bounded on **East by:** Road, **West by:** Private Land, **North by:** Sy. No. 225 and **South by:** Private Land.

Any person or any Authority or any Promoters having any asserting right, title, interest and claims to oppose for Joint Development Agreement of the schedule property and further having any manner of right, title, claims etc., and may lodge their objections, claims over the property along with relevant papers in support of their claims, right to the below address within **15** days from the date of this notice, if any objections fails to comply, my client shall take further steps for entering into Joint Development Agreement of the schedule property.

LINGARAJ. S. NADAGOUDA., ADVOCATE
No.1854, 17th Main, 30th 'B' Cross, HBR Layout, 1st Stage, 5th Block, Bangalore - 560 043.
Mob : 96204 74780 , 94481 35970

ಜನ್ಮದಿನದ ಪ್ರಯುಕ್ತ ಜಮೀರ್ ಅಹಮದ್ ಖಾನ್ ಅವರು ಮಣಿಪುರದ ವಿದ್ಯಾರ್ಥಿಗಳ ಜತೆಗೆ ಉಪಹಾರ ಸೇವಿಸಿದರು

ಮಣಿಪುರದ 29 ವಿದ್ಯಾರ್ಥಿನಿಯರಿಗೆ ನೆರವು: ಸಚಿವ ಜಮೀರ್ ಭರವಸೆ

ಬೆಂಗಳೂರು: ಚಾಮರಾಜಪೇಟೆಯ ಸೇಂಟ್ ತೆರೇಸಾ ಶಿಕ್ಷಣ ಸಂಸ್ಥೆಯಲ್ಲಿ ಆಶ್ರಯ ಪಡೆದಿರುವ ಮಣಿಪುರದ 29 ವಿದ್ಯಾರ್ಥಿನಿಯರ ಶಿಕ್ಷಣ ಹಾಗೂ ಆರೈಕೆಯ ವೆಚ್ಚ ಭರಿಸುವುದಾಗಿ ಸಚಿವ ಜಮೀರ್ ಅಹಮದ್ ಖಾನ್ ಭರವಸೆ ನೀಡಿದ್ದಾರೆ.

ಇಲ್ಲಿನ ವಿದ್ಯಾರ್ಥಿಗಳ ಜತೆಗೆ ಉಪಾಹಾರ ಸೇವಿಸಿ ಮಂಗಳವಾರ ತಮ್ಮ ಜನ್ಮದಿನ ಆಚರಿಸಿಕೊಂಡರು.

ಮಣಿಪುರ ವಿದ್ಯಾರ್ಥಿಗಳ ಜತೆಗೆ ಅಲ್ಲಿನ ಪರಿಸ್ಥಿತಿ ಬಗ್ಗೆ ಮಾಹಿತಿ ಪಡೆದ ಅವರು, ‘ಇಲ್ಲಿ ಸುರಕ್ಷಿತವಾಗಿರಿ. ನಿಮಗೆ ಏನೇ ವ್ಯವಸ್ಥೆ ಬೇಕಾದರೂ ಮಾಡುತ್ತೇನೆ’ ಎಂದು ತಿಳಿಸಿ, ₹2 ಲಕ್ಷ ನೀಡಿದರು.

1	2	3	4	5	6	7
2	ಬಿ.ವೀರಪ್ಪರೆಡ್ಡಿ ಬಿನ್ ಲೇ ಭದ್ರಯ್ಯ	79	2	0.15.08	–	0.15.08
3	* ಬಿ.ವಿ.ರಾಜಶೇಖರೆಡ್ಡಿ * ರವೀಂದ್ರಶೇಖರರೆಡ್ಡಿ ಬಿನ್ Alienated * ಉಮೇಶ್ ಬಾಬು ಬಿನ್ ಚಂದ್ರಶೇಖರರೆಡ್ಡಿ * ಬಿ.ವಿ.ಸೋಮಶೇಖರ್ ರೆಡ್ಡಿ	84	1	0.07.08	–	0.07.08
4	ಶ್ರೀಮತಿ ಚೈತ್ರಾ ರೆಡ್ಡಿ ಪಿ ಬಿನ್ ಲೇಟ್ ಬಿ.ವಿ.ಪ್ರಭಾಕರ್ ರೆಡ್ಡಿ	84	3	0.05.04	–	0.05.04
5	ಡಿ.ಸಿ.ಜಯಪಾಲರೆಡ್ಡಿ ಬಿನ್ ಚಿನ್ನಪ್ಪರೆಡ್ಡಿ	85	–	0.04.00	–	0.04.00
6	* ಎಂ.ಶರತ್ ರೆಡ್ಡಿ ಬಿನ್ ಸಿ.ಎಂ.ರೆಡ್ಡಿ * ಸುಬ್ರಮಣಿ ಎ ಬಿನ್ ಆಂಜಿನಪ್ಪ	37	1	0.00.01	–	0.00.01
7	* ಕೃಷ್ಣಪ್ಪ ಬಿನ್ ವೆಂಕಟರಮಣಪ್ಪ ಉ ಮರಿಯಪ್ಪ * ಡಿ.ವಿ.ಗುರಪ್ಪ ಬಿನ್ ಜಿ ವೆಂಕಟರಮಣಪ್ಪ * ಜಯಮ್ಮ ಕೋಂ ಡಿ.ವಿ.ಗುರಪ್ಪ	37	2	0.00.01	–	0.00.01
8	ಸುಬ್ರಮಣಿ ಎ ಬಿನ್ ಆಂಜಿನಪ್ಪ	37	4	0.00.04	–	0.00.04
9	ಶ..ಕುಂಟೆ	81	–	0.21.00	0.21.00	–
10	* ಶ್ರೀ ಮಧು ಎಸ್ ವೈ ಬಿನ್ ಲೇ ಯಲ್ಲಪ್ಪ ಎಸ್ * ಶ್ರೀ ಎಸ್ ವೈ ಉಮೇಶ್ ಪ್ರಭು ಬಿನ್ ಲೇ ಯಲ್ಲಪ್ಪ ಎಸ್	82	8	0.00.04	–	0.00.04
11	ಗೋಪಾಲ್ ಬಿನ್ ಚಿನ್ನಪ್ಪ	82	9	0.00.04	–	0.00.04
12	ಮಮತ ಬಿನ್ ಚಿನ್ನಪ್ಪ	82	10	0.00.04	–	0.00.04
13	* ಎಸ್.ಶೊಂಬಪ್ಪ ಬಿನ್ ಲೇ.ಸೊಣ್ಣಳ್ಳಪ್ಪ	82	23	0.00.08	–	0.00.08
14	* ವಿ.ಪದ್ಮಮ್ಮ ಕೋಂ ಲೇ.ವೆಂಕಟಸ್ವಾಮಿ * ಡಿ.ವಿ.ಭಾಸ್ಕರ್ ಬಿನ್ ಡಿ ವೆಂಕಟೇಶ್	82	2	0.00.08	–	0.00.08
15	* ಡಿ.ಎಸ್.ಕೃಷ್ಣಪ್ಪ ಬಿನ್ ಲೇ.ಸೊಣ್ಣಳ್ಳಪ್ಪ * ರೇಖಾ ಮೋಹನ್ ಕೋಂ ಲೇ ಡಿ ವಿ ಮೋಹನ್	82	3	0.00.12	–	0.00.12
16	* ಎಸ್.ಅಣ್ಣಪ್ಪ ಬಿನ್ ಲೇ.ಸೊಣ್ಣಳ್ಳಪ್ಪ * ರೇಖಾ ಜೆ ಕೋಂ ಲೇ ಡಿ ವಿ ಮೋಹನ್	82	4	0.00.08	–	0.00.08
17	ಸತ್ಯನಾರಾಯಣ ಬಿನ್ ವೆಂಕಟಕೃಷ್ಣಯ್ಯ	80	2	0.01.08	–	0.01.08
18	ಡಿ.ವಿ.ರಾಜಗೋಪಾಲ್ ಬಿನ್ ವೆಂಕಟಕೃಷ್ಣಯ್ಯ	80	7	0.06.04	–	0.06.04
19	ಡಿ.ವಿ.ಚಲುವರಾಜು ಬಿನ್ ವೆಂಕಟಕೃಷ್ಣಯ್ಯ	80	5	0.01.12	–	0.01.12
20	* ಸತೀಶ್ ಬಿನ್ ಶಾಂತಮ್ಮ * ಶಾಂತಮ್ಮ ಬಿನ್ ಮುನಿರೆಡ್ಡಿ	80	4	0.04.00	–	0.04.00
21	ಜೆ.ಶ್ರೀನಿವಾಸ ಬಿನ್ ಜಂಗಮರೆಡ್ಡಿ	80	1	0.02.08	–	0.02.08
22	ಡಿ.ವಿ.ಸುದರ್ಶನ್ ಬಿನ್ ವೆಂಕಟಕೃಷ್ಣಯ್ಯ	80	6	0.03.00	–	0.03.00
23	ಡಿ.ವಿ.ರಾಮಮೂರ್ತಿ ಬಿನ್ ವೆಂಕಟಕೃಷ್ಣಯ್ಯ	80	3	0.03.08	–	0.03.08
24	D.V. ಶ್ರೀನಿವಾಸರೆಡ್ಡಿ ಬಿನ್ ವೀರಪ್ಪ	38	1	0.01.12	–	0.01.12
25	ಡಿ.ಕೆ.ಬಾಬು ಬಿನ್ ಲೇ ಕೃಷ್ಣಾರೆಡ್ಡಿ	38	2	0.01.00	–	0.01.00
26	ಡಿ.ಕೆ.ಭುವನೇಶ್ವರ್ ಬಿನ್ ಲೆ ಕೃಷ್ಣಾರೆಡ್ಡಿ	38	3	0.00.04	–	0.00.04
	ಒಟ್ಟು			**2–06–10**	**0–21–00**	**1–25–10**
	ಒಟ್ಟು ಜುಮ್ಲಾ			**6–02–02**	**0–31–00**	**5–11–02**

ಸಹಿ/–
(ಮಹೇಶ)
ಮುಖ್ಯ ಅಭಿಯಂತರರು ಹಾಗೂ ಹೆದ್ದಾರಿ ಪ್ರಾಧಿಕಾರ
ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
ಬೆಂಗಳೂರು

ಸಹಿ/–
(ರಾಮಚಂದ್ರಪ್ಪ ಕೆ.ಎನ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಬಾಹ್ಯ ಅನುದಾನಿತ ಯೋಜನೆಗಳು (ಇಎಪಿ)
ಲೋಕೋಪಯೋಗಿ ಇಲಾಖೆ

DIPR/CP/YC/758/2023-24

ಪ್ರಧಾನಿ ನರೇಂದ್ರ ಮೋದಿಗೆ ಸವಾಲು ಹಾಕಿದ ಮುಖ್ಯಮಂತ್ರಿ ಸಿದ್ದರಾಮಯ್ಯ

‘ಗ್ಯಾರಂಟಿ’ ಮುಂದಿಟ್ಟು ಚುನಾವಣೆಗೆ ಸಿದ್ಧರಿದ್ದೀರಾ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ಯಾರಂಟಿ ಯೋಜನೆಗಳ ವಿಷಯವನ್ನೇ ಮುಂದಿಟ್ಟುಕೊಂಡು ಮುಂದಿನ ಲೋಕಸಭಾ ಚುನಾವಣೆ ಎದುರಿಸಲು ನಾವು ಸಿದ್ಧರಿದ್ದೇವೆ. ನೀವು ಸಿದ್ಧರಿದ್ದರೆ ಹಾಗೆಂದು ಘೋಷಿಸಿ’ ಎಂದು ಪ್ರಧಾನಿ ನರೇಂದ್ರ ಮೋದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಹಾಕಿದ್ದಾರೆ.

‘ಸ್ವಾರ್ಥಕ್ಕಾಗಿ ಘೋಷಿಸಿದ ಗ್ಯಾರಂಟಿ ಯೋಜನೆ ಜಾರಿಯಿಂದ ಕರ್ನಾಟಕ ಸರ್ಕಾರದ ಬಳಿ ಅಭಿವೃದ್ಧಿಗೆ ಹಣವಿಲ್ಲ’ ಎಂಬ ಪ್ರಧಾನಿ ನರೇಂದ್ರ ಮೋದಿ ಟೀಕೆಗೆ ತಿರುಗೇಟು ನೀಡಿರುವ ಸಿದ್ದರಾಮಯ್ಯ, ‘ಮೋದಿಯವರೇ, ಇದು ವೈಯಕ್ತಿಕ ಅಭಿಪ್ರಾಯವೇ, ಪ್ರಧಾನಿ ಅಭಿಪ್ರಾಯವೇ, ಪಕ್ಷದ ಅಭಿಪ್ರಾಯವೇ’ ಎಂದು ಪ್ರಶ್ನಿಸಿದ್ದಾರೆ.

‘ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುವುದಾದರೆ ನಿಮ್ಮ ಮತ್ತು ನಿಮ್ಮ ಪಕ್ಷದ ನಿಲುವು ಸ್ಪಷ್ಟಪಡಿಸಿ. ಕರ್ನಾಟಕದ ಬಿಜೆಪಿ ನಾಯಕರಿಗೂ ನಮ್ಮ ಗ್ಯಾರಂಟಿ ಯೋಜನೆಗಳನ್ನು ಸಾರ್ವಜನಿಕವಾಗಿ ವಿರೋಧಿಸಲು ನಿರ್ದೇಶನ ನೀಡಿ. ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ತಕ್ಷಣ ಜಾರಿಗೊಳಿಸಬೇಕೆಂದು ಕರ್ನಾಟಕದ ಬಿಜೆಪಿ ನಾಯಕರು ಬೆನ್ನು ಹತ್ತಿದ್ದಾರೆ. ಬಡವರಿಗೆ ನೀಡುವ ಹೆಚ್ಚುವರಿ ಅಕ್ಕಿಯಲ್ಲಿ ಒಂದು ಕಾಳು ಕಡಿಮೆ ಮಾಡಿದರೂ ಹೋರಾಟ ನಡೆಸುವುದಾಗಿ ಬಿ.ಎಸ್. ಯಡಿಯೂರಪ್ಪ ಗುಡುಗುತ್ತಲೇ ಇದ್ದಾರೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು’ ಎಂದೂ ಪ್ರಶ್ನಿಸಿದ್ದಾರೆ.

‘ಹಬ್ಬಗಳ ಸಮಯದಲ್ಲಿ ವರ್ಷಕ್ಕೆ ಮೂರು ಗ್ಯಾಸ್ ಸಿಲಿಂಡರ್ ಮತ್ತು ಬಿಪಿಎಲ್ ಕುಟುಂಬಗಳಿಗೆ ಅರ್ಧ ಲೀಟರ್ ನಂದಿನಿ ಹಾಲು ಉಚಿತವಾಗಿ ನೀಡುತ್ತೇವೆಂದು ವಿಧಾನಸಭೆ ಚುನಾವಣೆಯ ಪ್ರಣಾಳಿಕೆಯಲ್ಲಿ ಕರ್ನಾಟಕದ ಬಿಜೆಪಿ ಭರವಸೆ ನೀಡಿತ್ತು. ಇವು ಫ್ರೀಬಿ, ರೇವ್ಡಿ ಯೋಜನೆಗಳಲ್ಲವೇ? ವಿಧಾನಸಭಾ ಚುನಾವಣೆ ಎದುರಿಸಲಿರುವ ಮಧ್ಯಪ್ರದೇಶದ ಮುಖ್ಯಮಂತ್ರಿ, ಹೆಣ್ಣುಮಕ್ಕಳ ಖಾತೆಗೆ ಮಾಸಿಕ ₹ 1000 ಜಮೆ ಮಾಡುವ ಲಾಡ್ಲಿ-ಬೆಹನಾ ಯೋಜನೆಯ ಮೊತ್ತವನ್ನು ₹ 3,000ಕ್ಕೆ ಹೆಚ್ಚಿಸುವ ಭರವಸೆ ನೀಡಿದ್ದಾರೆ. ಇದು ಉಚಿತ ಯೋಜನೆಯಲ್ಲವೇ? ಕಿಸಾನ್ ಸಮ್ಮಾನ್ ಅನ್ನು ಹೇಗೆ ವ್ಯಾಖ್ಯಾನಿಸುತ್ತೀರಿ? ನಾವು ಐದು ಕೆ.ಜಿ ಅಕ್ಕಿ ಹೆಚ್ಚುವರಿಯಾಗಿ ನೀಡಿದರೆ ರಾಜ್ಯದ ಖಜಾನೆ ಬರಿದಾಗಲಿದೆ ಎನ್ನುವುದಾದರೆ, ಐದು ಕೆ.ಜಿ ಅಕ್ಕಿ ಉಚಿತವಾಗಿ ನೀಡುವ ‘ಪಿಎಂ ಗರೀಬ್ ಅನ್ನ ಕಲ್ಯಾಣ ಯೋಜನೆ’ಯನ್ನು ಯಾವ ಗುಂಪಿಗೆ ಸೇರಿಸುತ್ತೀರಿ’ ಎಂದೂ ಕೇಳಿದ್ದಾರೆ.

ಡೀಸೆಲ್ ಅಕ್ರಮ ಸಾಗಣೆ ಆರೋಪ: ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲಾರಿಯ ಟ್ಯಾಂಕರ್‌ನಲ್ಲಿ ಅಕ್ರಮವಾಗಿ ಡೀಸೆಲ್ ಸಾಗಣೆ ಮಾಡಲಾಗಿದೆ’ ಎಂಬ ಆರೋಪಕ್ಕೆ ಸಂಬಂಧಿಸಿದ ಪ್ರಕರಣ ವೊಂದರಲ್ಲಿ ಲಾರಿ ಮಾಲೀಕರ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣ ರದ್ದುಪಡಿಸಿರುವ ಹೈಕೋರ್ಟ್; ‘ಇಂತಹ ಸಂದರ್ಭಗಳಲ್ಲಿ ದಾಳಿ, ತಪಾಸಣೆ ಮತ್ತು ಜಪ್ತಿ ಮಾಡುವಾಗ ಪೊಲೀಸ್ ಇಲಾಖೆಯ ಡಿವೈಎಸ್‌ಪಿ ಶ್ರೇಣಿಗಿಂತಲೂ ಕೆಳಗಿನ ಅಧಿಕಾರಿ ಇರಬಾರದು ಎಂಬ ಕಾನೂನು ಪಾಲನೆ ಅಗತ್ಯ’ ಎಂದು ಆದೇಶಿಸಿದೆ.

ತಮ್ಮ ವಿರುದ್ಧ ದಾಖಲಾಗಿದ್ದ ಪ್ರಕರಣ ರದ್ದುಪಡಿಸುವಂತೆ ಕೋರಿ ಮುಳಬಾಗಿಲು ತಾಲ್ಲೂಕಿನ ನಂಗಲಿ ಗ್ರಾಮದ ಸಾದಿಕ್ ಪಾಷ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯ ಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎಸ್.ಸುನಿಲ್ ಕುಮಾರ್, ‘ಈ ಪ್ರಕರಣದಲ್ಲಿ ದಾಳಿ ನಡೆಸಿ ಲಾರಿ ಮತ್ತು ಡೀಸೆಲ್ ಅನ್ನು ವಶಪಡಿಸಿಕೊಂಡಿರುವ ಅಧಿಕಾರಿ ಪಿಎಸ್‌ಐ ಶ್ರೇಣಿಯಲ್ಲಿದ್ದು ಇದು ಕಾನೂನಿಗೆ ವಿರುದ್ಧವಾದ ನಡೆ. ಹೀಗಾಗಿ, ಪ್ರಕರಣವನ್ನು ರದ್ದುಪಡಿಸಬೇಕು’ ಎಂದು ಕೋರಿದ್ದರು.

ಆದರೆ, ಪ್ರಾಸಿಕ್ಯೂಷನ್ ಪರ ವಕೀಲರಾದ ಕೆ.ಪಿ. ಯಶೋದಾ ಇದನ್ನು ಅಲ್ಲಗಳೆದಿದ್ದರು. ಆದರೆ, ಅಂತಿಮವಾಗಿ ಅರ್ಜಿದಾರರ ಪರ ವಾದಾಂಶವನ್ನು ಮಾನ್ಯ ಮಾಡಿದ ನ್ಯಾಯಪೀಠ, ‘ಐಪಿಸಿ ಕಲಂಗಳಡಿ ದಾಖಲಿಸಿರುವ ಅಪರಾಧ ಇಲ್ಲಿ ಅನ್ವಯ ಆಗುವುದಿಲ್ಲ. ಅಂತೆಯೇ, ಮೋಟಾರು ಸ್ಪಿರಿಟ್ ಮತ್ತು ಹೈ-ಸ್ಪೀಡ್ ಡೀಸೆಲ್ ಸಾಗಣೆ, ನಿಯಂತ್ರಣ ವಿತರಣೆ ಮತ್ತು ಅಕ್ರಮ ತಡೆ ಆದೇಶ-1988ರ ಉಪನಿಯಮಗಳ ಅನುಸಾರ ಈ ಪ್ರಕರಣದಲ್ಲಿ ಸಬ್ ಇನ್‌ಸ್ಪೆಕ್ಟರ್‌ಗೆ ದಾಳಿ, ತಪಾಸಣೆ ಮತ್ತು ಜಪ್ತಿ ಮಾಡುವ ಅಧಿಕಾರ ಇರುವುದಿಲ್ಲ’ ಎಂಬುದನ್ನು ಎತ್ತಿ ಹಿಡಿದಿದೆ.

ಪ್ರಕರಣವೇನು?: ‘ಮುದಗಲ್-ಚಿತ್ತೂರು ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಕಾನೂನು ಬಾಹಿರವಾಗಿ ಲಾರಿಯ ಟ್ಯಾಂಕರ್‌ನಲ್ಲಿ ಡೀಸೆಲ್ ಸಾಗಣೆ ಮಾಡಲಾಗುತ್ತಿದೆ’ ಎಂಬ ಖಚಿತ ಮಾಹಿತಿ ಆಧರಿಸಿ ಪೊಲೀಸರು 2022ರ ಸೆ.15ರಂದು ದಾಳಿ ನಡೆಸಿದ್ದರು. ಸ್ಥಳದಲ್ಲೇ ಲಾರಿಯನ್ನು ಜಪ್ತಿ ಮಾಡಿ ಚಾಲಕ ಮತ್ತು ಮಾಲೀಕರ ವಿರುದ್ಧ ಭಾರತೀಯ ದಂಡ ಸಂಹಿತೆ-1860ರ ಕಲಂ 285, ಅಗತ್ಯ ವಸ್ತುಗಳ ಕಾಯ್ದೆ-1955 ಹಾಗೂ ಮೋಟಾರು ಸ್ಪಿರಿಟ್ ಮತ್ತು ಹೈ-ಸ್ಪೀಡ್ ಡೀಸೆಲ್ ಸಾಗಣೆ, ನಿಯಂತ್ರಣ ವಿತರಣೆ ಮತ್ತು ಅಕ್ರಮ ತಡೆ ಆದೇಶ-1988ರ ಉಪನಿಯಮಗಳ ಅನುಸಾರ ಕ್ರಿಮಿನಲ್ ಪ್ರಕರಣ ದಾಖಲು ಮಾಡಲಾಗಿತ್ತು.

ಲಾರಿ ಮಾಲೀಕ ಸಾದಿಕ್ ಪಾಷ ಮುಳಬಾಗಿಲಿನಲ್ಲಿ ಎಸ್ ಡಬ್ಲ್ಯುಎಸ್ & ಸನ್ಸ್ ಹೆಸರಿನಲ್ಲಿ ಪೆಟ್ರೋಲ್ ಬಂಕ್ ಹೊಂದಿದ್ದು, ‘ನಾನು ಡೀಸೆಲ್ ಸಾಗಣೆ ಪರವಾನಗಿ ಹೊಂದಿದ್ದು, ನನ್ನ ವಿರುದ್ಧ ಹೂಡಲಾಗಿರುವ ಪ್ರಕರಣ ಕಾನೂನು ಬಾಹಿರವಾಗಿದೆ’ ಎಂದು ಪ್ರತಿಪಾದಿಸಿದ್ದರು. ಅಂತೆಯೇ, ಪ್ರಕರಣ ರದ್ದುಪಡಿಸುವಂತೆ ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಅನಧಿಕೃತ ಜಾಹೀರಾತು: ಹೈಕೋರ್ಟ್ ಕೆಂಗಣ್ಣು

ಒಂದನೇ ಪುಟದಿಂದ...

ವಿಚಾರಣೆ ವೇಳೆ ಬಿಬಿಎಂಪಿ ಸಲ್ಲಿಸಿದ ಅನುಪಾಲನಾ ವರದಿಯನ್ನು ಪರಿಶೀಲಿಸಿದ ನ್ಯಾಯಪೀಠ, ‘ಇದೊಂದು ಕಣ್ಣೊರೆಸುವ ತಂತ್ರ’ ಎಂದು ಬಿಬಿಎಂಪಿ ಮತ್ತು ಸರ್ಕಾರದ ವಿರುದ್ಧ ಹರಿಹಾಯ್ದಿತು. ‘ಅನಧಿಕೃತ ಜಾಹೀರಾತು ಫಲಕಗಳ ಅಳವಡಿಕೆ ತಡೆಯುವಲ್ಲಿ ಬಿಬಿಎಂಪಿ ಅಸಹಾಯಕವಾಗಿದೆ. ಜಾಹೀರಾತು ಫಲಕಗಳ ಅಳವಡಿಕೆದಾರರ ವಿರುದ್ಧ ದಂಡ ವಿಧಿಸಿಲ್ಲ. ಈ ಹಾವಳಿ ತಡೆಯಲು ವಿಫಲವಾಗಿರುವ ಅಧೀನ ಅಧಿಕಾರಿಗಳ ವಿರುದ್ಧ ಹಿರಿಯ ಅಧಿಕಾರಿಗಳು ಶಿಸ್ತು ಕ್ರಮ ಜುರುಗಿಸಿಲ್ಲ’ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿತು.

‘ಕಳೆದ ನಾಲ್ಕು ತಿಂಗಳ ಅವಧಿಯಲ್ಲಿ ಅನಧಿಕೃತವಾಗಿ ಸುಮಾರು 60 ಸಾವಿರ ಜಾಹೀರಾತು ಫಲಕಗಳನ್ನು ಅಳವಡಿಸಲಾಗಿದೆ. ಅವುಗಳಲ್ಲಿ ಕೇವಲ 134 ದೂರುಗಳನ್ನು ಮಾತ್ರವೇ ಪರಿಗಣಿಸಿ 40 ಎಫ್‌ಐಆರ್ ದಾಖಲಿಸಲಾಗಿದೆ’ ಎಂಬ ಅಂಶಕ್ಕೆ ಕಿಡಿಕಾರಿದ ನ್ಯಾಯಪೀಠ, ‘ಕಾಟಾಚಾರದ ಈ ಅನುಪಾಲನಾ ವರದಿ ಸಲ್ಲಿಸಿರುವ ಪಾಲಿಕೆ ಅಧಿಕಾರಿಗಳ ಧಾರ್ಷ್ಟ್ಯತೆ ಸಖೇದಾಶ್ಚರ್ಯಕರವಾಗಿದೆ. ವರದಿಯನ್ನು ಪರಿಶೀಲಿಸಿದರೆ

> **ಅನಧಿಕೃತ ಫ್ಲೆಕ್ಸ್, ತೆರವುಗೊಳಿಸಲು ಪಾಲಿಕೆ ತನ್ನ ಹಣ ಖರ್ಚು ಮಾಡುತ್ತಿದೆ. ಆದರೆ, ಅಕ್ರಮ ಜಾಹೀರಾತುಗಳ ಅಳವಡಿಕೆದಾರರಿಗೆ ದಂಡ ವಿಧಿಸುತ್ತಿಲ್ಲ. ಪಾಲಿಕೆ ವ್ಯಯಿಸುತ್ತಿರುವುದು ತೆರಿಗೆದಾರರ ಹಣ**
> **ಪಿ.ಬಿ.ವರಾಳೆ,** ಮುಖ್ಯ ನ್ಯಾಯಮೂರ್ತಿ

ಅಧಿಕಾರಿಗಳು ಕೇವಲ ಕಾಗದಗಳ ಕುದುರೆ ಓಡಿಸಿದಂತಿದೆ’ ಎಂದು ತರಾಟೆಗೆ ತೆಗೆದುಕೊಂಡಿತು.

‘ಇದು ಆಘಾತಕಾರಿ’ ಎಂದ ನ್ಯಾಯಪೀಠ, 'ಅನಧಿಕೃತ ಜಾಹೀರಾತು ತಡೆಯುವಲ್ಲಿ ವಿಫಲವಾಗಿರುವ ಅಧಿಕಾರಿಗಳ ವಿರುದ್ಧ ಯಾವೆಲ್ಲಾ ಕ್ರಮ ಜರುಗಿಸಲಾಗುತ್ತದೆ ಎಂಬ ಬಗ್ಗೆ ವಿವರಣೆ ನೀಡಿ ಮೂರು ವಾರದಲ್ಲಿ ವರದಿ ಸಲ್ಲಿಸಬೇಕು’ ಎಂದು ನಿರ್ದೇಶಿಸಿತು.

‘ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸಲು ಹೈಕೋರ್ಟ್ ಹಲವು ವರ್ಷಗಳಿಂದ ನಿರ್ದೇಶನ ನೀಡುತ್ತಲೇ ಇದ್ದರೂ ಸರ್ಕಾರ ಮತ್ತು ಬಿಬಿಎಂಪಿ ಸಮರ್ಪಕ ಕ್ರಮ ಕೈಗೊಂಡಿಲ್ಲ. ಇದನ್ನು ನೋಡುತ್ತಾ ನಾವು ಮೂಕ ಪ್ರೇಕ್ಷಕರಾಗಿ ಇರಲು ಸಾಧ್ಯವಿಲ್ಲ. ಮೂರು ವಾರಗಳ ನಂತರ ಅನಧಿಕೃತವಾಗಿ ಹೋರ್ಡಿಂಗ್ಸ್, ಬ್ಯಾನರ್ ಹಾಗೂ ಫ್ಲೆಕ್ಸ್‌ಗಳೂ ಸೇರಿದಂತೆ ಯಾವುದೇ ಜಾಹೀರಾತು ಫಲಕಗಳನ್ನು ನಗರದಲ್ಲಿ ಅಳವಡಿಸಿದ್ದೇ ಆದರೆ, ಅಂತಹ ಪ್ರತಿಯೊಂದು ಜಾಹೀರಾತು ಫಲಕಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಬಿಬಿಎಂಪಿ ತಲಾ ₹ 50 ಸಾವಿರ ಹಣವನ್ನು ನ್ಯಾಯಾಲಯದಲ್ಲಿ ಠೇವಣಿ ಇರಿಸಬೇಕಾಗುತ್ತದೆ’ ಎಂದು ಖಡಕ್ಕಾಗಿ ಎಚ್ಚರಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

ಬಿಬಿಎಂಪಿಗೆ ನ್ಯಾಯಪೀಠದ ಪ್ರಶ್ನೆಗಳು

- ಜಾಹೀರಾತುಗಳನ್ನು ತೆರವುಗೊಳಿಸಲು ಬಿಬಿಎಂಪಿ ಪಂಚವಾರ್ಷಿಕ ಯೋಜನೆ ರೂಪಿಸಲು ನಿರ್ಧರಿಸಿದೆಯೇ?
- ಶುಭ ಮಹೂರ್ತ ನಿಗದಿಪಡಿಸಲು ಪರಿಣತರೊಂದಿಗೆ ಸಮಾಲೋಚನೆ ನಡೆಸಲಾಗುತ್ತಿದೆಯೇ?
- ಬೆಂಗಳೂರು ನಗರ ಸುಂದರವಾಗಿ ಕಾಣುವುದು ಬಿಬಿಎಂಪಿ ಮತ್ತು ಸರ್ಕಾರಕ್ಕೆ ಇಷ್ಟವಿಲ್ಲವೇ?
- ನಗರ ಸುಂದರವಾಗಿ ಕಾಣುವಂತೆ ಮಾಡುವುದು ಸರ್ಕಾರದ ಜವಾಬ್ದಾರಿಯಲ್ಲವೇ?
- ನಗರದಲ್ಲಿ ಜಾಹೀರಾತು ಹಾವಳಿಯಿದ್ದರೆ ಹೊರ ಪ್ರದೇಶಗಳಿಂದ ಬರುವವರಿಗೆ ಯಾವ ಭಾವನೆ ಮೂಡುತ್ತದೆ?

ಪ್ರಜಾವಾಣಿ@75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಎಫ್‌ಎಂಸಿಜಿ ಬ್ರ್ಯಾಂಡ್ ರ್‍ಯಾಂಕಿಂಗ್: ‘ನಂದಿನಿ’ಗೆ ಆರನೇ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲೇ 'ನಂದಿನಿ' ಉತ್ಪನ್ನಗಳು ತ್ವರಿತವಾಗಿ ಬಿಕರಿಯಾಗುವ ಗ್ರಾಹಕ ಬಳಕೆ ಉತ್ಪನ್ನಗಳ (ಎಫ್‌ಎಂಸಿಜಿ) ಬ್ರ್ಯಾಂಡ್ ರ್‍ಯಾಂಕಿಂಗ್‌ನಲ್ಲಿ ಆರನೇ ಸ್ಥಾನ ಪಡೆದಿದೆ.

ಕರ್ನಾಟಕ ರಾಜ್ಯ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳದ (ಕೆಎಂಎಫ್) ‘ನಂದಿನಿ’ ದೇಶದ ಬಳಕೆದಾರ ಬ್ರ್ಯಾಂಡ್‌ಗಳ ಪಟ್ಟಿಯಲ್ಲಿ ಈ ಬಾರಿ ಒಂದು ಸ್ಥಾನ ಮೇಲಕ್ಕೇರಿದೆ.

ಮಾರುಕಟ್ಟೆ ಸಂಶೋಧನಾ ಕಂಪನಿ ‘ಕಾಂಟರ್’ ಬಿಡುಗಡೆ ಮಾಡಿರುವ 2023ನೇ ಸಾಲಿನ ಬ್ರ್ಯಾಂಡ್ ಫ್ಲೂಟ್ ವರದಿಯಲ್ಲಿ ಈ ವಿವರ ನೀಡಲಾಗಿದೆ.

ಡೇರಿ ಉತ್ಪನ್ನಗಳ ಪಟ್ಟಿಯಲ್ಲಿ ‘ಅಮೂಲ್’ ಹೊರತುಪಡಿಸಿದರೆ ನಂದಿನಿ ಮಾತ್ರ ಸ್ಥಾನ ಪಡೆದಿದೆ.

ಪಾರ್ಲೆ ಪ್ರಥಮ ಸ್ಥಾನ, ಬ್ರಿಟಾನಿಯಾ ಎರಡನೇ ಸ್ಥಾನ, ಅಮೂಲ್ ಮೂರನೇ ಸ್ಥಾನ, ಕ್ಲಿನಿಕ್ ಪ್ಲಸ್ ನಾಲ್ಕನೇ ಸ್ಥಾನ ಹಾಗೂ ಟಾಟಾ ಐದನೇ ಸ್ಥಾನಗಳನ್ನು ಪಡೆದಿವೆ.

2021ರ ನವೆಂಬರ್‌ನಿಂದ 2022ರ ಅಕ್ಟೋಬರ್ ಅವಧಿಯಲ್ಲಿನ ಮಾಹಿತಿ ಸಂಗ್ರಹಿಸಿ ಈ ರ್‍ಯಾಂಕಿಂಗ್‌ಗಳನ್ನು ನೀಡಲಾಗಿದೆ.

ಎನ್‌ಡಿಎ ಸಂಸದರ ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಗೆ ಪೂರ್ವಭಾವಿಯಾಗಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಎನ್‌ಡಿಎ ಮೈತ್ರಿಕೂಟದ ಸಂಸದರ ಸಭೆ ಬುಧವಾರ ರಾತ್ರಿ ನಡೆಯಿತು.

ಸಭೆಯಲ್ಲಿ ಕರ್ನಾಟಕದ 25 ಸಂಸದರು, ತಮಿಳುನಾಡು, ತೆಲಂಗಾಣದ ಸಂಸದರು ಸೇರಿದಂತೆ 48 ಮಂದಿ ಭಾಗಿಯಾಗಿದ್ದರು. ಕ್ಷೇತ್ರಗಳ ಅಭಿವೃದ್ಧಿ ಕಾರ್ಯಗಳನ್ನು ಬೇಗ ಪೂರ್ಣಗೊಳಿಸುವಂತೆ ಪ್ರಧಾನಿ ಸೂಚಿಸಿದರು ಎಂದು ಮೂಲಗಳು ತಿಳಿಸಿವೆ.



ಸುಭಾಷಿತ

ಒಂದು ಬಾಗಿಲು ಮುಚ್ಚಿದಾಗ ಮತ್ತೊಂದು ತೆರೆದುಕೊಳ್ಳುತ್ತದೆ. ಆದರೆ ಆ ಮುಚ್ಚಿದ ಬಾಗಿಲಿನತ್ತ ನಾವು ಎಷ್ಟು ಸುದೀರ್ಘಕಾಲ ಮತ್ತು ಎಷ್ಟು ಪಶ್ಚಾತ್ತಾಪದಿಂದ ನೋಡುತ್ತಿರುತ್ತೇವೆ ಎಂದರೆ, ನಮಗಾಗಿ ತೆರೆದ ಮತ್ತೊಂದು ಬಾಗಿಲಿನತ್ತ ನಾವು ಗಮನಹರಿಸುವುದೇ ಇಲ್ಲ.

–ಅಲೆಕ್ಸಾಂಡರ್ ಗ್ರಹಾಂ ಬೆಲ್

ಚಿಪ್ ತಯಾರಿಕೆಗೆ ಕೇಂದ್ರದ ಉತ್ತೇಜನ ಸಂದರ್ಭದ ಅಗತ್ಯ, ಸ್ವಾಗತಾರ್ಹ ಕ್ರಮ

ಸೆಮಿಕಂಡಕ್ಟರ್‌ಗಳಿಗೆ ಸಂಬಂಧಿಸಿದ ಸಮಾವೇಶವೊಂದು ಗುಜರಾತ್‌ನಲ್ಲಿ ಈಚೆಗೆ ನಡೆಯಿತು. ಅಲ್ಲಿ ಮಾಡಿದ ಭಾಷಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಆಡಿರುವ ಮಾತುಗಳು ಉದ್ಯಮ ಸಮೂಹದ ಗಮನ ಸೆಳೆಯುವಂತೆ ಇವೆ. ದೇಶದ ಸೆಮಿಕಂಡಕ್ಟರ್ ಚಿಪ್ ತಯಾರಿಕಾ ವಲಯದಲ್ಲಿ ಹೂಡಿಕೆ ಮಾಡುವ, ಸೆಮಿಕಂಡಕ್ಟರ್ ಚಿಪ್ ತಯಾರಿಕೆ ಆರಂಭಿಸುವ ಉದ್ಯಮಗಳಿಗೆ ಶೇಕಡ 50ರಷ್ಟು ಹಣಕಾಸಿನ ನೆರವು ಒದಗಿಸಲಾಗುತ್ತದೆ ಎಂದು ಪ್ರಧಾನಿ ಘೋಷಿಸಿದ್ದಾರೆ. ಇದು ವಿಶ್ವದ ಹೂಡಿಕೆದಾರರು, ಉದ್ಯಮಿಗಳು ಭಾರತದಲ್ಲಿ ಸೆಮಿಕಂಡಕ್ಟರ್ ಚಿಪ್ ತಯಾರಿಕೆಗೆ ಮುಂದಾಗುವಂತೆ ಮಾಡುವಲ್ಲಿ ಬಹಳ ದೊಡ್ಡ ಹೆಜ್ಜೆ. ಸೆಮಿಕಂಡಕ್ಟರ್ ಚಿಪ್ ತಯಾರಿಕೆಗೆ ಭಾರತದ ವೇದಾಂತ ಸಮೂಹ ಮತ್ತು ತೈವಾನ್‌ನ ಫಾಕ್ಸ್‌ಕಾನ್ ಮಾಡಿಕೊಂಡಿದ್ದ ಪಾಲುದಾರಿಕೆಗೆ ಕೆಲವು ದಿನಗಳ ಹಿಂದಷ್ಟೇ ಅಂತ್ಯ ಹೇಳಿವೆ. 'ಭಾರತದಲ್ಲಿಯೇ ತಯಾರಾದ ಸೆಮಿಕಂಡಕ್ಟರ್ ಚಿಪ್‌ಗಳು ಇನ್ನು ಎರಡೂವರೆ ವರ್ಷಗಳಲ್ಲಿ ಸಿಗಲಿವೆ' ಎಂದು ವೇದಾಂತ ಸಮೂಹದ ಅಧ್ಯಕ್ಷ ಅನಿಲ್ ಅಗರವಾಲ್ ಹೇಳಿದ್ದಾರೆ. ಆದರೆ ಚಿಪ್ ತಯಾರಿಕೆಗೆ ತಂತ್ರಜ್ಞಾನ ಪಾಲುದಾರ ಯಾರು ಎಂಬುದನ್ನು ಅವರು ಹೇಳಿಲ್ಲ. ಭಾರತದ ಪಾಲಿಗೆ ಈಗ ಸೆಮಿಕಂಡಕ್ಟರ್ ಚಿಪ್‌ಗಳ ಅಗತ್ಯವು ಬಹಳ ದೊಡ್ಡ ಮಟ್ಟದಲ್ಲಿ ಇದೆ. ದೇಶದ ವಾಹನ ತಯಾರಿಕಾ ವಲಯದ ಕಂಪನಿಗಳ ಮಾತುಗಳನ್ನು ಆಲಿಸಿದರೂ ಸಾಕು, ಇಂತಹ ಚಿಪ್‌ಗಳ ಅಗತ್ಯ ಎಷ್ಟಿದೆ ಎಂಬುದು ಅರಿವಿಗೆ ಬರುತ್ತದೆ. ಹೀಗಾಗಿ, ಪ್ರಧಾನಿಯವರ ಘೋಷಣೆಯು ಬಹಳ ಮಹತ್ವದ್ದಾಗುತ್ತದೆ. ಚಿಪ್ ತಯಾರಿಕೆಗೆ ಭಾರಿ ಪ್ರಮಾಣದ ಬಂಡವಾಳದ ಅಗತ್ಯವಿರುವ ಕಾರಣ, ಸರ್ಕಾರದ ಕಡೆಯಿಂದ ಶೇ 50ರಷ್ಟು ನೆರವು ಸಿಗುತ್ತದೆ ಎಂಬುದು ಉದ್ಯಮಿಗಳಿಗೆ ಉತ್ತೇಜನಕಾರಿ ಆಗಬಲ್ಲದು.



ದೇಶವು ಸೆಮಿಕಂಡಕ್ಟರ್ ಚಿಪ್ ತಯಾರಿಕೆಯಲ್ಲಿ ದಾಪುಗಾಲು ಇರಿಸಲು ಈ ಉಪಕ್ರಮಗಳು ನೆರವಾಗಬಲ್ಲವು

ಕೋವಿಡ್ ನಂತರದಲ್ಲಿ ಸೆಮಿಕಂಡಕ್ಟರ್ ಚಿಪ್‌ಗಳ ಕೊರತೆ ಬಗ್ಗೆ ವಿಶ್ವದ ಹಲವೆಡೆಗಳಿಂದ ವರದಿಗಳು ಬರಲಾರಂಭಿಸಿದವು. ಈ ಚಿಪ್‌ಗಳ ತಯಾರಿಕೆಯಲ್ಲಿ ಪ್ರಾಬಲ್ಯ ಹೊಂದಿರುವ ಚೀನಾ ಆಚೆಗೆ ಕೂಡ ಇದರ ತಯಾರಿಕೆಯು ದೊಡ್ಡ ಪ್ರಮಾಣದಲ್ಲಿ ನಡೆಯಬೇಕು ಎಂಬ ಉದ್ದೇಶದಿಂದ ಪ್ರಯತ್ನಗಳು ಆಗುತ್ತಿವೆ. ಭಾರತವು ಈ ಅವಕಾಶವನ್ನು ಬಳಸಿಕೊಳ್ಳಲು ಮುಂದಾಗಿದೆ. ಭಾರತದಲ್ಲಿ ಸೆಮಿಕಂಡಕ್ಟರ್ ಚಿಪ್ ಉತ್ಪಾದನೆಗೆ ಪೂರಕವಾದ ಪರಿಸರವನ್ನು ನಿರ್ಮಾಣ ಮಾಡುವ ವಿಚಾರವನ್ನು ಪ್ರಧಾನಿ ತಮ್ಮ ಭಾಷಣದಲ್ಲಿ ಉಲ್ಲೇಖಿಸಿದ್ದಾರೆ. ಸೆಮಿಕಂಡಕ್ಟರ್ ವಿನ್ಯಾಸಕ್ಕೆ ಪರಿಣತರನ್ನು ಸಿದ್ಧಗೊಳಿಸಲು 300ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರಮುಖ ಕಾಲೇಜುಗಳನ್ನು ಗುರುತಿಸಲಾಗಿದೆ ಎಂದು ಅವರು ಸೆಮಿಕಾನ್ ಇಂಡಿಯಾ ಸಮಾವೇಶದಲ್ಲಿಯೇ ಹೇಳಿದ್ದಾರೆ. ಸೆಮಿಕಂಡಕ್ಟರ್ ಚಿಪ್ ತಯಾರಿಸಲು ಮುಂದೆ ಬರುವ ಕಂಪನಿಗಳಿಗೆ ಹಣಕಾಸಿನ ನೆರವು ಹಾಗೂ ಆ ಕಂಪನಿಗಳಿಗೆ ಅಗತ್ಯವಿರುವ ಮಾನವ ಸಂಪನ್ಮೂಲ ಸಜ್ಜುಗೊಳಿಸುವ ಕೆಲಸ, ದೇಶವು ಸೆಮಿಕಂಡಕ್ಟರ್ ತಯಾರಿಕೆಯಲ್ಲಿ ದಾಪುಗಾಲು ಇರಿಸಲು ನೆರವಾಗಬಲ್ಲದು. ಹಾಗೆಯೇ, ಈ ಕ್ರಮಗಳ ಜೊತೆಯಲ್ಲೇ ಇನ್ನಷ್ಟು ಹೆಚ್ಚಿನ ಉತ್ತೇಜನ ಕ್ರಮಗಳು ಕೂಡ ಬೇಕಾಗಬಹುದು.

ಸೆಮಿಕಂಡಕ್ಟರ್ ಚಿಪ್ ತಯಾರಿಕಾ ಕಂಪನಿ ಮೈಕ್ರಾನ್‌ಗೆ ಗುಜರಾತ್‌ನಲ್ಲಿ ತಯಾರಿಕಾ ಘಟಕವೊಂದನ್ನು ಸ್ಥಾಪಿಸಲು ಅಮೆರಿಕ–ಭಾರತದ ನಡುವೆ ಒಪ್ಪಂದವು ಪ್ರಧಾನಿ ಮೋದಿ ಅವರ ಅಮೆರಿಕ ಭೇಟಿ ಸಂದರ್ಭದಲ್ಲಿ ಆಗಿದೆ. ಇದು ಬಹಳ ಮಹತ್ವದ್ದು. ಈ ಒಪ್ಪಂದವು ಜಾಗತಿಕ ಮಟ್ಟದ ಸೆಮಿಕಂಡಕ್ಟರ್ ಪೂರೈಕೆ ವ್ಯವಸ್ಥೆಯ ಪಾಲುದಾರ ಆಗುವತ್ತ ಭಾರತ ಇರಿಸಿದ ಮೊದಲ ಹೆಜ್ಜೆ. ಇದೇ ಬಗೆಯಲ್ಲಿ, ವಿಶ್ವದ ಇತರ ಹಲವು ದೇಶಗಳು ಕೂಡ ಸೆಮಿಕಂಡಕ್ಟರ್ ಚಿಪ್ ತಯಾರಿಕೆಗೆ ಉತ್ತೇಜನ ನೀಡುವ ಹಾದಿಯಲ್ಲಿ ಸಾಗಿವೆ. ಕೋವಿಡ್ ನಂತರದ ಜಗತ್ತು ಚೀನಾ ವಿಚಾರದಲ್ಲಿ ಹೆಚ್ಚೆಚ್ಚು ಜಾಗರೂಕವಾಗಿ ನಡೆದುಕೊಳ್ಳುತ್ತಿದೆ. ಸೆಮಿಕಂಡಕ್ಟರ್ ಚಿಪ್‌ಗಳಿಗಾಗಿ ಚೀನಾ ಹೊರತುಪಡಿಸಿ, ಬೇರೊಂದು ದೇಶವನ್ನು, ಅದರಲ್ಲೂ ಮುಖ್ಯವಾಗಿ ನಂಬಿಕಸ್ಥ ದೇಶವೊಂದನ್ನು ಅವಲಂಬಿಸಬೇಕು ಎಂಬ ಬಯಕೆಯು ಹಲವು ದೇಶಗಳ ಪ್ರಮುಖರಲ್ಲಿ ಇದೆ. ಈ ಕಾರಣದಿಂದಾಗಿಯೇ, ಸೆಮಿಕಂಡಕ್ಟರ್ ಚಿಪ್ ತಯಾರಿಕಾ ಘಟಕಗಳನ್ನು ತಮ್ಮದೇ ನೆಲದಲ್ಲಿ ಆರಂಭಿಸಲು, ಬೇರೆ ಬೇರೆ ಕಂಪನಿಗಳಿಗೆ ಉತ್ತೇಜಕ ಕ್ರಮಗಳನ್ನು ಹಲವು ದೇಶಗಳು ಘೋಷಿಸುತ್ತಿವೆ. ಇದು ಭಾರತದ ಪಾಲಿಗೆ ವಿಶ್ವದರ್ಜೆಯ ಕಂಪನಿಗಳನ್ನು ತನ್ನಲ್ಲಿಗೆ ಆಹ್ವಾನಿಸುವುದಕ್ಕೆ ಒಂದು ತೊಡಕಾಗಿ ಪರಿಣಮಿಸಬಹುದು. ಈ ವಿಚಾರವಾಗಿ ನೀತಿ ನಿರೂಪಕರ ಮಟ್ಟದಲ್ಲಿ ಚಿಂತನೆ ಆಗಬೇಕಿದೆ.

ದಿನದ ಟ್ವೀಟ್

ಯೋಜನೆ ನಿರರ್ಥಕವಾಗದಿರಲಿ

ಚೀತಾ ಯೋಜನೆಯನ್ನು ನಿರ್ವಹಿಸುತ್ತಿರುವ ರೀತಿ ಕುರಿತು ಕೆಲವು ತಜ್ಞರು ಈಗಾಗಲೇ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ದೇಶಕ್ಕೆ ಚೀತಾವನ್ನು ಮರುಪರಿಚಯಿಸುವ ಇಡೀ ಯೋಜನೆ ನಿರರ್ಥಕ ಆಗಲು ಬಿಡಬಾರದು. ತಜ್ಞರ ಸಲಹೆ ಆಧರಿಸಿ ತುರ್ತು ಕ್ರಮ ಕೈಗೊಳ್ಳಬೇಕಾದ ಅಗತ್ಯವಿದೆ.

(ಕುನೊ ರಾಷ್ಟ್ರೀಯ ಉದ್ಯಾನದಲ್ಲಿ 9ನೆಯ ಚೀತಾ ಮೃತಪಟ್ಟಿರುವುದಕ್ಕೆ ಪ್ರತಿಕ್ರಿಯೆ)

ಮುಕುಲ್ ವಾಸ್ನಿಕ್, ರಾಜ್ಯಸಭಾ ಸದಸ್ಯ

ಕಿಡಿನುಡಿ

'ಹರಿಯಾಣದಲ್ಲಿ ಪೊಲೀಸರು ಉದ್ರಿಕ್ತ ಗುಂಪಿನ ವಿರುದ್ಧ ಯಾರ ಒತ್ತಡದ ಮೇರೆಗೆ ಕ್ರಮ ಕೈಗೊಳ್ಳಲಿಲ್ಲ' ಎಂದು ಕೇಂದ್ರ ಸಚಿವ, ಬಿಜೆಪಿಯ ಗಜೇಂದ್ರ ಶೆಖಾವತ್ ಅವರು ಇಂಡಿಯಾ ಟುಡೆ ಟಿ.ವಿಯಲ್ಲಿ ಕೇಳಿದ್ದನ್ನು ನೋಡಿ ಆಶ್ಚರ್ಯಚಕಿತನಾದೆ. ಶೆಖಾವತ್ ಅವರೇ, ಅಲ್ಲಿ ಇರುವುದು ಡಬಲ್ ಎಂಜಿನ್ ಸರ್ಕಾರ. ಹಾಗಾದರೆ, ದೋಷ ಹೊರಿಸಲು ನೀವು ಯಾರನ್ನು ಹುಡುಕುತ್ತಿದ್ದೀರಿ?

ಎಂ.ಕೆ.ವೇಣು, ಪತ್ರಕರ್ತ

25 ವರ್ಷಗಳ ಹಿಂದೆ

ಸೋಮವಾರ, 3-8-1998

● **ರಾಜೀವ್ ಹತ್ಯೆ: ವಿಶೇಷ ತನಿಖಾ ಸಂಸ್ಥೆ ರಚನೆಗೂ ಅತೃಪ್ತಿ– ಸರ್ಕಾರದ ಕ್ರಮ ಕೈಗೊಂಡ ವರದಿಗೆ ಕಾಂಗ್ರೆಸ್ ತಿರಸ್ಕಾರ**

ನವದೆಹಲಿ, ಆಗಸ್ಟ್ 2: ರಾಜೀವ್ ಗಾಂಧಿ ಹತ್ಯೆ ಸಂಚು ಕುರಿತಂತೆ ವಿಚಾರಣೆ ನಡೆಸಿದ ಜೈನ್ ಆಯೋಗದ ಅಂತಿಮ ವರದಿಗೆ ಕೇಂದ್ರ ಸರ್ಕಾರ ಕ್ರಮ ಕೈಗೊಂಡ ವರದಿಯನ್ನು (ಎಟಿಆರ್) 'ರಾಜಕೀಯಪ್ರೇರಿತ' ಎಂದು ಬಣ್ಣಿಸಿರುವ ಕಾಂಗ್ರೆಸ್, ಈ ವರದಿಯನ್ನು ತಿರಸ್ಕರಿಸಿದೆ.

ಸೋನಿಯಾ ಗಾಂಧಿ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಅಂತಿಮ ವರದಿ ಮತ್ತು ಕ್ರಮ ಕೈಗೊಂಡ ವರದಿಯ ಬಗ್ಗೆ ಚರ್ಚಿಸಿದ ನಂತರ ಎಟಿಆರ್ ಅನ್ನು ತಿರಸ್ಕರಿಸಲು ನಿರ್ಧರಿಸಿತು.

ಎಟಿಆರ್ ಅನ್ವಯ, ಜೈನ್ ಆಯೋಗದಲ್ಲಿ ಗುಮಾನಿ ಪಟ್ಟಿರುವಂತೆ ರಾಜೀವ್ ಗಾಂಧಿ ಹತ್ಯೆ ಬಗ್ಗೆ ಇನ್ನಷ್ಟು ತನಿಖೆ ನಡೆಸಲು ಎಲ್ಲ ತನಿಖಾ ವಿಭಾಗಗಳನ್ನೊಳಗೊಂಡ ವಿಶೇಷ ತನಿಖಾ ಸಂಸ್ಥೆಯನ್ನು ರಚಿಸಲು ಕೇಂದ್ರ ಸರ್ಕಾರ ನಿರ್ಧರಿಸಿರುವುದಕ್ಕೂ ಕಾಂಗ್ರೆಸ್ ಅಸಮಾಧಾನ ವ್ಯಕ್ತಪಡಿಸಿದೆ.

● **ಎಕ್ಸ್‌ಪ್ರೆಸ್ ಹೆದ್ದಾರಿಗೆ ಕೂಡಿಬಂದ ಕಾಲ**

ನವದೆಹಲಿ, ಆಗಸ್ಟ್ 2– ಜಮೀನು ವಶ ಕಾರ್ಯ ಮುಂದಿನ ತಿಂಗಳು ಆರಂಭವಾಗುವುದರೊಡನೆ ಬಹುಕಾಲದಿಂದ ನನೆಗುದಿಗೆ ಬಿದ್ದಿರುವ ಹಾಗೂ ಮಹತ್ವಾಕಾಂಕ್ಷೆಯ ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ಕಾರ್ಯ ಕೊನೆಗೂ ಸಾಕಾರಗೊಳ್ಳುವ ಸಾಧ್ಯತೆಗಳು ಗೋಚರಿಸಿವೆ.

ಮಾರ್ಗದಲ್ಲಿ ಒಟ್ಟು ಐದು ಸ್ಥಳಗಳಲ್ಲಿ ಉಪನಗರ ಸಂಕೀರ್ಣಗಳು ಸೇರಿರುವ ಯೋಜನೆಯನ್ನು ದೇಶದ ಪ್ರಮುಖ ಖಾಸಗಿ ನಿರ್ಮಾಣ ಸಂಸ್ಥೆಯಾದ ಕಲ್ಯಾಣಿ ಕೈಗಾರಿಕಾ ಗುಂಪಿಗೆ ವಹಿಸಿಕೊಡಲಾಗಿದ್ದು, ಈ ಗುಂಪು ಇದಕ್ಕಾಗಿ 'ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್' (ಎನ್‌ಐಸಿಇ) ಎಂಬ ಜಂಟಿ ಅಂಗಸಂಸ್ಥೆಯನ್ನು ಸ್ಥಾಪಿಸಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 3-8-1973

● **ಕೇರಳ ಬಂದ್: ಉದ್ರಿಕ್ತ ಗುಂಪಿನ ಮೇಲೆ ಗುಂಡು– ಮೂವರ ಸಾವು**

ತಿರುವನಂತಪುರ, ಆಗಸ್ಟ್ 2– ಐದು ವಿರೋಧ ಪಕ್ಷಗಳ ಕರೆಯ ಮೇರೆಗೆ ಕೇರಳ ಇಂದು ಆಚರಿಸಿದ ಭಾಗಶಃ ಬಂದ್‌ನಲ್ಲಿ ಗೋಲಿಬಾರ್‌ನಿಂದ ಇಬ್ಬರು, ಇರಿತದಿಂದ ಒಬ್ಬ ಹೀಗೆ ಒಟ್ಟು ಮೂವರು ಸತ್ತರು.

ಅಲೆಪ್ಪಿಗೆ ನಲವತ್ತೈದು ಕಿಲೊಮೀಟರ್ ದೂರದಲ್ಲಿರುವ ಪಂಡಾಲಂ ಬಳಿಯ ಪುರಂಬಾಲ ಗ್ರಾಮದಲ್ಲಿ ಮೂರು ಸಾವಿರ ಜನರ ಗುಂಪು ಕಾರೊಂದರ ಮೇಲೆ ಕಲ್ಲಿನ ಮಳೆಗರೆದದ್ದನ್ನು ಅನುಸರಿಸಿ ಪೊಲೀಸರು ಗುಂಡು ಹಾರಿಸಿದರು.

ಹನ್ನೆರಡು ಔನ್ಸ್ ಪಡಿತರ ಸಿಗುವಂತೆ ಸಾಕಷ್ಟು ಆಹಾರಧಾನ್ಯವನ್ನು ಸರಬರಾಜು ಮಾಡುವುದಾಗಿ ವಚನವಿತ್ತಿದ್ದ ಕೇಂದ್ರ ಸರ್ಕಾರವು ತನ್ನ ವಚನವನ್ನು ಪಾಲಿಸದೇ ಇರುವುದರ ವಿರುದ್ಧ ಐದು ಪಕ್ಷಗಳು 'ಕೇರಳ ಬಂದ್'ಗೆ ಕರೆ ಇತ್ತಿದ್ದವು.

● **ಸರ್ಕಾರದ ಸುಗ್ರೀವಾಜ್ಞೆ: ಖಾಸಗಿ ಶಾಲಾ ಕಾಲೇಜು ಶಿಸ್ತು, ವ್ಯವಹಾರ ನಿಯಂತ್ರಣ**

ಬೆಂಗಳೂರು, ಆಗಸ್ಟ್ 2– ರಾಜ್ಯದಾದ್ಯಂತ ಇರುವ ಖಾಸಗಿ ಶಾಲಾ, ಕಾಲೇಜುಗಳ ಶಿಸ್ತು ಮತ್ತು ವ್ಯವಹಾರಗಳ ಮೇಲೆ ನಿಯಂತ್ರಣ ವಿಧಿಸಿ, ಅವುಗಳ ಅವ್ಯವಹಾರಗಳಿಗೆ ತಡೆಹಾಕುವ ಸುಗ್ರೀವಾಜ್ಞೆಯೊಂದನ್ನು ರಾಜ್ಯ ಸರ್ಕಾರ ಹೊರಡಿಸಿದೆ.

ವಿಧಾನ ಮಂಡಲದಲ್ಲಿಯೂ ಇನ್ನಿತರ ವೇದಿಕೆಗಳಲ್ಲಿಯೂ ಬಹುವಾಗಿ ಟೀಕೆಗೆ ಒಳಗಾಗಿರುವ ಈ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಇದೀಗ ಪ್ರಥಮ ಬಾರಿ ಸರ್ಕಾರದ ಪರಿಣಾಮಕಾರಿ ಹತೋಟಿ ಬರಲಿದೆ.

ಬಡದೇಶಗಳ ಸಂಕಷ್ಟಕ್ಕೆ ಮುಕ್ತವಾಗಿ, ತ್ವರಿತವಾಗಿ ಮಿಡಿಯುವ ಅವಶ್ಯ ಇಂದಿನ ತುರ್ತು

ಬಡದೇಶಗಳಿಗೆ ಸಾಲದ ಉರುಳು

ವಿಶ್ಲೇಷಣೆ

ಟಿ.ಎಸ್.ವೇಣುಗೋಪಾಲ್

ಜಗತ್ತಿನಲ್ಲಿ ಇಂದು ಐದು ಜನರಲ್ಲಿ ಒಬ್ಬರು ಸಾಲದ ವಿಪತ್ತಿನಲ್ಲಿರುವ ದೇಶದಲ್ಲಿದ್ದಾರೆ. ಮೂರರಲ್ಲಿ ಎರಡು ದೇಶಗಳು ಸಾಲದ ವಿಪತ್ತಿನಲ್ಲಿವೆ. ತೀವ್ರ ಸಂಕಷ್ಟದಲ್ಲಿರುವ 9 ದೇಶಗಳಲ್ಲಿ 8 ಆಫ್ರಿಕಾದಲ್ಲಿವೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಅಂದಾಜಿನ ಪ್ರಕಾರ ಒಟ್ಟು 72 ದೇಶಗಳು ಸಾಲದ ಸಂಕಷ್ಟದಲ್ಲಿವೆ. ಸಾಲ ತೀರಿಸಲಾಗದೇ ಹೋದಾಗ ಇಲ್ಲವೇ ನೆರವಿಗಾಗಿ ಜಿ20ಕ್ಕೆ ಅಥವಾ ಐಎಂಎಫ್‌ಗೆ ಮನವಿ ಮಾಡಿಕೊಂಡಾಗ ಮಾತ್ರ ಸುದ್ದಿಯಾಗುತ್ತದೆ.

ಈಗ ಜಾಂಬಿಯಾ, ಘಾನಾ ದೇಶಗಳು ಸುದ್ದಿಯಲ್ಲಿವೆ. ಸಾಲ ತೀರಿಸಲಾಗುವುದಿಲ್ಲ ಎಂದು ಘೋಷಿಸಿವೆ. ಜಾಂಬಿಯಾವು ಆಫ್ರಿಕಾದಲ್ಲೇ ಅತಿಹೆಚ್ಚು ತಾಮ್ರ ತಯಾರಿಸುವ ಎರಡನೇ ದೇಶ. ಸಾಲ ತೀರಿಸಲಾಗುವುದಿಲ್ಲ ಎಂದು ತಿಳಿಸಿದ ಮೊದಲ ದೇಶ. ಚಾಡ್ ಹಾಗೂ ಇಥಿಯೋಪಿಯಾ ಸಾಲದ ಮರು ಹೊಂದಾಣಿಕೆಗೆ ಮನವಿ ಮಾಡಿಕೊಂಡಿವೆ. ಶ್ರೀಲಂಕಾ ಹಲವು ತಿಂಗಳಿನಿಂದ ಸಾಲ ಪಾವತಿಗಾಗಿ ತಿಣುಕುತ್ತಿದೆ. ಪಾಕಿಸ್ತಾನದ ಹಣಕಾಸು ಸಚಿವರು 'ದೇವರೇ ಕಾಪಾಡಬೇಕು' ಎಂದು ಕೈಚೆಲ್ಲಿ ಕೂತಿದ್ದಾರೆ. ಪಟ್ಟಿ ಬೆಳೆಯುತ್ತದೆ.

ಸಂಕಷ್ಟದ ಸ್ಥಿತಿಗೆ ಹಲವು ವಿವರಣೆಗಳು ಸಾಧ್ಯ. ಈ ದೇಶಗಳು ಖರ್ಚನ್ನು ನಿಭಾಯಿಸಲಾಗದೆ ಸಾಲ ಮಾಡಿಕೊಂಡಿದ್ದವು. ಆಗ ಬಡ್ಡಿದರ ಕಡಿಮೆ ಇತ್ತು. ಈಗ ಬಡ್ಡಿದರ ಏರಿದೆ. ಮರುಪಾವತಿ ದುಬಾರಿಯಾಗಿದೆ. ಕೋವಿಡ್- 19, ಉಕ್ರೇನ್ ಯುದ್ಧ, ಹದಗೆಡುತ್ತಿರುವ ಹವಾಮಾನದಂತಹವು ಪರಿಸ್ಥಿತಿ ಬಿಗಡಾಯಿಸುವಂತೆ ಮಾಡಿವೆ. ಅಮೆರಿಕ, ಯುರೋಪ್ ಇವೆಲ್ಲಾ ಹಣದುಬ್ಬರವನ್ನು ನಿಯಂತ್ರಿಸಲು ಬಡ್ಡಿದರವನ್ನು ಏರಿಸಿವೆ. ಹಾಗಾಗಿ ಬಂಡವಾಳವು ಬಡ ದೇಶಗಳಿಂದ ಅಲ್ಲಿಗೆ ಹರಿದುಹೋಗುತ್ತಿದೆ. ಈ ದೇಶಗಳ ಕರೆನ್ಸಿ ಮೌಲ್ಯ ಕುಸಿದಿದೆ. ಆಮದು ದುಬಾರಿಯಾಗಿದೆ. ರಫ್ತಿನಿಂದ ಬರುತ್ತಿದ್ದ ವರಮಾನ ಕಮ್ಮಿಯಾಗಿದೆ. ವಿದೇಶಿ ವಿನಿಮಯದ ಮೀಸಲು ಕರಗಿದೆ. ಮರುಪಾವತಿಯನ್ನು ಬಹುತೇಕ ಡಾಲರಿನಲ್ಲಿ ಮಾಡಬೇಕಾಗಿರುವುದರಿಂದ ಹೆಚ್ಚು ಹಣ ತೆರಬೇಕಾಗುತ್ತದೆ.

2010ರಲ್ಲಿ ಮರುಪಾವತಿಗಾಗಿ ಆಫ್ರಿಕಾದ ದೇಶಗಳು 1,700 ಕೋಟಿ ಡಾಲರ್ ಕಟ್ಟುತ್ತಿದ್ದವು, 2024ರಲ್ಲಿ ಅದು 7,400 ಕೋಟಿ ಡಾಲರ್ ಆಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಬಹುತೇಕ ಬಡದೇಶಗಳು ಉಳಿದ ಖರ್ಚುಗಳಿಗಿಂತ ಸಾಲದ ಮರುಪಾವತಿಗೆ ಹೆಚ್ಚು ವೆಚ್ಚ ಮಾಡುತ್ತಿವೆ. ಕೆನ್ಯಾ ತನ್ನ ವರಮಾನದ ಶೇ 60ರಷ್ಟನ್ನು ಸಾಲಕ್ಕಾಗಿ ಕಟ್ಟುತ್ತಿದೆ. ಐಎಂಎಫ್ ಪ್ರಕಾರವೇ 2021ರಲ್ಲಿ ಬಡರಾಷ್ಟ್ರಗಳು ತಮ್ಮ ಒಟ್ಟು ಖರ್ಚಿನ ಶೇ 33ರಷ್ಟನ್ನು ಸಾಲದ ಮರುಪಾವತಿಗಾಗಿ ಖರ್ಚು ಮಾಡಿವೆ. ಈ ದೇಶಗಳು ಶಿಕ್ಷಣ, ಆರೋಗ್ಯ, ಆಹಾರ ಹಾಗೂ ಸಾಮಾಜಿಕ ರಕ್ಷಣೆಗೆ ಖರ್ಚು ಮಾಡುವುದಕ್ಕಿಂತ ಎರಡು ಪಟ್ಟನ್ನು ಸಾಲದ ಮರುಪಾವತಿಗೆ ಖರ್ಚು ಮಾಡುತ್ತಿವೆ. ಇವೆಲ್ಲಾ ಬಹುತೇಕ ಹಸಿದ ಜನರೇ ಇರುವ ದೇಶಗಳು. ಹವಾಮಾನವೂ ಕೈಕೊಡುತ್ತಿದೆ. ಈ ದೇಶಗಳಿಗೆ ಮೂಲ ಸೌಕರ್ಯ ಒದಗಿಸುವುದಕ್ಕೆ ಬಂಡವಾಳ ಹೂಡುವ ಸಾಮರ್ಥ್ಯವೂ ಕಡಿಮೆಯಾಗುತ್ತಿದೆ. ಇವು ಬರೀ ಮಾನವೀಯತೆಯ ಪ್ರಶ್ನೆಗಳಲ್ಲ. ಇದರಿಂದಾಗುವ ಸಾಮಾಜಿಕ ಹಾಗೂ ರಾಜಕೀಯ ಪರಿಣಾಮಗಳು ದೇಶಕ್ಕೆ ಸೀಮಿತವಾಗಿ ಇರುವುದಿಲ್ಲ. ಅವು ಜಗತ್ತನ್ನೂ ಕಾಡುತ್ತವೆ. ಹಾಗಾಗಿ ಜಗತ್ತು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಮೊದಲಿಗೆ, ಸಾಲ ಕೊಟ್ಟವರಲ್ಲಿ ಒಮ್ಮತ ಮೂಡಬೇಕಾಗಿದೆ.

ಹಿಂದುಳಿದ ದೇಶಗಳು ಒಂದೆರಡು ದಶಕಗಳ ಹಿಂದಿನವರೆಗೂ ಮುಂದುವರಿದ ಪಾಶ್ಚಾತ್ಯ ದೇಶಗಳ ಪ್ಯಾರಿಸ್ ಕ್ಲಬ್ ಹಾಗೂ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯುತ್ತಿದ್ದವು. ಈಗ ಚೀನಾ ಸಾಲ ನೀಡುತ್ತಿದೆ. ಖಾಸಗಿಯವರೂ ಸಾಲ ಕೊಡುತ್ತಿದ್ದಾರೆ. ಖಾಸಗಿಯವರು ಕೊಡುತ್ತಿರುವ ಸಾಲದ ಪ್ರಮಾಣ ಹೆಚ್ಚಾಗುತ್ತಿದೆ. ಹಾಗಾಗಿ, ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಿ ಬಂದಾಗ ಖಾಸಗಿಯವರ ಹಿತಾಸಕ್ತಿ ಮುಖ್ಯವಾಗುತ್ತದೆ. ಸಾಲದ ಮರು ಹೊಂದಾಣಿಕೆಯ ಮಾತುಕತೆಯಲ್ಲಿ ಒಮ್ಮತ ಕಷ್ಟವಾಗುತ್ತದೆ.

ಘಾನಾದ ಉದಾಹರಣೆ ಇದನ್ನು ಸ್ಪಷ್ಟಪಡಿಸುತ್ತದೆ. 2022ರ ಮೂರನೆಯ ತ್ರೈಮಾಸಿಕದಲ್ಲಿ ಅದರ ವಿದೇಶಿ ಸಾಲ ಒಟ್ಟು 28.4 ಬಿಲಿಯನ್ ಡಾಲರ್ (ಅಂದಾಜು ₹ 2.32 ಲಕ್ಷ ಕೋಟಿ) ಇತ್ತು. ಅದರಲ್ಲಿ 190 ಕೋಟಿ ಡಾಲರ್ ಪ್ಯಾರಿಸ್ ಕ್ಲಬ್ ದೇಶಗಳಿಂದ, 170 ಕೋಟಿ ಡಾಲರ್ ಚೀನಾದಿಂದ ಬಂದಿದ್ದು, ಆದರೆ ಖಾಸಗಿಯವರಿಂದ 1,630 ಕೋಟಿ ಡಾಲರ್ ಅಂದರೆ ಶೇಕಡ 57ರಷ್ಟು ಸಾಲ ತೆಗೆದುಕೊಂಡಿತ್ತು. ಘಾನಾವು ಸಾಲದ ಮರುಹೊಂದಾಣಿಕೆಗಾಗಿ ಅಂದರೆ ರಿಯಾಯಿತಿಗಾಗಿ ಸಾಲ ದಾತರಿಗೆ ಮನವಿ ಮಾಡಿಕೊಂಡಾಗ ಸಮಸ್ಯೆಯಾಗಿದ್ದು ಖಾಸಗಿಯವರಿಂದ. ದೊಡ್ಡ ಸಾಲದಾತರ ನಡುವೆ ಒಮ್ಮತ ಸಾಧ್ಯವಾಗಲಿಲ್ಲ ಅನ್ನುವ ಕಾರಣಕ್ಕೆ ಜಗತ್ತಿನ ಬಡವರು ಬೆಲೆ ತೆರುವಂತೆ ಆಗಬಾರದು. ಪರಿಹಾರ ಸಿಗುವುದಷ್ಟೇ ಅಲ್ಲ ಬೇಗ ಸಿಗುವುದೂ ಮುಖ್ಯವಾಗುತ್ತದೆ.

ಸಾಲದ ಬಿಕ್ಕಟ್ಟನ್ನು ಪರಿಹರಿಸುವ ಕೆಲಸ ಹೆಚ್ಚು ಸಂಕೀರ್ಣವಾದದ್ದು. ಕೋವಿಡ್ ಪಿಡುಗಿನ ಸಂದರ್ಭದಲ್ಲಿ ಸಂಕಷ್ಟದಲ್ಲಿದ್ದ ಕೆಲವು ದೇಶಗಳಿಗೆ 2021ರ ಡಿಸೆಂಬರ್‌ವರೆಗೆ ಸಾಲದ ಮರುಪಾವತಿಯನ್ನು ಸ್ಥಗಿತಗೊಳಿಸಲು ಜಿ20 ಅವಕಾಶ ಮಾಡಿಕೊಟ್ಟಿತು. ಅದು ಬರೀ ತಾತ್ಕಾಲಿಕ ಉಪಶಮನವಾಗಿತ್ತು, ಪರಿಹಾರವಾಗಿರಲಿಲ್ಲ. ನಂತರ ಅದಕ್ಕೆ ಪೂರಕವಾಗಿ ಸಾಲದ ಬಿಕ್ಕಟ್ಟಿನ ಪರಿಹಾರಕ್ಕೆ ಒಂದು ಸಮಾನ ಚೌಕಟ್ಟನ್ನು ಹಾಕಿಕೊಳ್ಳುವ ಪ್ರಕ್ರಿಯೆಯನ್ನು ಜಿ20 ಸೂಚಿಸಿತು. ಅತ್ಯಂತ ಹಿಂದುಳಿದ ದೇಶಗಳು ಸಾಲದ ಮರುಹೊಂದಾಣಿಕೆಗೆ ಮನವಿ ಸಲ್ಲಿಸಬಹುದಿತ್ತು. ದೇಶಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಅವುಗಳಿಗೆ ಸಾಲದಲ್ಲಿ ರಿಯಾಯಿತಿಯನ್ನು ತೋರಿಸುವ, ಅವಶ್ಯಕ ಖರ್ಚುಗಳಿಗೆ ಅವಕಾಶ ಮಾಡಿಕೊಡುವ, ಖಾಸಗಿಯವರೂ ಸೇರಿದಂತೆ ಸಾಲ ಕೊಟ್ಟವರನ್ನೆಲ್ಲಾ ಒಂದೆಡೆ ಸೇರಿಸಿ ಒಂದು ನಿರ್ಧಾರಕ್ಕೆ ಬರುವ ಹಾಗೂ ಅದನ್ನು ಜಾರಿಗೆ ತರುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಚಾಡ್, ಜಾಂಬಿಯಾ ಹಾಗೂ ಇಥಿಯೋಪಿಯಾ ಪರಿಹಾರಕ್ಕಾಗಿ 2021ರಲ್ಲೇ ಮನವಿ ಮಾಡಿಕೊಂಡಿದ್ದವು. ಆದರೆ ಇಲ್ಲಿಯವರೆಗೂ ಅವಕ್ಕೆ ಪರಿಹಾರ ಸಿಕ್ಕಿಲ್ಲ. ನಿಜ, ಒಮ್ಮತಕ್ಕೆ ಬರುವ ಪ್ರಕ್ರಿಯೆ ಕಷ್ಟಕರದ್ದು. ಆದರೆ ಅಮೆರಿಕದಲ್ಲಿ ಬ್ಯಾಂಕುಗಳು ಇತ್ತೀಚೆಗೆ ಬಿಕ್ಕಟ್ಟಿನಲ್ಲಿ ಸಿಲುಕಿದಾಗ ಅವುಗಳಿಗೆ ಪರಿಹಾರವನ್ನು ತಕ್ಷಣದಲ್ಲೇ ಕೊಡುವುದಕ್ಕೆ ಸಾಧ್ಯವಾಗಿದೆ. ಅಲ್ಲೂ ತೀರಾ ಕಠಿಣವಾದ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಈ ದೇಶಗಳು ಅಂತಹುದೇ ಪರಿಹಾರವನ್ನು ಕೇಳುತ್ತಿವೆ. ಇವೂ ಅಂತಹುದೇ ಕಾಳಜಿಯನ್ನು ಬೇಡುತ್ತವೆ.

ಸಾಲಗಾರ ದೇಶಗಳು ಸಂಕಷ್ಟದಲ್ಲಿದ್ದಾಗ ನೆರವಿಗಾಗಿ ಐಎಂಎಫ್ ಮೊರೆ ಹೋಗುತ್ತವೆ. ಐಎಂಎಫ್ ಸಾಲ ಕೊಡುವಾಗ ಕೆಲವು ಷರತ್ತುಗಳನ್ನು ಹಾಕುತ್ತದೆ. ಉದಾಹರಣೆಗೆ, ಸರ್ಕಾರಗಳು ವಿತ್ತೀಯ ಕ್ರೋಡೀಕರಣ ಮಾಡಬೇಕು ಅಂದರೆ ಖರ್ಚನ್ನು ಕಡಿಮೆ ಮಾಡುವ ಮೂಲಕ ಬಜೆಟ್ ಕೊರತೆಯನ್ನು ಕಡಿಮೆ ಮಾಡಬೇಕೆಂದು ಸೂಚಿಸುತ್ತದೆ. ಇದರಿಂದ ಆ ದೇಶಗಳ ಆರ್ಥಿಕ ಸ್ಥಿತಿ ಸುಧಾರಿಸುತ್ತದೆ. ಸಾಲ-ಜಿಡಿಪಿಯ ಅನುಪಾತ ಕಡಿಮೆಯಾಗುತ್ತದೆ ಎನ್ನುವುದು ಅದರ ನಿಲುವು. ಆದರೆ ಈ ಬಗ್ಗೆ ಬಹಳಷ್ಟು ಟೀಕೆಗಳಿವೆ. ಹಲವು ದೇಶಗಳು ಇಂದು ದುಃಸ್ಥಿತಿಯಲ್ಲಿ ಇರುವುದಕ್ಕೆ ಸರ್ಕಾರಗಳ ವೆಚ್ಚದ ಕಡಿತವೇ ಕಾರಣ ಎನ್ನಲಾಗಿದೆ. ಐಎಂಎಫ್‌ನ ಇತ್ತೀಚಿನ ಸಂಶೋಧನಾ ವರದಿಯೂ ಇದೇ ನಿಲುವಿಗೆ ಬಂದಿದೆ.

ಸರ್ಕಾರಿ ವೆಚ್ಚ ಕಡಿತಗೊಳಿಸುವುದರಿಂದ ಸಾಲ–ಜಿಡಿಪಿ ಅನುಪಾತ ಕಡಿಮೆಯಾಗುವುದಿಲ್ಲ. ಯಾಕೆಂದರೆ ಅದು ಆರ್ಥಿಕ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಬದಲಿಗೆ, ಜಿಡಿಪಿ ಹೆಚ್ಚಳಕ್ಕೆ ಗಮನ ಕೊಟ್ಟರೆ ಸಾಲದ ಅನುಪಾತ ಕಡಿಮೆಯಾಗುತ್ತದೆ ಎಂದು ಆ ವರದಿ ಹೇಳಿದೆ. ಆದರೆ ಈ ಸಂಶೋಧನೆಯು ಐಎಂಎಫ್ ನೀತಿಯ ಮೇಲೆ ಏನೂ ಪರಿಣಾಮ ಬೀರಿದಂತೆ ಕಾಣುವುದಿಲ್ಲ. ಅದು ಇನ್ನೂ ತನ್ನ ಹಿಂದಿನ ನಿಲುವಿಗೇ ಅಂಟಿಕೊಂಡಿದೆ. ಇತ್ತೀಚೆಗೆ ಅದು ಶ್ರೀಲಂಕಾದೊಂದಿಗೆ ಸಾಲದ ಮರುಹೊಂದಾಣಿಕೆಗೆ ಮಾಡಿಕೊಂಡ ಒಪ್ಪಂದದಲ್ಲಿ ವಿತ್ತೀಯ ಕ್ರೋಡೀಕರಣಕ್ಕೆ ಒತ್ತಾಯಿಸಿದೆ. ಆ ಮೂಲಕ ಉಳಿತಾಯ ಬಜೆಟ್ಟನ್ನು ಸಾಧಿಸಬೇಕೆಂದು ಸೂಚಿಸಿದೆ. ಘಾನಾ ಹಾಗೂ ಜಾಂಬಿಯಾದಲ್ಲೂ ಐಎಂಎಫ್ ವಿತ್ತೀಯ ಸಮತೋಲನ ಸಾಧಿಸಬೇಕೆಂದು ಬಯಸುತ್ತದೆ. ಇಂಧನದ ಮೇಲೆ ತೆರಿಗೆ, ಸಬ್ಸಿಡಿ ಕಡಿತದಂತಹ ಹಳೆಯ ಸಲಹೆಗಳಿಗೆ ಜೋತುಬಿದ್ದಿದೆ.

ಬದಲಾದ ನಿಲುವು ಬರೀ ಸಂಶೋಧನಾ ವಿಭಾಗಕ್ಕೆ ಸೀಮಿತವಾಗಿದೆ. ಸರ್ಕಾರಿ ವೆಚ್ಚವನ್ನು ಕಡಿತಗೊಳಿಸುವುದು ಅನವಶ್ಯಕ ಮಾತ್ರವಲ್ಲ ಹಾನಿಕಾರಕವೂ ಹೌದು. ವಿತ್ತೀಯ ಕ್ರೋಡೀಕರಣದಂತಹ ಕ್ರಮಗಳು ವಿಫಲವಾಗುತ್ತಿವೆ ಎಂದು ತಿಳಿದ ಮೇಲೆ ಅದಕ್ಕಾಗಿ ಒತ್ತಾಯಿಸದಿರುವುದು ಒಳ್ಳೆಯದು. ಬಡದೇಶಗಳ ಸಂಕಷ್ಟಕ್ಕೆ ಮುಕ್ತ ಮನಸ್ಸಿನಿಂದ, ತ್ವರಿತವಾಗಿ ಮಿಡಿಯುವ ಅವಶ್ಯಕತೆ ಇಂದಿನ ತುರ್ತು.

ಚುರುಮುರಿ

ಬಡ ಸರ್ಕಾರ!

● ಗುರು ಪಿ.ಎಸ್.

'ರೀ ತರಕಾರಿ, ಸೊಪ್ಪು ಎಲ್ಲ ಖಾಲಿ ಆಗಿದೆ. ದುಡ್ಡು ಕೊಡಿ, ಇಲ್ಲ ನೀವೇ ಮಾರ್ಕೆಟ್‌ಗೆ ಹೋಗಿ ಎಲ್ಲ ತಗೊಂಡ್ ಬನ್ನಿ' ಹೆಂಡತಿಯ ಸುಪ್ರಭಾತ ಆರಂಭವಾಯಿತು.

'ಮೊನ್ನೆ ತಾನೆ 500 ರೂಪಾಯಿಗೆ ತರಕಾರಿ ಎಲ್ಲ ತಂದಿದ್ನಲ್ಲ. ಇಷ್ಟು ಬೇಗ ಖಾಲಿ ಆಯ್ತಾ?' ಆಶ್ಚರ್ಯದಿಂದ ಕೇಳಿದೆ.

'ಟೊಮೆಟೊ ಜೊತೆಗೆ ಎಲ್ಲ ತರಕಾರಿ, ಸೊಪ್ಪಿನ ರೇಟ್ ಜಾಸ್ತಿ ಆಗಿದೆ. ಎರಡು ಕೆ.ಜಿ. ಟೊಮೆಟೊ ತರ್ತಿದ್ದೋಳು ಅರ್ಧ ಕೆ.ಜಿ. ತಂದಿದೀನಿ. ಎರಡು– ಮೂರು ಥರದ ತರಕಾರಿ ಕಾಲ್‌ಕಾಲ್ ಕೆ.ಜಿ. ತಂದಿದೀನಿ... ಆ ಕಡೆ ಮೊಸರನ್ನ ತಿಂದ್ಕೊಂಡಿರೋಣ ಅಂದ್ರೆ ಹಾಲು, ಮೊಸರಿನ ರೇಟ್ ಕೂಡ ಜಾಸ್ತಿ ಆಗಿದೆ. ನಮ್ ಪಕ್ಷ ಅಧಿಕಾರಕ್ಕೆ ಬಂದ್ರೆ ಹಂಗ್ ಮಾಡ್ತಾರೆ, ಹಿಂಗ್ ಮಾಡ್ತಾರೆ ಅಂತ ಭಾಷಣ ಬಿಗೀತಾ ಇದ್ರಿ, ಈಗ ಅನುಭವಿಸಿ'.

'ಹಾಲು, ತರಕಾರಿ ರೇಟ್ ಜಾಸ್ತಿ ಆದ್ರೆ ಏನಾಯ್ತು, ನಮ್ಮ ರೈತರು, ಬೆಳೆಗಾರರು ಉದ್ಧಾರ ಆಗ್ತಾರೆ ಬಿಡು' ಎಂದು ಸಮರ್ಥಿಸಿಕೊಂಡೆ.

'ಐದು ವರ್ಷ ಆದ್ಮೇಲೆ ನಮ್ಮ ಬಡವರ ಸರ್ಕಾರ ಬಂತು ನೋಡು ಅಂತಿದ್ರಿ. ಈಗ ನಮ್ಮಂಥ ಮಿಡ್ಲ್ ಕ್ಲಾಸ್ ಜನರ ಹೊಟ್ಟೆ ಮೇಲೆ ಹೊಡೀತಿದಾರಲ್ರೀ ಎಲ್ಲದರ ಬೆಲೆ ಏರಿಸಿ'.

'ಬಡವರ ಸರ್ಕಾರ ಅಂದ್ರೆ ಏನಂದುಕೊಂಡಿದೀಯ?'

'ಏನು?'

'ಬಡ ಸರ್ಕಾರ ಅಂತ... ಖಜಾನೆಯಲ್ಲಿ ದುಡ್ಡಿಲ್ಲ ಅನಿಸುತ್ತೆ, ಬೆಲೆ ಏರಿಸಲಿ ಬಿಡು'.

'ಹೌದಾ, ಸರಿ ಬಿಡಿ. ಇನ್ಮೇಲೆ ತರಕಾರಿ, ಹಾಲಿಗೆ ಮೂರು ದಿನಕ್ಕೊಮ್ಮೆ ಒಂದು ಸಾವಿರ ರೂಪಾಯಿ ಕೊಡಿ. ನಿಮ್ಮ ಬಡ ಸರ್ಕಾರಕ್ಕೆ ಹೆಲ್ಪ್ ಮಾಡಿ'.

'ಎಲ್ಲಿಂದ ತರಲೇ, ಕಂಪನಿಯವರು ಸ್ಯಾಲರಿ ಜಾಸ್ತಿ ಮಾಡಬೇಕಲ್ಲ'.

'ಅದೆಲ್ಲ ನಂಗೊತ್ತಿಲ್ಲ ರೀ... ಮನೆ ಬಜೆಟ್ ಇನ್ಮುಂದೆ ಡಬಲ್ ಮಾಡಬೇಕಷ್ಟೇ'.

'ಹಾಗಾದ್ರೆ ನಾನೂ ನಮ್ಮ ಸರ್ಕಾರದಂಗೇ ಆಗಿಬಿಡ್ತೀನಿ'.

'ಅಂದ್ರೆ?'

'ಬಡ ಉದ್ಯೋಗಿ!'

ಚರ್ಚೆ

ಮಳೆಗಾಲದ ಪ್ರವಾಸ ಮತ್ತು ಸಂಯಮ

ರೀಲ್ಸ್ ಮಾಡುವ ಸಲುವಾಗಿ ಅಪಾಯವನ್ನು ಮೈಮೇಲೆ ಎಳೆದುಕೊಂಡು ಜೀವ ತೆರುತ್ತಿರುವ ಯುವಜನರು, ತಮ್ಮ ಕುಟುಂಬವನ್ನು ದುಃಖದ ಮಡುವಿಗೆ ದೂಡುತ್ತಿದ್ದಾರೆ

● ದೀಪಾ ಹಿರೇಗುತ್ತಿ

ಇತ್ತೀಚಿನ ದಿನಗಳಲ್ಲಿ ನಡೆದ ಬೇರೆ ಬೇರೆ ಪ್ರಕರಣಗಳಲ್ಲಿ ಸಮುದ್ರ, ನದಿ, ಕೃಷಿಹೊಂಡ, ಜಲಪಾತದಂತಹ ಕಡೆಗಳಲ್ಲಿ ಜನರು ಜೀವ ಕಳೆದುಕೊಂಡ ವಿಡಿಯೊಗಳು ಎಲ್ಲೆಡೆ ವೈರಲ್ ಆಗಿ ಆತಂಕ ಹುಟ್ಟಿಸಿದವು. ಮಕ್ಕಳೆದುರೇ ಕೊಚ್ಚಿಹೋದ ತಂದೆ ತಾಯಿ, ಸ್ನೇಹಿತನೆದುರಿಗೇ ಕಾಲು ಜಾರಿ ಜಲಪಾತದ ರಭಸದ ಹರಿವಿನಲ್ಲಿ ಮಾಯವಾಗಿ ಹೋದ ತರುಣ, ನೋಡನೋಡುತ್ತಲೇ ಸಮುದ್ರದ ಬೃಹತ್ ಅಲೆಯ ಪಾಲಾದ ಸೋದರಿಯರು! ಅಬ್ಬ, ಗುರುತು ಪರಿಚಯ ಇಲ್ಲದ ನಮಗೇ ಜೀವ ನಡುಗುವಾಗ ತಮ್ಮವರದ್ದೇ ವಿಡಿಯೊಗಳನ್ನು ನೋಡಬೇಕಾದ ಜನರ ಪರಿಸ್ಥಿತಿ?

ಅವು ಆಕಸ್ಮಿಕ ಅವಘಡಗಳಾಗಿದ್ದರೆ ದಿಗಿಲಿನ ಪ್ರಮಾಣ ಈ ಮಟ್ಟದಲ್ಲಿ ಹೆಚ್ಚುತ್ತಿರಲಿಲ್ಲ. ಆದರೆ ಈ ಬಹುತೇಕ ಸಾವುಗಳು ಸಂಭವಿಸಿದ್ದು ಫೋಟೊ ತೆಗೆಯಲು ಮತ್ತು ವಿಡಿಯೊ ಮಾಡಲು ಹೋಗಿದ್ದರಿಂದ! ಅವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಕಿ ಮೆಚ್ಚುಗೆ ಗಿಟ್ಟಿಸುವ ಹವ್ಯಾಸ ಅಪಾಯಕಾರಿ ಹುಚ್ಚಾಗಿ ಬದಲಾಗಿದೆ. ಹೀಗಾಗಿ, ದಿನವೂ ಒಂದಲ್ಲ ಒಂದು ಕಡೆ ಜನ ಅದರಲ್ಲೂ ಬಹುತೇಕ ಎಳೆಯ ಹುಡುಗ ಹುಡುಗಿಯರು ಸಾಯಬಾರದ ವಯಸ್ಸಿನಲ್ಲಿ ಜೀವ ತೆರುತ್ತಿರುವುದನ್ನು ಕಾಣುತ್ತಿದ್ದೇವೆ.

ಇದು ಮಳೆಗಾಲ. ಎಲ್ಲ ಕಡೆ ನದಿಗಳು, ಹಳ್ಳ ಕೊಳ್ಳಗಳು ತುಂಬಿ ಹರಿಯುತ್ತಿವೆ. ಸಮುದ್ರ ಯಾವಾಗ ಅಪಾಯಕಾರಿಯಾಗಿ ಬದಲಾಗುತ್ತದೆಯೋ ಹೇಳುವಂತಿಲ್ಲ. ಹಿಂದಿನ ವಾರ ಸಮತಟ್ಟಾಗಿದ್ದ ನದಿತೀರದ ಜಾಗ ಈ ವಾರ ದೊಡ್ಡ ಹೊಂಡ ಆಗಿರಬಹುದು ಅಥವಾ ಸುಳಿಯಾಗಿರಬಹುದು. ಬಂಡೆಗಲ್ಲುಗಳ ಮೇಲೆ ಪಾಚಿ ಕಟ್ಟಿ, ಕಾಲಿಟ್ಟರೆ ಜಾರುತ್ತಿರುತ್ತವೆ. ಹಾಗಾಗಿ, ನೋಡಲು ಮನಮೋಹಕವಾಗಿ ಸೆಳೆಯುವ ನೀರಿನ ಮೂಲಗಳು ದುರಂತದ ತಾಣಗಳಾಗಿ ಮಾರ್ಪಡುತ್ತಿವೆ.

ರೀಲ್ಸ್ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುವುದು ಇತ್ತೀಚೆಗೆ ದೊಡ್ಡ ಗೀಳಾಗಿ ಹೋಗಿದೆ. ಈಗಿನ ಟ್ರೆಂಡ್ ಏನೆಂದರೆ, ಏನಾದರೂ ಮಾಡಿ ಜನಪ್ರಿಯತೆ ಪಡೆಯಬೇಕು, ಜನರಿಂದ ಶಹಬ್ಬಾಸ್ ಎನಿಸಿಕೊಳ್ಳಬೇಕು! ನಮ್ಮ ಯುವಜನರಲ್ಲಂತೂ ಈ ರೀಲ್ಸ್‌ನ ಹುಚ್ಚು ಎಷ್ಟು ತಾರಕಕ್ಕೇರಿದೆ ಎಂದರೆ, ಅವರು ಮಾಡುವ ಚಿತ್ರವಿಚಿತ್ರ ವಿಡಿಯೊಗಳನ್ನು ನೋಡಿದರೆ ಅಯ್ಯೋ ಎನಿಸುತ್ತದೆ. ಇದೀಗ ನೀರಿನಲ್ಲಿ, ರಸ್ತೆಯಲ್ಲಿ ದ್ವಿಚಕ್ರ ವಾಹನಗಳ ಮೇಲೆ ಜೀವಕ್ಕೇ ಅಪಾಯವಾಗುವ ರೀತಿಯಲ್ಲಿ ರಿಸ್ಕ್ ತೆಗೆದುಕೊಂಡಾದರೂ ಸರಿ ತಾವು ವಿಡಿಯೊ ಮಾಡಬೇಕು ಅನ್ನುವ ಮನೋಭಾವ ಅತ್ಯಂತ ವೇಗವಾಗಿ ಹಬ್ಬುತ್ತಿರುವುದು ಮಾತ್ರ ದುರ್ದೈವ. ಅಷ್ಟೇ ಅಲ್ಲ, ಯೋಲೋ (YOLO) ಅಂದರೆ 'ಯು ಓನ್ಲಿ ಲಿವ್ ಒನ್ಸ್' ಬದುಕುವುದು ಒಂದೇ ಸಲ ಅನ್ನುವ ಮನೋಭಾವ ಈಗಿನ ತಲೆಮಾರಿನವರದ್ದಾಗಿರುವುದು ಚಿಂತೆಗೀಡುಮಾಡುವ ವಿಷಯ.

ಪದವಿ ಓದುವ, ಅದರಲ್ಲೂ ವೃತ್ತಿಪರ ಕೋರ್ಸ್‌ಗಳ ಹಲವಾರು ವಿದ್ಯಾರ್ಥಿಗಳು ಪ್ರತಿ ತಿಂಗಳೂ ಮೂರು– ನಾಲ್ಕು ದಿನಗಳ ಕಾಲ ಹೊರ ಜಿಲ್ಲೆಗಳಿಗೋ ಹೊರರಾಜ್ಯಕ್ಕೋ ಕಡ್ಡಾಯವಾಗಿ ಪ್ರವಾಸ ಹೋಗುವುದೇ! ಕೆಲವೊಮ್ಮೆಯಂತೂ ಸಾವಿರಾರು ಕಿಲೊಮೀಟರ್ ದೂರವನ್ನು ಬೈಕಿನಲ್ಲಿಯೇ ಕ್ರಮಿಸುತ್ತಾರೆ. ಬೈಕ್ ಓಡಿಸುವಾಗಲೂ ತಮ್ಮ ಪ್ರವಾಸದ ವೀಕ್ಷಕ ವಿವರಣೆ ನೀಡುವ ವ್ಲಾಗಿಂಗ್ ಬೇರೆ. ಮತ್ತೂ ಆತಂಕ ಹುಟ್ಟಿಸುವ ಸಂಗತಿಯೆಂದರೆ, ಇವರಲ್ಲಿ ಬಹಳ ಮಂದಿ ತಮ್ಮ ಪಾಲಕರಿಗೆ ತಾವು ಪ್ರವಾಸ ಹೋಗುತ್ತಿರುವ ವಿಷಯವನ್ನೇ ಹೇಳಿರುವುದಿಲ್ಲ. ಪಿಯುಸಿಯವರೆಗೆ ತಂದೆತಾಯಿಗೆ ವಿಧೇಯರಾಗಿದ್ದ ಮಕ್ಕಳು ನಂತರ ಸಹಪಾಠಿಗಳ ಪ್ರಭಾವದಿಂದ ಬಹುಬೇಗ ಬದಲಾಗುವುದನ್ನು ಗಮನಿಸಬಹುದು. ಎಲ್ಲವೂ ಸರಿ ಇದ್ದರೆ ಸರಿ. ಇಲ್ಲದಿದ್ದರೆ, ಅಕಸ್ಮಾತ್ ಆಗಿ ಇಂತಹ ಪ್ರಕರಣಗಳು ನಡೆದಾಗಲೇ ವಿಷಯ ಗೊತ್ತಾಗುತ್ತದೆ. ಕೆಲವೊಮ್ಮೆ ಶವವೂ ಸಿಕ್ಕದೆ ತಂದೆತಾಯಿಗೆ ಕೊನೆಯ ಬಾರಿ ಮಕ್ಕಳ ಮುಖ ನೋಡಲೂ ಸಾಧ್ಯವಾಗದ ಪರಿಸ್ಥಿತಿ ಇದೆ.

ಹರೆಯದ ಮಕ್ಕಳ ಹಟದಿಂದ ಅತ್ತ ಅವರನ್ನು ತಡೆಯಲೂ ಆಗದೆ ಇತ್ತ ಅವರು ಅಪಾಯಕ್ಕೆ ಸಿಲುಕಿಕೊಳ್ಳುವುದನ್ನು ನೋಡಲೂ ಆಗದೆ ಪ್ರತಿ ಕ್ಷಣವನ್ನೂ ಆತಂಕದಲ್ಲಿ ಕಳೆಯುತ್ತಿರುವ ಪಾಲಕರು ಅದೆಷ್ಟು ಮಂದಿ ಇಲ್ಲ. ಸ್ವಯಂಕೃತಾಪರಾಧದಿಂದ ಅನ್ಯಾಯವಾಗಿ ಜೀವ ಕಳೆದುಕೊಂಡು ಕುಟುಂಬವನ್ನು ದುಃಖದ ಮಡುವಿಗೆ ದೂಡಿ ಹೋಗುವವರನ್ನು ನೋಡಿದರೆ ಎಂಥವರಿಗೂ ಮರುಕದ ಜತೆಗೆ ಕೋಪ ಉಕ್ಕದೇ ಇರದು.

ಇನ್ನು ಹುಚ್ಚೆದ್ದು ಹರಿಯುತ್ತಿರುವ ನೀರಿನಲ್ಲಿ ಕೊಚ್ಚಿಹೋದವರ ಶವಗಳನ್ನು ಹುಡುಕಿ ತೆಗೆಯುವುದು ಹುಲ್ಲಿನ ಬಣವೆಯಲ್ಲಿ ಸೂಜಿ ಹುಡುಕುವುದಕ್ಕಿಂತ ಕಷ್ಟದ ಕೆಲಸ. ತಮ್ಮ ಸಮಯ, ಶ್ರಮ ಮಾತ್ರವಲ್ಲ, ಕೆಲವೊಮ್ಮೆ ಜೀವವನ್ನೂ ಪಣಕ್ಕಿಟ್ಟು ಎರಡು– ಮೂರು ದಿನಗಳ ಕಾಲ, ಕೆಲವೊಮ್ಮೆ ವಾರಗಟ್ಟಲೆ ಶವವನ್ನು ಹುಡುಕುವವರ ಸಂಕಷ್ಟ ಯಾರಿಗೂ ಬೇಡ. ಸ್ಥಳೀಯ ಯುವಕರು ಮತ್ತು ಅಗ್ನಿಶಾಮಕ ದಳದವರು ಅನುಭವಿಸುವ ಫಜೀತಿ ದೇವರಿಗೇ ಪ್ರೀತಿ.

ಈ ಎಲ್ಲ ಕಾರಣಗಳಿಂದ ಚಿಕ್ಕಮಗಳೂರು, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲೆಗೆ ಈಗ ಬರಬೇಡಿ ಎಂದು ಪತ್ರಿಕಾ ಪ್ರಕಟಣೆ ನೀಡುತ್ತಿದ್ದಾರೆ. ಇದರರ್ಥ ಎಲ್ಲಿಗೂ ಹೋಗಬಾರದು, ಪ್ರೇಕ್ಷಣೀಯ ಸ್ಥಳಗಳನ್ನು ನೋಡಬಾರದು ಎಂದಲ್ಲ. ಅತಿ ಉತ್ಸಾಹವನ್ನು ಕೊಂಚ ತಗ್ಗಿಸಿ ಸ್ವಲ್ಪ ವಿವೇಚನೆಯಿಂದಲೂ ವಿವೇಕದಿಂದಲೂ ವರ್ತಿಸಿದರೆ, ಅದರಲ್ಲೂ ಮಳೆಗಾಲದಲ್ಲಿ ಒಂದಿನಿತು ಸಂಯಮ ತಂದುಕೊಂಡರೆ ಅದೆಷ್ಟೋ ಮನೆಗಳ ದೀಪಗಳು ಆರಿಹೋಗುವುದನ್ನು, ಕುಟುಂಬಸ್ಥರು ಜೀವನಪೂರ್ತಿ ಕಣ್ಣೀರು ಹಾಕುವುದನ್ನು ತಡೆಯಬಹುದು.

ವಾಚಕರ ವಾಣಿ

ಎಲ್ಲೆಡೆ ಜಾರಿಯಾಗಲಿ 'ಲೋಕ ಸ್ಪಂದನ'

ಬೆಂಗಳೂರಿನ ಬಂಡೇಪಾಳ್ಯ ಪೊಲೀಸ್ ಠಾಣೆಯಲ್ಲಿ ಸಿಬ್ಬಂದಿಯ ಕಾರ್ಯವೈಖರಿಯ ಬಗ್ಗೆ ಸಾರ್ವಜನಿಕರು ಅಭಿಪ್ರಾಯ ವ್ಯಕ್ತಪಡಿಸುವ ಸಲುವಾಗಿ ಅಳವಡಿಸಿದ್ದ 'ದರ್ಪಣ' ಕ್ಯುಆರ್ ಕೋಡ್ ವ್ಯವಸ್ಥೆ ಯಶಸ್ವಿಯಾಗಿದ್ದು, ಅದನ್ನು ಈಗ 'ಲೋಕ ಸ್ಪಂದನ' ಎಂಬ ಹೆಸರಿನಲ್ಲಿ ರಾಜ್ಯದ ಎಲ್ಲ ಪೊಲೀಸ್ ಠಾಣೆಗಳಲ್ಲಿ ಜಾರಿ ಮಾಡಲು ಮುಂದಾಗಿರುವುದು ಸುಧಾರಣೆಯ ಹೆಜ್ಜೆ. ಇಂತಹುದೇ ಕ್ಯುಆರ್ ಕೋಡ್‌ಗಳನ್ನು ಪ್ರತಿ ಸರ್ಕಾರಿ ಕಚೇರಿಯಲ್ಲೂ ಅಳವಡಿಸಿದರೆ ಸರ್ಕಾರಿ ನೌಕರರ ಕಾರ್ಯವೈಖರಿಯ ಬಗ್ಗೆ ವಿಮರ್ಶಿಸಲು ಸಾಧ್ಯವಾಗುತ್ತದೆ. ಅಧಿಕಾರಿಗಳು ಮತ್ತು ನೌಕರರು ಜನರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತಾರೆ. ಜೊತೆಗೆ ಈ ದೂರನ್ನು ಮುಂದಿಟ್ಟು ಲೋಕಾಯುಕ್ತರನ್ನು ಸಂಪರ್ಕಿಸಿದರೆ, ಭ್ರಷ್ಟಾಚಾರವನ್ನು ಕಡಿಮೆ ಮಾಡಲು ಸಾಧ್ಯವಾಗುತ್ತದೆ. ಈ ಮೂಲಕ ಸರ್ಕಾರಿ ಕಚೇರಿಗಳಲ್ಲಿ ಉತ್ತಮ ಪರಿಸರ ಹೊಂದಬಹುದು. ಜನರು ಒಂದೇ ಕೆಲಸಕ್ಕೆ ಹಲವು ಬಾರಿ ಸರ್ಕಾರಿ ಕಚೇರಿಗಳಿಗೆ ಅಲೆಯುವುದನ್ನೂ ತಪ್ಪಿಸಬಹುದು.

ಸುನಿಲ್ ಟಿ.ಪಿ., ತಳಗವಾದಿ, ಮಳವಳ್ಳಿ

ಪ್ಲಾಸ್ಟಿಕ್ ಬಾಟಲಿಗೆ ತಡೆ: ಮಾದರಿ ನಡೆ

ಬಳಸಿ ಬಿಸಾಡುವ ಪ್ಲಾಸ್ಟಿಕ್ ಬಾಟಲಿಗಳನ್ನು ಕಂದಾಯ ಇಲಾಖೆಯ ಸಭೆಗಳಲ್ಲಿ ಬಳಸಬಾರದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಅಧಿಕಾರಿಗಳಿಗೆ ತಾಕೀತು ಮಾಡಿರುವುದಕ್ಕೆ ಪೂರಕವಾಗಿ, ಇಲಾಖೆಯ ಕಲಬುರಗಿ ವಿಭಾಗ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸ್ಟೀಲ್ ಲೋಟಗಳನ್ನೇ ಬಳಸಿರುವುದು ಸ್ವಾಗತಾರ್ಹ. ಇದು ಒಂದು ಮಾದರಿ ನಡೆಯಾಗಿದೆ. ಜವಾಬ್ದಾರಿಯುತ ಸ್ಥಾನದಲ್ಲಿ ಇರುವವರು ಈ ರೀತಿಯ ಕಾಳಜಿ ತೋರಿಸಿದರೆ ಖಂಡಿತವಾಗಿಯೂ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಸಾಧ್ಯ.

ಸುರೇಶ ಎಸ್.ಜಿ., ಶಹಾಬಾದ್, ಚಿತ್ತಾಪುರ

ವಿಶೇಷ ಅನುದಾನ ಬಳಕೆ: ವಿವೇಚನೆ ಇರಲಿ

ಪರಿಶಿಷ್ಟ ಜಾತಿ ಮತ್ತು ಪಂಗಡದವರ ಅಭಿವೃದ್ಧಿಗಾಗಿ ಇರುವ ವಿಶೇಷ ಅನುದಾನವನ್ನು (ಎಸ್‌ಸಿಎಸ್‌ಪಿ– ಟಿಎಸ್‌ಪಿ) 'ಗ್ಯಾರಂಟಿ' ಯೋಜನೆಗಳಿಗೆ ಬಳಕೆ ಮಾಡಲು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಇತ್ತೀಚೆಗೆ ನಡೆದ ಸಭೆ ಸಮ್ಮತಿ ಸೂಚಿಸಿರುವುದು ಅತ್ಯಂತ ದುರದೃಷ್ಟಕರ. ಈ ನಿಗದಿತ ₹ 11 ಸಾವಿರ ಕೋಟಿಯನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಹಿತ ಕಾಯುವುದಕ್ಕೇ ಬಳಸುವುದು ನ್ಯಾಯಸಮ್ಮತ.

ಪ್ರಶಾಂತ್ ಬುಳ್ಳಣ್ಣವರ, ಉಗರಗೋಳ, ಬೆಳಗಾವಿ

ಆನ್‌ಲೈನ್ ವಂಚನೆ ಜಾಲ: ಬೇಕು ಸಹನೆ

ವಿದ್ಯುತ್ ಬಿಲ್ ಪಾವತಿ ನೆಪದಲ್ಲಿ ವ್ಯಕ್ತಿಯೊಬ್ಬರ ಮೊಬೈಲಿಗೆ ಲಿಂಕ್ ಕಳಿಸಿ, ಅವರ ಬ್ಯಾಂಕ್ ಖಾತೆಯಿಂದ ₹ 2 ಲಕ್ಷ ವರ್ಗಾಯಿಸಿಕೊಂಡು ವಂಚಿಸಿರುವುದು ವರದಿಯಾಗಿದೆ. ಹಿಂದಿನ ವಾರ ನನಗೂ 'ತಮ್ಮ ವಿದ್ಯುತ್ ಸಂಪರ್ಕವನ್ನು ಇಂದು ರಾತ್ರಿ 9.30ಕ್ಕೆ ಕಡಿತಗೊಳಿಸಲಾಗುತ್ತದೆ. ಹಿಂದಿನ ಬಾಕಿ ಅಪ್‌ಡೇಟ್ ಆಗಿಲ್ಲ. ಮಾಹಿತಿಗಾಗಿ ಈ ಸಂಖ್ಯೆಯನ್ನು... ಸಂಪರ್ಕಿಸಿ' ಎಂಬ ಸಂದೇಶ ಬಂದಿತ್ತು. ನಮ್ಮ ಯಾವುದೇ ಬಿಲ್ ಬಾಕಿ ಇಲ್ಲ ಎಂಬ ಸಂದೇಶವನ್ನು ಅದೇ ಸಂಖ್ಯೆಗೆ ಕಳುಹಿಸಿದೆ. ಆದರೂ ಕುತೂಹಲಕ್ಕೆ ಅವರು ಕೊಟ್ಟ ನಂಬರ್‌ಗೆ ಫೋನ್ ಮಾಡಿದರೆ ವ್ಯಕ್ತಿಯೊಬ್ಬ ಹಿಂದಿಯಲ್ಲಿ ಮಾತನಾಡಿದ. 'ಕನ್ನಡ ಬಿಟ್ಟು ಬೇರಾವುದೇ ಭಾಷೆ ನನಗೆ ಬರದು' ಎಂದಿದ್ದಕ್ಕೆ ಕೆಟ್ಟ ಪದಗಳಲ್ಲಿ ನಿಂದಿಸಿದ. ಆಗಲೇ ಇದು ವಂಚಕರ ಜಾಲವೆಂಬ ಅನುಮಾನದ ವಾಸನೆ ನನಗೆ ಸಿಕ್ಕಿತು. ಕೂಡಲೇ ನಾನು ಫೋನ್ ಸಂಪರ್ಕ ಕಡಿತಗೊಳಿಸಿದೆ.

ವಿದ್ಯುತ್ ಸಂಪರ್ಕವನ್ನು ರಾತ್ರಿ 9.30ಕ್ಕೆ ಕಡಿತಗೊಳಿಸಲಾಗುತ್ತದೆ ಎಂದಾಗಲೂ ಅನುಮಾನ ಬಂತು. ಸಾರ್ವಜನಿಕರು ಅವಸರಪಡದೆ ಕೊಂಚ ತಾಳ್ಮೆಯಿಂದ ಯೋಚಿಸಿ ಮುಂದಡಿ ಇಟ್ಟಲ್ಲಿ ವಂಚನೆಗೆ ಒಳಗಾಗುವುದರಿಂದ ತಪ್ಪಿಸಿಕೊಳ್ಳಬಹುದು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಅಧಿಕಾರಿ ವರ್ಗಾವಣೆ: ಬಹಿರಂಗ ಹೇಳಿಕೆ ತರವೇ?

ದಾವಣಗೆರೆ ಜಿಲ್ಲೆಯ ಹೊನ್ನಾಳಿಯಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮವೊಂದರಲ್ಲಿ, ಹೊನ್ನಾಳಿ ಶಾಸಕರು ಜಿಲ್ಲಾ ಉಸ್ತುವಾರಿ ಸಚಿವರನ್ನು ಉದ್ದೇಶಿಸಿ, 'ಅದೇನು ಮಾಡುತ್ತೀರೋ ಗೊತ್ತಿಲ್ಲ, ಮೊದಲು ದಾವಣಗೆರೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವರ್ಗಾವಣೆಯಾಗಬೇಕು' ಎಂದು ಬಹಿರಂಗ ಹೇಳಿಕೆಯನ್ನು ನೀಡಿದ್ದಾರೆ. ಹೊನ್ನಾಳಿ ತಾಲ್ಲೂಕಿನಲ್ಲಿ ಮನೆಗಳ ನಿರ್ಮಾಣಕ್ಕೂ ಮರಳು ಸಂಗ್ರಹಿಸಲು ಅವರು ಬಿಡುತ್ತಿಲ್ಲ ಎನ್ನುವ ಕಾರಣವನ್ನು ಶಾಸಕರು ಮುಂದಿಟ್ಟಿದ್ದಾರೆ. ಅಕ್ರಮ ಮರಳು ಸಂಗ್ರಹದ ವಿಚಾರವಾಗಿ ಈ ಹಿಂದೆ ಸದನದಲ್ಲಿಯೇ ವಾದ ವಿವಾದ ನಡೆದಿದೆ. ಕಾನೂನು ಪಾಲನೆ ವಿಚಾರದಲ್ಲಿ ಬಿಗಿ ನಿಲುವು ಹೊಂದಿರುವ ದಾವಣಗೆರೆಯ ಎಸ್‌ಪಿ, ಸಾಮಾಜಿಕ ಕಾಳಜಿ ಉಳ್ಳವರು. ಅವರಿಗೆ ವಾಸ್ತವವನ್ನು ಮನದಟ್ಟು ಮಾಡಿ, ಸುಗಮ ಆಡಳಿತ ನಿರ್ವಹಣೆಗೆ ಸಹಕರಿಸುವುದು ಜನಪ್ರತಿನಿಧಿಗಳ ಆದ್ಯ ಕರ್ತವ್ಯ.

ಅದುಬಿಟ್ಟು ಏಕಾಏಕಿ ಬಹಿರಂಗವಾಗಿ ಐಪಿಎಸ್ ಅಧಿಕಾರಿಯ ವರ್ಗಾವಣೆಗೆ ಪ್ರಯತ್ನಿಸುವುದರಿಂದ ಸಾರ್ವಜನಿಕವಾಗಿ ತಪ್ಪು ಸಂದೇಶ ರವಾನೆಯಾದಂತೆ ಆಗುತ್ತದೆ.

ತಿಮ್ಮೇಶ ಮುಸ್ಟೂರು, ಜಗಳೂರು

ಯುವಜನರಿಗೆ ಸಿಗಲಿ 'ಯುವನಿಧಿ' ಭಾಗ್ಯ

ರಾಜ್ಯ ಸರ್ಕಾರ ತನ್ನ ಐದು ಗ್ಯಾರಂಟಿ ಯೋಜನೆಗಳ ಪೈಕಿ ನಾಲ್ಕನ್ನು ಅನುಷ್ಠಾನಕ್ಕೆ ತರುವಲ್ಲಿ ಯಶಸ್ವಿಯಾಗಿದೆ. ಆದರೆ 'ಯುವನಿಧಿ' ಕಡೆಗೆ ಇನ್ನೂ ಗಮನಹರಿಸಿಲ್ಲ. ಈ ಯೋಜನೆಯಡಿ ನಿರುದ್ಯೋಗಿ ಪದವೀಧರರಿಗೆ ನಿರುದ್ಯೋಗ ಭತ್ಯೆ ನೀಡಬೇಕಾಗಿದೆ. ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದು ಎರಡೂವರೆ ತಿಂಗಳಾಗಿದೆ. ಈಗಲಾದರೂ ಈ ಯೋಜನೆಯತ್ತ ಸರ್ಕಾರ ಗಮನಹರಿಸಲಿ.

ತಮೀಮ್, ಉಪ್ಪಿನಂಗಡಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಹಕಾರ ಕಾಯ್ದೆಗೆ ತಿದ್ದುಪಡಿ
ಆಕ್ಷೇಪಗಳನ್ನು ಬದಿಗೊತ್ತಿ ಮಸೂದೆ ಅಂಗೀಕಾರ

ದೇಶದ ಬೇರೆ–ಬೇರೆ ರಾಜ್ಯಗಳ ಸಹಕಾರ ಸಂಘಗಳನ್ನು ಬಹುರಾಜ್ಯ ಸಹಕಾರ ಸಂಘಗಳ ಜತೆಗೆ ವಿಲೀನ ಮಾಡಲು ಅವಕಾಶ ಮಾಡಿಕೊಡುವ ಬಹುರಾಜ್ಯ ಸಹಕಾರ ಸಂಘ (ತಿದ್ದುಪಡಿ) ಮಸೂದೆ–2022ಕ್ಕೆ ರಾಜ್ಯಸಭೆ ಈಚೆಗೆ ಅನುಮೋದನೆ ನೀಡಿದೆ. ಲೋಕಸಭೆಯಲ್ಲಿ ಈ ಮಸೂದೆಗೆ ಮಾರ್ಚ್‌ನಲ್ಲಿಯೇ ಅನುಮೋದನೆ ದೊರೆತಿತ್ತು. ಆದರೆ ಅದಕ್ಕೂ ಮುನ್ನ ಮಸೂದೆ ಮೇಲೆ ವಿಸ್ತೃತ ಚರ್ಚೆ ನಡೆದು, ಮಸೂದೆಯಲ್ಲೇ ಹಲವು ಬದಲಾವಣೆಗಳಿಗೆ ವಿರೋಧ ಪಕ್ಷಗಳು ಪಟ್ಟುಹಿಡಿದಿದ್ದವು. ಅದರ ಬೆನ್ನಲ್ಲೇ ಮಸೂದೆಯನ್ನು ಜಂಟಿ ಸದನ ಸಮಿತಿಗೆ ನೀಡಲಾಗಿತ್ತು. ಸದನ ಸಮಿತಿಯ ಸಭೆಯ ವೇಳೆ ಬಂದ ಆಕ್ಷೇಪಗಳನ್ನು ಬದಿಗೊತ್ತಿ, ಮಸೂದೆಯನ್ನು ಹೆಚ್ಚಿನ ಬದಲಾವಣೆ ಇಲ್ಲದೆ ಮಂಡಿಸಲು ಸಮಿತಿ ಶಿಫಾರಸು ಮಾಡಿತ್ತು

ಪ್ರಜಾವಾಣಿ ವಾರ್ತೆ

‘ಸಹಕಾರ ಕ್ಷೇತ್ರದಲ್ಲಿ ಶಿಸ್ತು ಮತ್ತು ಪಾರದರ್ಶಕತೆ ತರುತ್ತೇವೆ. ಇದಕ್ಕಾಗಿ ಸಹಕಾರ ಸಚಿವಾಲಯವನ್ನು ರಚಿಸಲಾಗುತ್ತಿದೆ’ ಎಂದು ಕೇಂದ್ರ ಸರ್ಕಾರವು ಈ ಹಿಂದೆ ಘೋಷಿಸಿತ್ತು. ಆ ಪ್ರಕಾರವಾಗಿ ಸಹಕಾರ ಸಚಿವಾಲಯವನ್ನು ಕೇಂದ್ರ ಸರ್ಕಾರ ರಚಿಸಿತ್ತು. ಅಮಿತ್ ಶಾ ಅವರು ಮೊದಲ ಸಹಕಾರ ಸಚಿವರಾದರು. ಅದರ ಬೆನ್ನಲ್ಲೇ ಸಹಕಾರ ಕ್ಷೇತ್ರದಲ್ಲಿ ವ್ಯಾಪಕ ಬದಲಾವಣೆ ತರಲು ಸಹಕಾರ ಸಚಿವಾಲಯವು ಮುಂದಾಯಿತು ಮತ್ತು ಅದಕ್ಕಾಗಿ ‘ಬಹುರಾಜ್ಯ ಸಹಕಾರ ಸಂಘ (ತಿದ್ದುಪಡಿ) ಮಸೂದೆ–2022’ನ್ನು ಲೋಕಸಭೆಯಲ್ಲಿ ಮಂಡಿಸಿತ್ತು. ಮಸೂದೆಯಲ್ಲಿದ್ದ ಹಲವು ಅಂಶಗಳಿಗೆ ವ್ಯಾಪಕ ಆಕ್ಷೇಪ ವ್ಯಕ್ತವಾಗಿತ್ತು.

ಸಹಕಾರವು ರಾಜ್ಯಪಟ್ಟಿಯಲ್ಲಿ ಬರುವ ವಿಚಾರ. ಅಂದರೆ, ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರಾಜ್ಯಗಳಿಗೇ ಹೆಚ್ಚು ಅಧಿಕಾರವಿದೆ. ಆದರೆ ಕೇಂದ್ರದ ಮಟ್ಟದಲ್ಲಿ ಸಹಕಾರ ಸಚಿವಾಲಯವನ್ನು ರಚಿಸಿದ್ದು ಮತ್ತು ನಂತರ ಸಹಕಾರ ಕಾಯ್ದೆಗೆ ತಿದ್ದುಪಡಿ ತರಲು ಹೊರಟಿದ್ದು, ರಾಜ್ಯಗಳ ಅಧಿಕಾರವನ್ನು ಕಸಿದುಕೊಳ್ಳುವ ಹುನ್ನಾರ ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ಆರೋಪಿಸಿತ್ತು. ಭಾರಿ ಗದ್ದಲದ ನಂತರ ಮಸೂದೆಯನ್ನು ಜಂಟಿ ಸದನ ಸಮಿತಿಯ ಪರಾಮರ್ಶೆಗೆ ನೀಡಲು ಕೇಂದ್ರ ಸರ್ಕಾರವು ಒಪ್ಪಿಕೊಂಡಿತ್ತು.

ಮೂಲ ಕಾಯ್ದೆ ಮತ್ತು ತಿದ್ದುಪಡಿ ಮಸೂದೆಯನ್ನು ಪರಿಶೀಲಿಸಿದ್ದ ಸಮಿತಿಯು ಸಂಬಂಧಿತ ಪ್ರಾಧಿಕಾರಗಳು, ಸಹಕಾರ ಸಂಘಗಳ ಅಭಿಪ್ರಾಯವನ್ನೂ ಕೇಳಿತ್ತು. ಮಸೂದೆಯಲ್ಲಿನ ಹಲವು ಅಂಶಗಳ ಬಗ್ಗೆ ಬಹುರಾಜ್ಯ ಸಹಕಾರ ಸಂಘಗಳು, ಬಹುರಾಜ್ಯ ಸಹಕಾರ ಬ್ಯಾಂಕ್‌ಗಳು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಸಹ ಆಕ್ಷೇಪ ದಾಖಲಿಸಿದ್ದವು. ಜತೆಗೆ ಆ ಅಂಶಗಳನ್ನು ಕೈಬಿಡುವಂತೆ ಅಥವಾ ಬದಲಿಸುವಂತೆ ಒತ್ತಾಯಿಸಿದ್ದವು. ಆದರೆ, ಸಹಕಾರ ಸಚಿವಾಲಯವು ಆ ಎಲ್ಲಾ ಅಂಶಗಳು ಸರಿಯಾಗಿಯೇ ಇವೆ ಎಂದು ಪ್ರತಿಪಾದಿಸಿತ್ತು. ಆ ಆಕ್ಷೇಪಗಳನ್ನು ಪರಿಗಣಿಸದ ಜಂಟಿ ಸದನ ಸಮಿತಿಯು, ಸಚಿವಾಲಯದ ಪ್ರತಿಪಾದನೆಯನ್ನು ಅನುಮೋದಿಸಿತ್ತು. ಮಸೂದೆಯ ಹಲವು ಅಂಶಗಳು ಸಹಕಾರ ತತ್ವಗಳಿಗೆ ವಿರುದ್ಧವಾಗಿವೆ ಎಂದು ಹೇಳಿದ್ದ ಆಕ್ಷೇಪಗಳನ್ನೂ ಸಮಿತಿಯು ನಿರಾಕರಿಸಿತ್ತು. ಈಗ ಸಂಸತ್ತಿನ ಎರಡೂ ಸದನಗಳಲ್ಲಿ ಅನುಮೋದನೆ ಪಡೆದಿರುವ ಮಸೂದೆಗೆ, ರಾಷ್ಟ್ರಪತಿಯ ಅಂಕಿತ ದೊರೆಯುವುದಷ್ಟೇ ಉಳಿದಿದೆ.

ಚುನಾವಣಾ ಪ್ರಾಧಿಕಾರ ರಚನೆ

ಮೂಲ ಕಾಯ್ದೆಯ 45ನೇ ಸೆಕ್ಷನ್: ಬಹುರಾಜ್ಯ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆ ನಡೆಸುವುದು, ಹಾಲಿ ಆಡಳಿತ ಮಂಡಳಿಯದ್ದೇ ಜವಾಬ್ದಾರಿ ಎಂದು ಮೂಲ ಕಾಯ್ದೆಯ 45ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ. ಚುನಾವಣೆ ಹೇಗೆ ನಡೆಯಬೇಕು, ಚುನಾವಣೆ ನಡೆಸುವಲ್ಲಿ ಆಡಳಿತ ಮಂಡಳಿಯ ಜವಾಬ್ದಾರಿಗಳೇನು, ಇದಕ್ಕೆ ಸಂಬಂಧಿಸಿದ ಬೈಲಾಗಳ ವ್ಯಾಪ್ತಿ ಏನು ಎಂಬುದನ್ನು ಈ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ.

ತಿದ್ದುಪಡಿ ಮಸೂದೆಯ 45ನೇ ಸೆಕ್ಷನ್: ಮೂಲ ಕಾಯ್ದೆಯ 45ನೇ ಸೆಕ್ಷನ್ ಅನ್ನು ತಿದ್ದುಪಡಿ ಮಸೂದೆಯಲ್ಲಿ ಸಂಪೂರ್ಣವಾಗಿ ಕೈಬಿಡಲಾಗಿದೆ. ಬದಲಿಗೆ 45, 45ಎ, 45ಬಿ, 45ಸಿ, 45ಡಿ, 45ಇ, 45ಎಫ್, 45ಜಿ, 45ಎಚ್, 45ಐ, 45ಜೆ, 45ಕೆ ಮತ್ತು 45ಎಲ್ ಎಂಬ 13 ಸೆಕ್ಷನ್‌ಗಳನ್ನು ಹೊಸದಾಗಿ ಸೇರಿಸಲಾಗಿದೆ.

ಈ ಎಲ್ಲಾ ಸೆಕ್ಷನ್‌ಗಳ ಪ್ರಕಾರ ಬಹುರಾಜ್ಯ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆ ನಡೆಸಲು ಕೇಂದ್ರ ಸರ್ಕಾರವು ರಾಷ್ಟ್ರಮಟ್ಟದಲ್ಲಿ ‘ಸಹಕಾರ ಚುನಾವಣಾ ಪ್ರಾಧಿಕಾರ’ವನ್ನು ಸ್ಥಾಪಿಸುವ ಅಧಿಕಾರ ಪಡೆಯುತ್ತದೆ. ಈ ಪ್ರಾಧಿಕಾರಕ್ಕೆ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಗರಿಷ್ಠ ಮೂವರು ಸದಸ್ಯರನ್ನು ನೇಮಕ ಮಾಡುವ ಅಧಿಕಾರ ಹಾಗೂ ಈ ಹುದ್ದೆಗಳಿಗೆ ಯಾರನ್ನು ನೇಮಕ ಮಾಡಬೇಕು ಎಂಬ ನಿಯಮಗಳನ್ನು ರೂಪಿಸುವ ಅಧಿಕಾರವೂ ಕೇಂದ್ರ ಸರ್ಕಾರಕ್ಕೆ ದೊರೆಯಲಿದೆ.

ಆಕ್ಷೇಪಗಳು: ಬಹುರಾಜ್ಯ ಸಹಕಾರ ಸಂಘಗಳ ಆಡಳಿತ ಮಂಡಳಿಗೆ, ಮಂಡಳಿಯೇ ಚುನಾವಣೆ ನಡೆಸಬೇಕು. ಅದರಲ್ಲಿ ಸರ್ಕಾರದ ಆಕ್ಷೇಪ ಇರಬಾರದು ಎಂಬುದು ಸಹಕಾರ ತತ್ವ. ಈಗ ಇದಕ್ಕಾಗಿ ಚುನಾವಣಾ ಪ್ರಾಧಿಕಾರವನ್ನು ರಚಿಸಿ, ಅದರ ಸಂಪೂರ್ಣ ಅಧಿಕಾರವನ್ನು ಕೇಂದ್ರ ಸರ್ಕಾರವು ತನ್ನಲ್ಲಿ ಇರಿಸಿಕೊಳ್ಳುವುದು ಸಹಕಾರ ತತ್ವ ಮತ್ತು ಮೌಲ್ಯಗಳಿಗೆ ವಿರುದ್ಧವಾದುದು. 45 ಮತ್ತು ಅದರ ಉಪಸೆಕ್ಷನ್‌ಗಳು ಯಾವ ಆಯಾಮದಲ್ಲೂ ಸಹಕಾರ ತತ್ವಕ್ಕೆ ಪೂರಕವಾಗಿ ಇಲ್ಲ. ಹೀಗಾಗಿ ತಿದ್ದುಪಡಿ ಮಸೂದೆಯಲ್ಲಿರುವ 45ನೇ ಸೆಕ್ಷನ್ ಮತ್ತು ಅದರ 12 ಉಪಸೆಕ್ಷನ್‌ಗಳನ್ನು ತೆಗೆದುಹಾಕಬೇಕು. ಮೂಲ ಕಾಯ್ದೆಯಲ್ಲಿ ಇರುವ ಅಂಶಗಳನ್ನೇ ಉಳಿಸಿಕೊಳ್ಳಬೇಕು ಎಂದು ರಾಜ್ಯ ಸಹಕಾರ ಬ್ಯಾಂಕ್‌ಗಳ ರಾಷ್ಟ್ರೀಯ ಒಕ್ಕೂಟವು ಜಂಟಿ ಸದನ ಸಮಿತಿಗೆ ಆಕ್ಷೇಪ ಸಲ್ಲಿಸಿತ್ತು.

- ಈ ಆಕ್ಷೇಪವನ್ನು ನಿರಾಕರಿಸಿದ್ದ ಸದನ ಸಮಿತಿಯು, ತಿದ್ದುಪಡಿಯು ಸಮಂಜಸವಾಗಿದೆ. ಹೀಗಾಗಿ ತಿದ್ದುಪಡಿಯನ್ನು ಹಾಗೇ ಉಳಿಸಿಕೊಳ್ಳಬೇಕು ಎಂದು ಶಿಫಾರಸು ಮಾಡಿತ್ತು

ನೇಮಕಾತಿಗೆ ಏಕರೂಪತೆ ಮತ್ತು ಕೇಂದ್ರಕ್ಕೆ ಅಧಿಕಾರ

ಮೂಲ ಕಾಯ್ದೆಯ 49ನೇ ಸೆಕ್ಷನ್: ಬಹುರಾಜ್ಯ ಸಹಕಾರ ಸಂಘಗಳ ಆಡಳಿತ ಮಂಡಳಿಗಳು, ತಮ್ಮ ಸಂಘಕ್ಕೆ ಅಗತ್ಯವಿರುವ ನೌಕರರನ್ನು ನೇಮಕ ಮಾಡಿಕೊಳ್ಳುವ ಅಧಿಕಾರ ಹೊಂದಿವೆ. ನೇಮಕಾತಿಗೆ ಸಂಬಂಧಿಸಿದ ನಿಯಮಗಳು, ನೇಮಕಾತಿ ಪ್ರಕ್ರಿಯೆಗಳನ್ನು ಆಡಳಿತ ಮಂಡಳಿಗಳೇ ರೂಪಿಸಿಕೊಳ್ಳಬಹುದು ಎಂದು ಮೂಲ ಕಾಯ್ದೆಯ 49ನೇ ಸೆಕ್ಷನ್ ಮತ್ತು ಅದರ ಉಪಸೆಕ್ಷನ್‌ಗಳಲ್ಲಿ ವಿವರಿಸಲಾಗಿದೆ.

ತಿದ್ದುಪಡಿ ಮಸೂದೆ: ಬಹುರಾಜ್ಯ ಸಹಕಾರ ಸಂಘಗಳ ನೇಮಕಾತಿಗೆ ಸಂಬಂಧಿಸಿದ ನಿಯಮಗಳು ಮತ್ತು ಪ್ರಕ್ರಿಯೆಗಳನ್ನು ಕೇಂದ್ರ ಸಹಕಾರ ಸಚಿವಾಲಯವು ರೂಪಿಸಲಿದೆ. ಆ ನಿಯಮಾವಳಿಗಳ ಪ್ರಕಾರವೇ ನೇಮಕಾತಿ ನಡೆಯಬೇಕು ಎಂದು ತಿದ್ದುಪಡಿ ಮಸೂದೆಯ 49(ಇ) ಸೆಕ್ಷನ್‌ನಲ್ಲಿ ವಿವರಿಸಲಾಗಿದೆ.

‘ಬಹುರಾಜ್ಯ ಸಹಕಾರ ಸಂಘಗಳಲ್ಲಿ ಆಡಳಿತ ಮಂಡಳಿ ಸದಸ್ಯರು ತಮ್ಮ ಸಂಬಂಧಿಗಳು ಅಥವಾ ತಮಗೆ ಬೇಕಾದವರನ್ನು ನೇಮಕಾತಿ ಮಾಡಿಕೊಳ್ಳುವುದನ್ನು ತಪ್ಪಿಸಲು ಮತ್ತು ನೇಮಕಾತಿಯಲ್ಲಿ ಪಾರದರ್ಶಕತೆಯನ್ನು ತರಲು ಈ ತಿದ್ದುಪಡಿಯನ್ನು ತರಲಾಗುತ್ತಿದೆ’ ಎಂದು ಕೇಂದ್ರ ಸಹಕಾರ ಸಚಿವಾಲಯವು ಪ್ರತಿಪಾದಿಸಿತ್ತು.

ಆಕ್ಷೇಪಗಳು: ‘ಸಹಕಾರ ಸಂಘಗಳಿಗೆ ನೇಮಕಾತಿ ಹೇಗೆ ನಡೆಯಬೇಕು ಎಂಬುದನ್ನು ಕೇಂದ್ರ ಸರ್ಕಾರವು ನಿರ್ಧರಿಸಬೇಕು ಎಂಬ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಇದು ಸಹಕಾರ ತತ್ವಗಳಿಗೆ ವಿರುದ್ಧವಾದುದು ಮತ್ತು ಸಹಕಾರ ಸಂಘಗಳ ಅಧಿಕಾರ, ಸ್ವಾತಂತ್ರ್ಯ ಮತ್ತು ಸ್ವಾಯತ್ತೆಗೆ ಧಕ್ಕೆ ತರುವಂತಹ ನಡೆ. ಹೀಗಾಗಿ ಈ ತಿದ್ದುಪಡಿಯನ್ನು ಕೈಬಿಡಬೇಕು. ಸಹಕಾರ ಸಂಘಗಳು ತಮ್ಮ ಸೇವಾ ನಿಯಮಗಳ ಪ್ರಕಾರವೇ ನೇಮಕಾತಿ ನಡೆಸಲು ಅವಕಾಶ ಮಾಡಿಕೊಡಬೇಕು’ ಎಂದು ಭಾರತೀಯ ರಾಷ್ಟ್ರೀಯ ಸಹಕಾರ ಒಕ್ಕೂಟ ಆಕ್ಷೇಪ ದಾಖಲಿಸಿತ್ತು. ನಾಫೆಡ್ ಮತ್ತು ರಾಷ್ಟ್ರೀಯ ನಗರ ಸಹಕಾರ ಬ್ಯಾಂಕ್‌ಗಳ ಒಕ್ಕೂಟ ಸಹ ಇದೇ ಆಕ್ಷೇಪವನ್ನು ದಾಖಲಿಸಿದ್ದವು. ‘ನಗರ ಸಹಕಾರ ಬ್ಯಾಂಕ್‌ಗಳಿಗೆ ಇಂತಹ ನಿಯಮವನ್ನು ಹೇರಲು ಬರುವುದಿಲ್ಲ. ಹೀಗಾಗಿ ಈ ಸೆಕ್ಷನ್‌ನ ವ್ಯಾಪ್ತಿಯಿಂದ ನಗರ ಸಹಕಾರ ಬ್ಯಾಂಕ್‌ಗಳನ್ನು ಹೊರಗಿಡಬೇಕು’ ಎಂದು ರಾಷ್ಟ್ರೀಯ ನಗರ ಸಹಕಾರ ಬ್ಯಾಂಕ್‌ಗಳ ಒಕ್ಕೂಟ ಕೋರಿತ್ತು.

- ಈ ಆಕ್ಷೇಪಗಳನ್ನು ನಿರಾಕರಿಸಿದ ಜಂಟಿ ಸದನ ಸಮಿತಿಯು, ಸಹಕಾರ ಸಚಿವಾಲಯದ ಪ್ರತಿಪಾದನೆ ಸರಿಯಾಗಿದೆ. ಹೀಗಾಗಿ ಈ ತಿದ್ದುಪಡಿಗಳನ್ನು ಉಳಿಸಿಕೊಳ್ಳಬೇಕು ಎಂದು ಶಿಫಾರಸು ಮಾಡಿತ್ತು

ಸಿಇಒ ಆಗಲು 21 ವರ್ಷವಾಗಿದ್ದರೆ ಸಾಕು

ಮೂಲ ಕಾಯ್ದೆಯ 51ನೇ ಸೆಕ್ಷನ್: ಬಹುರಾಜ್ಯ ಸಹಕಾರ ಸಂಘಗಳಿಗೆ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯನ್ನು (ಸಿಇಒ) ಆಡಳಿತ ಮಂಡಳಿಯೇ ನೇಮಿಸಬಹುದು ಎಂದು ಮೂಲ ಕಾಯ್ದೆಯ 51ನೇ ಸೆಕ್ಷನ್ ಹೇಳುತ್ತದೆ. ಆದರೆ, ಇಲ್ಲಿ ಸಿಇಒ ಆಗಿ ನೇಮಕ ಆಗುವವರ ಕನಿಷ್ಠ ಮತ್ತು ಗರಿಷ್ಠ ವಯೋಮಿತಿಯನ್ನು ವಿವರಿಸಿಲ್ಲ. ಆದರೆ, ಬಹುರಾಜ್ಯ ಸಹಕಾರ ಸಂಘಗಳ ಸೇವಾ ನಿಯಮಗಳ ಪ್ರಕಾರ ಸಿಇಒ ನೇಮಕಾತಿ ನಡೆಯುತ್ತಿದೆ.

ತಿದ್ದುಪಡಿ ಮಸೂದೆ: ‘ಬಹುರಾಜ್ಯ ಸಹಕಾರ ಸಂಘಗಳಿಗೆ ಸಿಇಒ ಆಗಿ ನೇಮಕವಾಗುವ ವ್ಯಕ್ತಿಗೆ ಕನಿಷ್ಠ 21 ವರ್ಷ ವಯಸ್ಸಾಗಿರಬೇಕು. ಸಿಇಒ ಆಗಿ ನೇಮಕ ಮಾಡುವ ವ್ಯಕ್ತಿಯನ್ನು ಏಕೆ ಆಯ್ಕೆ ಮಾಡಲಾಗಿದೆ ಎಂಬುದನ್ನು ಸಮರ್ಥಿಸುವ ಕಾರಣಗಳು ಇರುವ ವರದಿಯನ್ನು ಆಡಳಿತ ಮಂಡಳಿ ಪ್ರಕಟಿಸಬೇಕು’ ಎಂದು ತಿದ್ದುಪಡಿ ಮಸೂದೆಯ 51(ಎ) ಸೆಕ್ಷನ್‌ನಲ್ಲಿ ವಿವರಿಸಲಾಗಿದೆ.

ಆಕ್ಷೇಪಗಳು: ‘21 ವರ್ಷ ವಯಸ್ಸಿನ ವ್ಯಕ್ತಿಯು ಬಹುರಾಷ್ಟ್ರ ಸಹಕಾರ ಸಂಘವೊಂದನ್ನು ಮುನ್ನಡೆಸುವಷ್ಟು ಪ್ರಬುದ್ಧತೆ ಹೊಂದಿರುವ ಸಾಧ್ಯತೆ ತೀರಾ ಕಡಿಮೆ. ಹೀಗಾಗಿ ಸಿಇಒ ಆಗಲು ಸೂಚಿಸಿರುವ ಕನಿಷ್ಠ ವಯೋಮಿತಿಯನ್ನು 35 ವರ್ಷಕ್ಕೆ ಏರಿಕೆ ಮಾಡಬೇಕು’ ಎಂದು ರಾಜ್ಯ ಸಹಕಾರ ಬ್ಯಾಂಕ್‌ಗಳ ರಾಷ್ಟ್ರೀಯ ಒಕ್ಕೂಟವು ತನ್ನ ಆಕ್ಷೇಪದಲ್ಲಿ ವಿವರಿಸಿತ್ತು. ಭಾರತೀಯ ರಾಷ್ಟ್ರೀಯ ಸಹಕಾರ ಒಕ್ಕೂಟ ಸಹ ಇದನ್ನೇ ಹೇಳಿತ್ತು.

ಭಾರತೀಯ ರಿಸರ್ವ್ ಬ್ಯಾಂಕ್, ‘ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ಪ್ರಕಾರ ಸಿಇಒ ಆಗಲು ಕನಿಷ್ಠ ವಯೋಮಿತಿಯನ್ನು 35 ವರ್ಷಗಳಿಗೆ ನಿಗದಿ ಮಾಡಬೇಕು ಎಂಬ ನಿಯಮ ಜಾರಿಯಲ್ಲಿದೆ. ಸಿಇಒ ಆಗುವವರಿಗೆ ಜ್ಞಾನದ ಜತೆಗೆ ಅನುಭವವೂ ಇರಬೇಕು’ ಎಂದು ಆಕ್ಷೇಪ ಸಲ್ಲಿಸಿತ್ತು.

- ಈ ಎಲ್ಲಾ ಆಕ್ಷೇಪಗಳನ್ನು ನಿರಾಕರಿಸಿದ್ದ ಜಂಟಿ ಸದನ ಸಮಿತಿಯು, ತಿದ್ದುಪಡಿ ಅಂಶಗಳು ಸಮಂಜಸವಾಗಿವೆ. ಅವನ್ನು ಹಾಗೆಯೇ ಉಳಿಸಿಕೊಳ್ಳಬಹುದು ಎಂದು ಶಿಫಾರಸು ಮಾಡಿತ್ತು

ಆಧಾರ: ಸಹಕಾರ ಸಂಘಗಳ ಕಾಯ್ದೆ–2002, ಸಹಕಾರ ಸಂಘಗಳ (ತಿದ್ದುಪಡಿ) ಮಸೂದೆ–2022, ಸಹಕಾರ ಸಂಘಗಳ (ತಿದ್ದುಪಡಿ) ಮಸೂದೆ–2022ರ ಮೇಲಿನ ಜಂಟಿ ಸದನ ಸಮಿತಿಯ ವರದಿ, ಪಿಟಿಐ

ಸಿನಿ ಬಿಟ್ಸ್

‘ಅಂತರಂಗ’ ಕಿರುಚಿತ್ರದ ದೃಶ್ಯ

ಇಂದಿನಿಂದ ಕಿರುಚಿತ್ರೋತ್ಸವ

13ನೇ ಬೆಂಗಳೂರು ಅಂತರರಾಷ್ಟ್ರೀಯ ಕಿರುಚಿತ್ರೋತ್ಸವ ಇಂದಿನಿಂದ(ಆ.3) ಆಗಸ್ಟ್ 13ರವರೆಗೆ ನಡೆಯಲಿದೆ. ಭಾರತದಲ್ಲಿಯೇ ಮೊದಲ ಸಲ ಕಿರುಚಿತ್ರೋತ್ಸವವೊಂದಕ್ಕೆ ಆಸ್ಕರ್ ಮಾನ್ಯತೆ ದೊರೆತಿರುವುದು ಈ ಸಲದ ಕಿರುಚಿತ್ರೋತ್ಸವದ ಹೆಗ್ಗಳಿಕೆಯಾಗಿದೆ. ಕಳೆದ ವರ್ಷದಂತೆ ಈ ಬಾರಿಯೂ ಚಿತ್ರೋತ್ಸವ ಹೈಬ್ರಿಡ್ ಮಾದರಿಯಲ್ಲಿ ನಡೆಯಲಿದೆ. ಆಸಕ್ತರು ಚಿತ್ರೋತ್ಸವದ ವೆಬ್‌ತಾಣಕ್ಕೆ ಲಾಗಿನ್ ಆಗಿ ನಾಮ ನಿರ್ದೇಶನಗೊಂಡ ಕಿರುಚಿತ್ರಗಳನ್ನು ವೀಕ್ಷಿಸಬಹುದು. ಆ.10ರಿಂದ 13ವರೆಗೆ ಸುಚಿತ್ರ ಫಿಲ್ಮ್ ಸೊಸೈಟಿ ಹಾಗೂ ಗೋತೆ ಇನ್‌ಸ್ಟಿಟ್ಯೂಟ್ ಮ್ಯಾಕ್ಸ್ ಮುಲ್ಲರ್ ಭವನದಲ್ಲಿ ಸ್ಪರ್ಧಾ ವಿಭಾಗದಲ್ಲಿನ ಕಿರುಚಿತ್ರಗಳ ಪ್ರದರ್ಶನ ನಡೆಯಲಿದೆ.

ಸುಮನ್ ಕಿತ್ತೂರು, ಅಲೆಜಾಂಡ್ರೊ ಗೊಂಜಾಲೆಜ್, ಡಿಯಾಗೊ ಫರೋನ್ ಅಂತರರಾಷ್ಟ್ರೀಯ ಸ್ಪರ್ಧಾ ವಿಭಾಗದಲ್ಲಿನ ತೀರ್ಪುಗಾರರಾಗಿದ್ದಾರೆ. ಚೈತನ್ಯ ಹೆಗ್ಡೆ, ಶ್ರುತಿ ಹರಿಹರನ್, ಅಮಿತ್ ಮಸೂರ್‌ಕರ್ ಭಾರತೀಯ ವಿಭಾಗದ ಕಿರುಚಿತ್ರಗಳನ್ನು ನಿರ್ಣಯಿಸಲಿದ್ದಾರೆ. ಮಹಿಳೆಯರು ತಯಾರಿಸಿದ ಕಿರುಚಿತ್ರಗಳದ್ದೇ ವಿಶೇಷ ವಿಭಾಗವನ್ನು ಈ ವರ್ಷದಿಂದ ಪರಿಚಯಿಸಲಾಗಿದೆ. ‘ಯುವ ಸಿನಿಮಾ ತಯಾರಕರನ್ನು ಉತ್ತೇಜಿಸಲು, ಕಥೆ, ಚಿತ್ರಕಥೆಗಳನ್ನು ಪ್ರೋತ್ಸಾಹಿಸಲು ಬೇರೆ ಬೇರೆ ಸ್ಪರ್ಧಾ ವಿಭಾಗಗಳನ್ನು ಪರಿಚಯಿಸಲಾಗಿದೆ’ ಎಂದು ಕಿರುಚಿತ್ರೋತ್ಸವದ ನಿರ್ದೇಶಕ ಆನಂದ್ ವರದರಾಜನ್ ಹೇಳಿದ್ದಾರೆ.

ಆಗಸ್ಟ್ 18ಕ್ಕೆ ‘ಬಯಲುಸೀಮೆ’

ಉತ್ತರ ಕರ್ನಾಟಕ ಪ್ರದೇಶವೊಂದರ ಕಥೆ ಹೊತ್ತ ನವೀನ್ ಶಂಕರ್ ನಟನೆಯ ‘ಕ್ಷೇತ್ರಪತಿ’ ಚಿತ್ರವು ಆಗಸ್ಟ್ 18ರಂದು ಬಿಡುಗಡೆಯಾಗುತ್ತಿದೆ. ಉತ್ತರ ಕರ್ನಾಟಕ ಸೊಗಡಿನ ರಗಡ್ ಕಥೆ ಇರುವ ‘ಬಯಲುಸೀಮೆ’ಯೂ ಅದೇ ದಿನ ಬಿಡುಗಡೆಯಾಗುತ್ತಿದೆ.

ಇತ್ತೀಚೆಗಷ್ಟೇ ಯಂಗ್ ರೆಬಲ್ ಸ್ಟಾರ್ ಅಭಿಷೇಕ್ ಅಂಬರೀಷ್ ಅವರು ಈ ಚಿತ್ರದ ಟ್ರೈಲರ್ ಅನಾವರಣಗೊಳಿಸಿದ್ದಾರೆ. ಜವಾರಿ ಭಾಷೆಯ ಸಂಭಾಷಣೆ ಇರುವ ಚಿತ್ರದ ಕಥೆ ರಾಜಕೀಯ ಮೇಲಾಟದ ಸುತ್ತ ಸಾಗುತ್ತದೆ. ವರುಣ್ ಕಟ್ಟಿಮನಿ ಈ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳುವುದರ ಜೊತೆಗೆ ಚಿತ್ರದಲ್ಲಿ ನಾಯಕ ನಟನಾಗಿ ನಟಿಸಿದ್ದಾರೆ. ಸಂಯುಕ್ತ ಹೊರನಾಡು ನಾಯಕಿಯಾಗಿ ನಟಿಸಿದ್ದಾರೆ. ರವಿಶಂಕರ್, ಟಿ.ಎಸ್ ನಾಗಾಭರಣ, ಯಶ್ ಶೆಟ್ಟಿ, ಭವಾನಿ ಪ್ರಕಾಶ್, ಅರ್ಚನಾ ಕೊಟ್ಟಿಗೆ, ಲಕ್ಷ್ಮೀ ನಾಡಗೌಡರ್, ಸಂತೋಷ್ ಉಪ್ಪಿನ್, ನಾಗರಾಜ ಭಟ್, ಮಹೇಶ್ ದೊಡ್ಡಕಲ್ಲವರ್, ಪ್ರದೀಪ್ ರಾಜ್ ಸೇರಿದಂತೆ ಬಹುದೊಡ್ಡ ತಾರಾಗಣ ಚಿತ್ರದಲ್ಲಿದೆ.

ಗಾಯಿತ್ರಿ ದೇವಿ ಕ್ರಿಯೇಷನ್ಸ್ ಮತ್ತು ಪಿಆರ್‌ಎಸ್ ಕ್ರಿಯೇಷನ್ಸ್ ಬ್ಯಾನರ್‌ನಡಿ ಲಕ್ಷ್ಮಣ್ ಸಾ ಶಿಂಗ್ರಿ, ಶ್ರೀಧರ್ ಬಿದರಳ್ಳಿ, ರಶ್ಮೀ ವರುಣ್ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಗಜೇಂದ್ರಗಡ, ಬೀಳಗಿ, ಮುಂಬೈನಲ್ಲಿ ಚಿತ್ರದ ಚಿತ್ರೀಕರಣ ನಡೆದಿದೆ. ಸುಜಯ್ ಕುಮಾರ್ ಬಾವಿಕಟ್ಟಿ ಛಾಯಾಚಿತ್ರಗ್ರಹಣ. ಮಾನಸಾ ಹೊಳ್ಳ ಸಂಗೀತ ನಿರ್ದೇಶನ, ಕಿರಣ್ ಕುಮಾರ್ ಸಂಕಲನ ಚಿತ್ರಕ್ಕಿದೆ.

ಸಂಯುಕ್ತ ಹೊರನಾಡು

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘**ಲೋ ಗುಲಾಮರಾ** ನೋಡ್ರೋ ನಿಮ್ಮ ಮುಸ್ಲಿಂ ಮಾವಂದಿರು. ನೆಹರೂ, ಇಂದಿರಾ ಗಾಂಧಿ, ಯೂನಸ್ ಖಾನ್ (ಇಂದಿರಾ ಮಾವ) ಫಿರೋಜ್ ಖಾನ್ (ಇಂದಿರಾಳ ಗಂಡ) (ಫೋಟೊ ಅಡಿಬರಹದಲ್ಲಿ ಹೇಳಿರುವಂತೆ ಎಡದಿಂದ ಬಲಕ್ಕೆ) ಅಪರೂಪದ ಚಿತ್ರ. ಗುಲಾಮರಿಗೆ ಆದಷ್ಟೂ ಶೇರ್ ಮಾಡಿ, ನಿಜ ತಿಳಿಸಿ ಕೊಡಿ’ ಎಂಬ ಮಾಹಿತಿಯೊಂದಿಗೆ ಸಾಮಾಜಿಕ ಜಾಲತಾಣಗಳಲ್ಲಿ ಮೂರು ವರ್ಷಗಳಿಂದ ಫೋಟೊವೊಂದು ಭಾರಿ ಸಂಖ್ಯೆಯಲ್ಲಿ ಹಂಚಿಕೆಯಾಗುತ್ತಿದೆ. ‘70 ವರ್ಷ ಬಳಿಕ, ಇಂಥ ಅಪರೂಪದ ಫೋಟೊ ಸಾರ್ವಜನಿಕರಿಗೆ ಲಭ್ಯವಾಗಿದೆ. ಬಹಳ ಕಷ್ಟಪಟ್ಟು ಈ ಫೋಟೊವನ್ನು ಪಡೆದುಕೊಳ್ಳಲಾಗಿದೆ. ಈ ಫೋಟೊ ಮೂಲಕ ನಿಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಿ ಮತ್ತು ಇತರರ ಜ್ಞಾನವನ್ನೂ ಹೆಚ್ಚಿಸಿ’ ಎಂಬ ಬರಹದೊಂದಿಗೂ ಈ ಫೋಟೊವನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ, ಈ ಫೋಟೊ ಜೊತೆಗೆ ಹಂಚಿಕೊಳ್ಳುತ್ತಿರುವ ಮಾಹಿತಿಗಳು ಸುಳ್ಳು.

ಉದ್ದ ಗಡ್ಡ ಬಿಟ್ಟಿರುವ ಇಂದಿರಾ ಗಾಂಧಿ ಅವರ ಮಾವ ಯೂನಸ್ ಖಾನ್ ಎಂದು ಹೇಳಲಾಗುತ್ತಿರುವವರು ಇಂದಿರಾ ಅವರ ಮಾವನವರಲ್ಲ. ಅವರು ರಷ್ಯಾದ ಚಿತ್ರಬರಹಗಾರ ನಿಕೋಲಸ್ ರೋರಿಚ್. ಇಂದಿರಾ ಅವರ ಗಂಡ ಫಿರೋಜ್ ಖಾನ್ ಎಂದು ಫೋಟೊದಲ್ಲಿ ಗುರುತಿಸಿರುವ ವ್ಯಕ್ತಿಯು ಭಾರತೀಯ ರಾಜತಾಂತ್ರಿಕ ಅಧಿಕಾರಿ. ನ್ಯೂಯಾರ್ಕ್‌ನಲ್ಲಿ ನಿಕೋಲಸ್ ರೋರಿಚ್ ವಸ್ತುಸಂಗ್ರಹಾಲಯ ಇದೆ. ಇಲ್ಲಿ ಈ ಫೋಟೊವನ್ನು ಕೂಡ ಸಂಗ್ರಹಿಸಿ ಇಡಲಾಗಿದೆ. ಇದರೊಂದಿಗೆ ಫೋಟೊದಲ್ಲಿ ಇರುವವರ ಮಾಹಿತಿಯನ್ನೂ ನೀಡಲಾಗಿದೆ. ‘ಹೆಲೆನಾ ಇವನೋವಾ ರೋರಿಚ್’ ಎನ್ನುವ ಪುಸ್ತಕದಲ್ಲೂ ಈ ಫೋಟೊವನ್ನು ದಾಖಲಿಸಲಾಗಿದೆ. ಹೆಲೆನಾ ಇವನೋವಾ ರೋರಿಚ್ ಅವರು ನಿಕೋಲಸ್ ರೋರಿಚ್ ಅವರ ಪತ್ನಿ. ಜೊತೆಗೆ ಇಂದಿರಾ ಗಾಂಧಿ ಅವರ ಗಂಡನ ಹೆಸರು ಫಿರೋಜ್ ಗಾಂಧಿ ಹೊರತು ‘ಖಾನ್’ ಅಲ್ಲ. ಇಂದಿರಾ ಅವರ ಮಾವನ ಹೆಸರು ಫರೀದೂನ್ ಜಹಾಂಗೀರ್ ಗಾಂಧಿ. ಆದ್ದರಿಂದ ಈ ಫೋಟೊದೊಂದಿಗೆ ಹಂಚಿಕೊಳ್ಳಲಾಗುತ್ತಿರುವ ಮಾಹಿತಿಯು ತಪ್ಪುಗಳಿಂದ ಕೂಡಿದೆ ಎಂದು ‘ದಿ ಕ್ವಿಂಟ್’ ಹಾಗೂ ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಅಂಕಿತ

ಮಂಕುತಿಮ್ಮನ ಹೆಸರು ಬಿಂಕಕ್ಕೆ ಸಾಲದೆನೆ |
ವೆಂಕನಿಗೊ ಕಂಕನಿಗೊ ಶಂಕರಾರ್ಯನಿಗೋ ||
ಅಂಕಿತವ ಮಾಳ್ಕೆ ಜನರವರೋದಿದರೆ ಸಾಕು |
ಶಂಕೆ ನಿನಗೇನಿಹುದೊ –
ಮಂಕುತಿಮ್ಮ || 941 ||

ಪದ-ಅರ್ಥ: ಸಾಲದೆನೆ = ಸಾಲದು + ಎನೆ, ಜನರವರೋದಿದರೆ = ಜನರು + ಅವರು + ಓದಿದರೆ, ನಿನಗೇನಿಹುದೊ = ನಿನಗೆ + ಏನಿಹುದೊ.

ವಾಚ್ಯಾರ್ಥ: ಮಂಕುತಿಮ್ಮ ಎಂಬ ಹೆಸರು ಅಭಿಮಾನಕ್ಕೆ ಸಾಲದು ಎನ್ನಿಸಿದರೆ ವೆಂಕನೆಂತೋ, ಕಂಕನೆಂತೊ, ಶಂಕರಾರ್ಯನೆಂದೋ ಅಂಕಿತವ ಮಾಡಿದರಾಯಿತು. ಯಾವ ಹೆಸರಾದರೇನು, ಜನರು ಓದಿದರೆ ಸಾಕು, ನಿನಗೇಕೆ ಶಂಕೆ ?

ವಿವರಣೆ: ಸಾಮಾನ್ಯವಾಗಿ ವಚನಗಳಿಗೆ, ದಾಸರ ಪದಗಳಿಗೆ ಅಂಕಿತವಿರುತ್ತದೆ. ಅದು ಯಾರು ಬರೆದದ್ದೆಂದು ತಿಳಿಯಲು ಸಾಧನ. ಈ ಚೌಪದಿಗಳ ಅಂಕಿತ, ಮಂಕುತಿಮ್ಮ. ಈ ಮಂಕುತಿಮ್ಮ ಯಾರು? ಅವನ ಹೆಸರನ್ನೇಕೆ ಅಂಕಿತ ಮಾಡಿದ್ದಾರೆ? ಸಾಮಾನ್ಯವಾಗಿ ‘ಮಂಕು’ ಎಂದರೆ ದಡ್ಡ. ಈ ದಡ್ಡತಿಮ್ಮನ ಅಂಕಿತ ಏಕೆ? ಎಂದೆಲ್ಲ ಜಿಜ್ಞಾಸೆಗಳಿದ್ದವು. ಅದಕ್ಕೆ ಡಿ.ವಿ.ಜಿ ಯವರು, ಶ್ರೀ ರಘುನಾಥನ್ ಎನ್ನುವವರಿಗೆ ಸೆಪ್ಟೆಂಬರ್ 9, 1965 ರಂದು ಬರೆದ ಪತ್ರದಲ್ಲಿ ಇದರ ಬಗ್ಗೆ ತಿಳಿಸಿದ್ದಾರೆ. ‘My book in question is called ‘Manku-Thimmana-Kagga’. ‘Manku’ means the dull’. ‘Thimma’ is a country bumpkin. ‘Kagga’ is a rigmarole’. Alternatively speaking, it is ‘foggy fool’s tarrago’.

ಡಿ.ವಿ.ಜಿ ಯವರಿಗೆ ಹೆಸರಿನ ಮೋಹವಿರಲಿಲ್ಲ. ಪುಸ್ತಕಕ್ಕೆ ಯಾವ ಅಂಕಿತವನ್ನಿಟ್ಟರೇನು, ಅದರ ಹೂರಣ ಚೆನ್ನಾಗಿದ್ದರೆ ಸಾಕು ಎಂಬುದು ಅವರ ಧೋರಣೆ. ಅವರೇ ಒಂದೆಡೆಗೆ ಬರೆಯುತ್ತಾರೆ. ‘ಮನೆಯಲ್ಲಿ ಮಕ್ಕಳಿಗೆ, ಕಲ್ಲಪ್ಪ, ಗುಂಡಪ್ಪ, ತಿಪ್ಪಯ್ಯ ಎಂದು ಹೆಸರಿಡುವುದರ ಉದ್ದೇಶ ಹೇಗಾದರೂ ಕಲ್ಲಿನಂತೆ, ಗುಂಡಿನಂತೆ, ತಿಪ್ಪೆಯಂತೆ ಮಗು ಚೆನ್ನಾಗಿ ಬೆಳೆದರೆ ಸಾಕು’. ಅದರಂತೆ ಕಗ್ಗಕ್ಕೆ ಅಂಕಿತ ‘ಮಂಕುತಿಮ್ಮ’ ಎಂದಿಟ್ಟರೂ ಅದರ ಗುಣವಿಶೇಷಗಳೇನೂ ಕಡಿಮೆಯಾಗುವುದಿಲ್ಲ.

ಅದಕ್ಕೇ ಡಿ.ವಿ.ಜಿ ಹೇಳುತ್ತಾರೆ, ಮಂಕುತಿಮ್ಮನ ಹೆಸರು ನಮ್ಮ ಅಭಿಮಾನಕ್ಕೆ ಕೊರತೆ ಎನ್ನಿಸಿದರೆ ವೆಂಕನೆಂತಲೋ, ಕಂಕನೆಂತಲೋ, ಶಂಕರಾರ್ಯನೆಂತೋ ಅಂಕಿತವನ್ನು ಬಳಸಬಹುದು. ಯಾವ ಅಂಕಿತವನ್ನಿಟ್ಟರೇನು, ಪುಸ್ತಕ ಜನರಿಗೆ ಪ್ರಿಯವಾಗಿ, ಅವರು ಓದುವಂತಾದರೆ ಸಾಕು. ಅದಕ್ಕೆ ಶಂಕೆ ಏಕೆ? ಅಂಕಿತನಾಮದಿಂದ ಗ್ರಂಥ ಪ್ರಸಿದ್ಧವಾಗುವುದಿಲ್ಲ, ಬದಲಾಗಿ ಪ್ರಸಿದ್ಧವಾದ ಗ್ರಂಥದಿಂದ ಅಂಕಿತನಾಮ ಪ್ರಚಲಿತವಾಗುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ | ಗುರುವಾರ ಆಗಸ್ಟ್ 3, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಕೃಷ್ಣ ದ್ವಿತೀಯ ಗಂ. 16-17 ನಕ್ಷತ್ರ: ಧನಿಷ್ಠಾ ಗಂ. 09-56 ಯೋಗ: ಸೌಭಾಗ್ಯ ಗಂ. 10-17 ಕರಣ: ತೈತಿಲ ಗಂ. 06-10, ಕರ್ಕಾಟಕ ಮಾಸದ 17 ನೇ ದಿನ, ಮಳೆನಕ್ಷತ್ರ: ಆಶ್ಲೇಷ 1.
ರಾಹುಕಾಲ : ಮಧ್ಯಾಹ್ನ 01-30 - 03-00
ಸೂರ್ಯೋದಯ : 06-20 ಸೂರ್ಯಾಸ್ತ : 06-54
ಮುಸ್ಲಿಂ ದಿನಾಂಕ : 15 ಮೊಹರಮ್,
ಅದೃಷ್ಟ ಸಂಖ್ಯೆ : 4, 9

ಮೇಷ: ಸಮಯಕ್ಕೆ ಸರಿಯಾಗಿ ವರ್ತಿಸುವಂಥ ಬುದ್ಧಿವಂತಿಕೆ ತೋರುವಿರಿ. ಯಾವುದಾದರೂ ಕೆಲಸ ಮಾಡಿದರೆ ನಿಮ್ಮ ಯೋಜನೆಯ ಲಾಭ ಬರುವುದಿಲ್ಲ ಎಂದಾದಾರೆ ಒಳ್ಳೆಯ ಕೆಲಸವಾದರೂ ಸಹ ನೀವು ಮಾಡುವುದಿಲ್ಲ.

ವೃಷಭ: ತಂದೆಯ ವಿಪರೀತ ಸ್ಥಿತಿಗಳಿಂದ ಅವರ ಕೆಲಸಗಳೆಲ್ಲವೂ ನಿಮ್ಮ ಹೆಗಲ ಮೇಲೆ ಬೀಳುವವು. ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರುವ ಘಟನೆಗಳು ನಡೆಯುವವು. ಪಾಲುದಾರಿಕೆ ವ್ಯವಹಾರದಲ್ಲಿ ನಷ್ಟ ಸಂಭವ ಸಾಧ್ಯತೆ.

ಮಿಥುನ: ನಿಮ್ಮ ಕಷ್ಟ ನಷ್ಟಗಳನ್ನೇ ಯೋಚಿಸಿತ್ತಾ ಕೂರದಿರಿ. ಅವೆಲ್ಲವೂ ಸದ್ಯದ ಮಟ್ಟಿಗೆ ಕ್ಷಣಿಕವೇ ಆಗಿರುತ್ತವೆ. ಏನೇ ಸಮಸ್ಯೆಗಳಿದ್ದರೂ ಮಾತಿನ ಮುಖಾಂತರ ಬಗೆಹರಿಸಿಕೊಳ್ಳುವಿರಿ. ಭವಿಷ್ಯಕ್ಕಾಗಿ ಹಣ ಉಳಿಸಲು ಯೋಚಿಸುವಿರಿ.

ಕರ್ಕಾಟಕ: ಹೆಂಡತಿಯ ತವರು ಮನೆಯ ಕಡೆಯ ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ಸಂಬಂಧಗಳನ್ನು ಗಟ್ಟಿಗೊಳಿಸುವ ಪ್ರಯತ್ನ ಮಾಡುವಿರಿ. ವಾಹನದಿಂದ ಕೈ ಕಾಲಿಗೆ ಪೆಟ್ಟಾಗುವ ಸಾಧ್ಯತೆ, ಎಚ್ಚರವಿರಲಿ.

ಸಿಂಹ: ಎಲ್ಲಾ ಕೆಲಸಗಳನ್ನು ಅತೀವ ಒತ್ತಡದ ನಡುವೆಯೇ ಮಾಡುವಂತೆ ಆಗುವುದು. ನೀವು ಯಾವುದೇ ಕಾರಣಕ್ಕೂ ಸೋಲನ್ನು ಒಪ್ಪದೇ ಇರುವುದರಿಂದ ಹಿಡಿದಂತಹ ಕಾರ್ಯದಲ್ಲಿ ಜಯವನ್ನು ಸಾಧಿಸುವಿರಿ.

ಕನ್ಯಾ: ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ಸಹೋದರನಲ್ಲಿ ಹೇಳಿಕೊಂಡಾಗ ಆರ್ಥಿಕವಾಗಿ ಹಾಗೂ ಮಾನಸಿಕವಾಗಿ ಸಹಾಯ ದೊರೆಯಲಿದೆ. ಮನೆಯ ಹೆಣ್ಣುಮಗಳ ಮದುವೆಗೆ ಹುಡುಗ ಸಿಗುವ ಸಾಧ್ಯತೆ ಇದೆ.

ತುಲಾ: ಮನೆಯಲ್ಲಿನ ಆರ್ಥಿಕ ಸ್ಥಿತಿಗತಿಯನ್ನು ಗಮನಿಸಿದ ನೀವು ಪ್ರತಿಯೊಂದು ರೂಪಾಯಿಯನ್ನು ಖರ್ಚು ಮಾಡುವಾಗಲೂ ಸಹ ಹಲವಾರು ಬಾರಿ ಯೋಚಿಸುವಿರಿ. ನಿಮ್ಮ ಮಾತುಗಳು ಯಾರ ಮನಸ್ಸನ್ನೂ ನೋಯಿಸದಿರಲಿ.

ವೃಶ್ಚಿಕ: ನಿಮ್ಮ ನಿರ್ಧಾರಗಳನ್ನು ಎಲ್ಲರ ಮುಂದೆ ತಿಳಿಸುವ ಮುನ್ನ ನೀವು ಸಂಪೂರ್ಣವಾಗಿ ಯೋಚನೆ ಮಾಡಿ. ವ್ಯವಹಾರದಲ್ಲಿ ಮಧ್ಯಮ ಲಾಭ ಪಡೆಯುವಿರಿ. ಸಾಲ ಕೊಡುವಂತಹ ವ್ಯವಹಾರಗಳು ನಿಮಗೆ ಬೇಡ.

ಧನು: ಕೆಲಸಕ್ಕೆ ಸಂಬಂಧಪಟ್ಟಂತೆ ದೂರದ ಊರಿನ ಪ್ರವಾಸ ಮಾಡುವ ಸಾಧ್ಯತೆಗಳಿರಬಹುದು. ನೀವು ಮಾಡುವ ಕೆಲಸಗಳೆಲ್ಲವೂ ನಿಮಗೆ ಸರಿಯಾಗಿಯೇ ಕಂಡರೂ ಸಹ ಅವೆಲ್ಲವೂ ಸರಿಯಾಗಿಯೇ ಇರುವುದಿಲ್ಲ.

ಮಕರ: ನೀವು ಖರೀದಿಸಿದ ನಿವೇಶನ ಈಗ ಮಾರುವುದಾದರೆ ಉತ್ತಮ ಬೆಲೆಗೆ ಮಾರಾಟ ಆಗುವುದು. ಅಧಿಕಾರಿಗಳ ಮಾತಿಗೆ ವಿಧೇಯರಾಗಿ ನಡೆಯಿರಿ. ಆಟೋಟಗಳಲ್ಲಿ ಹಿಂದಿಗಿಂತ ಉತ್ತಮ ಪ್ರದರ್ಶನ ತೋರುವಿರಿ.

ಕುಂಭ: ಕಲಿಕೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಲು ಅಧಿಕ ಶ್ರಮ ಪಡಬೇಕಾಗುವುದು. ನಿಮ್ಮ ಸಂಬಂಧಿಕರ ಆಗಮನದಿಂದ ನಿಮಗೆ ಸಂತೋಷ ಆಗುವುದು. ಸ್ವಂತ ಮನೆಯ ಕನಸು ನನಸು ಮಾಡುವ ದಾರಿ ಕಾಣುವುದು.

ಮೀನ: ನಿಮ್ಮನ್ನು ನೀವು ಸಮರ್ಥಿಸಿಕೊಳ್ಳುವ ಮಾತುಗಳನ್ನಾಡುವಾಗ ನುಡಿಯಲ್ಲಿ ದಿಟ್ಟತನವಿರಲಿ. ನಿಮ್ಮ ಕಾರ್ಯಕ್ಷೇತ್ರದಲ್ಲಿನ ಉನ್ನತ ವ್ಯಕ್ತಿಯನ್ನು ಭೇಟಿಯಾಗುವಿರಿ. ಧಾರ್ಮಿಕ ಕ್ಷೇತ್ರಕ್ಕೆ ಭೇಟಿ ನೀಡುವುದರಿಂದ ಶುಭ.

ಪದಬಂಧ 5399

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಒಪ್ಪವಾಗಿ ಮಾನವಿಟ್ಟಾಗಲೇ ಈ ಸಂದೇಹ! (4)
3.ಗಾಳಿಪಟದ ಬುಡಕ್ಕೆ ಕಟ್ಟುವ ಉದ್ದನೆಯ ಪಟ್ಟಿ (4)
5.ಗುಣವಂತ ಹಿಡಿದಿರುವ ದೊಡ್ಡ ಮಡಿಕೆ (3)
6.ಎಳ್ಳಿನಿಂದಿರಿಸಿಕೊಂಡ ಬೊಟ್ಟು (3)
8.ಜಳಕ ಮಾಡಿದ್ದಕ್ಕೇ ಈ ರೋಮಾಂಚನ! (3)
9.ಕಾಡಿಸುವಾತ ನೀಡಿದ ದುಡ್ಡು (2)
10.ಖರ್ಚು ಕಳೆದು ಉಳಿದುದು (2)
11.ನರನು ನೋಡುತ್ತಿರುವ ಶಹರು (3)
12.ಮಗನಿದ್ದರೆ ಇದು ಸಲೀಸು! (3)
14.ತನಗೆ ತಾನೇ ಮಾತಾಡಿಕೊಳ್ಳುವುದು (3)
16.ಬರದಲ್ಲಿ ತೋರುತ್ತಿರುವ ಡೌಲು (4)
17.ಮರದಲ್ಲಿರುವ ಹೆಬ್ಬಾಗಿಲು (4)

ಮೇಲಿಂದ ಕೆಳಕ್ಕೆ
1.ದೇವತೆ ಇಲ್ಲಿದ್ದಾಳೆ (3)
2.ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ! (2)
3.ಬಾದಾರಾಯಣನ ಕಾಲದ ಶರ (2)
4.ಈತ ಸಿಟ್ಟಿನ ವ್ಯಕ್ತಿ (3)
7.ಸ್ವಪ್ನವನ್ನು ಕಾಣುವವನು (5)
8.ಈ ರೀತಿ ಮಾತಿನಲ್ಲಿ ನಯವಾಗಿ ಉಬ್ಬಿಸು! (5)
11.ಮುಸಲ್ಮಾನ ದೊರೆ (3)
13.ಮರದಲ್ಲಿರುವ ಮೊಸಳೆ ಕಾಣಿಸುತ್ತಿದೆಯೇ? (3)
14.ವರ್ಣಮಾಲೆಯಲ್ಲಿ ಸ್ವತಂತ್ರವಾಗಿ ಉಚ್ಚರಿಸುವ ವರ್ಣ (2)
15.ಮತ ನೀಡುವಾಗ ಆವರಿಸಿದ ಕತ್ತಲು (2)

1			2	■	3			4
	■	■	5			■	■	
6		7	■	■	■	8		
■	■		■	■	■		■	■
■	9		■	■	■	10		■
■	■		■	■	■		■	■
11			■	■	■	12		13
	■	■	14		15	■	■	
16				■	17			

5398ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ದೇಹ 5.ನಿರುಪಯೋಗಿ 6.ವಿಕೋಪ 7.ಗುರಾಣಿ 8.ರಾಷ್ಟ್ರೀಕರಣ 9.ಸುಸಂಧಿ 10.ಕಮಾನು 13.ದುರಭಿಮಾನ 14.ತಲೆ

ಮೇಲಿಂದ ಕೆಳಕ್ಕೆ:
1.ಅನುಭವಿ 2.ಶಪಥ 4.ಹಣಾಹಣಿ 5.ನಿರಪರಾಧಿ 7.ಗುಣಕಥನ 9.ಸುಭಾಷಿತ 11.ನುಡಿಗಟ್ಟು 12.ಸಭಿಕ

ಸುಡೊಕು 5785

	6		8				1	
2							7	
		4	9		2	8	3	6
3		6				5		9
	7		3	2	4			
		1				3		7
4			6		1		9	
	3				5			
6		8	2				5	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5784 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ವಿವಾದ್ ಸೆ ವಿಶ್ವಾಸ್–2 ಆರಂಭ

ನವದೆಹಲಿ (ಪಿಟಿಐ): ಸರ್ಕಾರದ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ಬಾಕಿ ಇರುವ ವ್ಯಾಜ್ಯಗಳನ್ನು ಇತ್ಯರ್ಥ ಪಡಿಸುವ 'ವಿವಾದ್ ಸೆ ವಿಶ್ವಾಸ್–2' ಯೋಜನೆಯನ್ನು ಆರಂಭಿಸಲಾಗಿದ್ದು, ಗುತ್ತಿಗೆದಾರರಿಗೆ ಅಕ್ಟೋಬರ್ 31ರವರೆಗೆ ಕಾಲಾವಕಾಶ ಇರಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಬುಧವಾರ ತಿಳಿಸಿದೆ.

ಸರ್ಕಾರ ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಬಾಕಿ ಇರುವ ಗುತ್ತಿಗೆ ವ್ಯಾಜ್ಯಗಳನ್ನು ಬಗೆಹರಿಸಲು ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ.

ಸಿಂಗಪುರ ಸಂಸತ್: ಭಾರತ ಮೂಲದ ಮೂವರ ಪ್ರಮಾಣ ವಚನ ಸ್ವೀಕಾರ

ಸಿಂಗಪುರ (ಪಿಟಿಐ): ಸಿಂಗಪುರ ಸಂಸತ್ತಿನ ಸದಸ್ಯರಾಗಿ ಬುಧವಾರ ಪ್ರಮಾಣ ವಚನ ಸ್ವೀಕರಿಸಿದ ಒಂಬತ್ತು ಮಂದಿ ಪೈಕಿ ಮೂವರು ಭಾರತ ಮೂಲದವರಾಗಿದ್ದಾರೆ.

ನಾಮನಿರ್ದೇಶನ ಆಗಿರುವ 9 ಮಂದಿ ಪೈಕಿ ಭಾರತ ಮೂಲದ ವಕೀಲ ರಾಜ್ ಜೋಶುವಾ ಥಾಮಸ್ ಅವರು ಎರಡನೇ ಬಾರಿಗೆ ಸಂಸದರಾಗಿದ್ದಾರೆ. ಉಳಿದವರೆಲ್ಲರೂ ಮೊದಲ ಬಾರಿಗೆ ಸಂಸತ್ ಸದಸ್ಯರಾಗಿದ್ದಾರೆ. ಇವರ ಅಧಿಕಾರ ಅವಧಿ ಎರಡೂವರೆ ವರ್ಷ.

ನೂತನ ಸ್ಪೀಕರ್ ಆಗಿ ಸೀಹ್ ಕಿಯಾನ್ ಪೆಂಗ್ ಬುಧವಾರ ಪ್ರಮಾಣವಚನ ಸ್ವೀಕರಿಸಿದರು. ಪೀಪಲ್ಸ್ ಆ್ಯಕ್ಷನ್ ಪಾರ್ಟಿಯ ಸಂಸತ್ ಸದಸ್ಯೆ ಚೆಂಗ್ ಲಿ ಹುಯಿ ಅವರೊಂದಿಗೆ ವಿವಾಹೇತರ ಸಂಬಂಧ ಹೊಂದಿದ್ದಕ್ಕಾಗಿ ಸ್ಪೀಕರ್ ಆಗಿದ್ದ ತಾನ್ ಚುವಾನ್- ಜಿನ್ ರಾಜೀನಾಮೆ ನೀಡಿದ್ದರು. ಸಿಂಗಪುರ ಇಂಡಿಯನ್ ಚೇಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿಯ ಅಧ್ಯಕ್ಷ ಹಾಗೂ ಅಕ್ವಿಜಿಶನ್ ಫರ್ಮ್ ಪೆಗಾಸಸ್ ಏಷ್ಯಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪರೇಖ್ ನಿಮಿಲ್ ರಜನಿಕಾಂತ್ ಮತ್ತು ಇತಿಹಾಸಕಾರ್ತಿ ಚಂದ್ರಾದಾಸ್ ಉಷಾ ರಾಣಿ ನಾಮನಿರ್ದೇಶನಗೊಂಡಿರುವ ಭಾರತ ಮೂಲದ ಇನ್ನಿಬ್ಬರಾಗಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಚಿರಸ್ಮರಣೆ



ಶ್ರೀ ಎಸ್.ಎ.ನಾರಾಯಣಸ್ವಾಮಿರೆಡ್ಡಿ
ನಿಧನ 3-8-1991

ಶ್ರೀಮತಿ ಎಸ್.ವೆಂಕಟಲಕ್ಷ್ಮಮ್ಮ
ನಿಧನ 18-11-1999

ನೀವು ನಮ್ಮನಗಲಿ ಇಂದಿಗೆ 32 ವರ್ಷಗಳಾಯಿತು ಸದಾ ನಿಮ್ಮ ಸವಿನೆನಪಿನಲ್ಲಿ ನೀವು ತೋರಿದ ಹಾದಿಯಲ್ಲಿ ನಡೆಯುತ್ತಾ ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಬಯಸುವ

ನೀವು ನಮ್ಮನಗಲಿ ಇಂದಿಗೆ 24 ವರ್ಷಗಳಾಯಿತು ಸದಾ ನಿಮ್ಮ ಸವಿನೆನಪಿನಲ್ಲಿ ನೀವು ತೋರಿದ ಹಾದಿಯಲ್ಲಿ ನಡೆಯುತ್ತಾ ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಬಯಸುವ

ಮಕ್ಕಳು ಮೊಮ್ಮಕ್ಕಳು ಹಾಗೂ ಬಂಧು ವರ್ಗದವರು
ಎಸ್.ಜಿ.ಪಾಳ್ಯ, ಬೆಂಗಳೂರು–29.

20ನೇ ವರ್ಷದ ಪುಣ್ಯಸ್ಮರಣೆ

ಪದ್ಮಶಾಲಿ ಕನಮಾಕಲು
ಶ್ರೀಮತಿ ಜಯಮ್ಮನವರು
(ದಿವಂಗತ ಕೆ.ಪಿ.ಎಂ. ನಂಜಪ್ಪನವರ ಧರ್ಮಪತ್ನಿ)
ನಿಧನ: 03–08–2003.
ನಿಮ್ಮ ಸವಿನೆನಪು ಸದಾ ನಮ್ಮಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ: ಮಕ್ಕಳು ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುವರ್ಗದವರು

ಎರಡನೇ ವರ್ಷದ ಸವಿನೆನಪು

ಶ್ರೀಮತಿ ಎ.ಎಂ. ಲೀಲ
ಜನನ: 05.01.1952 • ಮರಣ: 03.08.2021
ದುಃಖತಪ್ತ ಪತಿ: ಕೆ.ನಾಗಭೂಷಣ ಮತ್ತು ಕುಟುಂಬದವರು ಹಾಗೂ ಬಂಧು ಬಳಗ.
ನಂ. 1732, ಜೆ.ಪಿ.ನಗರ, ಬೆಂಗಳೂರು–560078.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು!

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಷೇರುಪೇಟೆ ವಹಿವಾಟು	
676	
ಇಂದಿನ ಅಂತ್ಯ	65,783
ಹಿಂದಿನ ಅಂತ್ಯ	66,459



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	19,733
ಇಂದಿನ ಅಂತ್ಯ	19,526
▼	207
ದಿನದ ಕನಿಷ್ಠ	19,423

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹455
12 ಮೊಟ್ಟೆಗೆ	₹63
ಮೈಸೂರು	
100 ಮೊಟ್ಟೆಗೆ	₹457

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹256-525
ದ್ವಿತಳಿ (ಬಿ.ವಿ)	₹268-649

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹149.50
ಆರ್‌ಎಸ್‌ಎಸ್-5	₹144
ಗುಡ್ ಲಾಟ್	₹127

ಅನುಷ್ಠಾನದ ಆರು ತಿಂಗಳ ನಂತರದಲ್ಲಿ ಪರಾಮರ್ಶೆ: ಹಣಕಾಸು ಸಚಿವೆ ನಿರ್ಮಲಾ

ಆನ್‌ಲೈನ್ ಆಟ: ತೆರಿಗೆ ಬದಲಿಲ್ಲ

ನವದೆಹಲಿ (ಪಿಟಿಐ): ದೆಹಲಿ, ಗೋವಾ ಮತ್ತು ಸಿಕ್ಕಿಂ ಹಣಕಾಸು ಸಚಿವರ ವಿರೋಧ ಇದ್ದರೂ, ಆನ್‌ಲೈನ್ ಆಟಗಳು ಹಾಗೂ ಕ್ಯಾಸಿನೊಗಳಲ್ಲಿ ಪೂರ್ಣ ಬೆಟ್ಟಿಂಗ್ ಮೊತ್ತದ ಮೇಲೆ ಆರಂಭಿಕ ಹಂತದಲ್ಲಿ ಶೇಕಡ 28ರ ದರದಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಿಧಿಸಲು ಜಿಎಸ್‌ಟಿ ಮಂಡಳಿ ತೀರ್ಮಾನಿಸಿದೆ.

ಈ ಪ್ರಮಾಣದ ತೆರಿಗೆ ವಿಧಿಸಲು ಕೇಂದ್ರ ಜಿಎಸ್‌ಟಿ ಕಾನೂನಿನಲ್ಲಿ ಮಾಡಬೇಕಿರುವ ತಿದ್ದು-ಪಡಿಗಳನ್ನು ಕೇಂದ್ರವು ಸಂಸತ್ತಿನ ಮುಂಗಾರು ಅಧಿವೇಶನದ ಸಂದರ್ಭದಲ್ಲಿಯೇ ತರಲಿದೆ. ಇದಾದ ನಂತರದಲ್ಲಿ ರಾಜ್ಯ ಸರ್ಕಾರಗಳು ಕೂಡ ಕಾನೂನಿಗೆ ಅಗತ್ಯ ತಿದ್ದುಪಡಿಗಳನ್ನು ತರಲಿವೆ. ಅಕ್ಟೋಬರ್ 1ರಿಂದ ಶೇ 28ರಷ್ಟು ತೆರಿಗೆ ಜಾರಿಗೆ ಬರಲಿದೆ.

'ಆಟಗಾರ ₹1,000 ಮೊತ್ತದ ಬೆಟ್ ಮಾಡಿ, ಆಟದಲ್ಲಿ ₹300 ಗೆದ್ದ ಎಂದು ಭಾವಿಸಿ. ನಂತರ ಆತ ಗೆದ್ದ ಮೊತ್ತವನ್ನೂ ಸೇರಿಸಿ ₹1,300 ಬೆಟ್ ಮಾಡಿದರೆ, ಗೆಲುವಿನ ಕಾರಣದಿಂದಾಗಿ ಪಡೆದ ಮೊತ್ತಕ್ಕೆ ಜಿಎಸ್‌ಟಿ ವಿಧಿಸುವುದಿಲ್ಲ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಭೆಯ ನಂತರ ತಿಳಿಸಿದ್ದಾರೆ.

ಆನ್‌ಲೈನ್ ಆಟಗಳು ಹಾಗೂ ಕ್ಯಾಸಿನೊಗಳಿಗೆ ನಿಗದಿ ಮಾಡಿರುವ ತೆರಿಗೆ ಪ್ರಮಾಣದ ಕುರಿತು, ನಿಯಮಗಳಲ್ಲಿ ಬದಲಾವಣೆಯ ಅಗತ್ಯವಿದೆಯೇ ಎಂಬ ಬಗ್ಗೆ ಆರು ತಿಂಗಳ ನಂತರ ಪರಾಮರ್ಶೆ ನಡೆಸಲಾಗುತ್ತದೆ ಎಂದು ನಿರ್ಮಲಾ ಹೇಳಿದ್ದಾರೆ.

ಪೂರ್ಣ ಬೆಟ್ಟಿಂಗ್ ಮೊತ್ತದ ಮೇಲೆ ಶೇ 28ರಷ್ಟು ತೆರಿಗೆ ವಿಧಿಸಲು ಜಿಎಸ್‌ಟಿ ಮಂಡಳಿಯು ಹಿಂದಿನ ತಿಂಗಳು ನಡೆದ ಸಭೆಯಲ್ಲಿ ತೀರ್ಮಾನಿಸಿತ್ತು. ಬುಧವಾರ ನಡೆದ ಸಭೆಯು, ಈ ತೀರ್ಮಾನವನ್ನು ಅನುಷ್ಠಾನಕ್ಕೆ ತರಲು ಅಗತ್ಯವಿರುವ ಕಾನೂನು ಬದಲಾವಣೆಗಳ ಬಗ್ಗೆ ಚರ್ಚಿಸುವ ಉದ್ದೇಶ ಹೊಂದಿತ್ತು.

ಕರ್ನಾಟಕ, ಪಶ್ಚಿಮ ಬಂಗಾಳ, ಗುಜರಾತ್, ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದ ಪ್ರತಿನಿಧಿಗಳು ಈ ಪ್ರಮಾಣದ ತೆರಿಗೆ ವಿಧಿಸುವುದಕ್ಕೆ ಬೆಂಬಲ ಸೂಚಿಸಿದರು, ತೀರ್ಮಾನವನ್ನು ಆದಷ್ಟು ಬೇಗ ಅನುಷ್ಠಾನಕ್ಕೆ ತರಬೇಕು ಎಂದು ಆಗ್ರಹಿಸಿದರು.

ನೋಂದಣಿ ಕಡ್ಡಾಯ: ರೆವಿನ್ಯು ಕಾರ್ಯದರ್ಶಿ

ವಿದೇಶಗಳಿಂದ ಕಾರ್ಯ ನಿರ್ವಹಿಸುವ ಗೇಮಿಂಗ್ ವೇದಿಕೆಗಳು ಜಿಎಸ್‌ಟಿ ಅಡಿ ನೋಂದಣಿ ಮಾಡಿಕೊಳ್ಳಬೇಕಾಗುತ್ತದೆ ಎಂದು ಕೇಂದ್ರ ರೆವಿನ್ಯು ಕಾರ್ಯದರ್ಶಿ ಸಂಜಯ್ ಮಲ್ಹೋತ್ರ ಹೇಳಿದ್ದಾರೆ.

ನೋಂದಣಿ ಮಾಡಿಸಿಕೊಳ್ಳದೆ ಇದ್ದಲ್ಲಿ, ಆ ವೇದಿಕೆಗಳನ್ನು ಮಾಹಿತಿ ತಂತ್ರಜ್ಞಾನ ಕಾಯ್ದೆಯ ಅಡಿಯಲ್ಲಿ ನಿರ್ಬಂಧಿಸಲಾಗುತ್ತದೆ ಎಂದು ಅವರು ಹೇಳಿದ್ದಾರೆ.

ಆನ್‌ಲೈನ್ ಆಟ, ಹಣವನ್ನು ಒಳಗೊಳ್ಳುವ ಆನ್‌ಲೈನ್ ಆಟ, ಆನ್‌ಲೈನ್ ಆಟಗಳಲ್ಲಿ ಪಾವತಿಗೆ ಬಳಕೆಯಾಗುವ ವಾಸ್ತವೋಪಮ ಡಿಜಿಟಲ್ ಆಸ್ತಿಗಳನ್ನು (ವಿಡಿಎ) ಕಾನೂನಿನ ಅಡಿಯಲ್ಲಿ ಸ್ಪಷ್ಟವಾಗಿ ವ್ಯಾಖ್ಯಾನಿಸಲಾಗುತ್ತದೆ ಎಂದು ಮಲ್ಹೋತ್ರಾ ತಿಳಿಸಿದ್ದಾರೆ.

ಶೇ 1ರವರೆಗೆ ಇಳಿಕೆ ಕಂಡ ಸೆನ್ಸೆಕ್ಸ್, ನಿಫ್ಟಿ: ವಿದೇಶಿ ಬಂಡವಾಳ ಹೊರಹರಿವು

ಅಮೆರಿಕದ ರೇಟಿಂಗ್ಸ್ ಇಳಿಕೆ: ಸೆನ್ಸೆಕ್ಸ್ ಕುಸಿತ

ಮುಂಬೈ (ಪಿಟಿಐ/ರಾಯಿಟರ್ಸ್): ಫಿಚ್ ರೇಟಿಂಗ್ಸ್ ಸಂಸ್ಥೆಯು ಅಮೆರಿಕದ 'ಕ್ರೆಡಿಟ್ ರೇಟಿಂಗ್ಸ್' (ಸಾಲ ಪಡೆಯುವ ಸಾಮರ್ಥ್ಯಕ್ಕೆ ನೀಡುವ ಶ್ರೇಯಾಂಕ) ತಗ್ಗಿಸಿರುವ ವಿದ್ಯಮಾನವು ಭಾರತದಲ್ಲಿ ಷೇರುಪೇಟೆಗಳಲ್ಲಿ ಬುಧವಾರ ನಕಾರಾತ್ಮಕ ವಹಿವಾಟು ನಡೆಯುವಂತೆ ಮಾಡಿತು.

ಅಮೆರಿಕದ ಒಕ್ಕೂಟ, ರಾಜ್ಯಗಳು ಹಾಗೂ ಸ್ಥಳೀಯ ಮಟ್ಟದಲ್ಲಿ ಸಾಲದ ಹೊರೆ ಹೆಚ್ಚಾಗಿರುವ ಕಾರಣದಿಂದಾಗಿ ಫಿಚ್ ರೇಟಿಂಗ್ಸ್ ಸಂಸ್ಥೆಯು ಆ ದೇಶದ ಕ್ರೆಡಿಟ್ ರೇಟಿಂಗ್ಸ್ ಅನ್ನು 'ಎಎಎ'ಯಿಂದ 'ಎಎ+'ಗೆ ಇಳಿಕೆ ಮಾಡಿದೆ. ಇದರ ಜೊತೆಗೆ ಯುರೋಪ್ ವಲಯ ಮತ್ತು ಚೀನಾದ ಆರ್ಥಿಕತೆಯ ಬೆಳವಣಿಗೆ ಪ್ರಮಾಣವು ಇಳಿಕೆ ಕಂಡಿರುವುದು ಸಹ ಜಾಗತಿಕವಾಗಿ ಮಾರುಕಟ್ಟೆಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡಿವೆ.

'ಫಿಚ್ ರೇಟಿಂಗ್ಸ್ ಸಂಸ್ಥೆಯು ಅಮೆರಿಕದ ರೇಟಿಂಗ್ಸ್ ತಗ್ಗಿಸಿರುವು-ದರಿಂದ ಬುಧವಾರ ದೇಶಿ ಷೇರು ಪೇಟೆಗಳಲ್ಲಿ ಒಂದಿಷ್ಟು ಇಳಿಕೆ ಕಂಡು ಬಂದಿದೆ. ನೇರವಾಗಿ ಹೇಳುವುದಾದರೆ, ಮಾರುಕಟ್ಟೆಯು ಕೆಲವು ದಿನಗಳಿಂದ ಒಂದಿಷ್ಟು ಇಳಿಕೆ ಕಾಣುವುದಕ್ಕೆ ಕಾಯುತ್ತಿತ್ತು. ಅದಕ್ಕೆ ಅಮೆರಿಕದ ರೇಟಿಂಗ್ಸ್ ತಗ್ಗಿಸಿದ ಕಾರಣ ಸಿಕ್ಕಿತಷ್ಟೆ' ಎಂದು ಪ್ರಭುದಾಸ್ ಲೀಲಾಧರ್ ಬ್ರೋಕರೇಜ್ ಸಂಸ್ಥೆಯ ಮುಖ್ಯ ಸಲಹೆಗಾರ ವಿಕ್ರಂ ಕಾಸಟ್ ಹೇಳಿದ್ದಾರೆ.

'ಭಾರತದ ಮಾರುಕಟ್ಟೆಯ ಮೇಲೆ ಇದರ ಪರಿಣಾಮವು ಅಲ್ಪ ಸಮಯದ-ವರೆಗಷ್ಟೇ ಇರಲಿದೆ. ಕಂಪನಿಗಳ ಜೂನ್ ತ್ರೈಮಾಸಿಕದ ಗಳಿಕೆ, ಮೂಲಸೌಕರ್ಯ ವಲಯದಲ್ಲಿನ ಹೂಡಿಕೆ ಮತ್ತು ಬಂಡವಾಳ ಒಳಹರಿವಿನ ಕಡೆಗೆ ಶೀಘ್ರವೇ ಗಮನ ಮರಳಲಿದೆ' ಎಂದಿದ್ದಾರೆ.

'ಅಮೆರಿಕದ ರೇಟಿಂಗ್ಸ್ ತಗ್ಗಿಸಿರುವುದು ಮಾರುಕಟ್ಟೆಗೆ ಗೊತ್ತಿರದೇ ಇದ್ದ ವಿಷಯವೇನೂ ಅಲ್ಲ. ಹೀಗಾಗಿ ಈಗಿನ ಕುಸಿತವು ಅಲ್ಪಮಟ್ಟಿನದ್ದಾಗಿರಲಿದೆ. ಅಮೆರಿಕದ ಆರ್ಥಿಕತೆಗೆ ಹಾನಿಯಾಗದ ರೀತಿಯಲ್ಲಿ ಎಲ್ಲವೂ ಸರಿಹೋಗಲಿದೆ ಎನ್ನುವ ಅಭಿಪ್ರಾಯಗಳು ವ್ಯಕ್ತ-ವಾಗುತ್ತಿರುವುದರಿಂದ ಜಾಗತಿಕ ಷೇರುಪೇಟೆಗಳು ಏರುಗತಿಯಲ್ಲಿವೆ. ರೇಟಿಂಗ್ಸ್ ತಗ್ಗಿಸಿರುವುದು ಆ ಪರಿ-ಸ್ಥಿತಿಯನ್ನು ಬದಲಾಯಿಸಲಾರದು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಅಭಿಪ್ರಾಯ-ಪಟ್ಟಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಬುಧವಾರ 676 ಅಂಶ ಇಳಿಕೆ ಕಂಡು 65,783 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 207 ಅಂಶ ಇಳಿಕೆ ಕಂಡು 19,526 ಅಂಶಗಳಿಗೆ ತಲುಪಿತು.

'ಜಾಗತಿಕ ವಿದ್ಯಮಾನಗಳ ಪ್ರಭಾವಕ್ಕೆ ಒಳಗಾಗಿ ದೇಶದ ಷೇರು-ಪೇಟೆಗಳಲ್ಲಿ ಇಳಿಕೆ ಕಂಡುಬಂದಿತು. ಫಿಚ್ ರೇಟಿಂಗ್ಸ್ ಸಂಸ್ಥೆಯು ಅಮೆರಿಕದ ರೇಟಿಂಗ್ಸ್ ತಗ್ಗಿಸಿರುವ ನಕಾರಾತ್ಮಕ ಸುದ್ದಿಯ ಜೊತೆಗೆ ಯುರೋಪ್ ವಲಯ ಮತ್ತು ಚೀನಾದಲ್ಲಿ ಕೈಗಾರಿಕಾ ಚಟುವಟಿಕೆಗಳ ಬೆಳವಣಿಗೆ ಇಳಿಕೆ ಆಗಿರುವುದು ಜಾಗತಿಕ ಮಟ್ಟದಲ್ಲಿ ಆತಂಕ ಮೂಡಿಸಿತು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

'ಅಮೆರಿಕದ ಬಾಂಡ್ ಗಳಿಕೆ ಹೆಚ್ಚಾಗಿದ್ದರಿಂದ ವಿದೇಶಿ ಸಾಂಸ್ಥಿಕ ಬಂಡವಾಳ (ಎಫ್‌ಐಐ) ಹೊರಹರಿವು ಕಂಡುಬಂದಿದ್ದು ಸಹ ದೇಶಿ ಮಾರುಕಟ್ಟೆಯ ಮೇಲೆ ಪರಿಣಾಮ ಬೀರಿತು' ಎಂದು ಅವರು ತಿಳಿಸಿದ್ದಾರೆ.

ಸಂಪತ್ತು ₹3.46 ಲಕ್ಷ ಕೋಟಿ ನಷ್ಟ

ನವದೆಹಲಿ: ಮುಂಬೈ ಷೇರುಪೇಟೆಯಲ್ಲಿ ನಡೆದ ನಕಾರಾತ್ಮಕ ವಹಿವಾಟಿನಿಂದಾಗಿ ಹೂಡಿಕೆದಾರರ ಸಂಪತ್ತು ಬುಧವಾರ ₹3.46 ಲಕ್ಷ ಕೋಟಿಯಷ್ಟು ಕರಗಿತು. ಷೇರುಪೇಟೆಯ ಬಂಡವಾಳ ಮೌಲ್ಯ ₹303.33 ಲಕ್ಷ ಕೋಟಿಗೆ ಇಳಿಕೆ ಕಂಡಿತು.

ಖಾದ್ಯ ತೈಲ ಮುಂಬೈ

(10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1840 (1840)
ಸೋಯಾ (ರಿಫೈನ್ಡ್)	₹965 (965)
ಸೂರ್ಯಕಾಂತಿ (ರಿಫೈನ್ಡ್)	₹975 (975)
ಪಾಮೋಲಿನ್	₹875 (875)

ತಿಪಟೂರು ಕೊಬ್ಬರಿ (ಕ್ವಿಂಟಲ್‌ಗೆ)	
ಕನಿಷ್ಠ	₹8000
ಗರಿಷ್ಠ	₹9400
ಮಾದರಿ	₹8700

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)	
ದಪ್ಪ	₹1400-1600
ಮಧ್ಯಮ	₹1000-1200
ಸಣ್ಣ	₹800-1000

₹ 5 ಸಾವಿರ ಕೋಟಿ ಹೂಡಿಕೆ: ಸಚಿವ ಎಂ.ಬಿ. ಪಾಟೀಲ

'2 ಒಪ್ಪಂದ ಪತ್ರಕ್ಕೆ ಫಾಕ್ಸ್‌ಕಾನ್ ಸಹಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ₹ 5,000 ಕೋಟಿ ಬಂಡವಾಳ ಹೂಡಿಕೆ ಸಂಬಂಧ ರಾಜ್ಯ ಸರ್ಕಾರದೊಂದಿಗೆ ಫಾಕ್ಸ್‌ಕಾನ್ ಒಪ್ಪಂದ ಪತ್ರಕ್ಕೆ ಸಹಿ ಮಾಡಿದೆ. ಈ ಯೋಜನೆಗಳಿಂದ 13 ಸಾವಿರ ಉದ್ಯೋಗ ಸೃಷ್ಟಿ ಆಗಲಿದೆ' ಎಂದು ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

'ಚೆನ್ನೈನ ಹೋಟೆಲ್ ಲೀಲಾ ಪ್ಯಾಲೇಸ್‌ನಲ್ಲಿ ಸೋಮವಾರ ನಡೆದ ಸಭೆಯಲ್ಲಿ ಫೋನ್ ಎನ್‌ಕ್ಲೋಸರ್ ಉತ್ಪಾದನಾ ಘಟಕ ಸ್ಥಾಪನೆ ಹಾಗೂ ಸೆಮಿಕಾನ್ ಉಪಕರಣಗಳ ಯೋಜನೆ ಅನುಷ್ಠಾನ ಕುರಿತು ಮಾತುಕತೆ ನಡೆಸಿದ ಫಾಕ್ಸ್‌ಕಾನ್ ಅಧ್ಯಕ್ಷ ಯಂಗ್ ಲಿಯು, ಎರಡು ಒಪ್ಪಂದ ಪತ್ರಗಳಿಗೆ ಸಹಿ ಹಾಕಿದರು' ಎಂದು ಪಾಟೀಲ ಹೇಳಿದ್ದಾರೆ.

'ಈ ಎರಡೂ ಒಪ್ಪಂದಗಳು, ಈ ಮೊದಲು ಮಾಡಿಕೊಂಡಿದ್ದ ₹ 14 ಸಾವಿರ ಕೋಟಿ ಹೂಡಿಕೆ ಆ್ಯಪಲ್ ಫೋನ್ ತಯಾರಿಕಾ ಘಟಕಗಳಿಗೆ ಹೊರತಾದವು. ಇದಕ್ಕೂ ದೊಡ್ಡ-ಬಳ್ಳಾಪುರ ಸಮೀಪ ಭೂಮಿ ನೀಡಲಾಗುವುದು' ಎಂದು ಅವರು ತಿಳಿಸಿದ್ದಾರೆ.

'ಕರ್ನಾಟಕ ಸರ್ಕಾರದ ಜತೆ ಯೋಜಿತ ಹೂಡಿಕೆ ಒಪ್ಪಂದ ಮಾಡಿ-ಕೊಳ್ಳಲಾಗಿದ್ದು, ನಮ್ಮ ಹೈಟೆಕ್ ಉದ್ಯಮಗಳಿಗೆ ರಾಜ್ಯ ಆಕರ್ಷಕ ತಾಣವಾಗಿದೆ. ಕರ್ನಾಟದಲ್ಲಿ ಉದ್ಯಮಕ್ಕೆ ಪೂರಕವಾದ ವಾತಾವರಣ ವಿದೆ. ನುರಿತ ಕೆಲಸಗಾರರ ಲಭ್ಯತೆಯೂ ಇಲ್ಲಿನ ವಿಶೇಷ. ಈ ಎರಡು ಪ್ರಮುಖ ಯೋಜನೆಗಳ ಮೂಲಕ ರಾಜ್ಯದಲ್ಲಿ ಹೊಸ ಅಧ್ಯಾಯ ಆರಂಭಿಸಲಿದ್ದೇವೆ' ಎಂದು ಫಾಕ್ಸ್‌ಕಾನ್ ಅಧ್ಯಕ್ಷ ಯಂಗ್ ಲಿಯು ಹೇಳಿದ್ದಾರೆ.

ಎರಡು ಯೋಜನೆಗಳು ಯಾವುವು?

- **ಫೋನ್ ಎನ್‌ಕ್ಲೋಸರ್:** ಐಫೋನ್‌ಗಳ ಮೆಕ್ಯಾನಿಕಲ್ ಎನ್‌ಕ್ಲೋಸರ್ ನಂತಹ ಸ್ಮಾರ್ಟ್‌ಫೋನ್‌ನ ಉಪ ಘಟಕಗಳನ್ನು ತಯಾರಿಸುವ ಸಂಸ್ಥೆಯಾದ ಫಾಕ್ಸ್‌ಕಾನ್ ಇಂಡಸ್ಟ್ರಿಯಲ್ ಇಂಟರ್ ನೆಟ್ (ಎಫ್‌ಐಐ)ನ ಹೂಡಿಕೆ ಮೊತ್ತ 350 ದಶಲಕ್ಷ ಡಾಲರ್ (₹ 3,000 ಕೋಟಿ) ಯೋಜನೆಯಡಿ 12 ಸಾವಿರ ಜನರಿಗೆ ಉದ್ಯೋಗ ದೊರೆಯಲಿದೆ. ಬೆಂಗಳೂರಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಘಟಕ ಸ್ಥಾಪಿಸಲು ಎಫ್‌ಐಐ ಉದ್ದೇಶಿಸಿದೆ.
- **ಸೆಮಿಕಾನ್ ಉಪಕರಣಗಳು:** ಅಪ್ಲೈಡ್ ಮೆಟೀರಿಯಲ್ಸ್ ಸಹಯೋಗದಲ್ಲಿ ಸೆಮಿಕಂಡಕ್ಟರ್ ಉತ್ಪಾದನಾ ಉಪಕರಣಗಳ ತಯಾರಿಸುವ ಸಂಸ್ಥೆಯ ಯೋಜಿತ ಯೋಜನೆಯ ಹೂಡಿಕೆ ಮೊತ್ತ 250 ದಶಲಕ್ಷ ಡಾಲರ್ (₹ 2,000 ಕೋಟಿ). ಇದರಿಂದ 1,000 ಜನರಿಗೆ ಉದ್ಯೋಗ ದೊರೆಯಲಿದೆ. ಈ ಯೋಜನೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಹೈಟೆಕ್ ಏರೋಸ್ಪೇಸ್ ಮತ್ತು ಡಿಫೆನ್ಸ್ ಪಾರ್ಕ್ - 2ನೇ ಹಂತದಲ್ಲಿ 35 ಎಕರೆ ಭೂಮಿ ಅಂತಿಮಗೊಳಿಸಲಾಗಿದೆ.

ಎಚ್– 1ಬಿ ವೀಸಾ: 2ನೇ ಹಂತದ ಲಾಟರಿ ಪ್ರಕ್ರಿಯೆ ಪೂರ್ಣ

ವಾಷಿಂಗ್ಟನ್ (ಪಿಟಿಐ): ಎಚ್–1ಬಿ ವೀಸಾ ನೀಡುವ ಪ್ರಕ್ರಿಯೆ ಆರಂಭಿಸಿರುವ ಅಮೆರಿಕ, ಎರಡನೇ ಹಂತದ ಲಾಟರಿ ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದೆ ಎಂದು ಪೌರತ್ವ ಮತ್ತು ವಲಸಿಗರ ಸೇವೆ ವಿಭಾಗವು (ಯುಎಸ್‌ಸಿಐಎಸ್) ಮಂಗಳವಾರ ತಿಳಿಸಿದೆ.

ವೀಸಾ ಪಡೆಯಲು ಈಗಾಗಲೇ ಸೂಕ್ತವಾದ ರೀತಿಯಲ್ಲಿ ಸಲ್ಲಿಕೆಯಾಗಿರುವ ಅರ್ಜಿಗಳಲ್ಲಿ ಕೆಲವನ್ನು ರ‍್ಯಾಂಡಮ್ ಆಗಿ ಆರಿಸಿ ವೀಸಾ ನೀಡಲಾಗಿದೆ. ಅಕ್ಟೋಬರ್ 1ರಿಂದ ಆರಂಭವಾಗುವ ಹಣಕಾಸು ವರ್ಷದಿಂದಲೇ ವೀಸಾ ಅವಧಿ ಜಾರಿಯಲ್ಲಿರಲಿದೆ ಎಂದು ಯುಎಸ್‌ಸಿಐಎಸ್ ಹೇಳಿದೆ.

ಅಮೆರಿಕದ ತಂತ್ರಜ್ಞಾನ ಸೇವಾ ಸಂಸ್ಥೆಗಳು ಭಾರತ, ಚೀನಾದಂಥ ದೇಶಗಳ ಉದ್ಯೋಗಿಗಳ ಮೇಲೆ ಬಹುವಾಗಿ ಅವಲಂಬಿತವಾಗಿವೆ. ಈ ಕಂಪನಿಗಳು ವಿದೇಶಗಳ ಉದ್ಯೋಗಿಗಳನ್ನು ನೇಮಕ ಮಾಡಿಕೊಳ್ಳುವ ಸಲುವಾಗಿ ಎಚ್– 1ಬಿ ವೀಸಾ ನೀಡಲಾಗುತ್ತದೆ.

ಸಿಂಗಪುರ: ಹಡಗಿನಿಂದ ಬಿದ್ದಿದ್ದ ಮಹಿಳೆ ಸಾವು

ಸಿಂಗಪುರ (ಪಿಟಿಐ): ಸಿಂಗಪುರದಲ್ಲಿ ಹಡಗಿನಿಂದ ಬಿದ್ದು ನಾಪತ್ತೆಯಾಗಿದ್ದ ಭಾರತೀಯ ಮೂಲದ ರೀಟಾ ಸಹಾನಿ (64) ಮೃತಪಟ್ಟಿದ್ದಾರೆ ಎಂದು ಅವರ ಮಗ ಬುಧವಾರ ತಿಳಿಸಿದ್ದಾರೆ.

ರೀಟಾ ಸಹಾನಿ ಮತ್ತು ಅವರ ಪತಿ ಜಕೇಶ್ ಸಹಾನಿ ಪೆನಾಂಗ್‌ನಿಂದ ಸಿಂಗಪುರಕ್ಕೆ ವಾಪಸಾಗುತ್ತಿದ್ದರು. ಈ ವೇಳೆ ರೀಟಾ ಆಯತಪ್ಪಿ ಜಲಸಂಧಿಗೆ ಬಿದ್ದಿದ್ದರು.

ಚೀನಾದಲ್ಲಿ ಯುವಕರು, ಮಕ್ಕಳಿಗೆ ಸ್ಮಾರ್ಟ್‌ಫೋನ್ ಬಳಕೆಗೆ ಕಡಿವಾಣ

ಬೀಜಿಂಗ್ (ಎಎಫ್‌ಪಿ): ಚೀನಾದಲ್ಲಿ ಮಕ್ಕಳು ಮತ್ತು ಹದಿಹರೆಯದವರಿಗೆ ರಾತ್ರಿ ವೇಳೆ ಸ್ಮಾರ್ಟ್‌ಫೋನ್, ಇಂಟರ್ ನೆಟ್ ಬಳಕೆ ಮಾಡದಂತೆ ಕಡಿವಾಣ ಹಾಕುತ್ತಿದ್ದು, ಈ ನಿಯಮವು ಸೆಪ್ಟೆಂಬರ್‌ನಿಂದ ಜಾರಿಗೆ ಬರಲಿದೆ.

ಮೊಬೈಲ್ ಬಳಕೆಯ ಗೀಳಿನಿಂದ ಮಕ್ಕಳು ಮತ್ತು ಹದಿಹರೆಯದವರನ್ನು ಹೊರತರುವ ಉದ್ದೇಶದಿಂದ ಬುಧವಾರ ಹೊಸ ನಿಯಮಗಳನ್ನು ಚೀನಾ ಪ್ರಕಟಿಸಿದೆ. ಈ ನಿಯಮಗಳಡಿ ಮಕ್ಕಳು ಮತ್ತು ಹದಿಹರೆಯದವರು ರಾತ್ರಿ ವೇಳೆ ಸ್ಮಾರ್ಟ್‌ಫೋನ್ ಬಳಕೆ ಮಾಡುವುದನ್ನು ನಿರ್ಬಂಧಿಸಲಾಗುತ್ತದೆ.

ಈ ನಿರ್ಬಂಧಗಳು ಸಾರ್ವಜನಿಕ ಸಮಾಲೋಚನೆಯ ನಂತರ ಸೆಪ್ಟೆಂಬರ್ 2ರಿಂದ ಜಾರಿಗೆ ಬರಲಿವೆ. ಈ ನಿರ್ಬಂಧಗಳಡಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ರಾತ್ರಿ 10 ರಿಂದ ಬೆಳಿಗ್ಗೆ 6 ರವರೆಗೆ ಮೊಬೈಲ್ ಸಾಧನದೊಂದಿಗೆ ಇಂಟರ್‌ನೆಟ್ ಸಂಪರ್ಕ ಪಡೆಯುವುದನ್ನು ಕಡಿತಗೊಳಿಸಲಾಗುತ್ತದೆ.

ಸ್ಮಾರ್ಟ್‌ಫೋನ್ ಬಳಕೆಯ ಸಮಯಕ್ಕೂ ಕಡಿವಾಣ ಹೇರುತ್ತಿದ್ದು, ಎಂಟು ವರ್ಷದೊಳಗಿನವರಿಗೆ ದಿನಕ್ಕೆ ಗರಿಷ್ಠ 40 ನಿಮಿಷಗಳು ಮತ್ತು 16 ಮತ್ತು 17 ವರ್ಷ ವಯಸ್ಸಿನವರಿಗೆ ದಿನಕ್ಕೆ ಗರಿಷ್ಠ 2 ಗಂಟೆಯಷ್ಟು ಅವಧಿ ಮಾತ್ರ ಬಳಕೆ ಮಾಡಲು ಅವಕಾಶ ಇರಲಿದೆ.

ಚೀನಾದ ಸೈಬರ್‌ಸ್ಪೇಸ್ ಅಡ್ಮಿನಿ-ಸ್ಟ್ರೇಷನ್ (ಸಿಎಸಿ) ಈ ಹೊಸ ನಿಯ-ಮಗಳನ್ನುಪ್ರಕಟಿಸಿದೆ. ಇದರಲ್ಲಿ ಕೆಲವು ನಿರ್ಬಂಧಗಳು ವಿಶ್ವದಲ್ಲೇ ಅತ್ಯಂತ ಕಠಿಣವೆನಿಸಿವೆ. ಆದಾಗ್ಯೂ, ಪೋಷಕರು ಬಯಸಿದಲ್ಲಿ ಈ ನಿಯಮಗಳನ್ನು ಕೈಬಿಡಬಹುದಾಗಿದೆ ಎಂದು ತಿಳಿಸಲಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	900-950
ಜರಡಿ	1000 - 1050
ಹೆರಕಿದ್ದು	1300-1400
ಹಸಿರು ಸಾಧಾರಣ	1000-1100
ಹಸಿರು ಉತ್ತಮ	1250-1350
ಹಸಿರು ಅತಿ ಉತ್ತಮ	1600-1800
ಕಾಳುಮೆಣಸು	610
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-44200
ಹಳತು	46000-48000
ಕುಮಟಾ	
ಚಿಪ್ಪು	33509-35599
ಕೋಕ	23099-34999
ಫ್ಯಾಕ್ಟರಿ	15019-23249
ಹಳೆಚಾಲಿ	39199-42099
ಹೊಸಚಾಲಿ	39099-42509
ಪುತ್ತೂರು	
ಹೊಸತು	34000-44200
ಶಿವಮೊಗ್ಗ	
ಬೆಟ್ಟೆ	43366-54599
ಗೊರಬಲು	18500-42339
ರಾಶಿ	44699-55089
ಸರಕು	50030-80800
ಸಿದ್ದಾಪುರ	
ಬಿಳಿಗೋಟು	33699-35409
ಚಾಲಿ	39099-43269
ಕೋಕ	31099-35919
ಕೆಂಪುಗೋಟು	34619-35989
ರಾಶಿ	49099-51539
ತಟ್ಟಿಬೆಟ್ಟೆ	41509-49899
ಶಿರಸಿ	
ಬೆಟ್ಟೆ	42689-47999
ಬಿಳಿಗೋಟು	26009-37300
ಚಾಲಿ	38199-44200
ಕೆಂಪುಗೋಟು	32689-38699
ರಾಶಿ	47800-52409
ಸೊರಬ	
ಚಾಲಿ	36699-38119
ಗೊರಬಲು	35299-36099
ರಾಶಿ	51599-53599

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	14200	14000	165.55ಸೆಂಟ್ಸ್
ಎಸಿ	---	7200	7000	
ಆರ್‌ಪಿ	---	10300	10200	ಲಂಡನ್
ಆರ್‌ಸಿ	---	250	5900	2635ಡಾಲರ್ಸ್

ಮುಂಬೈ ಧಾರಣೆ

ಶೇಂಗಾ
2-8-2023

ಜಾವಾ 70/80(ಹೊಸ)	13400-13500
ಜಾವಾ 80/90(ಹೊಸ)	12000-12100
ದಪ್ಪ ಮಧ್ಯಪ್ರದೇಶ(ಹೊಸ)	13000-13100
ದಪ್ಪ ಗುಜರಾತ್(ಹೊಸ)	14300-14400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1850(1850)
ಒಂದು ವಾರದ ಡೆಲಿವರಿ	1845(1845)
ಸೋಯಾ ಕಚ್ಚಾ	920(920)
ಪಾಮ್ ವಾರದ ಡೆಲಿವರಿ	873(873)
ಸೂರ್ಯಕಾಂತಿ ಎಣ್ಣೆ ಕಚ್ಚಾ	920(920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,350 (59,100)
ಬೆಳ್ಳಿ ಕೆ.ಜಿ
74,150 (74,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ನಾವು ಆಟೋ ಡ್ರೈವರ್‌ಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದೇವೆ. ಫುಲ್ ಟೈಮ್ ಮತ್ತು ಪಾರ್ಟ್ ಟೈಮ್ ಗಳ ಸಂಬಳ ರೂ. 25000/-. ರೆಫರಲ್ ಬೋನಸ್ ರೂ. 10000/-. ಸೇರುವ ಬೋನಸ್ ರೂ.6000/-. ಆಸಕ್ತಿಯುಳ್ಳವರು ನಮ್ಮನ್ನು ಸಂಪರ್ಕಿಸಿ: 080-68960971

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

General

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ,ಬ್ರಿಟಾನಿಯಾ, ಟಿ.ವಿ.ಎಸ್, MNC ಕಂಪನಿಗಳಿಗೆ SSLC, PUC, Degree,ITI,Diplomaದವರು, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 8105161292

ಭವಿಷ್ಯ

Astrology

ಒಂದೇಕರೆಯಲ್ಲಿ ಶಾಶ್ವತ ಪರಿಹಾರ, ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್100% ಗ್ಯಾರಂಟಿ ಪರಿಹಾರ. ಪಂಡಿತ್. ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ,ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರ ಧರ್ಮಸ್ಥಳ:9880788899

ರಿಯಲ್ ಎಸ್ಟೇಟ್ ಸೆಲ್ಲಿಂಗ್

House

J P Nagar

FOR SALE 30X40 Duplex New Home Near J.S.S. Public School, #500, 24th Main, 2nd Stage, Own Built J.P.Nagar, Mysore 9036285627, 6362947344

ಪ್ರವಾಸ

Travel Agencies

ವಿಮಾನದಲ್ಲಿ 27/8/23ರಿಂದ ನೇಪಾಳ ಕಾಶಿ ಅಯೋಧ್ಯೆ ಎಲ್ಲಾಸೇರಿ 45000/ ಮತ್ತು 20/10/23ರಿಂದ ಗುಜರಾತ್ ಪ್ರವಾಸ 34000/ ಶ್ರೀರಾಮ್ ಟೂರ್ 9108933383

Travel

19.09.2023 17.11.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 04.11.2023 22.11.2023 08.12.2023 ದುಬೈ,ಅಬುದಾಬಿ 5 ದಿನಗಳು. 11.10.2023 29.11.2023 ನೇಪಾಳ 9 ದಿನಗಳು. 11.09.2023 09.10.2023 17.11.2023 ಶ್ರೀಲಂಕಾ 6 ದಿನಗಳು. 19.09.2023 06.10.2023 ಕಾಶಿ,ಗಯಾ,ಅಯೋಧ್ಯ 8 ದಿನಗಳು. 11.09.2023 09.10.2023 ಗುಜರಾತ್ 8 ದಿನಗಳು. 13.10.2023 25.11.2023 ರಾಜಸ್ಥಾನ್ 9 ದಿನಗಳು. 07.10.2023 11.11.2023 ದೆಹಲಿ,ಆಗ್ರಾ,ಜೈಪುರ್ 6 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವಲ್ಸ್ ಮಲ್ಲೇಶ್ವರ. ಬೆಂಗಳೂರು.03 9448402248 7022547922

ಏಷ್ಯನ್ ಟ್ರಾವಲ್ ಏಜೆನ್ಸಿ ಮಿನರ್ವ ಸರ್ಕಲ್ ಬೆಂಗಳೂರು ವತಿಯಿಂದ ವಿಮಾನ/ A/C ಬಸ್ ರೂಮ್ ಸೌಲಭ್ಯದೊಂದಿಗೆ 06.09.2023 04.10.2023 ಕಾಶಿ,ಗಯಾ,ಪ್ರಯಾಗ. 20.09.2023 16.10.2023 26.10.2023 ಚಾರ್‌ಧಾಮ್ ರಾಮೇಶ್ವರ,ಕನ್ಯಾಕುಮಾರಿ ಯಾತ್ರೆಗಳಿಗೆ ಸಂಪರ್ಕಿಸಿ: 26574131, 7204173686 9686708171

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 30.08.2023 ರಿಂದ 13 ದಿನಗಳ ಯುರೋಪ್ ಪ್ರವಾಸ. 24.09.2023 19.10 2023 ರಿಂದ 5 ದಿನಗಳ ದುಬೈ,ಅಬುದಾಬಿ,ಶಾರ್ಜಾ. 29.09.2023 25.10.2023 ರಿಂದ 7/11 ದಿನಗಳ ಸಿಂಗಾಪುರ,ಮಲೇಶಿಯಾ ಥೈಲ್ಯಾಂಡ್. 01.10.2023 16.10.2023 ರಿಂದ 11 ದಿನಗಳ ಮುಕ್ತಿನಾಥ ಕಾಶಿ,ನೇಪಾಳ. 06.10.2023 18.10.2023 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆಗಳು. 01.10.2023 16.10.2023 ರಿಂದ 7/12 ದಿನಗಳ ಶಿಮ್ಲಾ,ಮನಾಲಿ ವೈಷ್ಣೋದೇವಿ,ಕಾಶ್ಮೀರ್. 21.09.2023 01.10 2023 ರಿಂದ 8 /12 ದಿನಗಳ ಕಾಶಿ,ಗಯಾ,ಅಲಹಾಬಾದ್. 25.10.2023 29.10.2023 20.11.2023 ರಿಂದ 7/11/17 ದಿನಗಳ ರಾಜಸ್ಥಾನ್/ಗುಜರಾತ್ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು23. 080-23385837 8088887677

9 ದಿನಗಳ ಕಾಶಿ,ಗಯಾ ಅಲಹಾಬಾದ್. 8 ದಿನಗಳ ನೇಪಾಳ,ಮುಕ್ತಿನಾಥ ವಿಶೇಷ. 8 ದಿನಗಳ ಸಿಂಗಾಪುರ್ ಮಲೇಶಿಯಾ. 5 ದಿನಗಳ ಬಾಲಿ. ಹಾಗು ಇತರೆ ಪ್ರವಾಸಗಳಿಗೆ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು.04. 9880079588 9900080796

DH ಪ್ರಜಾವಾಣಿ
JOB CORNER
BOOK JOB ADS ON WEEKDAY + SUNDAY
conditions apply*
@ 803/-* Per Sqcm Single Column
@ 825/-* Per Sqcm Multi Column
For more information Contact:
9845114560 : 9731810277
9901641752 : 9886213331
080 - 45557163 / 164

DH
To Place your ad in Deccan Herald & Prajavani Classifieds
For details contact :
9845114560 : 9731810277
080 - 45557163 / 164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಶಾಸನರಚನಾ ಮಂಡಳಿ ಇಲ್ಲದಿದ್ದಾಗ 370ನೇ ವಿಧಿ ಹಿಂಪಡೆಯಲು ಶಿಫಾರಸು ಮಾಡುವವರು ಯಾರು: 'ಸುಪ್ರೀಂ'

ವಿಶೇಷ ಸ್ಥಾನಮಾನ: ವಿಚಾರಣೆ ಆರಂಭ

ನವದೆಹಲಿ(ಪಿಟಿಐ): 370ನೇ ವಿಧಿಯಡಿ ಜಮ್ಮು–ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆದ ಕೇಂದ್ರದ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂಕೋರ್ಟ್ ಬುಧವಾರ ಆರಂಭಿಸಿತು.

'ಶಾಸನ ರಚನೆ ಅಧಿಕಾರ ಹೊಂದಿದ ಮಂಡಳಿಯೇ ಅಸ್ತಿತ್ವದಲ್ಲಿ ಇಲ್ಲದಿದ್ದಾಗ, ಜಮ್ಮು–ಕಾಶ್ಮೀರದಲ್ಲಿ ಜಾರಿಯಲ್ಲಿದ್ದ ಸಂವಿಧಾನದ 370ನೇ ವಿಧಿಯನ್ನು ಹಿಂಪಡೆಯುವಂತೆ ಶಿಫಾರಸು ಮಾಡುವವರು ಯಾರು' ಎಂದು ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ನ್ಯಾಯಮೂರ್ತಿಗಳಿದ್ದ ಸಂವಿಧಾನ ಪೀಠ ಪ್ರಶ್ನಿಸಿತು.

ನ್ಯಾಯಮೂರ್ತಿಗಳಾದ ಸಂಜಯ ಕಿಶನ್ ಕೌಲ್, ಸಂಜೀವ್ ಖನ್ನಾ, ಬಿ.ಆರ್. ಗವಾಯಿ ಹಾಗೂ ಸೂರ್ಯಕಾಂತ್ ಈ ಪೀಠದಲ್ಲಿದ್ದಾರೆ.

'ಜಮ್ಮು–ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸುವ ಈ ಅವಕಾಶ (370ನೇ ವಿಧಿ) ತಾತ್ಕಾಲಿಕವಾದುದು ಎಂದು ಸಂವಿಧಾನದಲ್ಲಿಯೇ ಉಲ್ಲೇಖಿಸಲಾಗಿದೆ. ಆದರೆ, 1957ರಲ್ಲಿ ಜಮ್ಮು–ಕಾಶ್ಮೀರದ ಶಾಸನಸಭೆ ಅವಧಿ ಮುಕ್ತಾಯಗೊಂಡ ನಂತರ, ಈ ಅವಕಾಶ ಶಾಶ್ವತ ಹೇಗಾಯಿತು' ಎಂದು ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲ ಕಪಿಲ್ ಸಿಬಲ್ ಅವರನ್ನು ಪೀಠ ಪ್ರಶ್ನಿಸಿತು.

'ಅಧಿಸೂಚನೆ ಹೊರಡಿಸುವ ಮೂಲಕ, 370ನೇ ವಿಧಿಯನ್ನು ಹಿಂಪಡೆಯಲಾಗಿದೆ ಅಥವಾ ನಿರ್ದಿಷ್ಟ ಬದಲಾವಣೆ ಮತ್ತು ವಿನಾಯಿತಿಗಳೊಂದಿಗೆ ಜಾರಿಯಲ್ಲಿದೆ ಎಂದು ರಾಷ್ಟ್ರಪತಿ ಘೋಷಿಸಬಹುದು. ರಾಷ್ಟ್ರಪತಿ ಇಂತಹ ಅಧಿಸೂಚನೆ ಹೊರಡಿಸುವುದಕ್ಕೂ ಮುನ್ನ, ಈ ಕುರಿತು ಶಾಸನಸಭೆಯ ಶಿಫಾರಸು ಅಗತ್ಯ' ಎಂಬ 370ನೇ ವಿಧಿಯಲ್ಲಿರುವ ಅವಕಾಶವನ್ನು ಪೀಠ ಉಲ್ಲೇಖಿಸಿತು.

'ಶಾಸನಸಭೆಯ ಅವಧಿ ಕೊನೆಗೊಂಡಾಗ ಏನಾಗುತ್ತದೆ? ಅಲ್ಲದೇ, ಯಾವ ಶಾಸನಸಭೆಯೂ ಅನಿರ್ದಿಷ್ಟಾವಧಿಗೆ ಕಾರ್ಯ ನಿರ್ವಹಿಸುವಂತೆಯೂ ಇಲ್ಲ ಅಲ್ಲವೇ' ಎಂದು ಸಿಬಲ್ ಅವರಿಗೆ ಸಿಜೆಐ ಕೇಳಿದರು.

'370ನೇ ವಿಧಿಯನ್ನು ಹಿಂಪಡೆಯುವ ಕುರಿತು ರಾಷ್ಟ್ರಪತಿ ಅಧಿಸೂಚನೆ ಹೊರಡಿಸಬೇಕಾದಲ್ಲಿ ಶಾಸನಸಭೆಯ ಶಿಫಾರಸು ಅಗತ್ಯ. ಆದರೆ, ಶಾಸನಸಭೆಯೇ ಅಸ್ತಿತ್ವದಲ್ಲಿ ಇಲ್ಲ ಎಂದಾದಲ್ಲಿ ಏನು ಕ್ರಮ ಎಂಬುದೇ ಇಲ್ಲಿ ನಮ್ಮ ಮುಂದಿರುವ ಪ್ರಶ್ನೆ' ಎಂದು ಸಿಜೆಐ ಹೇಳಿದರು.

'ಇದನ್ನೇ ಅರ್ಜಿದಾರರು ಕೇಳುತ್ತಿರುವುದು. ಇಂಥ ಶಿಫಾರಸು ಇಲ್ಲದೇ ರಾಷ್ಟ್ರಪತಿಯವರು 370ನೇ ವಿಧಿಯನ್ನು ಹಿಂಪಡೆದ ಬಗ್ಗೆ ಅಧಿಸೂಚನೆ ಪ್ರಕಟಿಸುವಂತಿಲ್ಲ ಎಂಬುದರ ಕುರಿತೇ ಈ ಪ್ರಕರಣ' ಎಂದು ಸಿಬಲ್ ಪ್ರತಿಕ್ರಿಯಿಸಿದರು.

'ಹಾಗಾದರೆ, ಜಮ್ಮು–ಕಾಶ್ಮೀರ ಶಾಸನಸಭೆ ಅವಧಿ 1957ರಲ್ಲಿ ಕೊನೆಗೊಂಡ ನಂತರ, 370ನೇ ವಿಧಿಗೆ ಸಂಬಂಧಿಸಿ ಯಾವ ಕ್ರಮವನ್ನೂ ಕೈಗೊಳ್ಳಬಾರದು ಎಂಬುದು ನಿಮ್ಮ ವಾದವೇ' ಎಂದು ನ್ಯಾಯಮೂರ್ತಿ ಗವಾಯಿ ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿಬಲ್, 'ಸದ್ಯ, ನ್ಯಾಯಾಲಯವು ಸಂವಿಧಾನದಲ್ಲಿರುವ ಅವಕಾಶವೊಂದನ್ನು ವ್ಯಾಖ್ಯಾನಿಸುತ್ತಿದೆ. ಸಂವಿಧಾನಕ್ಕೆ ಅನುಗುಣವಾಗಿರದಿದ್ದ ಪ್ರಕ್ರಿಯೆಯನ್ನು ಸಮರ್ಥನೆ ಮಾಡುತ್ತಿಲ್ಲ' ಎಂದರು.

'ರಾಜಕೀಯ ಕ್ರಮದ ಭಾಗವಾಗಿ 370ನೇ ವಿಧಿಯನ್ನು ಹಿಂಪಡೆದಿದ್ದು, ಇದು ಸಂವಿಧಾನಬದ್ಧ ನಡೆಯಾಗಿರಲಿಲ್ಲ. ಈ ವಿಚಾರವಾಗಿ ಸಂಸತ್ತೇ ಶಾಸನಸಭೆಯಂತೆ ವರ್ತಿಸುವ ಮೂಲಕ 370ನೇ ವಿಧಿಯನ್ನು ಹಿಂಪಡೆದಿದೆ. ವಿಶೇಷ ಸ್ಥಾನಮಾನದ ರದ್ದತಿ ಜಮ್ಮು–ಕಾಶ್ಮೀರ ಜನರ ಇಚ್ಛೆಯಾಗಿತ್ತು ಎಂಬ ಕಾರಣ ನೀಡಲಾಗಿತ್ತು. ಕೇಂದ್ರ ಸರ್ಕಾರ ಇಂಥ ಅಧಿಕಾರ ಚಲಾಯಿಸಬಹುದೇ' ಎಂದು ವಕೀಲ ಸಿಬಲ್ ಅವರು ನ್ಯಾಯಪೀಠಕ್ಕೆ ತಿಳಿಸಿದರು.

ಆಗ, ನ್ಯಾಯಪೀಠವು ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಿತು.

ವಿಚಾರಣೆ: 370ನೇ ವಿಧಿಯನ್ನು ಹಿಂಪಡೆದಿರುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳನ್ನು ಸೋಮವಾರ ಹಾಗೂ ಶುಕ್ರವಾರ ಹೊರತುಪಡಿಸಿ ಉಳಿದ ದಿನಗಳಂದು ವಿಚಾರಣೆ ನಡೆಸುವುದಾಗಿ ಸುಪ್ರೀಂಕೋರ್ಟ್ ಹೇಳಿದೆ.

ಹೊಸದಾಗಿ ಸಲ್ಲಿಕೆಯಾಗುವ ಹಾಗೂ ಇತರ ಅರ್ಜಿಗಳ ವಿಚಾರಣೆಯನ್ನು ಸೋಮವಾರ ಮತ್ತು ಶುಕ್ರವಾರ ನಡೆಸುವುದಾಗಿ ಹೇಳಿದೆ.

'ದ್ವೇಷ ಭಾಷಣ, ಹಿಂಸಾಚಾರಕ್ಕೆ ಅವಕಾಶ ಕೊಡಬೇಡಿ'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಹರಿಯಾಣದ ನೂಹ್‌ನಲ್ಲಿ ನಡೆದ ಕೋಮು ಗಲಭೆಯನ್ನು ವಿರೋಧಿಸಿ ವಿಎಚ್‌ಪಿ ಮತ್ತು ಬಜರಂಗದಳ ನಡೆಸಲು ಉದ್ದೇಶಿಸಿರುವ ಪ್ರತಿಭಟನಾ ರ್‍ಯಾಲಿಗಳಿಗೆ ತಡೆ ನೀಡಲು ನಿರಾಕರಿಸಿದ ಸುಪ್ರೀಂ ಕೋರ್ಟ್, ಪ್ರತಿಭಟನೆಗಳ ವೇಳೆ ಯಾವುದೇ ದ್ವೇಷ ಭಾಷಣ ಅಥವಾ ಹಿಂಸಾಚಾರ ನಡೆಯದಂತೆ ನೋಡಿಕೊಳ್ಳಬೇಕು ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಬುಧವಾರ ನಿರ್ದೇಶನ ನೀಡಿದೆ.

ಈ ಕುರಿತು ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ಎಸ್.ವಿ.ಭಾಟಿ ಅವರ ಪೀಠ, 'ಹೆಚ್ಚುವರಿ ಭದ್ರತಾ ಪಡೆ ಅಥವಾ ಅರೆಸೇನಾ ಪಡೆಗಳನ್ನು ನಿಯೋಜಿಸಬೇಕು. ಸೂಕ್ಷ್ಮ ಪ್ರದೇಶಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿಬೇಕು' ಎಂದು ಆದೇಶಿಸಿತು.

'ದ್ವೇಷ ಭಾಷಣ ಮತ್ತು ಹಿಂಸಾಚಾರ ತಡೆಗಟ್ಟುವ ಸಂಬಂಧ ಸಂಬಂಧಪಟ್ಟ ಪ್ರಾಧಿಕಾರಗಳು ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದನ್ನು ಖಾತ್ರಿಪಡಿಸಿ' ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಅವರಿಗೆ ನ್ಯಾಯಪೀಠ ಸೂಚಿಸಿತು.

ಬಲಪಂಥೀಯ ಗುಂಪುಗಳಾದ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಮತ್ತು ಬಜರಂಗ ದಳ ರಾಷ್ಟ್ರೀಯ ರಾಜಧಾನಿ ಪ್ರದೇಶದ (ಎನ್‌ಸಿಆರ್) ವಿವಿಧೆಡೆ 23 ಪ್ರತಿಭಟನಾ ಮೆರವಣಿಗೆಗಳನ್ನು ಆಯೋಜಿಸಿವೆ ಎಂದು ಅರ್ಜಿದಾರರಾದ ಪತ್ರಕರ್ತ ಶಾಹೀನ್ ಅಬ್ದುಲ್ಲಾ ಪರ ವಕೀಲ ಸಿ.ಯು. ಸಿಂಗ್ ಪೀಠದ ಗಮನಕ್ಕೆ ತಂದರು. ಈ ವೇಳೆ ಪೀಠ ಈ ಕುರಿತು ಆದೇಶ ನೀಡಿತು.

ದ್ವೇಷ ಭಾಷಣ ಮಾಡಿದ್ದು ಕಂಡುಬಂದಲ್ಲಿ ತಕ್ಷಣವೇ ಕ್ರಮ ಕೈಗೊಳ್ಳುವಂತೆ ಎಲ್ಲ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿ ಕಳೆದ ವರ್ಷ ಅಕ್ಟೋಬರ್ ಹಾಗೂ ಇದೇ ವರ್ಷ ಏಪ್ರಿಲ್‌ನಲ್ಲಿ ಸುಪ್ರೀಂಕೋರ್ಟ್ ನೀಡಿದ್ದ ಆದೇಶಗಳನ್ನು ಅಬ್ದುಲ್ಲಾ ತಮ್ಮ ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಯಾವುದೇ ಸಮುದಾಯದ ವಿರುದ್ಧ ದ್ವೇಷ ಭಾಷಣಗಳು ಇರುವುದಿಲ್ಲ, ಹಿಂಸಾಚಾರ ನಡೆಯದಂತೆ ಅಥವಾ ಸ್ವತ್ತುಗಳಿಗೆ ಹಾನಿಯಾಗದಂತೆ ಪೊಲೀಸರು ಸೇರಿದಂತೆ ರಾಜ್ಯ ಸರ್ಕಾರಗಳು ಕ್ರಮ ಕೈಗೊಳ್ಳುತ್ತವೆ ಎಂಬ ಆಶಾಭಾವ ಮತ್ತು ನಂಬಿಕೆ ಇದೆ' ಎಂದು ಹೇಳಿತು.

ಇ.ಡಿ ಕ್ರಮ: ತೀರ್ಪು ಕಾಯ್ದಿರಿಸಿದ ಪೀಠ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ತಮ್ಮನ್ನು ಬಂಧಿಸಿರುವ ಜಾರಿ ನಿರ್ದೇಶನಾಲಯ (ಇ.ಡಿ) ಕ್ರಮವನ್ನು ಎತ್ತಿ ಹಿಡಿದು ಮದ್ರಾಸ್ ಹೈಕೋರ್ಟ್ ನೀಡಿದ ಆದೇಶ ಪ್ರಶ್ನಿಸಿ ತಮಿಳುನಾಡು ಸಚಿವ ಸೆಂಥಿಲ್ ಬಾಲಾಜಿ, ಅವರ ಪತ್ನಿ ಸಲ್ಲಿಸಿರುವ ಅರ್ಜಿ ಕುರಿತ ತೀರ್ಪನ್ನು ಸುಪ್ರೀಂಕೋರ್ಟ್ ಬುಧವಾರ ಕಾಯ್ದಿರಿಸಿತು.

ಅರ್ಜಿಗಳ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಹಾಗೂ ಎಂ.ಎಂ. ಸುಂದ್ರೇಶ್ ಅವರಿದ್ದ ನ್ಯಾಯಪೀಠ, 'ವಾದಗಳನ್ನು ಆಲಿಸಿದ್ದು, ತೀರ್ಪನ್ನು ಕಾಯ್ದಿರಿಸಲಾಗಿದೆ' ಎಂದು ಪ್ರಕಟಿಸಿದರು.

'ತಪ್ಪು ಮಾಡಿಲ್ಲ, ಕ್ಷಮೆ ಕೇಳಲಾರೆ'

ಒಂದನೇ ಪುಟದಿಂದ...

'ಯಾವುದೇ ತಪ್ಪು ಮಾಡಿರದಿದ್ದರೂ, ಕ್ಷಮೆ ಕೇಳುವಂತೆ ನನ್ನ ಮೇಲೆ ಒತ್ತಡ ಹೇರುವ ಸಲುವಾಗಿ ನನ್ನವಿರುದ್ಧ ಕ್ರಿಮಿನಲ್ ಪ್ರಕ್ರಿಯೆ ಹಾಗೂ ಪ್ರಜಾ ಪ್ರಾತಿನಿಧ್ಯ ಕಾಯ್ದೆಯ ಅವಕಾಶಗಳನ್ನು ಬಳಸಿಕೊಂಡಿರುವುದು ನ್ಯಾಯಿಕ ಪ್ರಕ್ರಿಯೆ ಅವಹೇಳನ. ಇಂತಹ ಪ್ರಯತ್ನಗಳನ್ನು ನ್ಯಾಯಾಲಯ ಅನುಮೋದಿಸಬಾರದು' ಎಂದೂ ಅವರು ಪ್ರಮಾಣಪತ್ರದಲ್ಲಿ ವಿವರಿಸಿದ್ದಾರೆ.

'ಇದೊಂದು ಕ್ಷುಲ್ಲಕ ಪ್ರಕರಣ. ಸಂಸದ ಸ್ಥಾನದಿಂದ ನನ್ನನ್ನು ಅನರ್ಹಗೊಳಿಸಿರುವುದರಿಂದ ಸರಿಪಡಿಸಲಾಗದ ಹಾನಿಯುಂಟಾಗಿದೆ' ಎಂದೂ ವಿವರಿಸಿದ್ದಾರೆ.

'ದೂರುದಾರರ ಬಗ್ಗೆ ಯಾವುದೇ ರೀತಿಯ ಪೂರ್ವಗ್ರಹ ಇಲ್ಲ. ಹೀಗಾಗಿ ನನಗೆ ವಿಧಿಸಿರುವ ಶಿಕ್ಷೆಗೆ ತಡೆ ನೀಡುವ ಮೂಲಕ ಸದ್ಯ ನಡೆಯುತ್ತಿರುವ ಲೋಕಸಭೆ ಕಲಾಪಗಳಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಬೇಕು ಎಂದು ಕೋರುವೆ' ಎಂದೂ ಪ್ರಮಾಣಪತ್ರದಲ್ಲಿ ರಾಹುಲ್ ಗಾಂಧಿ ತಿಳಿಸಿದ್ದಾರೆ.

'ಮೋದಿ ಹೆಸರಿನ ಯಾವುದೇ ಸಮುದಾಯ ಅಥವಾ ಸಮಾಜ ಇಲ್ಲ. ಹೀಗಾಗಿ ಮೋದಿ ಸಮುದಾಯಕ್ಕೆ ಅವಮಾನಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ' ಎಂದೂ ಹೇಳಿದ್ದಾರೆ.

'ಸಂಸತ್‌ನಲ್ಲಿ ಮೋದಿ ಮಾತಾಡಲಿ'

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಬುಧವಾರ ಭೇಟಿ ಮಾಡಿದ 'ಇಂಡಿಯಾ' ನಾಯಕರು ಮಣಿಪುರದಲ್ಲಿನ ಪರಿಸ್ಥಿತಿ ಕುರಿತು ಮನವಿಪತ್ರ ಸಲ್ಲಿಸಿದರು —ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಜನಾಂಗೀಯ ಹಿಂಸಾಚಾರದಿಂದ ನಲುಗಿರುವ ಮಣಿಪುರ ಪರಿಸ್ಥಿತಿ ಕುರಿತು ಸಂಸತ್‌ನಲ್ಲಿ ಮಾತನಾಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸೂಚಿಸಿ ಎಂದು 'ಇಂಡಿಯಾ' ಮೈತ್ರಿಕೂಟದ ನಾಯಕರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಬುಧವಾರ ಮನವಿ ಮಾಡಿದ್ದಾರೆ.

'ಇಂಡಿಯಾ'ದ ಅಂಗಪಕ್ಷಗಳ 31 ನಾಯಕರು ರಾಷ್ಟ್ರಪತಿ ಮುರ್ಮು ಅವರಿಗೆ ಸಲ್ಲಿಸಿರುವ ಮನವಿಪತ್ರದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲಾಗಿದೆ.

'ಮಣಿಪುರ ಕುರಿತು ಸಂಸತ್‌ನಲ್ಲಿ ಮಾತನಾಡುವ ಜೊತೆಗೆ, ಶಾಂತಿ ಮತ್ತು ಸೌಹಾರ್ದ ನೆಲೆಸಲು ಕೇಂದ್ರ ಸರ್ಕಾರ ಸಿದ್ಧಪಡಿಸಿರುವ ರೂಪುರೇಷೆ ಕುರಿತು ಪ್ರಧಾನಿ ವಿವರಿಸಬೇಕು' ಎಂಬ ಬೇಡಿಕೆ ಮನವಿ ಪತ್ರದಲ್ಲಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 'ಮಣಿಪುರಕ್ಕೆ ಭೇಟಿ ನೀಡಿದ್ದ ನಿಯೋಗದಲ್ಲಿದ್ದ ಸಂಸದರು ಹಾಗೂ ಮೈತ್ರಿಕೂಟದ ಸದಸ್ಯರು ಅಲ್ಲಿಯ ಪರಿಸ್ಥಿತಿ ಕುರಿತು ರಾಷ್ಟ್ರಪತಿಗೆ ವಿವರಿಸಿದರು' ಎಂದರು.

'ಪ್ರಧಾನ ಮಂತ್ರಿ ಕಚೇರಿಯಿಂದ 100 ಕಿ.ಮೀ. ದೂರದಲ್ಲಿ ನಡೆದಿರುವ ನೂಹ್ ಹಿಂಸಾಚಾರದ ಬಗ್ಗೆ ಕೇಂದ್ರ ಸರ್ಕಾರ ತಲೆ ಕೆಡಿಸಿಕೊಂಡಿಲ್ಲ' ಎಂದು ಆರೋಪಿಸಿದರು.

'ಇಂಡಿಯಾ' ನಾಯಕರಾದ ತಿರುಚ್ಚಿ ಶಿವ, ಕನಿಮೊಳಿ, ರಾಜೀವ್ ರಂಜನ್ ಲಲ್ಲನ್ ಸಿಂಗ್, ಅಧಿರ್ ರಂಜನ್ ಚೌಧರಿ, ಗೌರವ ಗೊಗೋಯಿ, ಸುಶೀಲ್‌ಕುಮಾರ್ ಗುಪ್ತ, ಸುಷ್ಮಿತಾ ದೇವ್, ಜಯಂತ್ ಸಿಂಗ್, ಮನೋಜ್ ಝಾ ನಿಯೋಗದಲ್ಲಿದ್ದರು.

'ವಿಪಕ್ಷಗಳಿಗೆ ಚರ್ಚೆಯಲ್ಲಿ ಆಸಕ್ತಿ ಇಲ್ಲ'

'ಮಣಿಪುರದಲ್ಲಿ ಹಿಂಸಾಚಾರ ಕುರಿತು ಸಂಸತ್‌ನಲ್ಲಿ ಚರ್ಚೆ ನಡೆಸಲು ವಿರೋಧ ಪಕ್ಷಗಳಿಗೆ ಆಸಕ್ತಿ ಇಲ್ಲ. ವಿಪಕ್ಷಗಳ ಸದಸ್ಯರ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಲು ಸರ್ಕಾರ ಸಿದ್ಧವಿದೆ, ಆದರೆ, ಅವರೇ ಚರ್ಚೆಯಿಂದ ಪಲಾಯನ ಮಾಡುತ್ತಿದ್ದಾರೆ' ಎಂದು ಬಿಜೆಪಿ ಬುಧವಾರ ಟೀಕಿಸಿದೆ.

'ಇಂಡಿಯಾ' ನಾಯಕರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಮನವಿಪತ್ರ ಸಲ್ಲಿಸಿದ ಬೆನ್ನಲ್ಲೇ ಬಿಜೆಪಿ ಈ ವಾಗ್ದಾಳಿ ನಡೆಸಿದೆ.

'ಸರ್ಕಾರ ಚರ್ಚೆಗೆ ಸಿದ್ಧ ಇದೆ. ಮಣಿಪುರಕ್ಕೆ ಭೇಟಿ ನೀಡಿರುವ ಗೃಹ ಸಚಿವ ಅಮಿತ್ ಶಾ ಅವರು ಉತ್ತರ ನೀಡಲು ಸಿದ್ಧರಿದ್ದಾರೆ. ಆದರೆ, ಅವರ ಸಮಸ್ಯೆ ಏನು ಎಂಬುದು ನನಗೆ ಅರ್ಥವಾಗುತ್ತಿಲ್ಲ. ದೇಶದ ಜನರಿಗೂ ಅರ್ಥವಾಗುತ್ತಿಲ್ಲ' ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

'ವಿರೋಧ ಪಕ್ಷಗಳ ನಾಯಕರು ಮಣಿಪುರಕ್ಕೆ ಹೋಗುತ್ತಾರೆ. ಮನವಿಪತ್ರ ಸಲ್ಲಿಸಲು ರಾಷ್ಟ್ರಪತಿ ಭವನಕ್ಕೂ ಹೋಗುತ್ತಾರೆ. ಆದರೆ, ಮಣಿಪುರ ವಿಷಯ ಕುರಿತು ಸಂಸತ್‌ನಲ್ಲಿ ನಡೆಯುವ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿಲ್ಲ' ಎಂದು ಬಿಜೆಪಿ ನಾಯಕ ಸುಶೀಲ್ ಮೋದಿ ಟೀಕಿಸಿದರು.

'ಮೋದಿ ಹೇಳಿಕೆ ನೀಡಬೇಕು ಎಂಬ ಬೇಡಿಕೆಯಲ್ಲಿ ಯಾವುದೇ ತರ್ಕ ಇಲ್ಲ. ಸರ್ಕಾರ ಸಾಮೂಹಿಕ ಹೊಣೆಗಾರಿಕೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಸಚಿವ ಅಮಿತ್ ಶಾ ಉತ್ತರಿಸಲು ಸಿದ್ಧರಿದ್ದಾರೆ' ಎಂದೂ ಅವರು ಹೇಳಿದರು.

ಹರಿಯಾಣ: ಮೃತರ ಸಂಖ್ಯೆ 6ಕ್ಕೆ

ಚಂಡೀಗಢ (ಪಿಟಿಐ): ನೂಹ್‌ನಲ್ಲಿ ನಡೆದ ಕೋಮು ಗಲಭೆಯಿಂದ ಹರಿಯಾಣ ರಾಜ್ಯದಲ್ಲಿ ಗೃಹ ರಕ್ಷಕ ದಳದ ಇಬ್ಬರು ಮತ್ತು ನಾಲ್ವರು ನಾಗರಿಕರು ಸೇರಿ ಒಟ್ಟು ಆರು ಮಂದಿ ಮೃತಪಟ್ಟಿದ್ದಾರೆ ಎಂದು ಹರಿಯಾಣದ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಅವರು ಬುಧವಾರ ತಿಳಿಸಿದರು.

ನೂಹ್ ಗಲಭೆ ಬಳಿಕ ರಾಜ್ಯದ ವಿವಿಧೆಡೆ ಅಶಾಂತಿ ವಾತಾವರಣ ಸೃಷ್ಟಿಯಾಗಿತ್ತು. ಈಗ ರಾಜ್ಯದಾದ್ಯಂತ ಪರಿಸ್ಥಿತಿ ನಿಯಂತ್ರಣದಲ್ಲಿದ್ದು ಸಹಜ ಸ್ಥಿತಿಗೆ ಮರಳಿದೆ ಎಂದು ಅವರು ಹೇಳಿದರು.

116 ಮಂದಿ ಬಂಧನ: ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಪೊಲೀಸರು 116 ಜನರನ್ನು ಬಂಧಿಸಿದ್ದಾರೆ. ತಪ್ಪಿಸಿಕೊಂಡಿರುವವರ ಶೋಧಕ್ಕೆ ಪೊಲೀಸರು ಕಾರ್ಯಾಚರಣೆ ನಡೆಸಿದ್ದಾರೆ ಎಂದು ಅವರು ತಿಳಿಸಿದರು.

'ಸಂಚುಕೋರರನ್ನು ಗುರುತಿಸಿ, ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ರಾಜ್ಯದ ಸಾಮಾನ್ಯ ಜನರಿಗೆ ಭದ್ರತೆ ಒದಗಿಸುವುದು ನಮ್ಮ ಜವಾಬ್ದಾರಿ' ಎಂದು ಮುಖ್ಯಮಂತ್ರಿ ಹೇಳಿದರು.

'ನಾವು ವಿವಿಧ ಸಾಮಾಜಿಕ ಮಾಧ್ಯಮಗಳ ಪೋಸ್ಟ್‌ಗಳನ್ನೂ ಪರಿಶೀಲಿಸುತ್ತಿದ್ದೇವೆ. ಇದುವರೆಗೆ 41 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. ರೇವಾರಿ ಮತ್ತು ಗುರುಗ್ರಾಮಗಳಲ್ಲೂ ಕೆಲವು ಪ್ರಕರಣಗಳು ದಾಖಲಾಗಿವೆ' ಎಂದು ಗೃಹ ಸಚಿವ ಅನಿಲ್ ವಿಜ್ ತಿಳಿಸಿದರು.

ವಿಎಚ್‌ಪಿ ಪ್ರತಿಭಟನೆ (ನೋಯ್ಡಾ ವರದಿ): ಹರಿಯಾಣದಲ್ಲಿ ಭುಗಿಲೆದ್ದ ಕೋಮು ಹಿಂಸಾಚಾರವನ್ನು ವಿರೋಧಿಸಿ ಉತ್ತರ ಪ್ರದೇಶದ ನೋಯ್ಡಾದಲ್ಲಿ ಬುಧವಾರ ಪ್ರತಿಭಟನೆ ನಡೆಸಿದ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ), ಗಲಭೆಯಲ್ಲಿ ಮೃತರಾದ ಬಜರಂಗದಳದ ಇಬ್ಬರು ಸದಸ್ಯರ ಕುಟುಂಬಕ್ಕೆ ಪರಿಹಾರ ನೀಡುವಂತೆ ಆಗ್ರಹಿಸಿದೆ.

ಇಲ್ಲಿ ಸಿಆರ್‌ಪಿಸಿ ಸೆಕ್ಷನ್ 144ರ ಪ್ರಕಾರ ನಿಷೇಧಾಜ್ಞೆ ಹೇರಲಾಗಿದೆ. ಅದರ ಹೊರತಾಗಿಯೂ ವಿಎಚ್‌ಪಿ ನಗರದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿತು. ನೋಯ್ಡಾ ಕ್ರೀಡಾಂಗಣದಿಂದ ಆರಂಭವಾದ ಮೆರವಣಿಗೆ ಜಿಲ್ಲಾಧಿಕಾರಿ ಕಚೇರಿವರೆಗೆ ಸಾಗಿತು. ವಿಎಚ್‌ಪಿ ಮತ್ತು ಬಜರಂಗದಳದ ನೂರಾರು ಸದಸ್ಯರು ಇದರಲ್ಲಿ ಪಾಲ್ಗೊಂಡಿದ್ದರು.

'ನೂಹ್ ಗಲಭೆಯಲ್ಲಿ ಬಜರಂಗದಳದ ಇಬ್ಬರು ಸದಸ್ಯರು ಮತ್ತು ಇಬ್ಬರು ನಾಗರಿಕರು ಮೃತಪಟ್ಟಿದ್ದಾರೆ. ಇವರ ಕುಟುಂಬಕ್ಕೆ ತಲಾ ₹ 1 ಕೋಟಿ ಮತ್ತು ಗಾಯಗೊಂಡವರಿಗೆ ತಲಾ ₹ 20 ಲಕ್ಷ ಪರಿಹಾರ ಒದಗಿಸಬೇಕು. ಹಿಂಸಾಚಾರದಲ್ಲಿ ನಾಶವಾಗಿರುವ ವಾಹನಗಳ ಮಾಲೀಕರಿಗೆ ಪೂರ್ಣ ಪರಿಹಾರ ಒದಗಿಸಬೇಕು' ಎಂದು ವಿಎಚ್‌ಪಿ ಆಗ್ರಹಿಸಿದೆ.

ದೆಹಲಿಯ ವಿವಿಧೆಡೆ ವಿಎಚ್‌ಪಿ ಮತ್ತು ಬಜರಂಗದಳದ ಬೆಂಬಲಿಗರು ಪ್ರತಿಭಟನೆ ನಡೆಸಿದರು.

ಇಂಟರ್‌ನೆಟ್ ಸೇವೆ ಸ್ಥಗಿತ

ಜೈಪುರ (ಪಿಟಿಐ): ಹರಿಯಾಣದ ನೂಹ್ ಜಿಲ್ಲೆಯಲ್ಲಿ ನಡೆದಿರುವ ಕೋಮು ಗಲಭೆ ಹಿನ್ನೆಲೆಯಲ್ಲಿ, ರಾಜಸ್ಥಾನದ ಭರತ್‌ಪುರ ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿಯೂ ಗುರುವಾರ ಬೆಳಿಗ್ಗೆ 6 ಗಂಟೆಯವರೆಗೂ ಮೊಬೈಲ್ ಇಂಟರ್‌ನೆಟ್ ಸೇವೆಯ ಸ್ಥಗಿತವನ್ನು ವಿಸ್ತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುನ್ನೆಚ್ಚರಿಕೆ ಕ್ರಮವಾಗಿ ಹರಿಯಾಣದೊಂದಿಗೆ ಗಡಿ ಹಂಚಿಕೊಂಡಿರುವ ಭರತ್‌ಪುರ ಜಿಲ್ಲೆಯ ಎರಡು ಪ್ರದೇಶಗಳು ಹಾಗೂ ಅಲ್ವಾರ್ ಜಿಲ್ಲೆಯ 10 ಪ್ರದೇಶಗಳಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದೆ ಎಂದಿದ್ದಾರೆ.

'ಜಿಲ್ಲೆಯ ಗಡಿಯಲ್ಲಿ ಭದ್ರತಾ ಪಡೆ ನಿಯೋಜಿಸಲಾಗಿದ್ದು, ಹರಿಯಾಣದಿಂದ ಬರುತ್ತಿರುವ ಪ್ರತಿಯೊಂದು ವಾಹನವನ್ನು ತಪಾಸಣೆಗೊಳಪಡಿಸಲಾಗುತ್ತಿದೆ. ಯಾವುದೇ ಮೆರವಣಿಗೆ, ರ್‍ಯಾಲಿಗೆ ಅವಕಾಶವಿಲ್ಲ' ಎಂದು ಭರತ್‌ಪುರ ಜಿಲ್ಲಾಧಿಕಾರಿ ಲೋಕಬಂಧು ತಿಳಿಸಿದ್ದಾರೆ.

ವಿಎಚ್‌ಪಿ ನೂಹ್‌ನಲ್ಲಿ ಹಮ್ಮಿಕೊಂಡಿದ್ದ ಮೆರವಣಿಗೆಯಲ್ಲಿ ಅಂದಾಜು ಎಷ್ಟು ಜನ ಸೇರಬಹುದು ಎಂಬುದರ ಮಾಹಿತಿಯನ್ನು ಜಿಲ್ಲಾಡಳಿತಕ್ಕೆ ನೀಡಿರಲಿಲ್ಲ. ಈ ಪ್ರಮಾದವು ಹಿಂಸಾಚಾರಕ್ಕೆ ಕಾರಣವಾಗಿರಬಹುದು

ದುಷ್ಯಂತ್ ಚೌಟಾಲಾ, ಉಪ ಮುಖ್ಯಮಂತ್ರಿ, ಹರಿಯಾಣ

ರಾಜ್ಯಸಭೆ: ಮಣಿಪುರ ಹಿಂಸಾಚಾರ ಪ್ರಸ್ತಾಪ, ಗದ್ದಲ

ವಿಪಕ್ಷಗಳಿಂದ ಸಭಾತ್ಯಾಗ

ನವದೆಹಲಿ(ಪಿಟಿಐ): ಮಣಿಪುರದಲ್ಲಿನ ಹಿಂಸಾಚಾರ ರಾಜ್ಯಸಭೆಯಲ್ಲಿ ಬುಧವಾರವೂ ಪ್ರಸ್ತಾಪಗೊಂಡಿತಲ್ಲದೇ, ಚರ್ಚೆಗೆ ಅವಕಾಶ ಸಿಗದಿರುವುದನ್ನು ಪ್ರತಿಭಟಿಸಿ 'ಇಂಡಿಯಾ' ಮೈತ್ರಿಕೂಟದ ಪಕ್ಷಗಳು ಎರಡು ಬಾರಿ ಸಭಾತ್ಯಾಗ ಮಾಡಿದ ಘಟನೆಗೂ ಮೇಲ್ಮನೆ ಸಾಕ್ಷಿಯಾಯಿತು.

ಮಣಿಪುರದಲ್ಲಿನ ಜನಾಂಗೀಯ ಸಂಘರ್ಷ ಕುರಿತು ಸದನದಲ್ಲಿ ಚರ್ಚೆಗೆ ಅವಕಾಶ ಕಲ್ಪಿಸಬೇಕು ಎಂಬ ಬೇಡಿಕೆ ಮುಂದಿಟ್ಟ ವಿಪಕ್ಷಗಳ ಸದಸ್ಯರು, ವಿರೋಧ ಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮಾತನಾಡಲು ಅವಕಾಶ ನೀಡುತ್ತಿಲ್ಲ ಎಂದು ಆರೋಪಿಸಿದರು.

ಬೆಳಿಗ್ಗೆ ಕಲಾಪ ಆರಂಭಗೊಳ್ಳುತ್ತಲೇ ವಿಷಯ ಪ್ರಸ್ತಾಪಿಸಿದ ವಿಪಕ್ಷಗಳ ಸದಸ್ಯರು, ಮಣಿಪುರ ವಿದ್ಯಮಾನ ಕುರಿತು ಪ್ರಧಾನಿ ನರೇಂದ್ರ ಮೋದಿ ಹೇಳಿಕೆ ನೀಡಬೇಕು ಎಂದು ಪಟ್ಟು ಹಿಡಿದರು.

ವಿರೋಧ ಪಕ್ಷಗಳ ಸದಸ್ಯರ ಬೇಡಿಕೆಯನ್ನು ತಿರಸ್ಕರಿಸಿದ ಸಭಾಪತಿ ಜಗದೀಪ್ ಧನಕರ್, 'ಸದನಕ್ಕೆ ಬಂದು ಹೇಳಿಕೆ ನೀಡುವಂತೆ ಪ್ರಧಾನಿಗೆ ನಾನು ನಿರ್ದೇಶನ ನೀಡಲು ಸಾಧ್ಯವಿಲ್ಲ' ಎಂದರು. ಇದನ್ನು ಪ್ರತಿಭಟಿಸಿದ ವಿರೋಧ ಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದರು.

ಮಧ್ಯಾಹ್ನ 2ಕ್ಕೆ ಪುನಃ ಕಲಾಪ ಆರಂಭಗೊಂಡಾಗ, ಕೇಂದ್ರ ಕಲ್ಲಿದ್ದಲು ಮತ್ತು ಗಣಿ ಸಚಿವ ಪ್ರಲ್ಹಾದ ಜೋಶಿ ಅವರು 'ಗಣಿಗಳು ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ತಿದ್ದುಪಡಿ ಮಸೂದೆಯನ್ನು ಮಂಡಿಸಿದರು. ಆಗ, ಮತ್ತೆ ಪ್ರತಿಭಟನೆ ಆರಂಭಿಸಿದ ವಿಪಕ್ಷಗಳ ಸದಸ್ಯರು, ಮಣಿಪುರ ಹಿಂಸಾಚಾರ ಕುರಿತು ಚರ್ಚೆಗೆ ಅವಕಾಶ ನೀಡಬೇಕು ಹಾಗೂ ಪ್ರಧಾನಿ ಹೇಳಿಕೆ ನೀಡಬೇಕು ಎಂದು ಒತ್ತಾಯಿಸಿದರು.

ಉಪಸಭಾಪತಿ ಹರಿವಂಶ್ ನಾರಾಯಣ್ ಸಿಂಗ್ ಅವರು ವಿರೋಧ ಪಕ್ಷ ನಾಯಕ ಮಲ್ಲಿಕಾರ್ಜು ಖರ್ಗೆ ಅವರಿಗೆ ಮಾತನಾಡಲು ಅವಕಾಶ ನೀಡಿದರು.

'ದೇಶದಲ್ಲಿ ಅಶಾಂತಿ ಮನೆ ಮಾಡಿದೆ..' ಎಂದು ಖರ್ಗೆ ಅವರು ಮಾತು ಆರಂಭಿಸುತ್ತಿದ್ದಂತೆಯೇ ಅದಕ್ಕೆ ತಡೆ ಒಡ್ಡಿದ ಉಪಸಭಾಪತಿ, ಮಸೂದೆ ಕುರಿತು ಮಾತನಾಡುವಂತೆ ಸೂಚಿಸಿದರು. ಇದನ್ನು ಪ್ರತಿಭಟಿಸಿದ ವಿಪಕ್ಷಗಳ ಸದಸ್ಯರು ಸದನದಿಂದ ಹೊರನಡೆದರು.

ಜೈರಾಮ್ ರಮೇಶ್ ಟೀಕೆ

'ಬಿಜೆಪಿಗೆ ಮಾತ್ರ ಅವಕಾಶ, ವಿಪಕ್ಷ ನಾಯಕರಿಗೆ ಇಲ್ಲ (ಓನ್ಲಿ ಬಿಜೆಪಿ, ನೋ ಎಲ್‌ಒಪಿ) ಎಂಬುದೇ ರಾಜ್ಯಸಭೆಯಲ್ಲಿ ಮೋದಿ ಸರ್ಕಾರದ ಕಾರ್ಯತಂತ್ರ' ಎಂದು ರಾಜ್ಯಸಭೆಯಲ್ಲಿ ಕಾಂಗ್ರೆಸ್‌ನ ಮುಖ್ಯ ಸಚೇತಕ ಜೈರಾಮ್ ರಮೇಶ್ ಟೀಕಿಸಿದ್ದಾರೆ.

ಸಭಾತ್ಯಾಗ ನಂತರ ಟ್ವೀಟ್ ಮಾಡಿರುವ ಅವರು, 'ಇಂದು ಮಧ್ಯಾಹ್ನ ಕೂಡ ಖರ್ಗೆ ಅವರಿಗೆ ಮಾತನಾಡಲು ಅವಕಾಶ ನೀಡಲಿಲ್ಲ. ಮಣಿಪುರ ವಿದ್ಯಮಾನ ಕುರಿತು ಪ್ರಧಾನಿ ಹೇಳಿಕೆ ನೀಡುವುದು ಯಾಕೆ ಮಹತ್ವದ್ದು ಎಂಬುದನ್ನು ವಿವರಿಸಲೂ ಅವರಿಗೆ ಅನುಮತಿ ನೀಡಲಿಲ್ಲ' ಎಂದು ಟೀಕಿಸಿದ್ದಾರೆ.

'20 ವರ್ಷಗಳಲ್ಲಿ ಒಂದೇ ಸಲ ಕೆಎಂಎಫ್ ತುಪ್ಪ ಪೂರೈಕೆ'

ತಿರುಪತಿ (ಪಿಟಿಐ): 'ಎಲ್1 ಬಿಡ್‌ದಾರರಾಗಿ ಎಂದಿಗೂ ಅರ್ಹತೆ ಪಡೆಯದ ಕೆಎಂಎಫ್ ಕಳೆದ 20 ವರ್ಷಗಳಲ್ಲಿ ಒಂದು ಬಾರಿ ಮಾತ್ರ ತುಪ್ಪವನ್ನು ಪೂರೈಸಿದೆ. ಜತೆಗೆ, ಸರಕುಗಳನ್ನು ಸಮಯಕ್ಕೆ ತಲುಪಿಸಲು ವಿಫಲವಾಗಿದೆ' ಎಂದು ಶ್ರೀ ವೆಂಕಟೇಶ್ವರ ದೇವಸ್ಥಾನದ ಆಡಳಿತ ಮಂಡಳಿ ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ಕಾರ್ಯನಿರ್ವಾಹಕ ಅಧಿಕಾರಿ ಎ.ವಿ. ಧರ್ಮಾ ರೆಡ್ಡಿ ಬುಧವಾರ ಹೇಳಿದ್ದಾರೆ.

ತಿರುಪತಿ ದೇವಾಲಯದ ಸಂಸ್ಥೆ ಕಡಿಮೆ ಗುಣಮಟ್ಟದ ತುಪ್ಪ ಖರೀದಿಸುತ್ತಿದೆ ಎಂದು ನಂದಿನಿ ಬ್ರ್ಯಾಂಡ್ ಹಾಲು ಉತ್ಪಾದನಾ ಸಂಸ್ಥೆಯಾದ ಕೆಎಂಎಫ್ ಅಧ್ಯಕ್ಷ ಭೀಮಾ ನಾಯ್ಕ್ ಅವರು ಮಾಡಿದ್ದ ಆರೋಪಗಳನ್ನು ಅವರು ತಳ್ಳಿಹಾಕಿದ್ದಾರೆ.

ಗುಣಮಟ್ಟವಿಲ್ಲದ ತುಪ್ಪ ತಿರಸ್ಕೃತ: ಕಳೆದ ಒಂದು ವರ್ಷದಲ್ಲಿ ಪರಿಶುದ್ಧತೆ–ಗುಣಮಟ್ಟದ ಮಾನದಂಡಗಳಿಗೆ ಅನುಗುಣವಾಗಿರದ 42 ಟ್ರಕ್ ಲೋಡ್ ಹಸುವಿನ ತುಪ್ಪವನ್ನು ತಿರಸ್ಕರಿಸಲಾಗಿದೆ ಎಂದು ಟಿಟಿಡಿ ಪ್ರಧಾನ ವ್ಯವಸ್ಥಾಪಕ (ಖರೀದಿ ವಿಭಾಗ) ಪಿ.ಮುರಳಿಕೃಷ್ಣ ತಿಳಿಸಿದ್ದಾರೆ.

ಕಲಾ ನಿರ್ದೇಶಕ ನಿತಿನ್ ಶವ ಪತ್ತೆ



ಮುಂಬೈ (ಪಿಟಿಐ): 'ಲಗಾನ್' ಮತ್ತು 'ಜೋಧಾ ಅಕ್ಬರ್' ಚಿತ್ರಗಳ ಖ್ಯಾತಿಯ ಬಾಲಿವುಡ್ ಕಲಾ ನಿರ್ದೇಶಕ ನಿತಿನ್ ದೇಸಾಯಿ (57) ಅವರ ಮೃತದೇಹ, ಮುಂಬೈ ಹೊರವಲಯದಲ್ಲಿರುವ ಅವರ ಎನ್‌ಡಿ ಸ್ಟುಡಿಯೊದಲ್ಲಿ ಬುಧವಾರ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ.

ತಮ್ಮ ವೃತ್ತಿಜೀವನದಲ್ಲಿ ನಿತಿನ್ ದೇಸಾಯಿ ಅವರು ಅನುಭವಿ ಚಿತ್ರ ನಿರ್ದೇಶಕರಾದ ಅಶುತೋಷ್ ಗೋವಾರಿಕರ್, ವಿಧು ವಿನೋದ್ ಚೋಪ್ರಾ, ರಾಜ್‌ಕುಮಾರ್ ಹಿರಾನಿ ಮತ್ತು ಸಂಜಯ್ ಲೀಲಾ ಬನ್ಸಾಲಿ ಅವರೊಂದಿಗೆ ಕೆಲಸ ಮಾಡಿದ್ದರು. 'ಸ್ವದೇಶ್, ಪ್ರೇಮ್ ರತನ್ ಧನ್ ಪಾಯೊ', 'ಪರಿಂದ' ಚಿತ್ರಗಳಲ್ಲೂ ಅವರು ಕಲಾ ನಿರ್ದೇಶನ ಮಾಡಿದ್ದರು.

ಕಳೆದ ವಾರ ನ್ಯಾಯಾಲಯದಲ್ಲಿ ಸಲ್ಲಿಕೆಯಾಗಿರುವ ದಿವಾಳಿತನದ ಅರ್ಜಿಯ ಪ್ರಕಾರ, ದೇಸಾಯಿಯವರ ಕಂಪನಿ ಎನ್‌ಡಿ ಆರ್ಟ್ ವರ್ಲ್ಡ್ ಪ್ರೈವೇಟ್ ಲಿಮಿಟೆಡ್ ₹252 ಕೋಟಿ ಸಾಲದ ಹೊರೆಯನ್ನು ಹೊಂದಿದೆ. ದೇಸಾಯಿ ಅವರ ಕಂಪನಿಯು 2016 ಮತ್ತು 2018 ರಲ್ಲಿ ಇಸಿಎಲ್ ಫೈನಾನ್ಸ್‌ನಿಂದ ಒಟ್ಟು ₹ 185 ಕೋಟಿ ಸಾಲ ಪಡೆದಿತ್ತು. 2020ರ ಜನವರಿಯಿಂದ ಸಾಲ ಮರು ಪಾವತಿಸಿರಲಿಲ್ಲ.

ಕರ್ನಾಟಕ ಸರ್ಕಾರ
(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಚಳ್ಳಕೆರೆ.
ತ್ಯಾಗರಾಜ ನಗರ, ಚಿತ್ರದುರ್ಗ ರಸ್ತೆ, ಚಳ್ಳಕೆರೆ–577522
ಸಂ:ಶಿಅಯೋಚ/ಇ–ಟೆಂಡರ್/ಪ್ರಕಟಣೆ/2023–2024 ದಿನಾಂಕ: 26/07/2023
ಸಂಕ್ಷಿಪ್ತ ಟೆಂಡರ್ ಪ್ರಕಟಣೆ
2023–24 ನೇ ಸಾಲಿಗೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಶಿಶು ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ ವಿವಿಧ ಸೇವೆಗಳನ್ನು ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಅಧಿನಿಯಮ 1999 ನಿಯಮ 2000 ರಡಿ ಇ–ಪ್ರಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ.
ಸೇವಾ ವಿವರ:– (1) ಆಹಾರ ಸಾಗಾಣಿಕೆ. ಅಂದಾಜು ಮೊತ್ತ (ಲಕ್ಷಗಳಲ್ಲಿ):– 8.85 ಇಎಂಡಿ ಮೊತ್ತ (ಲಕ್ಷಗಳಲ್ಲಿ):– 0.70 (2) ಬಾಡಿಗೆ ಆಧಾರದ ಮೇಲೆ ವಾಹನ ಪಡೆಯಲು. ಅಂದಾಜು ಮೊತ್ತ (ಲಕ್ಷಗಳಲ್ಲಿ):– 3.20 ಇಎಂಡಿ ಮೊತ್ತ (ಲಕ್ಷಗಳಲ್ಲಿ):– 0.10 (3) ಹೊರಗುತ್ತಿಗೆ ಮೂಲಕ ಸಿಬ್ಬಂದಿ ಸೇವೆ. ಅಂದಾಜು ಮೊತ್ತ (ಲಕ್ಷಗಳಲ್ಲಿ):– 2.80 ಇಎಂಡಿ ಮೊತ್ತ (ಲಕ್ಷಗಳಲ್ಲಿ):– 0.10 ಟೆಂಡರ್ ಷರತ್ತು ಮತ್ತು ಟೆಂಡರ್ ಅಪ್‌ಲೋಡ್‌ಗೆ ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ಸಂಪರ್ಕಿಸುವುದು. ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ:27.07.2023 ಕೊನೆಯ ದಿನಾಂಕ: 25.08.2023 ಸಂಜೆ 5.00 ಗಂಟೆ ಆಗಿರುತ್ತದೆ.
DIPR/CTA/KSMCA/127/2023-24
ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಚಳ್ಳಕೆರೆ.

ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು
ಟೆಂಡರ್ ಆಹ್ವಾನ ಪ್ರಕಟಣೆ
ಟೆಂಡರ್ ಪ್ರಕಟಣೆ ಸಂಖ್ಯೆ : 22,23,24,26/2022–23 2nd CallDtd : 31.07.2023
ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು ಚಿಕ್ಕಮಗಳೂರು ಜಿಲ್ಲೆಯ **ಚಿಕ್ಕಮಗಳೂರು, ಕಡೂರು, ತರೀಕೆರೆ ತಾಲ್ಲೂಕಿನ 204(ಪ್ಯಾಕೇಜ್ ಒಳಗೊಂಡಂತೆ)** ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ ಪೋರ್ಟಲ್ ಮುಲಕ ಟೆಂಡರ್ ಆಹ್ವಾನಿಸಲಾಗಿದೆ. **ಕನಿಷ್ಠ ಮೊತ್ತ ರೂ. 5.23 ಲಕ್ಷ ಗರಿಷ್ಠ ಮೊತ್ತ ರೂ.80.17** ಲಕ್ಷದ ಕಾಮಗಾರಿಯನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard Tender Document-KW-1, 2, 3 & 4 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಗುತ್ತಿಗೆದಾರರಿಗೆ ಅಧಿನಿಯಮ 1 ರಲ್ಲಿ ನಮೂದಿಸಿರುವ ಕನಿಷ್ಟ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ: **31.07.2023 ರಿಂದ 11.08.2023** ರವರೆಗೆ ಸಂಜೆ 5.30 ಗಂಟೆಯೊಳಗೆ ಸಲ್ಲಿಸಬೇಕು, ಟೆಂಡರನ್ನು ದಿನಾಂಕ **14.08.2023** ರಂದು ಸಂಜೆ 05:31ಕ್ಕೆ ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು whttps://kppp.karnataka.gov.in ನಲ್ಲಿ ಓದಿಕೊಳ್ಳುವುದು ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.
ದೂರವಾಣಿ ಸಂಖ್ಯೆ: 080–22265383. Website: www.kiadb.in
ಸಂಖ್ಯೆ: ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–05/138/2023–24 ದಿನಾಂಕ:01.08.2023
ಟೆಂಡರ್ ಆಹ್ವಾನ ಪ್ರಕಟಣೆ
(ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪೋರ್ಟಲ್ ಮೂಲಕ ಮಾತ್ರ)
ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆಪಿಡಬ್ಲ್ಯೂಡಿನಲ್ಲಿ ನೋಂದಾಯಿತ ದರ್ಜೆ–1 (ಸಿವಿಲ್) ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಡಿ ಟೆಂಡರನ್ನು ಆಹ್ವಾನಿಸಿದೆ.
ಕಾಮಗಾರಿಯ ಹೆಸರು: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶಕ್ಕೆ ದೇವನಹಳ್ಳಿ ತೃತೀಯ ಶುದ್ಧಿಕರಣ ಘಟಕದಿಂದ (ಪಾಲಿ ಕಂಕ್ಷನ್) ನೀರು ಸರಬರಾಜು ಯೋಜನೆಯನ್ನು ಒದಗಿಸುವ ಕಾಮಗಾರಿ. (2ನೇ ಕರೆ).
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 31.08.2023 ಸಂಜೆ 04:00 ರವರೆಗೆ.
ಟೆಂಡರ್‌ದಾರರು ಬಿಡ್ಡಿಂಗ್ ದಾಖಲೆಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/–
ವಾಸಾಸಂಇ/ವಾಪ್ರ/ಜಿಎ/739/2023–24
ಮುಖ್ಯ ಅಭಿಯಂತರರು–1

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ,
ಕಲಬುರಗಿ ವಲಯ, ಕಲಬುರಗಿ
ಮುಖ್ಯ ಅಭಿಯಂತರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ,
"ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ–585105, ದೂ: 08472–220817,
ಫಾ: 08472–260818, E-mail ID : kwbceklb14@gmail.com
ಕ್ರ.ಸಂ. ಕಜಮ/ಮುಅಕ/ತಾಂತ್ರಿಕ/ನೀಸ/ಆಳಂದ/ಕೆ.ಕೆ.ಆರ್.ಡಿ.ಬಿ/470/2023–24 ದಿನಾಂಕ : 01–08–2023
–: ಟೆಂಡರ್ ಪ್ರಕಟಣೆ :–
1) ಕಾಮಗಾರಿ ವಿವರ : ಕೆ.ಕೆ.ಆರ್.ಡಿ.ಬಿ ಅನುದಾನದಡಿ ಆಳಂದ ಪಟ್ಟಣದ ಆಶ್ರಯ ಕಾಲೋನಿಯ ಡಿ.ಎಮ್.ಎ–2 ನ ಹಳೇ ಜಲಶುದ್ಧೀಕರಣ ಘಟಕದ ಆವರಣದಲ್ಲಿ 10 ಲಕ್ಷ ಲೀಟರ್ ಸಾಮರ್ಥ್ಯದ 15 ಮೀಟರ್ ಎತ್ತರದ ಆರ್.ಸಿ.ಸಿ ಮೇಲ್ಮಟ್ಟದ ಜಲಸಂಗ್ರಹಗಾರ ನಿರ್ಮಾಣದ ಕಾಮಗಾರಿ (ಲಂಪಸಮ್) (**ವರ್ಕ ಇಂಡೆಂಟ್ : ಕೆ.ಯು.ಡಬ್ಲ್ಯೂ.ಎಸ್.ಡಿ.ಬಿ/2023–24 / ಡಬ್ಲ್ಯೂಟಿ/ವರ್ಕ_ಇಂಡೆಂಟ್33**), 2) ಕಾಮಗಾರಿ ಅಂದಾಜು ಮೊತ್ತ: **ರೂ. 187.06 ಲಕ್ಷಗಳು (ಜಿ.ಎಸ್.ಟಿ ಹೊರತು ಪಡಿಸಿ)**, 3) ಗುತ್ತಿಗೆದಾರರ ಅರ್ಹತೆ ವಿವರ: ಗುತ್ತಿಗೆದಾರರ ಅರ್ಹತೆಯಂತೆ, 4) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ: ರೂ. 3,32,000/–, 5) ಕಾಮಗಾರಿಯ ಅವಧಿ: 09 (ಒಂಬತ್ತು ತಿಂಗಳು ಮಳೆಗಾಲ ಸೇರಿ), 6) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಷನ್ ಕೊನೆಯ ದಿನಾಂಕ: **11–08–2023 ಸಮಯ : 11:00 ಗಂಟೆಯವರೆಗೆ,** 7) ಪೂರ್ವ ಟೆಂಡರ್ ಸಭೆ ದಿನಾಂಕ: **11–08–2023 ಸಮಯ: 11:30 ಗಂಟೆಯವರೆಗೆ,** 8) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **19–08–2023 ಸಮಯ : 17:30 ಗಂಟೆಯವರೆಗೆ** 9) ಟೆಂಡರ್ ತೆರೆಯುವ ದಿನಾಂಕ: **21–08–2023 ಸಮಯ : 11:00 ಗಂಟೆ ನಂತರ,** 10) ಹೆಚ್ಚಿನ ವಿವರಗಳಿಗೆ: ಮುಖ್ಯ ಅಭಿಯಂತರವರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, "ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ–585105, ದೂ: 08472–220817, E-mail ID : kwbceklb14@gmail.com 11) ಅಂತರಜಾಲ ತಾಣದ ವಿಳಾಸ: https://kppp.karnataka.gov.in
ಸಹಿ/– ಮುಖ್ಯ ಅಭಿಯಂತರು
ಕನನೀಸ ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/148/ಕೆ.ಎಸ್.ಎಂ.ಸಿ.&ಎ/2023–24

SANJAY GANDHI INSTITUTE OF TRAUMA AND ORTHOPAEDICS
(Government of Karnataka Autonomous Institution)
Byrasandra, Jayanagar East, Bangalore-560 011. Ph: 080-2656 4516
Telefax: 080-2656 5222 E-mail: sitodirector@gmail.com
No: SGIT&O/Fellowship/ADM/23/2023-24 Date: 01.08.2023
NOTIFICATION
Application are invited from NMC/MCI recognized MS/MD/DNB Candidates for **Fellowship Programmes in Sports Injury and Arthroscopy, Spine Surgery, Advanced Orthopaedic Trauma, Arthroplasty, Maxillofacial Traum, Ultrasound & Image Guided Advanced Nerve Blocks** at Sanjay Gandhi Institute of Trauma and Orthopaedics for the Academic Year 2023-24.
The Applicants should submit the prescribed application on or before **10.08.2023** along with application fee of **Rs. 4,000/- (for each subject)** made on Demand Draft in favour of the **Director, Sanjay Gandhi Institute of Trauma & Orthopaedics, Bengaluru-560011.** and DD enclosed along with application form.
The objective type (MCQ) Entrance Examination will be conducted between **10.08.2023 to 16.08.2023** with prior intimation to the Candidates.
Sd/- Director
DIPR/CP/745/AAA/2023-24

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ ಅಂಬೇಡ್ಕರ್ ವೀಧಿ,
ಬೆಂಗಳೂರು–560001, ದೂರವಾಣಿ ಸಂ:080–22032754,
ಇ–ಮೇಲ್ ಐಡಿ: diregov.rdpr@gov.in, rdprrecruitment@gmail.com
ಸಂ: ಗ್ರಾಅಪ/107/ಇ–ಆಡಳಿತ/2023, ದಿನಾಂಕ: 03.08.2023
ಪ್ರಕಟಣೆ
ಇ–ಆಡಳಿತ ಕಛೇರಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ, ಈ ಕೆಳಕಂಡ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
Business Analyst-01
ಆಸಕ್ತ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು 14/08/2023 ರೊಳಗೆ ಈ ಕೆಳಗೆ ತಿಳಿಸಲಾಗಿರುವ ವಿಳಾಸಕ್ಕೆ ಕಳುಹಿಸಲು ಕೋರಲಾಗಿದೆ.
ವಿಳಾಸ: ನಿರ್ದೇಶಕರು, ಇ–ಆಡಳಿತ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, 2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಅಂಬೇಡ್ಕರ್ ವೀಧಿ, ಬೆಂಗಳೂರು–560001
ಅರ್ಜಿ ನಮೂನೆ, ಅರ್ಹತೆ ಮತ್ತು ಅನುಭವದ ಕುರಿತು ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ಜಾಲತಾಣ https://www.rdpr.karnataka.gov.in ನಲ್ಲಿ ವೀಕ್ಷಿಸುವುದು.
ಸದರಿ ಹುದ್ದೆಯು 01 ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಇರುತ್ತದೆ.
ಸಹಿ/–
ನಿರ್ದೇಶಕರು, ಇ–ಆಡಳಿತ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ವಾ.ಸಾ.ಸಂ.ಇ/ವಾಪ್ರ/753/ಆಕಾರ್/2023–24

ಸತತ 13ನೇ ಬಾರಿ ವೆಸ್ಟ್ ಇಂಡೀಸ್ ಎದುರು ಸರಣಿ ಗೆದ್ದ ಭಾರತ: ಇಶಾನ್ ಕಿಶನ್‌ಗೆ ಸರಣಿಶ್ರೇಷ್ಠ ಪ್ರಶಸ್ತಿ

ಯುವಪಡೆಗೆ ಮಣಿದ ವಿಂಡೀಸ್

ತರೂಬ, ಟ್ರಿನಿಡಾಡ್ (ಪಿಟಿಐ): ಭಾರತದ ಯುವಶಕ್ತಿಯ ಮುಂದೆ ವೆಸ್ಟ್ ಇಂಡೀಸ್ ತಂಡದ ಸರಣಿ ಗೆಲುವಿನ ಕನಸು ಕೈಗೂಡಲಿಲ್ಲ.

ಮಂಗಳವಾರ ತಡರಾತ್ರಿ (ಭಾರತೀಯ ಕಾಲಮಾನ) ಮುಕ್ತಾಯವಾದ ಮೂರನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡವು 200 ರನ್‌ಗಳಿಂದ ವಿಂಡೀಸ್ ಬಳಗವನ್ನು ಸೋಲಿಸಿತು. 2–1ರಿಂದ ಸರಣಿಯನ್ನು ತನ್ನದಾಗಿಸಿಕೊಂಡಿತು.

ಟಾಸ್ ಗೆದ್ದ ಆತಿಥೇಯ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ, ಇಶಾನ್ ಕಿಶನ್ (77; 64ಎ), ಶುಭಮನ್ ಗಿಲ್ (85; 92ಎ), ಸಂಜು ಸ್ಯಾಮ್ಸನ್ (51; 41ಎ) ಮತ್ತು ಹಾರ್ದಿಕ್ ಪಾಂಡ್ಯ (ಅಜೇಯ 70, 52ಎ) ಅರ್ಧಶತಕಗಳ ಬಲದಿಂದ ಭಾರತ ತಂಡವು 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 351 ರನ್ ಗಳಿಸಿತು.

ಈ ಬೃಹತ್ ಗುರಿಯನ್ನು ಬೆನ್ನಟ್ಟಿದ ವಿಂಡೀಸ್ ಬಳಗವು ಮಧ್ಯಮವೇಗಿ ಮುಕೇಶ್ ಕುಮಾರ್ (30ಕ್ಕೆ3) ಹಾಗೂ ಶಾರ್ದೂಲ್ ಠಾಕೂರ್ (37ಕ್ಕೆ4) ಅವರ ದಾಳಿಗೆ ಕುಸಿಯಿತು. 35.3 ಓವರ್‌ಗಳಲ್ಲಿ 151 ರನ್ ಗಳಿಸಿ ಪರಾಭವಗೊಂಡಿತು. ತಂಡದ ಗುಡಾಕೇಶ್ ಮೋತಿ (ಔಟಾಗದೆ 39) ಮತ್ತು ಅಲ್ಝರಿ ಜೋಸೆಫ್ (26) ಒಂಬತ್ತನೇ ವಿಕೆಟ್‌ಗೆ 55 ರನ್ ಸೇರಿಸಿ, ಸ್ವಲ್ಪ ಹೊತ್ತು ಪ್ರತಿರೋಧ ತೋರಿದರು.

ಸರಣಿಯ ಎರಡನೇ ಪಂದ್ಯದಲ್ಲಿ ಗೆದ್ದು ಬೀಗಿದ್ದ ವಿಂಡೀಸ್ ತಂಡವು ಕೊನೆಯ ಪಂದ್ಯದಲ್ಲಿ ಸಂಪೂರ್ಣವಾಗಿ ವಿಫಲವಾಯಿತು.

ವೆಸ್ಟ್ ಇಂಡೀಸ್ ಎದುರು ಏಕದಿನ ಕ್ರಿಕೆಟ್ ಸರಣಿ ಗೆದ್ದ ಭಾರತ ತಂಡದ ಆಟಗಾರ ಮುಕೇಶ್ ಕುಮಾರ್ ಟ್ರೋಫಿ ಎತ್ತಿಹಿಡಿದು ಸಂಭ್ರಮಿಸಿದರು –ಎಪಿ/ಪಿಟಿಐ ಚಿತ್ರ

ಬೌಲಿಂಗ್‌ನಲ್ಲಿಯೂ ಯಾವುದೇ ಸತ್ವ ಇರಲಿಲ್ಲ. ಬ್ಯಾಟಿಂಗ್ ಕೂಡ ನಿರೀಕ್ಷೆಯ ಮಟ್ಟಕ್ಕೆ ಇರದ ಕಾರಣ ವಿಂಡೀಸ್ ಹೀನಾಯ ಸೋಲನುಭವಿಸಿತು.

ಇದರೊಂದಿಗೆ ಬಾರತ ತಂಡವು ಸತತ 13ನೇ ಬಾರಿ ಏಕದಿನ ಸರಣಿ ಜಯಿಸಿತು. 2007 ರಿಂದ ಇಲ್ಲಿಯವರೆಗೆ ವಿಂಡೀಸ್ ತಂಡವು ಭಾರತದ ಎದುರು ಸರಣಿ ಜಯಿಸಿಲ್ಲ. ವಿಂಡೀಸ್ ಎದುರಿನ ಪಂದ್ಯದಲ್ಲಿ ಭಾರತ ಸಾಧಿಸಿದ ಅತಿ ಹೆಚ್ಚು ಅಂತರದ ಎರಡನೇ ಜಯ ಇದಾಗಿದೆ.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 351. ವೆಸ್ಟ್ ಇಂಡೀಸ್: 35.3 ಓವರ್‌ಗಳಲ್ಲಿ 151 (ಅಲಿಕ್ ಅಥಾನೆಜ್ 32, ಅಲ್ಝರಿ ಜೋಸೆಫ್ 26, ಗುಡಾಕೇಶ್ ಮೋತಿ ಅಜೇಯ 39, ಮುಕೇಶ್ ಕುಮಾರ್ 30ಕ್ಕೆ3, ಶಾರ್ದೂಲ್ ಠಾಕೂರ್ 37ಕ್ಕೆ4, ಕುಲದೀಪ್ ಯಾದವ್ 25ಕ್ಕೆ2) **ಫಲಿತಾಂಶ:** ಭಾರತ ತಂಡಕ್ಕೆ 200 ರನ್‌ಗಳ ಜಯ. ಸರಣಿಯಲ್ಲಿ 2–1ರಿಂದ ಗೆಲುವು. **ಪಂದ್ಯಶ್ರೇಷ್ಠ:** ಶುಭಮನ್ ಗಿಲ್. **ಸರಣಿಶ್ರೇಷ್ಠ:** ಇಶಾನ್ ಕಿಶನ್.

‘ಐಷಾರಾಮಿ ವ್ಯವಸ್ಥೆ ಬೇಡಿಲ್ಲ; ಮೂಲಸೌಲಭ್ಯ ಕಲ್ಪಿಸಲಿ’

ಭಾರತ ಏಕದಿನ ಕ್ರಿಕೆಟ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಅವರು ಕ್ರಿಕೆಟ್ ವೆಸ್ಟ್ ಇಂಡೀಸ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಂಗಳವಾರ ನಡೆದ ಪಂದ್ಯದ ನಂತರ ಮಾಧ್ಯಮದೊಂದಿಗೆ ಮಾತನಾಡಿದ ಅವರು, ‘ಇಲ್ಲಿಗೆ ಬಂದು ಆಡುವ ತಂಡಗಳಿಗೆ ಪ್ರಯಾಣದಲ್ಲಿ ಕನಿಷ್ಠ ಮೂಲಸೌಲಭ್ಯಗಳನ್ನು ಒದಗಿಸಬೇಕು. ನಾವೇನೂ ಐಷಾರಾಮಿ ಸೌಲಭ್ಯಗಳಿಗೆ ಬೇಡಿಕೆ ಇಡುವುದಿಲ್ಲ’ ಎಂದು ಹೇಳಿದರು.

ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದ ಸಂದರ್ಭದಲ್ಲಿ ಟ್ರಿನಿಡಾಡ್‌ನಿಂದ ಬಾರ್ಬಡೋಸ್ ಗೆ ಭಾರತ ತಂಡದವರು ಪ್ರಯಾಣ ಮಾಡಿದ್ದ ವಿಮಾನವು ನಾಲ್ಕು ತಾಸು ತಡವಾಗಿತ್ತು. ಅಲ್ಲದೇ ಮಧ್ಯರಾತ್ರಿಯ ಪ್ರಯಾಣ ಅದಾಗಿತ್ತು. ಸರಿಯಾದ ನಿದ್ದೆ ಮಾಡಲು ಆಗಿರಲಿಲ್ಲ ಎಂದು ಅದಾಗಲೇ ಆಟಗಾರರು ದೂರಿದ್ದರು. ಆ ಹಿನ್ನೆಲೆಯಲ್ಲಿಯೇ ಹಾರ್ದಿಕ್ ಮಾತನಾಡಿದರು. ‘ಅದೊಂದು ಘಟನೆ ಬಿಟ್ಟರೆ ಉಳಿದದ್ದು ಸಮಸ್ಯೆಯಿಲ್ಲ. ಇವತ್ತು ನಾವು ಪಂದ್ಯ ಆಡಿರುವ ಕ್ರೀಡಾಂಗಣವು ಸುಂದರವಾಗಿದೆ. ಮುಂದಿನ ಬಾರಿ ಬರುವಾಗ ಇನ್ನಷ್ಟು ಉತ್ತಮವಾದ ವ್ಯವಸ್ಥೆಗಳಿರಲಿ ಎಂದು ಆಶಿಸುತ್ತೇನೆ’ ಎಂದರು.

ಏಕದಿನ ಕ್ರಿಕೆಟ್ ಸರಣಿಗಳಲ್ಲಿ ಸತತ ಗೆಲುವು

ಸರಣಿ	ತಂಡಗಳು	ಅವಧಿ
13	ಭಾರತ–ವಿಂಡೀಸ್	2007-23
11	ಪಾಕಿಸ್ತಾನ–ಜಿಂಬಾಬ್ವೆ	1996-21
10	ಪಾಕಿಸ್ತಾನ–ವೆಸ್ಟ್ ಇಂಡೀಸ್	1999-22
10	ಭಾರತ–ಶ್ರೀಲಂಕಾ	2007-23

ಭಾರತ–ವಿಂಡೀಸ್ ಗೆಲುವಿನ ಅಂತರದ ದಾಖಲೆ

ಅಂತರ	ಸ್ಥಳ	ವರ್ಷ
224	ಮುಂಬೈ	2018
200	ಟರೌಬಾ	2023
160	ವಡೋದರ	2007
153	ಇಂದೋರ್	2011

ಟಿ20 ಮೊದಲ ಪಂದ್ಯ ಇಂದು: ಗೆಲುವಿನ ಛಲದಲ್ಲಿ ಪಾಂಡ್ಯ ಬಳಗ

ವೆಸ್ಟ್ ಇಂಡೀಸ್ ತಂಡದ ಎದುರು ಟೆಸ್ಟ್ ಮತ್ತು ಏಕದಿನ ಕ್ರಿಕೆಟ್ ಸರಣಿ ಗೆದ್ದಿರುವ ಭಾರತ ತಂಡವು ಟಿ20 ಸರಣಿಯಲ್ಲಿಯೂ ಗೆಲ್ಲುವ ನೆಚ್ಚಿನ ಬಳಗವಾಗಿ ಕಣಕ್ಕಿಳಿಯಲಿದೆ.

ಅನುಭವಿಗಳಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರು ವಿಶ್ರಾಂತಿ ಪಡೆದಿದ್ದು ಯುವ ಆಟಗಾರರಿಗೆ ಅವಕಾಶ ದೊರೆಯಲಿದೆ. ಮೂರನೇ ಏಕದಿನ ಪಂದ್ಯದಲ್ಲಿ ಮಿಂಚಿದ್ದ ಇಶಾನ್ ಕಿಶನ್ ಮತ್ತು ಶುಭಮನ್ ಗಿಲ್ ಅವರು ಟಿ20 ಪಂದ್ಯದಲ್ಲಿಯೂ ಇನಿಂಗ್ಸ್ ಆರಂಭಿಸುವುದು ಬಹುತೇಕ ಖಚಿತ.

ಟೆಸ್ಟ್ ಪದಾರ್ಪಣೆಯಲ್ಲಿ ಶತಕ ಬಾರಿಸಿದ್ದ ಯಶಸ್ವಿ ಜೈಸ್ವಾಲ್ ಅವರಿಗೆ ಅಂತರರಾಷ್ಟ್ರೀಯ ಚುಟುಕು ಕ್ರಿಕೆಟ್ ಪಂದ್ಯದಲ್ಲಿಯೂ ‘ಇನಿಂಗ್ಸ್’ ಆರಂ ಭಿಸುವ ಅವಕಾಶ ಸಿಗುವುದು ಬಹುತೇಕ ಖಚಿತವಾಗಿದೆ. ವಿಕೆಟ್ ಕೀಪರ್ ಸಂಜು ಸ್ಯಾಮ್ಸನ್ ಮತ್ತು ಹಾರ್ದಿಕ್ ಪಾಂಡ್ಯ ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ವಿಭಾಗದ ಶಕ್ತಿಯಾಗಿದ್ದಾರೆ.

ಎಡಗೈ ಆಲ್‌ರೌಂಡರ್ ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಅನುಭವಿ ಸ್ಪಿನ್ನರ್ ಯಜುವೇಂದ್ರ ಚಾಹಲ್ ಮತ್ತು ಯುವ ಆಟಗಾರ ರವಿ ಬಿಷ್ಣೋಯಿ ಅವರಲ್ಲಿ ಇಬ್ಬರು ಅಥವಾ ಮೂವರಿಗೆ ಕಣಕ್ಕಿಳಿಯುವ ಅವಕಾಶ ಸಿಗಬಹುದು. ಎಡಗೈ ಮಧ್ಯಮವೇಗಿ ಅರ್ಷದೀಪ್ ಸಿಂಗ್ ಮತ್ತು ಉಮ್ರಾನ್ ಮಲಿಕ್ ಅವರು ಮೊಹಮ್ಮದ್ ಸಿರಾಜ್ ಅನುಪಸ್ಥಿತಿಯಲ್ಲಿ ವೇಗದ ಬೌಲಿಂಗ್ ವಿಭಾಗದ ಹೊಣೆ ನಿಭಾಯಿಸುವರು. ಮೂರನೇ ವೇಗಿಯಾಗಿ ಆವೇಶ್ ಖಾನ್ ಅಥವಾ ಮುಕೇಶ್ ಕುಮಾರ್ ಅವರಲ್ಲಿ ಒಬ್ಬರಿಗೆ ಅವಕಾಶ ಸಿಗಬಹುದು. ಆದರೆ ಹಾರ್ದಿಕ್ ಪಾಂಡ್ಯ ಕೂಡ ಮಧ್ಯಮವೇಗದ ಬೌಲಿಂಗ್ ಮಾಡುವುದರಿಂದ ಇಬ್ಬರು ವೇಗಿಗಳು ಕಣಕ್ಕಿಳಿಯಬಹುದು.

ಪುನರುತ್ಥಾನದ ಪ್ರಯತ್ನದಲ್ಲಿರುವ ವೆಸ್ಟ್ ಇಂಡೀಸ್ ತಂಡ ಈಗ ಪ್ರಯೋಗಶಾಲೆಯಂತಾಗಿದೆ. ಟಿ20 ತಂಡವನ್ನು ರೊವ್ಮನ್ ಪೊವೆಲ್ ಮುನ್ನಡೆಸುವರು. ಎರಡನೇ ಏಕದಿನ ಪಂದ್ಯದಲ್ಲಿ ಮಿಂಚಿದ್ದ ಶಾಯ್ ಹೋಪ್ ಕೂಡ ತಂಡದಲ್ಲಿದ್ದಾರೆ. ಬ್ರೆಂಡನ್ ಕಿಂಗ್, ಶಿಮ್ರಾನ್ ಹೆಟ್ಮೆಯರ್ ಮತ್ತು ಕೈಲ್ ಮೇಯರ್ಸ್ ಅವರು ಲಯ ಕಂಡು ಕೊಂಡರೆ ಬ್ಯಾಟಿಂಗ್ ಬಲ ಹೆಚ್ಚಲಿದೆ. ಐಪಿಎಲ್‌ನಲ್ಲಿ ಮಿಂಚಿದ್ದ ನಿಕೊಲಸ್ ಪೂರನ್ ಮೇಲೆ ಹೆಚ್ಚಿನ ನಿರೀಕ್ಷೆ ಇದೆ.

ಹಾರ್ದಿಕ್ ಪಾಂಡ್ಯ

ಬಲಾಬಲ

ಒಟ್ಟು ಪಂದ್ಯಗಳು 25

ಭಾರತ ಗೆಲುವು	17
ವಿಂಡೀಸ್ ಗೆಲುವು	7
ಫಲಿತಾಂಶವಿಲ್ಲ	1

ಪಂದ್ಯ ಆರಂಭ: ರಾತ್ರಿ 8 (ಭಾರತೀಯ ಕಾಲಮಾನ), ನೇರಪ್ರಸಾರ: ಡಿಡಿ ಸ್ಪೋರ್ಟ್ಸ್, ಫ್ಯಾನ್‌ಕೋಡ್, ಜಿಯೊ ಸಿನಿಮಾ

ದೇವಧರ್ ಪ್ರಶಸ್ತಿ ಮೇಲೆ ಮಯಂಕ್ ಬಳಗದ ಕಣ್ಣು

ಪುದುಚೇರಿ (ಪಿಟಿಐ): ಕರ್ನಾಟಕದ ಮಯಂಕ್ ಅಗರವಾಲ್ ನಾಯಕತ್ವದ ದಕ್ಷಿಣ ವಲಯ ತಂಡವು ದೇವಧರ್ ಟ್ರೋಫಿ ಜಯದ ವಿಶ್ವಾಸದಲ್ಲಿದೆ.

ಹೋದ ತಿಂಗಳು ಬೆಂಗಳೂರಿನಲ್ಲಿ ದುಲೀಪ್ ಟ್ರೋಫಿ ಜಯಿಸಿದ್ದ ತಂಡವು ಈ ಬಾರಿಯ ದೇಶಿ ಋತುವಿನ ಎರಡನೇ ಪ್ರಶಸ್ತಿಗೆ ಮುತ್ತಿಡುವ ಉತ್ಸಾಹದಲ್ಲಿದೆ. ಗುರುವಾರ ನಡೆಯಲಿರುವ ಫೈನಲ್‌ನಲ್ಲಿ ಪೂರ್ವ ವಲಯವನ್ನು ಎದುರಿಸಲಿದೆ.

ಈ ಟೂರ್ನಿಯ ರೌಂಡ್ ರಾಬಿನ್ ಲೀಗ್ ಸುತ್ತಿನಲ್ಲಿ ಅಜೇಯವಾಗಿರುವ ಮಯಂಕ್ ಬಳಗವು ಫೈನಲ್‌ನಲ್ಲಿಯೂ ಗೆಲ್ಲುವ ವಿಶ್ವಾಸದಲ್ಲಿದೆ. ತಂಡದಲ್ಲಿರುವ ಕರ್ನಾಟಕದ ಆಟಗಾರರು ಉತ್ತಮವಾಗಿ ಆಡುತ್ತಿದ್ದಾರೆ. ಮಯಂಕ್ (278 ರನ್), ಮಧ್ಯಮವೇಗಿಗಳಾದ ವಿದ್ವತ್ ಕಾವೇರಪ್ಪ (11 ವಿಕೆಟ್), ವಿ. ಕೌಶಿಕ್ (7 ವಿಕೆಟ್) ಮತ್ತು ವೈಶಾಖ ವಿಜಯ ಕುಮಾರ್(6 ವಿಕೆಟ್) ಟೂರ್ನಿಯುದ್ದಕ್ಕೂ ಉತ್ತಮ ಬೌಲಿಂಗ್ ಮಾಡಿದ್ದಾರೆ.

ಉಳಿದಂತೆ ಬ್ಯಾಟಿಂಗ್ ನಲ್ಲಿ ರೋಹನ್ ಕುನ್ನುಮ್ಮಾಳ್ (204 ರನ್) ಹಾಗೂ ಬಿ. ಸಾಯಿ ಸುದರ್ಶನ್ (185) ಉತ್ತಮ ಲಯದಲ್ಲಿದ್ದಾರೆ. ಎಡಗೈ ಸ್ಪಿನ್ನರ್ ಆರ್. ಸಾಯಿಕಿಶೋರ್ ಕೂಡ ಇದುವರೆಗೆ ಉತ್ತಮ ಬೌಲಿಂಗ್ ಮಾಡಿದ್ದು, ತಂಡವು ಎಲ್ಲ ವಿಭಾಗಗಳಲ್ಲಿಯೂ ಬಲಿಷ್ಠವಾಗಿದೆ.

ಮಯಂಕ್ ಅಗರವಾಲ್

ಪೂರ್ವ ವಲಯ ತಂಡದಲ್ಲಿಯೂ ಉತ್ತಮವಾದ ಆಟಗಾರರು ಇದ್ದಾರೆ. ಲೀಗ್ ಹಂತದಲ್ಲಿ ಒಟ್ಟು 16 ಅಂಕ ಗಳಿಸಿ 2ನೇ ಸ್ಥಾನ ಪಡೆದಿತ್ತು. ತಂಡದಲ್ಲಿರುವ ಮೂವರು ಸ್ಪಿನ್ನರ್‌ಗಳಾದ ಶಹಬಾಜ್ ಅಹಮದ್ (10 ವಿಕೆಟ್), ರಿಯಾನ್ ಪರಾಗ್ (9) ಮತ್ತು ಮಣಿಶಂಕರ್ ಮುರಾಸಿಂಗ್ (8) ತಂಡವನ್ನು ಜಯದತ್ತ ನಡೆಸಬಲ್ಲ ಸಮರ್ಥರು. ದಕ್ಷಿಣ ತಂಡದ ಬ್ಯಾಟಿಂಗ್ ವಿಭಾಗಕ್ಕೆ ಸವಾಲೊಡ್ಡಲು ಸಿದ್ಧರಾಗಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 1.30

ನೇರಪ್ರಸಾರ: ಬಿಸಿಸಿಐ.ಟಿವಿ

ಭಾರತ– ಪಾಕ್ ಪಂದ್ಯ ಅ. 14ರಂದು

ಕರಾಚಿ (ಪಿಟಿಐ): ಭಾರತ ಮತ್ತು ಪಾಕಿಸ್ತಾನ ನಡುವೆ ಅಹಮದಾಬಾದ್‌ನಲ್ಲಿ ಅಕ್ಟೋಬರ್ 15ರಂದು ನಡೆಯಬೇಕಾಗಿದ್ದ ಏಕದಿನ ವಿಶ್ವಕಪ್ ಪಂದ್ಯ ಒಂದು ದಿನ ಮೊದಲೇ ಅಂದರೆ ಅಕ್ಟೋಬರ್ 14ರಂದು ನಡೆಯಲಿದೆ. ತನ್ನ ಎರಡು ಪಂದ್ಯಗಳ ದಿನಾಂಕ ಬದಲಾವಣೆ ಪ್ರಸ್ತಾವಕ್ಕೆ ಸಂಬಂಧಿಸಿ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಒಪ್ಪಿಗೆ ಸೂಚಿಸಿದೆ.

ಐಸಿಸಿ ಮತ್ತು ಬಿಸಿಸಿಐ, ದಿನಾಂಕ ಬದಲಾವಣೆಗೆ ಪಾಕಿಸ್ತಾನ ಮುಂದೆ ಪ್ರಸ್ತಾವ ಮುಂದಿಟ್ಟಿತ್ತು. ಪಾಕಿಸ್ತಾನ ಹೈದರಾಬಾದಿನಲ್ಲಿ ಶ್ರೀಲಂಕಾ ವಿರುದ್ಧದ ಪಂದ್ಯವನ್ನು ಅ.12ರ ಬದಲು ಅಕ್ಟೋಬರ್ 10ರಂದು ಆಡಲಿದೆ. ಇದರಿಂದ ಪಾಕಿಸ್ತಾನಕ್ಕೆ, ಭಾರತ ವಿರುದ್ಧ ಪಂದ್ಯಕ್ಕೆ ಮೂರು ದಿನಗಳ ಅಂತರ ಸಿಗಲಿದೆ.

ನವರಾತ್ರಿ ಆರಂಭದ ದಿನ ಅಹಮದಾಬಾದಿನಲ್ಲಿ ಭದ್ರತಾ ವ್ಯವಸ್ಥೆ ಕೈಗೊಳ್ಳಬೇಕಾದ ಕಾರಣ ದಿನಾಂಕ ಪರಿಷ್ಕರಿಸಲಾಗಿದೆ.

ಪಾಕ್ ಪಂದ್ಯಗಳ ವೇಳಾಪಟ್ಟಿ ಇಂತಿದೆ: ಅ. 6: ಪಾಕಿಸ್ತಾನ– ನೆದರ್ಲೆಂಡ್ಸ್ (ಹೈದರಾಬಾದ್); ಅ. 12: ಪಾಕಿಸ್ತಾನ– ಶ್ರೀಲಂಕಾ (ಹೈದರಾಬಾದ್); ಅ. 15: ಪಾಕಿಸ್ತಾನ–ಭಾರತ (ಅಹಮದಾಬಾದ್); ಅ. 20: ಪಾಕಿಸ್ತಾನ–ಆಸ್ಟ್ರೇಲಿಯಾ (ಬೆಂಗಳೂರು); ಅ. 23: ಪಾಕಿಸ್ತಾನ– ಅಫ್ಗಾನಿಸ್ತಾನ (ಚೆನ್ನೈ); ಅ. 27: ಪಾಕಿಸ್ತಾನ– ದಕ್ಷಿಣ ಆಫ್ರಿಕಾ (ಚೆನ್ನೈ); ಅ. 31: ಪಾಕಿಸ್ತಾನ–ಬಾಂಗ್ಲಾದೇಶ (ಕೋಲ್ಕತ್ತ); ನ.4: ಪಾಕಿಸ್ತಾನ– ನ್ಯೂಜಿಲೆಂಡ್ (ಬೆಂಗಳೂರು–ಹಗಲು ಪಂದ್ಯ).

ಡುರಾಂಡ್ ಕಪ್ ಟೂರ್ನಿ ಇಂದಿನಿಂದ: ಬಾಗನ್‌ಗೆ ಬಾಂಗ್ಲಾ ಆರ್ಮಿ ಸವಾಲು

ಕೋಲ್ಕತ್ತ (ಪಿಟಿಐ): ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ 132ನೇ ಆವೃತ್ತಿ ಗುರುವಾರ ಆರಂಭವಾಗಲಿದ್ದು, ಹಾಲಿ ಇಂಡಿಯನ್ ಸೂಪರ್ ಲೀಗ್ ಚಾಂಪಿಯನ್ನರಾದ ಮೋಹನ್ ಬಾಗನ್ ಸೂಪರ್ ಜೈಂಟ್ ತಂಡದ ಮೇಲೆ ಎಲ್ಲರ ಕಣ್ಣುಗಳು ನೆಟ್ಟಿವೆ. ಈ ಸ್ಥಳೀಯ ದೈತ್ಯ ತಂಡ ಉದ್ಘಾಟನಾ ಪಂದ್ಯದಲ್ಲಿ ಬಾಂಗ್ಲಾದೇಶ ಆರ್ಮಿ ಎಫ್‌ಸಿ ತಂಡವನ್ನು ಎದುರಿಸಲಿದೆ.

ಪ್ರತಿ ಗುಂಪಿನಲ್ಲಿ ಅಗ್ರಸ್ಥಾನ ಪಡೆದ ತಂಡಗಳ ಜೊತೆಗೆ, ಉತ್ತಮ ಸಾಧನೆಯೊಡನೆ ಎರಡನೇ ಸ್ಥಾನ ಪಡೆದ ಎರಡು ತಂಡಗಳಷ್ಟೇ ಎಂಟರ ಘಟ್ಟಕ್ಕೆ ಅರ್ಹತೆ ಪಡೆಯಲಿವೆ. ಹೀಗಾಗಿ ಪ್ರತಿ ಪಂದ್ಯವೂ ತಂಡಗಳಿಗೆ ಮಹತ್ವದ್ದಾಗಿರಲಿದೆ.

ಈ ಗುಂಪಿನಲ್ಲಿ ಬಾಂಗ್ಲಾ ಸೇನಾ ತಂಡದ ಜೊತೆ ಸಾಂಪ್ರದಾಯಿಕ ಎದುರಾಳಿ ಈಸ್ಟ್ ಬೆಂಗಾಲ್ ಹಾಗೂ ಪಂಜಾಬ್ ಎಫ್‌ಸಿ ಕೂಡ ಇದೆ. ಐ ಲೀಗ್ ಚಾಂಪಿಯನ್ನರಾದ ಪಂಜಾಬ್ ಈಗ ಐಎಸ್‌ಎಲ್‌ಗೆ ಬಡ್ತಿ ಪಡೆದಿದೆ.

27 ವರ್ಷಗಳ ನಂತರ ಈ ಟೂರ್ನಿಯಲ್ಲಿ ಎರಡು ವಿದೇಶಿ ತಂಡಗಳು ಭಾಗವಹಿಸುತ್ತಿವೆ. ಬಾಂಗ್ಲಾದೇಶದ ತಂಡದ ಜೊತೆಗೆ ನೇಪಾಳದ ತಂಡವೂ ಕಣದಲ್ಲಿದೆ. ಈ ಟೂರ್ನಿ ಏಷ್ಯಾದ ಅತ್ಯಂತ ಹಳೆಯ ಮತ್ತು ವಿಶ್ವದ ಮೂರನೇ ಹಳೆಯ ಟೂರ್ನಿಯಾಗಿದೆ. ಸೆ.3ರಂದು ಟೂರ್ನಿಯ ಫೈನಲ್ ನಡೆಯಲಿದೆ. ಕೋಲ್ಕತ್ತದ ಜೊತೆಗೆ ಗುವಾಹಟಿ ಮತ್ತು ಕೊಕ್ರಝಾರ್‌ನಲ್ಲೂ ಪಂದ್ಯಗಳು ನಡೆಯಲಿವೆ.

ಟೂರ್ನಿಯಲ್ಲಿ ಮೊದಲ ಸಲ 24 ತಂಡಗಳು ಭಾಗವಹಿಸುತ್ತಿದ್ದು, ಇವುಗಳನ್ನು ಆರು ಗುಂಪುಗಳಲ್ಲಿ ವಿಂಗಡಿಸಲಾಗಿದೆ.

2022ರ ಡುರಾಂಡ್ ಕಪ್ ಫೈನಲ್‌ನಲ್ಲಿ ಬೆಂಗಳೂರು ಎಫ್‌ಸಿ 2–1 ರಿಂದ ಮುಂಬೈ ಸಿಟಿ ಎಫ್‌ಸಿ ಮೇಲೆ ಜಯಗಳಿಸಿತ್ತು.

ರಾಜ್ಯಮಟ್ಟದ ಚೆಸ್ ಟೂರ್ನಿ 6ಕ್ಕೆ

ಮೈಸೂರು: ‘ನಗರದ ವಿಜಯನಗರದ ಸದ್ವಿದ್ಯಾ ಪಿ.ಯು ಕಾಲೇಜಿನಲ್ಲಿ ಆ.6ರಂದು ರಾಜ್ಯಮಟ್ಟದ, 19 ವರ್ಷದೊಳಗಿನವರ (ಮುಕ್ತ) ರ‍್ಯಾಪಿಡ್ ಚೆಸ್ ಟೂರ್ನಿ ಆಯೋಜಿಸಲಾಗಿದೆ’ ಎಂದು ಸದ್ವಿದ್ಯಾ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಪ್ರೊ.ಎಂ.ಎಸ್.ಕೆ. ನರಹರಿ ಬಾಬು ತಿಳಿಸಿದರು.

‘ಅದರೊಂದಿಗೆ, 7, 9, 11, 13 ಹಾಗೂ 15 ವರ್ಷದೊಳಗಿನ ಬಾಲಕ–ಬಾಲಕಿಯರಿಗೆ ಸ್ಪರ್ಧೆಗಳು ನಡೆಯಲಿವೆ. ಒಟ್ಟು ಪ್ರಶಸ್ತಿಗಳ ಮೊತ್ತ ₹30 ಸಾವಿರವಿದ್ದು, 73 ಟ್ರೋಫಿಗಳನ್ನು ನೀಡಲಾಗುವುದು’ ಎಂದು ತಿಳಿಸಿದರು.

‘ಪಂದ್ಯವು 15 ನಿಮಿಷ 5 ಸೆಕೆಂಡುಗಳ ಅವಧಿಯ ರ‍್ಯಾಪಿಡ್ ಮಾದರಿಯದ್ದು. 5ರಿಂದ 7 ಸುತ್ತಿನಲ್ಲಿ ಸ್ಪರ್ಧೆಗಳು ಆಯೋಜನೆಯಾಗಲಿದ್ದು, ಫಿಡೆ ನಿಯಮದಂತೆ ಫಲಿತಾಂಶ ನಿರ್ಧಾರವಾಗಲಿದೆ. ಪ್ರವೇಶ ಶುಲ್ಕವಿದೆ. ಆ.4ರೊಳಗೆ ಹೆಸರು ನೋಂದಾಯಿಸಬೇಕು. ಮೊ: 99640 58045.

ನಾಕೌಟ್ ಹಂತಕ್ಕೆ ಜಮೈಕಾ, ಫ್ರಾನ್ಸ್

ಮಹಿಳಾ ಫುಟ್‌ಬಾಲ್ ವಿಶ್ವಕಪ್: ಇಟಲಿಗೆ ದಕ್ಷಿಣ ಆಫ್ರಿಕಾ ತಂಡ ಆಘಾತ

ಸಿಡ್ನಿ (ಎಎಫ್‌ಪಿ): ಕೆ.ಡಿಯಾನಿ ಅವರ ಹ್ಯಾಟ್ರಿಕ್ ನೆರವಿನಿಂದ ಫ್ರಾನ್ಸ್ ತಂಡ ಹೋರಾಟದ ಪಂದ್ಯದಲ್ಲಿ 6–3 ಗೋಲುಗಳಿಂದ ಪನಾಮಾ ಮೇಲೆ ಜಯಗಳಿಸಿ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ನಾಕೌಟ್ ಹಂತಕ್ಕೆ ಪ್ರವೇಶ ಪಡೆಯಿತು.

ಬುಧವಾರ ನಡೆದ ಪಂದ್ಯದಲ್ಲಿ ಪನಾಮಾ ಪರ ಮಾರ್ತಾ ಕಾಕ್ಸ್ ಆರಂಭದಲ್ಲೇ ಗಳಿಸಿದ ಗೋಲಿನಿಂದ ಫ್ರಾನ್ಸ್ ಬೆರಗಾಗಿತ್ತು. ಫ್ರೀಕಿಕ್‌ನಲ್ಲಿ ಗಳಿಸಿದ ಈ ಗೋಲು ಪನಾಮಾ ಪರ ವಿಶ್ವಕಪ್‌ನ ಮೊದಲ ಗೋಲು ಆಗಿತ್ತು. ಆದರೆ ಫ್ರಾನ್ಸ್ ಚೇತರಿಸಿ ತಿರುಗೇಟು ನೀಡಿತು.

ಪಿಎಸ್‌ಜಿ ಪರ ಆಡುವ ಡಿಯಾನಿ ವಿರಾಮಕ್ಕೆ ಮೊದಲು ಎರಡು ಗೋಲು ಗಳಿಸಿದರೆ, ಮ್ಯಾಲಿ ಲಕ್ರಾರ್ ಮತ್ತು ಲಿಯಾ ಲಿ ಗ್ಯಾರೆಕ್, ವಿಕಿ ಬೆಕೊ ತಲಾ ಒಂದೊಂದು ಗೋಲು ಗಳಿಸಿದರು. ವಿರಾಮದ ವೇಳೆ ಫ್ರಾನ್ಸ್ 4–1 ಗೋಲುಗಳಿಂದ ಮುಂದಿತ್ತು. ಪ್ರೇಕ್ಷಕರ ಬೆಂಬಲ ಪಡೆದಿದ್ದ ಪನಾಮಾ ಪರ ಯೊಮಿರಾ ಪಿಂಜಾನ್ ಮತ್ತು ಲಿನೆತ್ ಸೆಡೆನೊ ವಿರಾಮ ನಂತರ ಉಳಿದೆರಡು ಗೋಲು ಗಳಿಸಿದರು.

ಇಟಲಿಗೆ ಆಘಾತ (ಎಪಿ ವರದಿ): ವೆಲಿಂಗ್ಟನ್‌ನಲ್ಲಿ ನಡೆದ ‘ಜಿ’ ಗುಂಪಿನ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ 3–2 ಗೋಲುಗಳಿಂದ ಇಟಲಿ ತಂಡಕ್ಕೆ ಆಘಾತ ನೀಡಿತು. ಟೂರ್ನಿಯಿಂದ ಹೊರಬಿದ್ದ ಇಟಲಿ ಆಟಗಾರ್ತಿಯರು ಮಂಡಿಯೂರಿ ಕೆಲಕಾಲ ಕಣ್ಣೀರಾದರು.

ದಕ್ಷಿಣ ಆಫ್ರಿಕಾ ಫಿಫಾ ರ‍್ಯಾಂಕಿಂಗ್‌ನಲ್ಲಿ 54ನೇ ಸ್ಥಾನದಲ್ಲಿದ್ದರೆ, ಇಟಲಿ 16ನೇ ಸ್ಥಾನದಲ್ಲಿದೆ. ಸ್ವೀಡನ್ ಎದುರೂ ಇಟಲಿ 0–5 ಮುಖಭಂಗ ಅನುಭವಿಸಿತ್ತು. ಹೀಗಾಗಿ ಇಟಲಿಗೆ ಗೆಲುವು ಅನಿವಾರ್ಯ ಆಗಿತ್ತು.

ಜಮೈಕಾ ಮುನ್ನಡೆ: (ಎಪಿ ವರದಿ): ಮೆಲ್ಬರ್ನ್‌ನಲ್ಲಿ ನಡೆದ ‘ಎಫ್’ ಗುಂಪಿನ ಪಂದ್ಯದಲ್ಲಿ ಜಮೈಕಾ ತಂಡ, ಬ್ರೆಜಿಲ್ ಜೊತೆ ಗೋಲಿಲ್ಲದೇ ಡ್ರಾ ಮಾಡಿಕೊಂಡು, ಇದೇ ಮೊದಲ ಬಾರಿ ಪ್ರಿಕ್ವಾರ್ಟರ್‌ಫೈನಲ್‌ಗೆ ಸ್ಥಾನ ಕಾದಿರಿಸಿತು. 1995ರ ನಂತರ ಮೊದಲ ಬಾರಿ ಬ್ರೆಜಿಲ್ ತಂಡ ನಾಕೌಟ್ ತಲುಪಲು ವಿಫಲವಾಗಿದೆ. ಗುಂಪಿನಲ್ಲಿ ಬ್ರೆಜಿಲ್ ಮತ್ತು ಫ್ರಾನ್ಸ್‌ಗಿಂತ ಕೆಳಕ್ರಮಾಂಕದಲ್ಲಿದ್ದ ಜಮೈಕಾ ಅನಿರೀಕ್ಷಿತ ಫಲಿತಾಂಶಗಳನ್ನು ನೀಡಿ ಗಮನ ಸೆಳೆಯಿತು.

ಮಹಿಳಾ ಫುಟ್‌ಬಾಲ್ ಕಂಡ ಶ್ರೇಷ್ಠ ಆಟಗಾರ್ತಿ ಎನಿಸಿರುವ ಬ್ರೆಜಿಲ್ ತಂಡದ ಮಾರ್ತಾ ಅವರು ನಿರಾಶೆಯ ನಡುವೆ ವಿಶ್ವಕಪ್‌ಗೆ ವಿದಾಯ ಹೇಳಿದರು. ‘ಇಂಥ ದುಃಸ್ವಪ್ನವನ್ನು ನಿರೀಕ್ಷಿಸಿರಲಿಲ್ಲ’ ಎಂದು ಆರನೇ ವಿಶ್ವಕಪ್ ಆಡಿದ 37 ವರ್ಷದ ಆಟಗಾರ್ತಿ ಪ್ರತಿಕ್ರಿಯಿಸಿದರು. ಅವರು ವಿಶ್ವಕಪ್‌ನಲ್ಲಿ ಇದುವರೆಗೆ 17 ಗೋಲುಗಳೊಡನೆ ಸರ್ವಾಧಿಕ ಸ್ಕೋರರ್ ಎನಿಸಿದ್ದಾರೆ.

ಗೋಲು ಗಳಿಸಿದ ಸಂಭ್ರಮದಲ್ಲಿ ಫ್ರಾನ್ಸ್ ತಂಡದ ಕೆ.ಡಿಯಾನಿ –ಎಎಫ್‌ಪಿ ಚಿತ್ರ

ಸಂಕಷ್ಟದ ನಡುವೆ ಜಮೈಕಾ ಸಾಧನೆ

ಅನೇಕ ಸಂಕಷ್ಟಗಳ ನಡುವೆಯೂ ಬಡ ರಾಷ್ಟ್ರ ಜಮೈಕಾ ಟೂರ್ನಿಯಲ್ಲಿ ಪಾಲ್ಗೊಂಡಿದೆ. ಈ ತಂಡಕ್ಕೆ ದೇಶದ ಫೆಡರೇಷನ್‌ನ ಬೆಂಬಲವೂ ಅಷ್ಟಕ್ಕಷ್ಟೇ ಇತ್ತು. ಆರ್ಥಿಕ ಮುಗ್ಗಟ್ಟೂ ಕಾಡಿತ್ತು. ಆದರೆ ಅಭಿಮಾನಿಗಳು ಕೈಬಿಡಲಿಲ್ಲ. ಎರಡು ಬಾರಿ ‘ಕ್ರೌಡ್ ಫಂಡಿಂಗ್’ (ವಂತಿಗೆ ಸಂಗ್ರಹ) ಮೂಲಕ ₹82.75 ಲಕ್ಷ ಸಂಗ್ರಹವಾಯಿತು. ತಂಡ ವಿಶ್ವಕಪ್‌ನಲ್ಲಿ ಭಾಗವಹಿಸಿತು ಮಾತ್ರವಲ್ಲ, ಮೊದಲ ಬಾರಿ ನಾಕೌಟ್‌ಗೂ ಲಗ್ಗೆಯಿಟ್ಟಿತು.

ಏಷ್ಯನ್ ವೇಟ್‌ಲಿಫ್ಟಿಂಗ್: ಸಂಜನಾಗೆ ಚಿನ್ನದ ಪದಕ

ಗ್ರೇಟರ್ ನೊಯ್ಡಾ (ಪಿಟಿಐ): ಭಾರತದ ಸಂಜನಾ ಅವರು ಇಲ್ಲಿ ನಡೆಯುತ್ತಿರುವ ಏಷ್ಯನ್ ಯೂತ್ ಅಂಡ್ ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 76 ಕೆಜಿ ವಿಭಾಗದಲ್ಲಿ ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದರು.

ಬುಧವಾರ ನಡೆದ ಸ್ಪರ್ಧೆಯಲ್ಲಿ ಅವರು ಕ್ಲೀನ್ ಅಂಡ್ ಜರ್ಕ್ ವಿಭಾಗದಲ್ಲಿ 112 ಕೆ.ಜಿ. ಭಾರ ಎತ್ತಿ ಚಿನ್ನ ಗೆದ್ದರು. ಆದರೆ, ಸ್ನ್ಯಾಚ್‌ನಲ್ಲಿ ಸಂಜನಾ (86 ಕೆ.ಜಿ.) ಬೆಳ್ಳಿ ಗೆದ್ದರು.

ಉಜ್ಬೇಕಿಸ್ತಾನದ ಮದೀನಾ ಫೈಜುಲ್ಲೆವಾ ಅವರು ಸ್ನ್ಯಾಚ್‌ನಲ್ಲಿ (89 ಕೆ.ಜಿ.) ಚಿನ್ನ ಗೆದ್ದರೆ, ಕ್ಲೀನ್ ಮತ್ತು ಜರ್ಕ್‌ನಲ್ಲಿ (111 ಕೆ.ಜಿ.) ಬೆಳ್ಳಿ ಪಡೆದರು. ಇರಾನ್‌ನ ಅಸಲ್ ಕಡ್ಖೋಡೈ ಎರಡು ವಿಭಾಗದಲ್ಲಿ ಕಂಚಿನ ಪದಕವನ್ನು ಪಡೆದರು.

ಟೆನಿಸ್: ಕ್ವಾರ್ಟರ್‌ಗೆ ಸೂರಜ್, ಜಾನ್ವಿ

ಚೆನ್ನೈ (ಪಿಟಿಐ): ಹಿನ್ನಡೆಯಿಂದ ಚೇತರಿಸಿಕೊಂಡ ಕರ್ನಾಟಕದ ಸೂರಜ್ ಆರ್.ಪ್ರಬೋಧ್, ಇಂಡಿಯಂ ಎಐಟಿಎ ರ‍್ಯಾಂಕಿಂಗ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಪಂದ್ಯದಲ್ಲಿ ಗುಜರಾತ್‌ನ ಮಧ್ವಿನ್ ಕಾಮತ್ ಮೇಲೆ 1-6, 7-6 (5), 6-1 ರಲ್ಲಿ ಜಯ ಪಡೆದು ಎಂಟರ ಘಟ್ಟ ತಲುಪಿದರು.

ಆದರೆ ರಾಜ್ಯದ ಇನ್ನೊಬ್ಬ ಆಟಗಾರ ರಿಶಿ ರೆಡ್ಡಿ, ಮಾಜಿ ಡೇವಿಸ್ ಕಪ್ ಆಟಗಾರ ವಿಷ್ಣುವರ್ಧನ್ (ತೆಲಂಗಾಣ) ಅವರಿಗೆ 3-6, 2-6ರಲ್ಲಿ ಮಣಿದರು. ಅಗ್ರ ಶ್ರೇಯಾಂಕದ ನಿತಿನ್ ಕುಮಾರ್ ಸಿನ್ಹಾ (ಪಶ್ಚಿಮ ಬಂಗಾಳ), ಎರಡನೇ ಶ್ರೇಯಾಂಕದ ವಿ.ಎಂ.ರಣಜಿತ್ ಅವರೂ ಎಂಟರ ಘಟ್ಟಕ್ಕೆ ಮುನ್ನಡೆದರು.

ಮಹಿಳೆಯರ ವಿಭಾಗದ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಕರ್ನಾಟಕದ ಸಾಯಿ ಜಾನ್ವಿ 6-7 (4), 6-1, 6-1 ರಿಂದ ಗುಜರಾತ್‌ನ ವಿಧಿ ನಿಮೇಶ್ ಜಾನಿ ಎದುರು ಗೆದ್ದರು. ದೆಹಲಿಯ ಕಾಶಿಶ್ ಭಾಟಿಯಾ ಇನ್ನೊಂದು ಪಂದ್ಯದಲ್ಲಿ ಕರ್ನಾಟಕದ ಸುಹಿತಾ ಮರೂರಿ ಎದುರು ಜಯಪಡೆದರು.

ಏಷ್ಯಾ ಕಪ್: ರಾಹುಲ್ ಅನುಮಾನ

ನವದೆಹಲಿ (ಪಿಟಿಐ): ಶಸ್ತ್ರಚಿಕಿತ್ಸೆಗೆ ಒಳಗಾಗಿ ಎನ್‌ಸಿಎನಲ್ಲಿ ಆರೈಕೆ ಪಡೆಯುತ್ತಿರುವ ಭಾರತದ ಬ್ಯಾಟರ್‌ಗಳಾದ ಕೆ.ಎಲ್. ರಾಹುಲ್ ಮತ್ತು ಶ್ರೇಯಸ್ ಅಯ್ಯರ್ ಏಷ್ಯಾ ಕಪ್ ಟೂರ್ನಿಯಿಂದ ಹೊರಗುಳಿಯುವ ಸಾಧ್ಯತೆ ಇದೆ.

ತೊಡೆಯ ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ರಾಹುಲ್ ಅವರ ಚೇತರಿಕೆಗೆ ಇನ್ನೂ ಸಮಯ ಬೇಕಾಗಿದೆ. ಬೆನ್ನಿನ ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ಶ್ರೇಯಸ್ ಅವರಿಗೂ ವಿಶ್ರಾಂತಿ ಬೇಕಿದೆ.

ಇಬ್ಬರ ವಾಪಸಾಗಿ ಬಗ್ಗೆ ಬಿಸಿಸಿಐ ಇನ್ನೂ ನಿರ್ಧಾರ ತೆಗೆದುಕೊಂಡಿಲ್ಲ. ಆದರೆ, ಅವರಿಗೆ ನಿಧಾನವಾಗಿ ಕೆಲಸದ ಹೊರೆಯನ್ನು ಹೆಚ್ಚಿಸಲಾಗುತ್ತಿದೆ.

‘ಸದ್ಯದ ಪರಿಸ್ಥಿತಿಯಲ್ಲಿ ರಾಹುಲ್ ಮತ್ತು ಶ್ರೇಯಸ್ ಅವರಿಗೆ 50 ಓವರ್‌ಗಳ ಕ್ರಿಕೆಟ್‌ಗೆ ಹೊಂದಿಕೊಳ್ಳುವುದು ಕಷ್ಟವಾಗಲಿದೆ. ಏಕದಿನ ವಿಶ್ವಕಪ್ ಟೂರ್ನಿಗೆ ಮುಂಚೆ ಆಸ್ಟ್ರೇಲಿಯಾ ವಿರುದ್ಧದ ಮೂರು ಪಂದ್ಯಗಳ ಸರಣಿಗೆ ರಾಹುಲ್ ಫಿಟ್ ಆಗಬಹುದು ಎಂಬ ವಿಶ್ವಾಸವನ್ನು ನಮ್ಮ ವೈದ್ಯಕೀಯ ತಂಡ ಹೊಂದಿದೆ’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.



ಕೆ.ಎಲ್. ರಾಹುಲ್

ರಾಹುಲ್ ಈಗಾಗಲೇ ಕೀಪಿಂಗ್ ಕಸರತ್ತು ಆರಂಭಿಸಿದ್ದಾರೆ. ಶ್ರೇಯಸ್ ಕೂಡ ಕೌಶಲ ತರಬೇತಿ ಪಡೆಯುತ್ತಿದ್ದಾರೆ. ವಿಶ್ವಕಪ್ ಟೂರ್ನಿಗೆ ಇಬ್ಬರಲ್ಲಿ ಒಬ್ಬರಾದರೂ ಲಭ್ಯವಾಗಬಹುದು ಎಂಬ ವಿಶ್ವಾಸ ಬಿಸಿಸಿಐ ಹೊಂದಿದೆ.

ಮಹಾರಾಜ ಟ್ರೋಫಿ ಟಿ20: ಗುಲ್ಬರ್ಗ–ಬೆಂಗಳೂರು ಹಣಾಹಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಮೊದಲ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಗುಲ್ಬರ್ಗ ಮಿಸ್ಟಿಕ್ಸ್ ಮತ್ತು ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ಮುಖಾಮುಖಿಯಾಗಲಿವೆ.

13ರಂದು ಪಂದ್ಯ ನಡೆಯಲಿದೆ. ಅದೇ ದಿನ ನಡೆಯುವ ಎರಡನೇ ಪಂದ್ಯದಲ್ಲಿ ಹುಬ್ಬಳ್ಳಿ ಟೈಗರ್ಸ್ ಮತ್ತು ಮೈಸೂರು ವಾರಿಯರ್ಸ್ ತಂಡಗಳು ಹಣಾಹಣಿ ನಡೆಸಲಿವೆ.

ಇದೇ ಮೊದಲ ಸಲ ಟೂರ್ನಿಯಲ್ಲಿ ಪದಾರ್ಪಣೆ ಮಾಡಲಿರುವ ಮಂಗಳೂರು ಡ್ರ್ಯಾಗನ್ಸ್ ಮತ್ತು ಶಿವಮೊಗ್ಗ ಲಯನ್ಸ್ ತಂಡಗಳು ಆ. 14ರಂದು ಮುಖಾಮುಖಿಯಾಗಲಿವೆ.

ಈ ಬಾರಿಯ ಟೂರ್ನಿಯಲ್ಲಿ ಆರು ತಂಡಗಳು ಆಡಲಿವೆ. ಇದೇ 29ರಂದು ಫೈನಲ್ ಪಂದ್ಯ ನಡೆಯುವುದು.

27ರವರೆಗೆ ಡಬಲ್ ಹೆಡರ್ ಪಂದ್ಯಗಳು ನಡೆಯಲಿವೆ. ಮಧ್ಯಾಹ್ನದ ಪಂದ್ಯವು 1 ಗಂಟೆಗೆ ಹಾಗೂ ಸಂಜೆಯ ಪಂದ್ಯವು 5.30ಕ್ಕೆ ಆರಂಭವಾಗಲಿವೆ. ಎಲ್ಲ ಪಂದ್ಯಗಳೂ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿವೆ.

ಸ್ಟಾರ್ ಸ್ಪೋರ್ಟ್ಸ್ 2, ಸ್ಟಾರ್ ಸ್ಪೋರ್ಟ್ಸ್ ಕನ್ನಡ ಹಾಗೂ ಫ್ಯಾನ್ ಕೋಡ್ ಓಟಿಟಿಯಲ್ಲಿ ನೇರಪ್ರಸಾರ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.



ಮಹಾರಾಜ ಟ್ರೋಫಿ

ಮಹಿಳಾ ಕ್ರಿಕೆಟ್: ಬೌಲಿಂಗ್, ಫೀಲ್ಡಿಂಗ್ ಕೋಚ್‌ಗೆ ಆಹ್ವಾನ

ಮುಂಬೈ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ಫೀಲ್ಡಿಂಗ್ ಮತ್ತು ಬೌಲಿಂಗ್ ತರಬೇತುದಾರರ ನೇಮಕಕ್ಕೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಅರ್ಜಿ ಆಹ್ವಾನಿಸಿದೆ. ಆದರೆ ಮುಖ್ಯ ಕೋಚ್ ನೇಮಕ ಕುರಿತ ಪ್ರಸ್ತಾವ ಮಾಡಿಲ್ಲ.

ಭಾರತ ಮಹಿಳಾ ತಂಡಕ್ಕೆ ಸದ್ಯ ನೂಶೀನ್ ಅಲ್ ಖಾದೀರ್ ಅವರು ಹಂಗಾಮಿ ಮುಖ್ಯ ಕೋಚ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹೋದ ತಿಂಗಳು ಬಾಂಗ್ಲಾ ಪ್ರವಾಸದ ಸಂದರ್ಭದಲ್ಲಿಯೂ ಅವರು ಕಾರ್ಯನಿರ್ವಹಿಸಿದ್ದರು.

ಫೀಲ್ಡಿಂಗ್ ಮತ್ತು ಬೌಲಿಂಗ್ ಕೋಚ್‌ಗಳ ಕಾರ್ಯಾವಧಿಯು ಎರಡು ವರ್ಷಗಳದ್ದಾಗಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಭಾರತ ಅಥವಾ ಇನ್ನಾವುದೇ ದೇಶದ ತಂಡವನ್ನು ಪ್ರತಿನಿಧಿಸಿರಬೇಕು. ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳನ್ನು ಆಡಿರಬೇಕು.

ಸೆಪ್ಟೆಂಬರ್ 23 ರಿಂದ ಅಕ್ಟೋಬರ್ 8ರವರೆಗೆ ಚೀನಾದಲ್ಲಿ ನಡೆಯಲಿರುವ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ ಮಹಿಳಾ ತಂಡವು ಆಡಲಿದೆ.

ತಂಡಕ್ಕೆ ಮುಖ್ಯ ಕೋಚ್ ಆಗಿ ಮಾಜಿ ಕ್ರಿಕೆಟಿಗ ಅಮೋಲ್ ಮಜುಂದಾರ್ ಅವರನ್ನು ನೇಮಿಸಲು ಕ್ರಿಕೆಟ್ ಸಲಹಾ ಸಮಿತಿ (ಸಿಎಸಿ) ಶಿಫಾರಸು ಮಾಡಿದೆ ಎಂದು ಈಚೆಗೆ ವರದಿಯಾಗಿತ್ತು.

ಚೆನ್ನೈ: ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಇಂದಿನಿಂದ

ಏಷ್ಯನ್ ಗೇಮ್ಸ್ ಸಿದ್ಧತೆಗೆ ಸುವರ್ಣಾವಕಾಶ

ಚೆನ್ನೈ (ಪಿಟಿಐ): ಏಷ್ಯನ್ ಕ್ರೀಡಾಕೂಟದಲ್ಲಿ ತಂಡದ ಸಿದ್ಧತೆಗೆ ಅಂತಿಮ ಸ್ಪರ್ಶ ನೀಡಲು ಮತ್ತು ಯಾವ ವಿಭಾಗದಲ್ಲಿ ಸುಧಾರಣೆಯಾಗಬೇಕಾಗಿದೆ ಎಂಬುದನ್ನು ತಿಳಿದುಕೊಳ್ಳಲು ಭಾರತವು, ಗುರುವಾರ ಆರಂಭವಾಗುವ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಪುರುಷರ ಹಾಕಿ ಟೂರ್ನಿಯನ್ನು ಬಳಸಿಕೊಳ್ಳಲಿದೆ.

ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಭಾರತ ತಂಡವು, ಇಲ್ಲಿನ ಮೇಯರ್ ರಾಧಾಕೃಷ್ಣನ್ ಹಾಕಿ ಕ್ರೀಡಾಂಗಣದಲ್ಲಿ ಚೀನಾ ವಿರುದ್ಧ ಆಡುವ ಮೂಲಕ ತನ್ನ ಅಭಿಯಾನ ಆರಂಭಿಸಲಿದೆ. ಭಾರತ ಈ ಟೂರ್ನಿಯಲ್ಲಿ ಮೂರು ಬಾರಿ ಚಾಂಪಿಯನ್ ಆಗಿದ್ದು, ಪ್ರಶಸ್ತಿಯನ್ನು ಗೆಲ್ಲುವ ನೆಚ್ಚಿನ ತಂಡವಾಗಿದೆ. ಭಾರತವು ಟೂರ್ನಿಯಲ್ಲಿ ಅತಿ ಹೆಚ್ಚಿನ ಕ್ರಮಾಂಕ ಪಡೆದ ತಂಡವಾಗಿದೆ.

2011ರಲ್ಲಿ ಟೂರ್ನಿ ಆರಂಭವಾದ ನಂತರ ಭಾರತ ಮೊದಲ ಬಾರಿ ಇದರ ಆತಿಥ್ಯ ವಹಿಸುತ್ತಿದೆ. ಆಟಗಾರರ ಸಾಮರ್ಥ್ಯ ಪರೀಕ್ಷೆಯ ಜೊತೆಗೆ ಏಷ್ಯ ಗೇಮ್ಸ್‌ನಲ್ಲಿ ಆಡಲಿರುವ ಎದುರಾಳಿಗಳ ಶಕ್ತಿ ತಿಳಿಯುವುದು ಭಾರತ ತಂಡದ ಉದ್ದೇಶಗಳಲ್ಲಿ ಒಂದಾಗಿದೆ.

ಏಷ್ಯನ್ ಕ್ರೀಡಾಕೂಟ ಸೆ. 23 ರಿಂದ ಅಕ್ಟೋಬರ್ 8ರವರೆಗೆ ಚೀನಾದ ಹಾಂಗ್‌ಝೌನಲ್ಲಿ ನಡೆಯಲಿದೆ. ಹಾಂಗ್‌ಝೌ ಕೂಟದಲ್ಲಿ ಗೆದ್ದ ಹಾಕಿ ತಂಡ ಮುಂದಿನ ವರ್ಷದ ಒಲಿಂಪಿಕ್ಸ್‌ಗೆ ನೇರ ಟಿಕೆಟ್ ಪಡೆಯಲಿದೆ. ಹೀಗಾಗಿ ತನ್ನ ಆಟಗಾರರಲ್ಲಿ ಲವಲವಿಕೆ ಉಳಿಸಿಕೊಳ್ಳುವುದರ ಜೊತೆಗೆ ಗಾಯಾಳಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯೂ ತಂಡಕ್ಕೆ ಇದೆ.

ಏಷ್ಯನ್ ಗೇಮ್ಸ್‌ಗೆ ಕೇವಲ ಐದು ತಿಂಗಳು ಇರುವಾಗ ಈ ಟೂರ್ನಿಯನ್ನು ಆಯೋಜಿಸಿರುವುದು ಕೆಲವು ತಂಡಗಳಿಗೆ ರುಚಿಸಿಲ್ಲ. ‘ಇಂಥದ್ದು ನಡೆಯುತ್ತಿರಬೇಕು. ನಮಗೆ ಹೆಚ್ಚಿನ ಪಂದ್ಯಗಳನ್ನು ಆಡಬೇಕಿದೆ. ಇದು ಭಾರತದಲ್ಲೇ ನಡೆಯುತ್ತಿರುವುದು ಇನ್ನೂ ಒಳ್ಳೆಯ ಅಂಶವಾಗಿದೆ’ ಎಂದು ಭಾರತ ತಂಡದ ಮುಖ್ಯ ಕೋಚ್ ಕ್ರೇಗ್ ಫುಲ್ಟನ್ ಹೇಳಿದ್ದಾರೆ.

‘ತಂಡದ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳನ್ನು ತಿಳಿದುಕೊಳ್ಳಲು ಬಯಸಿದ್ದೇವೆ. ಜೊತೆಗೇ ಹೆಚ್ಚುವರಿ ಆಟಗಾರರನ್ನು ಕಂಡುಕೊಳ್ಳಬೇಕಾಗಿದೆ. ಇದು ನಮಗೆ ಮಹತ್ವದ್ದು. ಆಟಗಾರರು ಗಾಯಾಳಾಗುವುದು ಯಾವುದೇ ತಂಡಕ್ಕೆ ಒಳ್ಳೆಯದಲ್ಲ’ ಎಂದಿದ್ದಾರೆ ಫುಲ್ಟನ್.

ಭಾರತ ಇತ್ತೀಚೆಗೆ ವಿಶ್ವ ಹಾಕಿಯಲ್ಲಿ ರ‍್ಯಾಂಕಿಂಗ್ ಮತ್ತು ಹೆಚ್ಚಿನ ಗೌರವ ಸಂಪಾದಿಸಿದೆ. ಆದರೆ ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತರು, ಭುವನೇಶ್ವರದಲ್ಲಿ ನಡೆದ ಎಫ್‌ಐಎಚ್ ವಿಶ್ವಕಪ್‌ನಲ್ಲಿ ಉತ್ತಮ ಸಾಧನೆ ತೋರಿರಲಿಲ್ಲ. ತಂಡ 9ನೇ ಸ್ಥಾನ ಪಡೆದಿತ್ತು. ಆದರೆ ಇದರ ನಂತರ ಹರ್ಮನ್‌ಪ್ರೀತ್ ನೇತೃತ್ವದ ತಂಡ 16 ಪಂದ್ಯಗಳನ್ನು ಆಡಿದ್ದು, 9ರಲ್ಲಿ ಗೆದ್ದಿದ್ದು, ಐದರಲ್ಲಿ ಸೋತಿದೆ. ಎರಡು ಪಂದ್ಯ ಡ್ರಾ ಆಗಿದೆ ಎಂಬುದೂ ಗಮನಾರ್ಹ.

ಭಾರತ ಸುಧಾರಣೆ ಕಾಣಬೇಕಾದ ಒಂದು ಕ್ಷೇತ್ರ ಪೆನಾಲ್ಟಿ ಕಾರ್ನರ್‌ಗಳ ಪರಿವರ್ತನೆಯ ದರ. ಹರ್ಮನ್‌ಪ್ರೀತ್, ವರುಣ್ ಕುಮಾರ್, ಅಮಿತ್ ರೋಹಿದಾಸ್ ಮತ್ತು ಜುಗರಾಜ್ ಸಿಂಗ್ ಅವರಂಥ ಅನುಭವಿಗಳಿದ್ದರೂ, ‘ಪೆನಾಲ್ಟಿ ಕಾರ್ನರ್ ಪರಿವರ್ತನೆ ದರ’ ಚರ್ಚೆಯ ವಿಷಯವಾಗಿದೆ.

ಭಾರತ 2011, 2016 ಮತ್ತು 2018ರಲ್ಲಿ ಈ ಟೂರ್ನಿಯಲ್ಲಿ ಚಾಂಪಿಯನ್ ಆಗಿತ್ತು. 2018ರಲ್ಲಿ ಭಾರತ, ಪಾಕಿಸ್ತಾನದ ಜೊತೆ (ಮಳೆಯಿಂದ ಪಂದ್ಯ ನಡೆಯದ ಕಾರಣ) ಪ್ರಶಸ್ತಿ ಹಂಚಿಕೊಂಡಿತ್ತು. ಭಾರತ 2012ರಲ್ಲಿ ಬೆಳ್ಳಿಯ ಪದಕ ಗೆದ್ದರೆ, 2021ರಲ್ಲಿ ಕಂಚಿನ ಪದಕ ಜಯಿಸಿತ್ತು.

ವಿಶ್ವಕಪ್ ತಪ್ಪಿಸಿಕೊಂಡಿದ್ದ ಚೀನಾ, ಈ ವರ್ಷ ಮೊದಲ ಬಾರಿ ಪ್ರಮುಖ ಟೂರ್ನಿಯಲ್ಲಿ ಆಡುತ್ತಿದೆ.

ಮೊದಲ ದಿನ ನಡೆಯುವ ಇತರ ಪಂದ್ಯಗಳಲ್ಲಿ ಹಾಲಿ ಚಾಂಪಿಯನ್ ದಕ್ಷಿಣ ಆಫ್ರಿಕಾವು ಜಪಾನ್ ವಿರುದ್ಧ; ಪಾಕಿಸ್ತಾನವು, ಮಲೇಷ್ಯಾ ವಿರುದ್ಧ ಆಡಲಿವೆ.

ಚೆನ್ನೈನ ಮೇಯರ್ ರಾಧಾಕೃಷ್ಣನ್ ಹಾಕಿ ಕ್ರೀಡಾಂಗಣದಲ್ಲಿ ಬುಧವಾರ ಅಭ್ಯಾಸ ನಡೆಸಿದ ಭಾರತ ಹಾಕಿ ತಂಡದ ಆಟಗಾರರು –ಪಿಟಿಐ ಚಿತ್ರ

ರೇಸ್ ರದ್ದು

ಬೆಂಗಳೂರು: ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಗುರುವಾರ ಮತ್ತು ಶುಕ್ರವಾರ ಏರ್ಪಡಿಸಿದ್ದ ಕುದುರೆ ರೇಸ್‌ಗಳನ್ನು ಆಡಳಿತಾತ್ಮಕ ಕಾರಣಗಳಿಂದ ರದ್ದುಪಡಿಸಲಾಗಿದೆ.

ಆದರೆ, ಎಸ್‌ಕೆಜೆ ಇನ್ಫೊಸ್ಪೇಸಸ್ ಬೆಂಗಳೂರು ಸಮ್ಮರ್ ಮಿಲಿಯನ್ ಮತ್ತು ಗವರ್ನರ್ಸ್ ಕಪ್ ರೇಸ್‌ಗಳನ್ನು ಕ್ರಮವಾಗಿ ಆ. 11 ಮತ್ತು ಆ.12ರಂದು ಏರ್ಪಡಿಸಿರುವ ರೇಸ್ ದಿನಗಳಂದು ನಡೆಸಲಾಗುವುದು. ಈಗಾಗಲೇ ಪ್ರಕಟವಾಗಿರುವ ಮೇಲಿನ ಎರಡು ರೇಸ್‌ಗಳ ರೇಸ್‌ಕಾರ್ಡ್‌ಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಬಿ.ಟಿ.ಸಿ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಆಸ್ಟ್ರೇಲಿಯನ್ ಓಪನ್: ಕೀನ್‌ಗೆ ಆಘಾತ ನೀಡಿದ ಮಂಜುನಾಥ್

ಸಿಡ್ನಿ (ಪಿಟಿಐ): ಭಾರತದ ಮಿಥುನ್ ಮಂಜುನಾಥ್, ವಿಶ್ವ ಕ್ರಮಾಂಕದಲ್ಲಿ ಏಳನೇ ಸ್ಥಾನದಲ್ಲಿರುವ ಕೀನ್ ಯೆ ಲೊ ಅವರನ್ನು ಬುಧವಾರ ನೇರ ಗೇಮ್‌ಗಳಲ್ಲಿ ಪರಾಭವಗೊಳಿಸಿ ಆಸ್ಟ್ರೇಲಿಯನ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಸುತ್ತಿನಲ್ಲಿ ಆಘಾತ ನೀಡಿದರು.

ಪಿ.ವಿ.ಸಿಂಧು, ಎಚ್.ಎಸ್.ಪ್ರಣಯ್ ಮತ್ತು ಕಿದಂಬಿ ಶ್ರೀಕಾಂತ್ ಅವರೂ ಎರಡನೇ ಸುತ್ತಿಗೆ ಮುನ್ನಡೆದರು.

ಪುರುಷರ ಸಿಂಗಲ್ಸ್‌ನಲ್ಲಿ, ವಿಶ್ವ ಕ್ರಮಾಂಕದಲ್ಲಿ 50ನೇ ಸ್ಥಾನದಲ್ಲಿರುವ ಮಂಜುನಾಥ್ 21–19, 21–19ರಲ್ಲಿ ಲೊ ಅವರನ್ನು ಮುಕ್ಕಾಲು ಗಂಟೆಯೊಳಗೆ ನಿಮಿಷಗಳಲ್ಲಿ ಸೋಲಿಸಿದರು. ಅವರು ಮುಂದಿನ ಸುತ್ತಿನಲ್ಲಿ ಮಲೇಷ್ಯಾದ ಲೀ ಝಿ ಜಿಯಾ ಅವರನ್ನು ಎದುರಿಸುವರು.

ಇನ್ನೊಂದೆಡೆ, ಲಕ್ಷ್ಯ ಸೇನ್ ಗಾಯಾಳಾದ ಕಾರಣ ಸ್ವದೇಶದ ಕಿರಣ್ ಜಾರ್ಜ್ ಎದುರಿನ ಪಂದ್ಯವನ್ನು ಮೊದಲ ಗೇಮ್‌ನಲ್ಲೇ ಬಿಟ್ಟುಕೊಟ್ಟರು. ಆಗ ಜಾರ್ಜ್ 5–0 ಯಿಂದ ಮುಂದಿದ್ದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಐದನೇ ಶ್ರೇಯಾಂಕದ ಸಿಂಧು ಮೊದಲ ಸುತ್ತಿನಲ್ಲಿ ಸ್ವದೇಶದ ಅಶ್ಮಿತಾ ಚಲಿಹಾ ವಿರುದ್ಧ 21–18, 21–13 ರಲ್ಲಿ ಜಯ ಗಳಿಸಲು ಕೇವಲ 36 ನಿಮಿಷ ತೆಗೆದುಕೊಂಡರು.

ಪುರುಷರ ಸಿಂಗಲ್ಸ್ ಮೊದಲ ಸುತ್ತಿನ ಇತರ ಪಂದ್ಯಗಳಲ್ಲಿ ಭಾರತದ ಕಿದಂಬಿ ಶ್ರೀಕಾಂತ್ 21–18, 21–17 ರಲ್ಲಿ ಕೆಂಟಾ ನಿಶಿಮೊಟೊ (ಜಪಾನ್) ಅವರನ್ನು, 6ನೇ ಶ್ರೇಯಾಂಕದ ಎಚ್.ಎಸ್. ಪ್ರಣಯ್ 21–18, 16–21, 21–15ರಿಂದ ಚಿಯುಕ್ ಯು ಲೀ (ಹಾಂಗ್‌ಕಾಂಗ್) ಅವರನ್ನು ಮಣಿಸಿದರು. ಪ್ರಿಯಾಂಶು ರಾಜಾವತ್ ಕೂಡ ಯಶಸ್ಸು ಕಂಡರು. ಅವರು ಆಸ್ಟ್ರೇಲಿಯಾದ ನಥಾನ್ ಟಾಂಗ್ ಅವರನ್ನು 21–12, 21–16 ರಿಂದ ಸೋಲಿಸಿದರು.

ಮಹಿಳೆಯರ ವಿಭಾಗದಲ್ಲಿ ಆಕರ್ಷಿ ಕಶ್ಯಪ್ 21–15, 21–17 ರಿಂದ ಮಲೇಷ್ಯಾದ ಜಿನ್ ವಿ ಗೊಹ್ ಅವರನ್ನು ಹಿಮ್ಮೆಟ್ಟಿಸಿದರೆ, ಮಾಳವಿಕಾ ಬನ್ಸೋಡ್ ಹೊರಬಿದ್ದರು.